ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೇಂದ್ರ ಬಜೆಟ್ 2026



ರಾಜ್ಯದ ನಿರೀಕ್ಷೆಗೆ ಸ್ಪಂದಿಸಿಲ್ಲ

ಕೇಂದ್ರ ಬಜೆಟ್ ಪ್ರಕಟವಾದ ಬಳಿಕ ಕರ್ನಾಟಕದಲ್ಲಿ ಮೂಡಿದ ಚರ್ಚೆ ಒಂದು ಸ್ಪಷ್ಟ ಸಂದೇಶ ನೀಡುತ್ತಿದೆ. ಈ ಆಯವ್ಯಯ ರಾಜ್ಯದ ನಿರೀಕ್ಷೆಗಳಿಗೆ ಸ್ಪಂದಿಸಿಲ್ಲ. ಇದು ಘೋಷಣೆಗಳ ಮೇಲೆ ನಿಂತ ಬಜೆಟ್ ಆಗಿದ್ದು, ತಳಮಟ್ಟದ ಅಭಿವೃದ್ಧಿಗೆ ಅಗತ್ಯವಿರುವ ಸ್ಪಷ್ಟ ದಿಕ್ಕು ಮತ್ತು ಬದ್ಧತೆ ಕಾಣುತ್ತಿಲ್ಲ. ಬಜೆಟ್ ಗಾತ್ರದಲ್ಲಿ ಈ ವರ್ಷದ ಸೀಮಿತ ಏರಿಕೆ ದೇಶದ ವೇಗದ ಅಭಿವೃದ್ಧಿಗೆ ಸಾಕಾಗುವುದಿಲ್ಲ.

-ಸಿದ್ದರಾಮಯ್ಯ, ಕರ್ನಾಟಕ ಮುಖ್ಯಮಂತ್ರಿ

ವಿಕಸಿತ ನೋಟಕ್ಕೆ ಬುನಾದಿ

ಈ ಬಜೆಟ್ ವರ್ತಮಾನದ ಕನಸನ್ನು ಸಾಕಾರಗೊಳಿಸುತ್ತದೆ. ಭಾರತದ ಭವ್ಯ ಭವಿಷ್ಯಕ್ಕೆ ಭದ್ರವಾದ ಅಡಿಗಲ್ಲನ್ನು ಹಾಕುತ್ತದೆ. ವಿಕಸಿತ ಭಾರತದ ದೃಷ್ಟಿಯಿಂದ ನಮ್ಮ ದೊಡ್ಡ ನೋಟಕ್ಕೆ ಇದು ಬಲವಾದ ಬುನಾದಿಯಾಗಿದೆ. ಈ ಬಜೆಟ್ ಮೂಲಕ ವಿತ್ತೀಯ ಕೊರತೆಯನ್ನು ನೀಗಲು, ಹಣದುಬ್ಬರಕ್ಕೆ ನಿಯಂತ್ರಣ ಹಾಕಲು ಗಮನ ಹರಿಸಲಾಗಿದೆ. ಇದರೊಂದಿಗೆ ಬಂಡವಾಳ ಮತ್ತು ಪ್ರಗತಿಯೊಂದಿಗೆ ಸಮನ್ವಯವೂ ಇದೆ.

ನರೇಂದ್ರ ಮೋದಿ
ಪ್ರಧಾನಮಂತ್ರಿ

ನವಭಾರತ ನವನೋಟ

ವಿಕಸಿತ ಭಾರತದತ್ತ ನಿರ್ಮಲಾ ಮುನ್ನೋಟ, ಆರ್ಥಿಕ ಬೆಳವಣಿಗೆಯಲ್ಲಿ ವೇಗ, ಸ್ಥಿರತೆ ತರಲು ಕ್ರಮ

ರಕ್ಷಣೆ, ಸಾರಿಗೆ, ಮೂಲ ಸೌಕರ್ಯ, ಆರೋಗ್ಯ, ಶಿಕ್ಷಣ, ಬಾಹ್ಯಾಕಾಶ, ಕೃಷಿಗೆ ಅನುದಾನ ಹೆಚ್ಚಳ

ರಾಜ್ಯಕ್ಕೆ ಮಿಶ್ರ ಫಲ, ಹೊಸ ಯೋಜನೆಗಳ ಸುಳಿವಿಲ್ಲ, ಕೃಷಿ, ಪ್ರವಾಸೋದ್ಯಮ, ಸಾರಿಗೆ ಸೌಕರ್ಯದಲ್ಲಿ ಪಾಲು

₹53.47 ಲಕ್ಷ ಕೋಟಿ ಮೊತ್ತದ ಬಜೆಟ್ ಮಂಡನೆ, ಕಳೆದ ವರ್ಷಕ್ಕಿಂತ 11%ರಷ್ಟು ಹೆಚ್ಚಳ (48.2 ಲಕ್ಷ ಕೋಟಿ)

ಮೂಲಸೌಕರ್ಯಕ್ಕೆ ದಶಕದಲ್ಲೇ ಅತ್ಯಧಿಕ ₹12.2 ಲಕ್ಷ ಕೋಟಿ ರು. ಹೂಡಿಕೆ (ಜಿಡಿಪಿಯ ಶೇ. 4.4)

ನಿವ್ವಳ ತೆರಿಗೆ ಆದಾಯ ₹28.7 ಲಕ್ಷ ಕೋಟಿ, ವಿತ್ತೀಯ ಕೊರತೆ ಮೊತ್ತ ಜಿಡಿಪಿಯ 4.3 ಕ್ಕೆ ಇಳಿಸುವ ಗುರಿ

ಕರ್ತವ್ಯ ಭವನದಲ್ಲಿ ಕರ್ತವ್ಯ ಪಠಣ

ನಿರ್ಮಲಾ ಸೀತಾರಾಮನ್ ಅವರು ಫೆಬ್ರವರಿ 1, 2026 ರಂದು ಮಂಡಿಸಿದ 2026-27ರ ಸಾಲಿನ ಕೇಂದ್ರ ಬಜೆಟ್ 'ವಿಕಸಿತ ಭಾರತ'ದತ್ತ ಕೊಂಡೊಯ್ಯುವ ಗುರಿ ಹೊಂದಿದೆ. ಸತತ 9ನೇ ಬಾರಿಗೆ ಬಜೆಟ್ ಮಂಡಿಸುವ ಮೂಲಕ ದಾಖಲೆ ಬರೆದಿರುವ ನಿರ್ಮಲಾ, ಒಂದು ಗಂಟೆ 25 ನಿಮಿಷಗಳ ಬಜೆಟ್ ಭಾಷಣದಲ್ಲಿ ಆರ್ಥಿಕ ಪ್ರಗತಿ, ಜನರ ನಿರೀಕ್ಷೆ ಈಡೇರಿಕೆ, ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಈ 3 ಕರ್ತವ್ಯಗಳನ್ನು ಬಜೆಟ್‌ನಲ್ಲಿ ಪಠಿಸಿದ್ದಾರೆ.

ತೆರಿಗೆ ಸಂಕೋಲೆ ಮತ್ತಷ್ಟು ಸಡಿಲ

ಆದಾಯ ತೆರಿಗೆ ಸ್ಲ್ಯಾಬ್‌ಗಳಲ್ಲಿ ಯಾವುದೇ ಬದಲಾವಣೆ ಇಲ್ಲ. ಮಾಡಲಾಗಿಲ್ಲ, ಆದರೆ ಏಪ್ರಿಲ್ 1ರಿಂದ ಹೊಸ ತೆರಿಗೆ ನೀತಿ ಜಾರಿಯಾಗಲಿದೆ. ಆದಾಯ ತೆರಿಗೆ ಸಲ್ಲಿಕೆ ವಿಳಂಬಕ್ಕೆ ಶೇ 10ರಷ್ಟು ದಂಡ ವಿಧಿಸಿ ಶಿಕ್ಷೆ ರದ್ದು ಪಡಿಸಲಾಗಿದೆ. ಈ ಮೂಲಕ ಸರಕಾರ 'ತೆರಿಗೆ ಭಯೋತ್ಪಾದನೆ' ಆರೋಪದಿಂದ ಮುಕ್ತವಾಗಲು ಮುಂದಡಿ ಇಟ್ಟಿದೆ. ಸಣ್ಣ ತೆರಿಗೆ ಪಾವತಿದಾರರಿಗೆ ಮಾ.31ರ ತನಕ ಪರಿಷ್ಕೃತ ತೆರಿಗೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಗೋಡಂಬಿ, ತೆಂಗು ರೈತರಿಗೆ ಬೆಂಬಲ

ಗೋಡಂಬಿ ಮತ್ತು ತೆಂಗು ಬೆಳೆಗಾರರ ಆದಾಯ ವನ್ನು ಹೆಚ್ಚಿಸಲು ಹಣಕಾಸಿನ ನೆರವು ಮತ್ತು ಪ್ರೋತ್ಸಾಹವನ್ನೂ ಬಜೆಟ್‌ನಲ್ಲಿ ಘೋಷಿಸಲಾಗಿದೆ. ರಫ್ತು ಹೆಚ್ಚಿಸುವ ಪ್ರೀಮಿಯಂ ಬ್ರ್ಯಾಂಡ್ ಆಗಿ ಭಾರತೀಯ ಗೋಡಂಬಿಯನ್ನು ಸ್ಥಾಪಿಸಲಾಗುವುದು ಎಂದೂ ಸರಕಾರ ಹೇಳಿದೆ. ಇದರೊಂದಿಗೆ ಚಾಕೊಲೇಟ್ ಮತ್ತು ಸಂಸ್ಕರಣಾ ಕೈಗಾರಿಕೆಗಳಿಗೆ ಬಳಸುವ ಕೋಕೋ, ಮತ್ತು ಕರ್ನಾಟಕದ ವೈಶಿಷ್ಟ್ಯವಾದ ಶ್ರೀಗಂಧ ಬೆಳೆಗೂ ವಿಶೇಷ ನೆರವು ನೀಡುವುದಾಗಿ ಪ್ರಕಟಿಸಿದೆ.

ಸಪ್ತ ವಲಯಗಳಿಗೆ ಉತ್ತೇಜನ

ಭಾರತವನ್ನು ಜಾಗತಿಕ ಬಯೋ ಫಾರ್ಮಾ ಹಬ್ ಆಗಿ ಬೆಳೆಸುವ ಬಯೋಫಾರ್ಮಾ ಶಕ್ತಿಗೆ 10 ಸಾವಿರ ಕೋಟಿ ಮೀಸಲಿರಿಸಲಾಗಿದೆ. ಇಂಡಿಯಾ ಸೆಮಿ ಕಂಡಕ್ಟರ್ ಮಿಷನ್, ಎಲೆಕ್ಟ್ರಾನಿಕ್ ಘಟಕಗಳ ಉತ್ಪಾದನಾ ಯೋಜನೆ, ಕೇರಳ, ಆಂಧ್ರ ಪ್ರದೇಶ, ತಮಿಳು ನಾಡಿನಲ್ಲಿ ಜೀವವೈವಿಧ್ಯ ಕಾರಿಡಾರ್, ರಾಸಾಯನಿಕ ಪಾರ್ಕ್ ಸ್ಥಾಪನೆ, ಬಂಡವಾಳ ಸರಕುಗಳ ಸಾಮರ್ಥ್ಯ ವೃದ್ಧಿ ಮತ್ತು ಜವಳಿ ವಲಯ ಸೇರಿ ಏಳು ಕ್ಷೇತ್ರಕ್ಕೆ ಸಮಗ್ರ ಯೋಜನೆ.

ಕೃಷಿ, ಗ್ರಾಮಾಭಿವೃದ್ಧಿಗೆ ಭಾರತ್-ವಿಸ್ತಾರ ನೆರವು

ರೈತರ ಆದಾಯ ಹೆಚ್ಚಿಸಲು 'ಭಾರತ್-ವಿಸ್ತಾರ' ಎಂಬ ಎಐ ಆಧಾರಿತ ಉಪಕರಣವನ್ನು ಘೋಷಿಸಲಾಗಿದೆ. ಇದು ಹವಾಮಾನ ಮತ್ತು ಮಣ್ಣಿನ ಗುಣಮಟ್ಟಕ್ಕೆ ತಕ್ಕಂತೆ ರೈತರಿಗೆ ಸಲಹೆ ನೀಡಲಿದೆ. ಮೀನುಗಾರಿಕೆ ಮತ್ತು ಹೈನುಗಾರಿಕೆ ವಲಯದ ಅಭಿವೃದ್ಧಿಗೆ 500 ಜಲಾಶಯಗಳ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದೆ. ಕೃಷಿ ಕ್ಷೇತ್ರಕ್ಕೆ 1.63 ಲಕ್ಷ ಕೋಟಿ ಅನುದಾನ ನೀಡಿದ್ದು ಇದು ಕಳೆದ ಸಾಲಿಗಿಂತ ಶೇ.7ರಷ್ಟು ಹೆಚ್ಚು.

ವಿಧಾನಸಭೆ ಚುನಾವಣೆ ರಾಜ್ಯಗಳತ್ತ ಒಲವು

ಸದ್ಯದಲ್ಲೇ ವಿಧಾನಸಭೆ ಚುನಾವಣೆ ನಡೆಯಲಿರುವ 5 ರಾಜ್ಯಗಳಿಗೆ ಕೇಂದ್ರ ಸರಕಾರ ಬಂಪರ್ ಕೊಡುಗೆ ನೀಡಿದೆ. ಕೇರಳ, ಒಡಿಶಾ, ತಮಿಳುನಾಡು ಹಾಗೂ ಮಿತ್ರ ಪಕ್ಷ ಆಡಳಿತದ ಆಂಧ್ರಪ್ರದೇಶದಲ್ಲಿ ಅರ್ಥ್ ಮಿನರಲ್ ಕಾರಿಡಾರ್ ಘೋಷಣೆ ಮಾಡಲಾಗಿದೆ. ಪೂರ್ವಾಂಚಲ್ ಯೋಜನೆಯ ಭಾಗವಾಗಿ ಪಶ್ಚಿಮ ಬಂಗಾಳವನ್ನೂ ಬೆಸೆಯುವ ಮೂಲಕ ಅಲ್ಲಿನ ಮತದಾರರನ್ನೂ ಸೆಳೆಯುವ ಪ್ರಯತ್ನ ಮಾಡಲಾಗಿದೆ.

ವಹಿವಾಟು ತೆರಿಗೆ: ಷೇರುಪೇಟೆ ಕಂಗಾಲು

ಬಿಎಸ್‌ಇ, ಎನ್‌ಎಸ್‌ಇಗಳು ಕಳೆದ 6 ವರ್ಷಗಳಲ್ಲೇ ಬಜೆಟ್ ದಿನಗಳಲ್ಲಿ ಗರಿಷ್ಠ ಕುಸಿತ ಅನುಭವಿಸಿದವು. ಷೇರುಗಳ (ಫ್ಯೂಚರ್ ಆ್ಯಂಡ್ ಆಪ್ಷನ್ಸ್) ಮಾರಾಟ ಮತ್ತು ಖರೀದಿಯ ಮೇಲೆ ಭದ್ರತಾ ವಹಿವಾಟು ತೆರಿಗೆ (ಸೆಕ್ಯುರಿಟೀಸ್ ಆ್ಯಂಡ್ ಟ್ರಾನ್ಸಾಕ್ಷನ್ ಟ್ಯಾಕ್ಸ್) ಹೇರಲು ಕೇಂದ್ರ ಸರಕಾರ ನಿರ್ಧರಿಸಿದ್ದೇ ಇದಕ್ಕೆ ಕಾರಣ. ಇದರಿಂದ ಸೆನ್ಸೆಕ್ಸ್ 1500 ಅಂಕ, ನಿಫ್ಟಿ 437 ಅಂಕ ಪತನಗೊಂಡಿತು.

ಬಜೆಟ್ ದಿನವೇ ಚಿನ್ನ, ಬೆಳ್ಳಿ ಕುಸಿತ

ಬಜೆಟ್ ದಿನವೇ ಚಿನ್ನ, ಬೆಳ್ಳಿ ದರ ಎಂಸಿಎಕ್ಸ್‌ನಲ್ಲಿ ತೀವ್ರ ಕುಸಿತ ಕಂಡಿತು. ಏಪ್ರಿಲ್‌ನಲ್ಲಿ ಎಕ್ಸ್‌ಪೈರಿಯಾಗುವ ಚಿನ್ನದ ಫ್ಯೂಚರ್ಸ್ ದರಗಳು 10 ಗ್ರಾಮ್‌ಗೆ 1,51,610 ರು.ನಲ್ಲಿ ದಿನಾರಂಭ ಮಾಡಿದ್ದವು. ದಿನಾಂತ್ಯಕ್ಕೆ 4242 ರು. ಇಳಿಕೆಯಾಗಿ ಬೆಲೆ 1,48,104 ರು.ಗೆ ಮುಟ್ಟಿತು. ದಿನಾರಂಭದಲ್ಲಿ ಬೆಳ್ಳಿ ಬೆಲೆ ಕೆಜಿಗೆ 2,84,826 ರು. ಇತ್ತು. ಮುಕ್ತಾಯದ ಹೊತ್ತಿಗೆ 26,273 ರು. ಇಳಿದು 2,65,652 ರು.ಗೆ ಮುಟ್ಟಿತು.

ಸೆಮಿಕಂಡಕ್ಟರ್ ಮಿಷನ್-2.0

ಇಂಡಿಯಾ ಸೆಮಿಕಂಡಕ್ಟರ್ ಮಿಷನ್-2.0 ಯೋಜನೆಯನ್ನು ಪ್ರಸ್ತಾಪಿಸಲಾಗಿದ್ದು, ಇದಕ್ಕಾಗಿ 40 ಸಾವಿರ ಕೋಟಿ ರು.ಗಳ ಅನುದಾನವನ್ನು ಎತ್ತಿಡಲಾಗಿದೆ. ಇದರ 1.0 ಯೋಜನೆ ಯಶಸ್ವಿಯಾದ ಹಿನ್ನೆಲೆಯಲ್ಲಿ 2ನೇ ಯೋಜನೆಯನ್ನು ಘೋಷಿಸಲಾಗಿದೆ. ಕಂಡಕ್ಟರ್‌ಗಳ ಉತ್ಪಾದನೆಗೆ ಅಗತ್ಯ ಯಂತ್ರಗಳು-ಸಾಮಗ್ರಿಗಳ ತಯಾರಿಕೆ ಮತ್ತು ಆಮದು ಪ್ರಕ್ರಿಯೆಗೆ ಆದ್ಯತೆ ನೀಡಲಾಗುವುದು.

ಎಚ್ಚರಿಕೆಯ ಹೆಜ್ಜೆಯ ಫಲ

ನಾವು (ಎನ್‌ಡಿಎ) 12 ವರ್ಷಗಳ ಹಿಂದೆ ಅಧಿಕಾರ ವಹಿಸಿಕೊಂಡ ನಂತರ ಭಾರತದ ಆರ್ಥಿಕತೆಯನ್ನು ಸ್ಥಿರತೆ, ವಿತ್ತೀಯ ಶಿಸ್ತು, ಸುಸ್ಥಿರ ಅಭಿವೃದ್ಧಿ, ಸಾಮಾನ್ಯ ಹಣದುಬ್ಬರದಿಂದ ಗುರ್ತಿಸಲಾಗುತ್ತಿದೆ. ಇದು ಪ್ರಜ್ಞಾವಂತ ಆಯ್ಕೆಗಳ ಫಲ. ಬಹಳ ಅಸ್ಥಿರ ಪರಿಸ್ಥಿತಿಯಿದ್ದಾಗಲೂ, ಅಡೆತಡೆಗಳಿದ್ದಾಗಲೂ ನಾವು ಎಚ್ಚರಿಕೆಯಿಂದ ಹೆಜ್ಜೆಯಿಟ್ಟಿದ್ದೇವೆ. ಆತ್ಮನಿರ್ಭರ ಭಾರತಕ್ಕಾಗಿ ದೇಶೀಯ ಉತ್ಪಾದನೆಗೆ ಒತ್ತು ನೀಡಿದ್ದೇವೆ.

ನಿರ್ಮಲಾ ಸೀತಾರಾಮನ್
ವಿತ್ತಮಂತ್ರಿ

ಪ್ರತಿ ಬಾರಿ ಬಜೆಟ್ ಮಂಡನೆ ವೇಳೆ ದೇಶಿಯ ಸೀರೆ ಉಡುವ ನಿರ್ಮಲಾ ಸೀತಾರಾಮನ್ ಈ ಬಾರಿ ಪಲ್ಲವರ ಕಾಲದಷ್ಟು ಇತಿಹಾಸ ಇರುವ, ನೇಯ್ಗೆ ಸೀರೆ ಉಟ್ಟಿದ್ದರು.

ಎಐ ಚಿತ್ರ

ಇಳಿಕೆ

- ಪಾದರಕ್ಷೆ ಸೇರಿ ಚರ್ಮದ ಉತ್ಪನ್ನ, ಬ್ರ್ಯಾಂಡೆಡ್ ಶೂ
- ಸಮುದ್ರ ಆಹಾರ, ಮೈಕ್ರೋ ಓವನ್, ಬಟ್ಟೆ
- ಸ್ವದೇಶಿ ನಿರ್ಮಿತ ಟ್ಯಾಬ್ಲೆಟ್ ಮತ್ತು ಸ್ಮಾರ್ಟ್‌ಫೋನ್
- ಖೇಲೊ ಇಂಡಿಯಾ ಅಡಿ ಕ್ರೀಡಾ ಸಾಮಗ್ರಿಗಳ ಬೆಲೆ
- ಬೀಡಿ, ಬ್ಯಾಟರಿಗಳ ಮೇಲಿನ ಬೆಲೆ ಇಳಿಕೆ
- ಸೋಲಾರ್ ಬಿಡಿಭಾಗ, ಪ್ಯಾನಲ್ ಬೆಲೆ ಇಳಿಕೆ
- 17 ಕ್ಯಾನ್ಸರ್ ಔಷಧಗಳ ಮೇಲಿನ ಬೆಲೆ ಇಳಿಕೆ
- ವೈಯಕ್ತಿಕ ಬಳಕೆಗೆ ಆಮದು ಮಾಡುವ ಸರಕುಗಳ ಸುಂಕ
- 7 ಅಪರೂಪದ ಕಾಯಿಲೆಗಳ ಔಷಧಗಳ ಮೇಲಿನ ಬೆಲೆ
- ವಿದೇಶಿ ಪ್ರಯಾಣದ ಮೇಲೆ ಟಿಸಿಎಸ್ ಶೇ. 5ರಿಂದ 2ಕ್ಕೆ
- ಜೈವಿಕ ಅನಿಲ ಮಿಶ್ರಿತ ಸಿಎನ್‌ಜಿ ಕರಭಾರ ಇಳಿಕೆ

ಎಂಎಸ್‌ಇಗೆ ಪ್ರೋತ್ಸಾಹ

ಅತಿಸಣ್ಣ, ಸಣ್ಣ, ಮಧ್ಯಮಗಾತ್ರದ ಉದ್ಯಮಗಳನ್ನು (ಎಸ್‌ಎಂಇ) ಉತ್ತೇಜಿಸಲು 10000 ಕೋಟಿ ರು.ಗಳನ್ನು ಎತ್ತಿಡಲಾಗಿದೆ. ಯೋಗ್ಯ ಸಣ್ಣ ಉದ್ಯಮ ಗಳನ್ನು (ಎಂಎಸ್‌ಎಂಇ) ಉತ್ತೇಜಿಸಲು ತಲಾ 500 ಕೋಟಿ ರು. ಕೊಡುವ ನಿರೀಕ್ಷೆಯಿದೆ. ಭಾರತವನ್ನು ಆತ್ಮನಿರ್ಭರಗೊಳಿಸುವ ಉದ್ದೇಶದಿಂದ 2021ರಲ್ಲಿ ಈ ಕ್ರಮವನ್ನು ಆರಂಭಿಸಲಾಗಿತ್ತು.

ರಕ್ಷಣೆಗೆ ದಾಖಲೆ ಮೊತ್ತ ಮೀಸಲು

ದೇಶದ ರಕ್ಷಣಾ ಬಜೆಟ್ ಇತಿಹಾಸದಲ್ಲೇ ದಾಖಲೆಯ 7.85 ಲಕ್ಷ ಕೋಟಿ ರು. ಮೊತ್ತವನ್ನು ಎತ್ತಿಡಲಾಗಿದೆ. ಹಿಂದೆಂದೂ ರಕ್ಷಣೆಗೆ ಈ ಪ್ರಮಾಣದಲ್ಲಿ ಹಣ ನೀಡಿರಲಿಲ್ಲ. ಒಂದು ಕಡೆ ಚೀನಾ, ಇನ್ನೊಂದು ಪಾಕಿಸ್ತಾನ ಭಾರತಕ್ಕೆ ಬಗಲ ಮುಳ್ಳಾಗಿರುವುದರಿಂದ ಸಹಜವಾಗಿಯೇ ಈ ಮೊತ್ತ ನೀಡಲಾಗಿದೆ. ಹಿಂದಿನ ಬಜೆಟ್‌ನಲ್ಲಿ 6.81 ಲಕ್ಷ ಕೋಟಿ ರು. ನೀಡಲಾಗಿತ್ತು. ಮೊತ್ತ ಶೇ.15.19ರಷ್ಟು ಹೆಚ್ಚಳವಾಗಿದೆ.

ವಿದೇಶ ಯಾತ್ರೆಗೆ ಉತ್ತೇಜನ

ವಿದೇಶಕ್ಕೆ ಪ್ರವಾಸ ಹೋಗುವವರು, ಶಿಕ್ಷಣ ಮತ್ತು ವೈದ್ಯಕೀಯ ಉದ್ದೇಶಕ್ಕೆ ತೆರಳುವವರಿಗೆ ಉತ್ತೇಜನ ನೀಡಲಾಗಿದೆ. ವಿದೇಶಿ ಪ್ರವಾಸ ಪ್ಯಾಕೇಜ್‌ಗಳ ಮೇಲಿನ ಟಿಸಿಎಸ್ (ಮೂಲದಲ್ಲೇ ತೆರಿಗೆ ಕಡಿತ) ಅನ್ನು ಶೇ.5ರಿಂದ 2ಕ್ಕಿಳಿಸಲಾಗಿದೆ. 10 ಲಕ್ಷ ರು.ಗಿಂತ ಹೆಚ್ಚಿನ ಮೊತ್ತವನ್ನು ಪಾವತಿ ಮಾಡುವವರಿಗೆ ಇದು ಅನ್ವಯವಾಗುತ್ತದೆ. ಇದು ಸಹಜವಾಗಿಯೇ ವಿದೇಶಿ ಪ್ರವಾಸಕ್ಕೆ ಉತ್ತೇಜನ ನೀಡುತ್ತಿದೆ.

ಕರ್ನಾಟಕದ ತೆರಿಗೆ ಪಾಲು ಶೇ. 4.13ಕ್ಕೇರಿಕೆ

16ನೇ ಹಣಕಾಸು ಆಯೋಗ ಕರ್ನಾಟಕಕ್ಕೆ ಶೇ 4.13ರಷ್ಟು ತೆರಿಗೆ ಪಾಲು ಹಂಚಿಕೆಗೆ ಶಿಫಾರಸು ಮಾಡಿದೆ. 15ನೇ ಹಣಕಾಸು ಆಯೋಗವು ಶೇ 3.64ರಷ್ಟು ಪಾಲು ಹಂಚಿಕೆ ಮಾಡಿತ್ತು. ಹೊಸ ಹಂಚಿಕೆಯ ಪ್ರಕಾರ ರಾಜ್ಯಕ್ಕೆ 2026-27ನೇ ಸಾಲಿನಲ್ಲಿ ₹63,049 ಕೋಟಿ ತೆರಿಗೆ ಪಾಲು ದೊರೆಯಲಿದೆ. ತೆರಿಗೆ ಪಾಲಿನಲ್ಲಿ ಶೇ.50 ಅನುದಾನ ನೀಡಬೇಕೆಂಬ ರಾಜ್ಯದ ಬೇಡಿಕೆ ಈಡೇರಿಲ್ಲ.

ಪ್ರವಾಸ ತಾಣಗಳ ಅಭಿವೃದ್ಧಿಗೆ ಆದ್ಯತೆ

ಒಡಿಶಾ ಮತ್ತು ಕೇರಳದ ಜತೆಗೆ ಕರ್ನಾಟಕದ ಕರಾವಳಿ ಪ್ರದೇಶ ಗಳಲ್ಲಿ ಆಮೆಗಳ ಸಂತಾನೋತ್ಪತ್ತಿ ತಾಣಗಳಲ್ಲಿ ವೀಕ್ಷಣಾ ಪ್ರವಾಸೋದ್ಯಮ ಅಭಿವೃದ್ಧಿ, ಪ್ರವಾಸೋದ್ಯಮ ಕೇಂದ್ರಗಳಲ್ಲಿ ಮಾರ್ಗದರ್ಶಿಗಳಿಗೆ ತರಬೇತಿ, ಹಿಮಾಚಲ ಪ್ರದೇಶ, ಉತ್ತರಾಖಂಡ ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿ ಪರಿಸರ ಸ್ನೇಹಿ ಪರ್ವತ ಹಾದಿಗಳನ್ನುಮತ್ತು ಪೂರ್ವ ಘಟ್ಟಗಳ ಅರಕು ಕಣಿವೆ ಮತ್ತು ಪಶ್ಚಿಮ ಘಟ್ಟಗಳ ಪೋತಿಗೈಮಲೈನಲ್ಲಿ ಟ್ರೆಕ್ಕಿಂಗ್ ಅಭಿವೃದ್ಧಿಗೆ ನೆರವು.

ಉತ್ತರ ಭಾರತದಲ್ಲೂ ಮತ್ತೊಂದು ನಿಮ್ಹಾನ್ಸ್

ಬಜೆಟ್‌ನಲ್ಲಿ ಆರೋಗ್ಯ ಹೆಚ್ಚಿನ ಉತ್ತೇಜನ ನೀಡಲಾಗಿದ್ದು ಬೆಂಗಳೂರು ನಿಮ್ಹಾನ್ಸ್ ಮಾದರಿಯಲ್ಲಿ ಉತ್ತರ ಭಾರತದಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ ಸ್ಥಾಪನೆಗೆ ಸರಕಾರ ಮುಂದಾಗಿದೆ. 2026ರ ಆರ್ಥಿಕ ಸಮೀಕ್ಷೆಯಲ್ಲಿ, ಮಾನಸಿಕ ಆರೋಗ್ಯವನ್ನು ಒಂದು ಪ್ರಮುಖ ಸಮಸ್ಯೆಯಾಗಿ ಗುರುತಿಸಲಾಗಿದ್ದು, 15-24 ವರ್ಷ ವಯಸ್ಸಿನವರಲ್ಲಿ ಸಾಮಾಜಿಕ ಮಾಧ್ಯಮ ಬಳಕೆ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಲಾಗಿತ್ತು.

ಬೆಂಗಳೂರಿಗೆ ಹೈಸ್ಪೀಡ್ ರೈಲು

ಭಾರತದ ಪ್ರಮುಖ ನಗರಗಳ ನಡುವೆ ಏಳು ಹೊಸ ಹೈಸ್ಪೀಡ್ ರೈಲು ಕಾರಿಡಾರ್‌ಗಳನ್ನು ಘೋಷಿಸಲಾಗಿದೆ. ಹೆಚ್ಚಿನವೂ ದಕ್ಷಿಣ ಭಾರತಕ್ಕೆ ಸೇರಿದವುಗಳಾಗಿದ್ದು, ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳಲ್ಲಿ ಹೈದರಾಬಾದ್-ಬೆಂಗಳೂರು, ಚೆನ್ನೈ-ಬೆಂಗಳೂರು ಸೇರಿದೆ. ಉಳಿದಂತೆ ಮುಂಬೈ-ಪುಣೆ, ಪುಣೆ-ಹೈದರಾಬಾದ್, ಹೈದರಾಬಾದ್-ಚೆನ್ನೈ, ದೆಹಲಿ-ವಾರಾಣಸಿ, ವಾರಾಣಸಿ-ಸಿಲಿಗುರಿ ಸೇರಿದೆ.

ಏರಿಕೆ

- ಸಿಗರೇಟ್, ಪಾನ್ ಮಸಾಲಾ
- ಆಮದಾಗುವ ಮದ್ಯಗಳು
- ಲಕ್ಷುರಿ ವಾಚ್ ಮೇಲಿನ ಸುಂಕ
- ಖನಿಜಗಳು, ಕಬ್ಬಿಣದ ಅದಿರು, ಕಲ್ಲಿದ್ದಲು
- ವಿಡಿಯೊ ಗೇಮ್ಸ್ ಮತ್ತು ಸಾಫ್ಟ್‌ವೇರ್
- ಛತ್ರಿಗಳು, ಡಿಜಿಟಲ್ ಕ್ಯಾಮೆರಾ

ಕೇಂದ್ರ ಬಜೆಟ್ 2026



12.75 ಲಕ್ಷ ರು.

ವೇತನದಾರರಿಗೆ ಒಟ್ಟು ವಾರ್ಷಿಕ ವೇತನದಲ್ಲಿ 75000 ರು.ಗೆ ತೆರಿಗೆಯಿರುವುದಿಲ್ಲ. ಇದೂ ಸೇರಿ ಅವರಿಗೆ ಒಟ್ಟು 12.75 ಲಕ್ಷ ರು. ಮೊತ್ತಕ್ಕೆ ತೆರಿಗೆ ವಿನಾಯ್ತಿ ಇದೆ.

ಅಪಘಾತ ವಿಮೆ ತೆರಿಗೆ ವಿನಾಯ್ತಿ

ಮೋಟಾರು ವಾಹನ ಅಪಘಾತ ಪರಿಹಾರದ ಮೇಲೆ ಸಿಗುವ ಬಡ್ಡಿಗೆ ಇನ್ನುಂದೆ ಆದಾಯ ತೆರಿಗೆ ವಿನಾಯ್ತಿ ಸಿಗಲಿದೆ ಮತ್ತು ಟಿಡಿಎಸ್ ಇರುವುದಿಲ್ಲ ಎಂದೂ ಹಣಕಾಸು ಸಚಿವರು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ.

ತನ್ನದೇ ಷೇರು ಮರುಖರೀದಿಗೆ ತೆರಿಗೆ

ಕಂಪನಿಯೊಂದು ತಾನೇ ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದ ಷೇರುಗಳನ್ನು ತಾನೇ ಮರು ಖರೀದಿಯನ್ನು ಮಾಡಿದರೆ, ಅದನ್ನು 'ಬಂಡವಾಳ ಗಳಿಕೆ' ಎಂದು ಪರಿಗಣಿಸಿ ತೆರಿಗೆ ವಿಧಿಸಲಾಗುತ್ತದೆ. ಈ ಪ್ರಕರಣಗಳಲ್ಲಿ ವಂಚನೆ ತಡೆಯಲು ಕೇಂದ್ರ ಸರಕಾರ ಈ ಹೆಜ್ಜೆಯನ್ನಿಟ್ಟಿದೆ.

44 ಲಕ್ಷ ಕೋಟಿ ರು.

2026-27ರ ಸಾಲಿನಲ್ಲಿ ನೇರ ಮತ್ತು ಪರೋಕ್ಷ ತೆರಿಗೆಯ ಮೂಲಕ ಒಟ್ಟು 44.04 ಲಕ್ಷ ಕೋಟಿ ರು. ಸಂಗ್ರಹಿಸುವ ಗುರಿ ಹೊಂದಲಾಗಿದೆ.

ವಾರ್ಷಿಕ ಗಳಿಕೆಗೆ ಇನ್ನಷ್ಟು ತೆರಿಗೆ ವಿನಾಯ್ತಿ ನಿರೀಕ್ಷಿಸಿದ್ದ ಮಧ್ಯಮವರ್ಗಕ್ಕೆ ನಿರಾಶೆ
ತೆರಿಗೆ ಸ್ಲ್ಯಾಬ್‌ಗಳಲ್ಲಿ ಬದಲಾವಣೆಯಾಗಿಲ್ಲ, ಏ.1ರಿಂದ ಹೊಸ ತೆರಿಗೆ ನೀತಿ ಜಾರಿ

ಆದಾಯ ತೆರಿಗೆ: ಏರಿಲ್ಲ, ಇಳಿದಿಲ್ಲ

2025ರ ಬಜೆಟ್ ವೇಳೆ ತೆರಿಗೆ ಪಾವತಿದಾರರಿಗೆ ಅದರಲ್ಲೂ ಮಧ್ಯಮವರ್ಗದವರಿಗೆ ಸಂತಸದ ಸುದ್ದಿಯನ್ನು ಕೇಂದ್ರ ಸರಕಾರ ನೀಡಿತ್ತು. ಭಾನುವಾರ ನಡೆದ ಬಜೆಟ್ ಮಂಡನೆಯಲ್ಲಿ ಈ ವರ್ಗ ಭಾರೀ ನಿರಾಶೆ ಎದುರಿಸಿದೆ. ಆದಾಯ ತೆರಿಗೆಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಿಲ್ಲ. ಎಂದಿನಂತೆ ಹಳೆಯ ಕ್ರಮವೇ ಮುಂದುವರಿದಿದೆ.

ಶೂನ್ಯ ತೆರಿಗೆ ಮಿತಿಯನ್ನು ಇನ್ನಷ್ಟು ವಾರ್ಷಿಕ ವೇತನಪ್ರಮಾಣಕ್ಕೆ ಏರಿಸುವ ನಿರೀಕ್ಷೆಯಿತ್ತು. ಅರ್ಥಾತ್ ಪ್ರಸ್ತುತ ಶೇ.12 ಲಕ್ಷ ರು. ವರೆಗೆ ಯಾವುದೇ ತೆರಿಗೆಯಿರುವುದಿಲ್ಲ. ಈ ಮಿತಿ 15 ಲಕ್ಷ ರು. ಗೇರಬಹುದಾ ಎಂದು ಅಂದಾಜಿಸಲಾಗಿತ್ತು. ಅಂತಹ ಯಾವುದೇ ಆಸಕ್ತಿಯನ್ನು ಕೇಂದ್ರ ತೋರಿಲ್ಲ. ಇದರ ಬದಲಿಗೆ ತೆರಿಗೆ ನಿಯಮಗಳನ್ನು ಸರಳೀಕರಣಗೊಳಿಸಲು ಹೊಸ 'ಆದಾಯ ತೆರಿಗೆ ಕಾಯ್ದೆ-2025' ಅನ್ನು ಘೋಷಿಸಿದ್ದು, ಇದು ಏಪ್ರಿಲ್ 1, 2026ರಿಂದ ಜಾರಿಗೆ ಬರಲಿದೆ ಎಂದಷ್ಟೇ ಹೇಳಿದ್ದಾರೆ.

ಏನಿದು ಹೊಸ ಆದಾಯ ತೆರಿಗೆ ಕಾಯ್ದೆ: ಈಗಾಗಲೇ ಕಳೆದ ಜುಲೈ 2024ರಲ್ಲಿ ಘೋಷಿಸಿದಂತೆ, ಆದಾಯ ತೆರಿಗೆ ಕಾಯ್ದೆ 1961ರ ಸಮಗ್ರ ಮರುಪರಿಶೀಲನೆ ಪೂರ್ಣಗೊಂಡಿದ್ದು, ಸರಳೀಕೃತ ನಿಯಮಗಳೊಂದಿಗೆ 'ಆದಾಯ ತೆರಿಗೆ ಕಾಯ್ದೆ, 2025' ಇದೇ ಬರುವ ಏಪ್ರಿಲ್ 1, 2026ರಿಂದ ಜಾರಿಗೆ ಬರಲಿದೆ. ಅರ್ಥವಾಗುವಂತೆ ಫಾರ್ಮ್ ವಿನ್ಯಾಸಗೊಳಿಸಲಾಗಿದೆ.

ಟಿಡಿಎಸ್, ಟಿಸಿಎಸ್‌ನಲ್ಲಿ ಇಳಿಕೆ: ವಿದೇಶಿ ಪ್ರವಾಸ ಪ್ಯಾಕೇಜ್‌ಗಳ ಮೇಲಿನ ಟಿಸಿಎಸ್ ಅಂದರೆ 'ಮೂಲದಲ್ಲಿ ತೆರಿಗೆ ಸಂಗ್ರಹ' ದರವನ್ನು ಇಳಿಕೆ ಮಾಡಲಾಗಿದೆ. ಈಗ ಇರುವ ಶೇ.5 ಮತ್ತು ಶೇ.20ರಿಂದ ಶೇ. 2ಕ್ಕೆ ಇಳಿಕೆ ಮಾಡಲಾಗಿದೆ. ಇದರಿಂದ ವಿದೇಶಕ್ಕೆ ಪ್ರವಾಸಕ್ಕೆ ಹೋಗುವವರಿಗೆ ಅನುಕೂಲವಾಗಲಿದೆ. ವಿದೇಶದಲ್ಲಿ ಶಿಕ್ಷಣ ಮತ್ತು ವೈದ್ಯಕೀಯ ಉದ್ದೇಶಗಳಿಗೆ ಎಲ್‌ಆರ್‌ಎಸ್ ಅಡಿಯಲ್ಲಿ ಕಳುಹಿಸುವ ಹಣದ ಮೇಲಿನ ಟಿಸಿಎಸ್ ಅನ್ನು ಕೂಡ ಶೇ. 5ರಿಂದ ಶೇ.2ಕ್ಕೆ ತಗ್ಗಿಸಲಾಗಿದೆ.



ಶಿಕ್ಷೆಯ ಬದಲು ದಂಡ

ಹಾಗೆಯೇ ಸಣ್ಣ ತೆರಿಗೆ ಪಾವತಿದಾರರಿಗೆ ಕಡಿಮೆ ಅಥವಾ ಶೂನ್ಯ ಕಡಿತ ಪ್ರಮಾಣಪತ್ರ ಪಡೆಯಲು, ಆಟೋಮೇಟೆಡ್ ವ್ಯವಸ್ಥೆ ಜಾರಿಗೆ ಬರಲಿದೆ. ಇದರಿಂದ ಈ ವರ್ಗದ ತೆರಿಗೆದಾರರಿಗೆ ಪ್ರಮಾಣಪತ್ರ ಪಡೆದುಕೊಳ್ಳುವುದು ಅತ್ಯಂತ ಸುಲಭವಾಗಲಿದೆ. ಜೊತೆಗೆ ವಿದೇಶದಲ್ಲಿ ಆಸ್ತಿ ಹೊಂದಿರುವ ಸಣ್ಣ ತೆರಿಗೆದಾರರು, ಎನ್‌ಆರ್‌ಐಗಳು ಮತ್ತು ಟೆಕ್ಕಿಗಳಿಗೆ ಒಂದು ಬಾರಿಯ ಆಸ್ತಿ ಘೋಷಣಾ ಯೋಜನೆಯನ್ನು ಪ್ರಕಟಿಸಲಾಗಿದೆ. ಈ ಹೊಸ ಯೋಜನೆಯು ಶಿಕ್ಷೆಯ ಬದಲಾಗಿ ದಂಡವನ್ನು ಪ್ರೇರೇಪಿಸುತ್ತದೆ.

ಹೀಗಿದೆ ತೆರಿಗೆ ದರಗಳು

2025ರಲ್ಲಿ ಹೊಸ ತೆರಿಗೆ ಪದ್ಧತಿಯನ್ನು ಘೋಷಿಸಲಾಗಿತ್ತು. ಈ ಮೂಲಕ ಹಳೆಯ ಪದ್ಧತಿ ಮತ್ತು ಹೊಸ ಪದ್ಧತಿಗಳೆರಡೂ ಜಾರಿಯಲ್ಲಿವೆ. ಇದರಲ್ಲಿ ಒಂದಷ್ಟು ಬದಲಾವಣೆಯಾಗುವ ನಿರೀಕ್ಷೆಯಿತ್ತು. ಅದೇನು ಆಗಿಲ್ಲ, ಕಳೆದ ವರ್ಷದ ಘೋಷಣೆಯೇ ಮುಂದುವರಿದಿದೆ. ಈ ಪೈಕಿ 12 ಲಕ್ಷ ರು.ಗಳವರೆಗೆ ತೆರಿಗೆ ವಿನಾಯ್ತಿ ಇದ್ದರೂ, ಅದಕ್ಕೂ ಹೆಚ್ಚಿನ ವಾರ್ಷಿಕ ಆದಾಯ ಇದ್ದವರು ಮಾಮೂಲಿಯಂತೆ ತೆರಿಗೆ ಪಾವತಿಸಬೇಕಾಗುತ್ತದೆ. ಅಂದರೆ 4 ಲಕ್ಷ ರು.ವರೆಗೆ ತೆರಿಗೆಯಿಲ್ಲ. 4ರಿಂದ 8, 8ರಿಂದ 12 ಲಕ್ಷ ರು., ಅದರ ನಂತರದ ಆದಾಯ ಹೊಂದಿರುವವರಿಗೆ ಎಷ್ಟು ತೆರಿಗೆಯೆಂದು ಸೂಚಿಸಲಾಗಿದೆ. 12 ಲಕ್ಷ ರು.ಗಳಿಗಿಂತ ಹೆಚ್ಚಿನ ಆದಾಯ ಹೊಂದಿರುವವರು ಇವೆಲ್ಲವನ್ನೂ ಪಾವತಿಸಬೇಕಾಗುತ್ತದೆ. ತೆರಿಗೆ ಪದ್ಧತಿ ಹೀಗಿದೆ...





ಬಜೆಟ್ ದಿನಗಳಂದು ಕಳೆದ ಆರು ವರ್ಷದಲ್ಲೇ ಸೆನ್ಸೆಕ್ಸ್, ನಿಫ್ಟಿ ಗರಿಷ್ಠ ಪತನ

ಕೇಂದ್ರ ಬಜೆಟ್ ಭಾನುವಾರವೇ ಇದ್ದಿದ್ದರಿಂದ ರಜಾದಿನದಂದೂ ಬಾಂಬೇ ಸ್ಟಾಕ್ ಎಕ್ಸ್‌ಚೇಂಜ್, ಎನ್‌ಎಸ್‌ಇಗಳು ಎಂದಿನಂತೆ ಕಾರ್ಯಾಚರಣೆ ನಡೆಸಿದವು. ಆದರೆ ಈ ಷೇರು ಮಾರುಕಟ್ಟೆಗಳ ಪಾಲಿಗೆ ಕಳೆದ 6 ವರ್ಷಗಳಲ್ಲೇ ಅತ್ಯಂತ ಕಳಪೆ ಬಜೆಟ್ ದಿನ ಇದಾಗಿತ್ತು. ಯಾವುದೇ ಜನಪ್ರಿಯ ಯೋಜನೆಗಳನ್ನು ಘೋಷಿಸದೇ ಪ್ರಗತಿಯ ಮೇಲೆ ಮಾತ್ರ ಗಮನ ಹರಿಸಿದ್ದರಿಂದ ಮಾರುಕಟ್ಟೆ ಕುಸಿದಿದೆ ಎಂದು ತಜ್ಞರು ಹೇಳಿದ್ದಾರೆ. ಈ ಕುಸಿತಕ್ಕೆ ಮುಖ್ಯ ಮತ್ತು ನೇರ ಕಾರಣವೆಂದರೆ ಷೇರುಗಳ (ಫ್ಯೂಚರ್ ಆ್ಯಂಡ್ ಆಪ್ಷನ್) ಮಾರಾಟ ಮತ್ತು ಖರೀದಿಯ ಮೇಲೆ ಭದ್ರತಾ ವಹಿವಾಟು ತೆರಿಗೆ (ಸೆಕ್ಯುರಿಟೀಸ್ ಆ್ಯಂಡ್ ಟಾನ್ಸಾಕ್ಷನ್ ಟ್ಯಾಕ್ಸ್) ಹೇರಲು ಕೇಂದ್ರ ಸರಕಾರ ನಿರ್ಧರಿಸಿದ್ದು ಎಂದು ತಜ್ಞರು ಹೇಳಿದ್ದಾರೆ. ಫ್ಯೂಚರ್ ಷೇರುಗಳ ಮೇಲೆ 0.02ರಿಂದ ಶೇ.0.05ಕ್ಕೆ ತೆರಿಗೆಯೇರಿಕೆ, ಆಪ್ಷನ್ಸ್ ಮೇಲೆ ಶೇ.0.01ರಿಂದ ಶೇ.0.15ರವರೆಗೆ ತೆರಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಇದರಿಂದ ಸೆನ್ಸೆಕ್ಸ್ 1500 ಅಂಕ, ನಿಫ್ಟಿ 437 ಅಂಕ ಪತನಗೊಂಡಿದೆ.

ಗಂಭೀರ ಪ್ರಕರಣಗಳಲ್ಲಿ ಗರಿಷ್ಠ 2 ವರ್ಷ ಜೈಲು, ಹಿಂದಿದ್ದದ್ದು 7 ವರ್ಷ ಶಿಕ್ಷೆ
10 ಲಕ್ಷ ರು.ಗಿಂತ ಕಡಿಮೆ ತೆರಿಗೆ ವಂಚನೆಯಾದರೆ ಬರೀ ದಂಡ ಮಾತ್ರ ಹೇರಿಕೆ

ಸಣ್ಣಪುಟ್ಟ ತೆರಿಗೆ ವಂಚನೆಗಳಿಗೆಲ್ಲ ಜೈಲು ಶಿಕ್ಷೆಯಿಲ್ಲ

ತೆರಿಗೆ ಪಾವತಿದಾರರಿಗೆ ಕೇಂದ್ರ ಸರಕಾರ ಭಾರೀ ನೆಮ್ಮದಿ ನೀಡುವ ನಿರ್ಧಾರವೊಂದನ್ನು ಮಾಡಿದೆ. ತೆರಿಗೆ ಪಾವತಿ ದಾರರು ಯಾವುದೇ ಕಾರಣಕ್ಕೆ ಪಾವತಿಯಲ್ಲಿ ವ್ಯತ್ಯಾಸ ಮಾಡಿದರೆ, ಅದಕ್ಕೆಂದೇ ಹೆಣಗಾಡುವ, ತಮ್ಮ ಸಮಯವನ್ನೆಲ್ಲ ಅರ್ಜಿ ಹಾಕಿಕೊಂಡು ವಿಚಾರಣೆ ಎದುರಿಸುವುದರಲ್ಲೇ ಕಳೆಯುವ ಪರಿಸ್ಥಿತಿಯಿಂದ ತುಸು ಬಿಡುಗಡೆ ಹೊಂದಿದ್ದಾರೆ. ಅದಕ್ಕೆ ಪೂರಕವಾಗಿ ನಿರ್ಮಲಾ ಘೋಷಣೆಯೊಂದನ್ನು ಮಾಡಿದ್ದಾರೆ.

ತೀರಾ ಗಂಭೀರ ತೆರಿಗೆ ವಂಚನೆ ಪ್ರಕರಣಗಳಲ್ಲಿ ಗರಿಷ್ಠ 2 ವರ್ಷ ಜೈಲು ಶಿಕ್ಷೆ ಇರುತ್ತದೆ. ಇತರೆ ಸಂಗತಿಗಳಲ್ಲಿ ನ್ಯಾಯಾಲಯ ದಂಡ ಹಾಕಿ ಪ್ರಕರಣವನ್ನು ಮುಕ್ತಾಯ ಮಾಡಬಹುದು. ಮೊದಲ ಬಾರಿಯ ತಪ್ಪಿಗೆ ಈಗ 2 ವರ್ಷ ಜೈಲು ಶಿಕ್ಷೆ ಇರುತ್ತದೆ. ಹಿಂದೆ ಇದು 7 ವರ್ಷವಿತ್ತು. ಮರಳಿ ತಪ್ಪು ಮಾಡಿದರೆ 3 ವರ್ಷ ಶಿಕ್ಷೆ ನೀಡಲಾಗುತ್ತದೆ. ಹಿಂದೆ ಅದು 7 ವರ್ಷವಿತ್ತು. 10 ಲಕ್ಷ ರು.ಗಿಂತ ಕಡಿಮೆ ತೆರಿಗೆ ವಂಚನೆಯಾದರೆ ಅಂತಹ ಪ್ರಕರಣಗಳಲ್ಲಿ ಬರೀ ದಂಡ ಹಾಕಿ ಕೈಬಿಡಲು

ನಿರ್ಧರಿಸಲಾಗಿದೆ. ಬಹುತೇಕ ತಪ್ಪುಗಳನ್ನು ಅಪರಾಧಮುಕ್ತಗೊಳಿಸಲಾಗಿದೆ.

ತೆರಿಗೆ ಪಾವತಿಯ ಪರಿಶೀಲನೆಗೊಂದು ನೋಟಿಸ್, ಅದಕ್ಕೆ ಹಾಕಿರುವ ದಂಡ ತಿಳಿಸಲು ಇನ್ನೊಂದು ನೋಟಿಸ್ ಅನ್ನು ಇನ್ನು ಪ್ರತ್ಯೇಕ, ಪ್ರತ್ಯೇಕವಾಗಿ ನೀಡುವುದಿಲ್ಲ. ಒಂದೇ ಆದೇಶದಲ್ಲಿ ಅದನ್ನು ತಿಳಿಸಲಾಗುತ್ತದೆ. ಇದುವರೆಗೆ ಈ ಪ್ರತ್ಯೇಕಪ್ರತ್ಯೇಕ ನೋಟಿಸ್‌ಗಳಿಂದ ಪ್ರಕ್ರಿಯೆ ಬಹಳ ವಿಳಂಬವಾಗುತ್ತಿತ್ತು. ಇನ್ನು ಅಂತಹ ಚಿಂತೆಗಳಿರುವುದಿಲ್ಲ.

ಒಂದು ವೇಳೆ ತೆರಿಗೆದಾರರು ತೆರಿಗೆ ಪ್ರಾಧಿಕಾರದ ನಿರ್ಧಾರ ಪ್ರಶ್ನಿಸಿ ಅರ್ಜಿ ಸಲ್ಲಿಸಿದರೆ, ಅದರ ಫಲಿತಾಂಶವೇನೇ ಇರಲಿ ದಂಡದ ಮೊತ್ತಕ್ಕೆ ಬಡ್ಡಿ ಕಟ್ಟಬೇಕಾದ ಅಗತ್ಯವಿಲ್ಲ. ಇಂತಹ ತಕರಾರು ಅರ್ಜಿಗಳನ್ನು ಸಲ್ಲಿಸಲೂ ಸುಲಭದ ವಾತಾವರಣ ಸೃಷ್ಟಿಸಲಾಗಿದೆ. ಅಂದರೆ ಹಿಂದೆ ಇಂತಹ ತಕರಾರು ಅರ್ಜಿ ಸಲ್ಲಿಸಲು ಕಟ್ಟಬೇಕಾದ ಒಟ್ಟು ತೆರಿಗೆಯಲ್ಲಿ ಶೇ.20ರಷ್ಟನ್ನು ಕಟ್ಟಿರಬೇಕಾಗಿತ್ತು. ಈಗದನ್ನು ಶೇ.10ಕ್ಕಿಳಿಸಲಾಗಿದೆ. ಇದರ ಜೊತೆಗೆ ತೆರಿಗೆ ಪಾವತಿ ಮರುಪರಿ ಶೀಲನೆಯನ್ನು ಇಲಾಖೆ ಶುರು ಮಾಡಿದ ಮೇಲೂ, ತಮ್ಮ ಮಾಹಿತಿ ಯನ್ನು ಇನ್ನೊಮ್ಮೆ ಅಪ್ಡೇಟ್ ಮಾಡಲು ಅವಕಾಶ ನೀಡಲಾಗಿದೆ. ಈ ಮಾಹಿತಿಯನ್ನಾಧರಿಸಿಯೇ ಇಲಾಖೆ ಮರು ಪರಿಶೀಲನೆ ನಡೆಸಲಿದೆ. ಇನ್ನು ಸಣ್ಣಪುಟ್ಟ ತಪ್ಪುಗಳನ್ನೆಲ್ಲ ಅಪರಾಧಗಳೆಂದು ಪರಿಗಣಿಸುವುದಿಲ್ಲ (ತೆರಿಗೆ ಮಾಹಿತಿ ಪುಸ್ತಕ ಸಲ್ಲಿಸದೇ ಇರುವುದು, ಟಿಡಿಎಸ್ ಪಾವತಿಸದೇ ಇರುವುದು ಇತ್ಯಾದಿ).

ವಿದೇಶಿ ಆಸ್ತಿ

ವಿದೇಶದಲ್ಲಿರುವ ಆಸ್ತಿ ಘೋಷಣೆಗೆ ಕಾಲಾವಕಾಶ

ವಿದೇಶದಲ್ಲಿ ಆಸ್ತಿ ಹೊಂದಿರುವ ಸಣ್ಣ ತೆರಿಗೆದಾರರು, ಅನಿವಾಸಿ ಭಾರತೀಯರು ಮತ್ತು ಟೆಕ್ಕಿಗಳಿಗೆ ಒಂದು ಬಾರಿಯ ಆಸ್ತಿ ಘೋಷಣಾ ಯೋಜನೆಯನ್ನು ಪ್ರಕಟಿಸಲಾಗಿದೆ. ಇದರಲ್ಲಿ 1 ಕೋಟಿ ರು. ವರೆಗಿನ ವಿದೇಶಿ ಆದಾಯ/ಆಸ್ತಿ ಘೋಷಿಸದವರು ಶೇ.30ರಷ್ಟು ತೆರಿಗೆ ಮತ್ತು ಶೇ.30ರಷ್ಟು ದಂಡ ಪಾವತಿಸಿ ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಬಹುದು. ಒಂದೊಮ್ಮೆ 5 ಕೋಟಿ ರು.ವರೆಗಿನ ಆದಾಯ ಘೋಷಿಸಿ, ಆಸ್ತಿ ಘೋಷಿಸಲು ಮರೆತವರು 1 ಲಕ್ಷ ರು. ಶುಲ್ಕ ಪಾವತಿಸಿ ವಿನಾಯ್ತಿ ಪಡೆಯಬಹುದು. 20 ಲಕ್ಷ ರು.ನಂತಹ ಸಣ್ಣಪುಟ್ಟ ಆಸ್ತಿ ಹೊಂದಿದವರು ಘೋಷಣೆ ಮಾಡದಿದ್ದರೂ ಸಮಸ್ಯೆಯೇನಿಲ್ಲ. ಇದು ವಿದೇಶದಲ್ಲಿ ವಾಸಿಸುತ್ತಿರುವ ಲಕ್ಷಾಂತರ ಭಾರತೀಯರಿಗೆ ನೆಮ್ಮದಿ ನೀಡಲಿದೆ. ಹಲವಾರು ಕಾರಣಗಳಿಂದ ಆಸ್ತಿ ಘೋಷಣೆಯನ್ನು ಮುಚ್ಚಿಟ್ಟವರು ಈಗ ಧೈರ್ಯದಿಂದ ಘೋಷಣೆ ಮಾಡಲು ಉತ್ತೇಜನ ನೀಡಲಾಗಿದೆ.

ಐಟಿಆರ್ ವಿನಾಯ್ತಿ

ಐಟಿಆರ್ ಪರಿಷ್ಕರಣೆಗೆ ಗಡುವು ಇನ್ನಷ್ಟು ವಿಸ್ತರಣೆ

ಆದಾಯ ತೆರಿಗೆ ರಿಟರ್ನ್ (ಐಟಿಆರ್) ಪರಿಷ್ಕರಿಸಿ ಸಲ್ಲಿಸಲು ಇಲ್ಲಿಯವರೆಗೆ ಡಿಸೆಂಬರ್ 31 ಕೊನೆಯ ದಿನವಾಗಿತ್ತು. ಇದೀಗ ಅತ್ಯಲ್ಪ ಶುಲ್ಕದೊಂದಿಗೆ ಈ ದಿನಾಂಕವನ್ನು ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. ಆದರೆ ಐಟಿಆರ್ ಫೈಲಿಂಗ್ ದಿನಾಂಕಗಳಲ್ಲಿ ಸಣ್ಣ ಬದಲಾವಣೆಯಾಗಿದೆ. ವೈಯಕ್ತಿಕ ತೆರಿಗೆ ಪಾವತಿದಾರರಿಗೆ ಅನ್ವಯವಾಗುವ ಐಟಿಆರ್ 1 ಹಾಗೂ ಐಟಿಆರ್ 2 ಸಲ್ಲಿಕೆಗೆ ಜುಲೈ 31ರವರೆಗೆ ಅವಕಾಶ ಇರಲಿದೆ. ಆಡಿಟ್ ಅಲ್ಲದ ಬಿಸಿನೆಸ್ ಮತ್ತು ಟ್ರಸ್ಟ್‌ಗಳಿಗೆ ಆಗಸ್ಟ್ 31ರವರೆಗೆ ಐಟಿಆರ್ ಸಲ್ಲಿಕೆಗೆ ಅವಕಾಶ ಇದೆ. ತುಸು ಹೆಚ್ಚು ಸಮಯಾವಕಾಶವನ್ನು ನೀಡುವ ಮೂಲಕ ತೆರಿಗೆ ಪಾವತಿದಾರರ ಹಾದಿ ಸುಗಮಗೊಳಿಸಲಾಗಿದೆ.

ಮಾರುಕಟ್ಟೆಯಲ್ಲಿ ನೆಲಕಚ್ಚಿದ ಚಿನ್ನ, ಬೆಳ್ಳಿ ಇಟಿಎಫ್‌ಗಳು

ಚಿನ್ನ- ಬೆಳ್ಳಿ ದರದಲ್ಲಿ ಭಾರೀ ಇಳಿಕೆ

ಕಂಡಿದ್ದ ಚಿನ್ನ ಹಾಗೂ ಬೆಳ್ಳಿ ದರಗಳು ಭಾನುವಾರ ತೀವ್ರ ಕುಸಿತ ಕಂಡಿವೆ. ಫೆಬ್ರವರಿ 1ರಂದು ಎಂಸಿಎಕ್ಸ್‌ನಲ್ಲಿ (ಮಲ್ಟಿ ಕಮಾಡಿಟಿ ಎಕ್ಸ್ ಚೇಂಜ್) ಚಿನ್ನದ ಫ್ಯೂಚರ್ಸ್ ದರಗಳು ಶೇ. 6ರಷ್ಟು ಇಳಿಕೆಯಾಗಿವೆ. ಪರಿಣಾಮ ಗೋಲ್ಡ್ ಇಟಿಎಫ್‌ಗಳು ಶೇ.16ರವರೆಗೆ ಭಾರೀ ಕುಸಿತ ಕಂಡಿವೆ. ಏಪ್ರಿಲ್‌ನಲ್ಲಿ ಮುಕ್ತಾಯವಾಗುವ ಚಿನ್ನದ ಫ್ಯೂಚರ್ಸ್ ದರಗಳು ಶೇ.6ರಷ್ಟು ಅಂದರೆ 10 ಗ್ರಾಮ್‌ಗೆ 9,140 ರು. ಕುಸಿತ ಕಂಡಿದ್ದು, 1,43,205 ರು.ನಲ್ಲಿ ವಹಿವಾಟು ಆರಂಭಿಸಿತ್ತು.

ಎಂಸಿಎಕ್ಸ್‌ನಲ್ಲಿ ಚಿನ್ನದ ಫ್ಯೂಚರ್ಸ್ ದರಗಳು 1,93,096 ರು.ಗಳ ಗರಿಷ್ಠ ಮಟ್ಟವನ್ನು ತಲುಪಿತ್ತು. ಇದಕ್ಕೆ ಹೋಲಿಸಿದರೆ ಇದೀಗ ಶೇ.26ರಷ್ಟು ಅಥವಾ ಸುಮಾರು 50,000 ರು. ಗಳಷ್ಟು ಇಳಿಕೆ ಕಂಡಿದೆ. ಇತ್ತ ಬೆಳ್ಳಿ ಬೆಲೆಯಲ್ಲಿ ಕಂಡು ಕೇಳರಿಯದ ಇಳಿಕೆ ಕಂಡು ಬಂದಿದೆ. ಭಾನುವಾರ ಎಂಸಿಎಕ್ಸ್‌ನಲ್ಲಿ ಕೆಜಿಗೆ 17,515 ರು. ಇಳಿಕೆಯಾಗಿದ್ದು, 2,74,410 ರು.ನಲ್ಲಿ ವಹಿವಾಟು ಆರಂಭಿಸಿತ್ತು. ಒಂದು ಹಂತದಲ್ಲಿ ಬೆಳ್ಳಿಯ ಬೆಲೆ ಕೆಜಿಗೆ 4,20,048 ರು. ತಲುಪಿತ್ತು. ಇದಕ್ಕೆ ಹೋಲಿಸಿದರೆ ಇದೀಗ ಶೇ.35ರಷ್ಟು ಅಥವಾ 1,45,638 ರೂ.ಗಳಷ್ಟು ಕಡಿಮೆ ಆಗಿದೆ.

ಪ್ರಾಫಿಟ್ ಬುಕ್ಕಿಂಗ್, ಪ್ರಬಲಗೊಂಡ ಡಾಲರ್ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಫೆಡ್

ಅಧ್ಯಕ್ಷರಾಗಿ ಕೆವಿನ್ ವಾರ್ಷ್ ಅವರನ್ನು ನೇಮಕ ಮಾಡುವುದಾಗಿ ಹೇಳಿದ ಬೆನ್ನಲ್ಲೇ ಈ ಭಾರೀ ಇಳಿಕೆ ದಾಖಲಾಗಿದೆ.

ಚಿನ್ನ, ಬೆಳ್ಳಿ ಇಟಿಎಫ್‌ಗಳು ಕುಸಿತ: ಬರೋಡಾ ಬಿಎನ್‌ಪಿ ಪರಿಬಾಸ್ ಚಿನ್ನ ಇಟಿಎಫ್ ಶೇ.16ರಷ್ಟು ಭಾರೀ ಕುಸಿತ ಕಂಡಿದ್ದು 135.20 ರು.ಗೆ ಇಳಿಕೆ ಕಂಡಿದೆ. ಇತ್ತ ಮೋತಿಲಾಲ್ ಓಸ್ವಾಲ್ ಚಿನ್ನ ಇಟಿಎಫ್ ಕೂಡ ಶೇ. 16ರಷ್ಟು ಕುಸಿತ ಕಂಡಿದೆ. ಎಡೆಲ್ವೀಸ್ ಗೋಲ್ಡ್ ಇಟಿಎಫ್, ಎಲ್‌ಐಸಿ ಎಂಎಫ್ ಗೋಲ್ಡ್ ಇಟಿಎಫ್ ಹಾಗೂ ಬಿರ್ಲಾ ಸನ್‌ಲೈಫ್ ಗೋಲ್ಡ್ ಇಟಿಎಫ್‌ಗಳು ಶೇ.15ಕ್ಕಿಂತ ಹೆಚ್ಚು ಕುಸಿತ ಕಂಡಿವೆ. ಬೆಳ್ಳಿ ಇಟಿಎಫ್‌ಗಳ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಬಂಧನ್ ಬೆಳ್ಳಿ ಇಟಿಎಫ್ ಶೇ.16ರಷ್ಟು ಕುಸಿತ ಕಂಡಿದ್ದರೆ, ಮೋತಿಲಾಲ್ ಓಸ್ವಾಲ್ ಬೆಳ್ಳಿ ಇಟಿಎಫ್ ಮತ್ತು ಜೆರೋಧಾ ಬೆಳ್ಳಿ ಇಟಿಎಫ್‌ಗಳು ಶೇ.15ರಷ್ಟು ಇಳಿಕೆಯಾಗಿವೆ.

ವಿಶ್ಲೇಷಣೆ

ಸಿದ್ದರಾಮಯ್ಯ
ಮುಖ್ಯಮಂತ್ರಿ

ಕರ್ನಾಟಕದ ಪಾಲಿಗೆ ಚೊಂಬು ನೀಡಿದ ಕೇಂದ್ರ

2026-27ನೇ ಸಾಲಿನ ಕೇಂದ್ರ ಬಜೆಟ್ ಪ್ರಕಟವಾದ ಬಳಿಕ ಕರ್ನಾಟಕದಲ್ಲಿ ಮೂಡಿದ ಚರ್ಚೆ ಒಂದು ಸ್ಪಷ್ಟ ಸಂದೇಶ ನೀಡುತ್ತಿದೆ. ಈ ಆಯವ್ಯಯ ರಾಜ್ಯದ ನಿರೀಕ್ಷೆಗಳಿಗೆ ಸ್ಪಂದಿಸಿಲ್ಲ. ಇದು ಘೋಷಣೆಗಳ ಮೇಲೆ ನಿಂತ ಬಜೆಟ್ ಆಗಿದ್ದು, ನೆಲಮಟ್ಟದ ಅಭಿವೃದ್ಧಿಗೆ ಅಗತ್ಯವಿರುವ ಸ್ಪಷ್ಟ ದಿಕ್ಕು ಮತ್ತು ಬದ್ಧತೆ ಕಾಣುತ್ತಿಲ್ಲ.

ಈ ಬಾರಿ ಬಜೆಟ್ ಗಾತ್ರ 53.47 ಲಕ್ಷ ಕೋಟಿಗೆ ಏರಿಕೆಯಾಗಿದೆ. ಕಳೆದ ವರ್ಷದ ಪರಿಷ್ಕೃತ ಅಂದಾಜಿನ ಹೋಲಿಕೆಯಲ್ಲಿ ಇದು 5.56 ಶೇಕಡ ಹೆಚ್ಚಳ. ಆದರೆ ಕಳೆದ ವರ್ಷವೇ ಬಜೆಟ್ ಗಾತ್ರದಲ್ಲಿ ಸುಮಾರು ಒಂದು ಲಕ್ಷ ಕೋಟಿ ರು. ಕಡಿತಗೊಂಡ ಅನುಭವವಿರುವ ಹಿನ್ನೆಲೆಯಲ್ಲಿ, ಈ ವರ್ಷದ ಸೀಮಿತ ಏರಿಕೆ ದೇಶದ ವೇಗದ ಅಭಿವೃದ್ಧಿಗೆ ಸಾಕಾಗುವುದಿಲ್ಲ. ರಾಜಸ್ವ ಕೊರತೆ 5.92 ಲಕ್ಷ ಕೋಟಿ ಮಟ್ಟದಲ್ಲಿರುವುದು ಮತ್ತು ಅದು ಬಜೆಟ್ ಗಾತ್ರದ ಸುತ್ತ 1.5 ಶೇಕಡಾಗಿರುವುದು, ರಾಜ್ಯಗಳಿಗೆ ಹೆಚ್ಚುವರಿ ಸಂಪನ್ಮೂಲ ಹಂಚಿಕೆ ಮಾಡಲು ಕೇಂದ್ರಕ್ಕೆ ಇರುವ ಅವಕಾಶ ಸೀಮಿತವಾಗಿರುವುದನ್ನೂ ಸೂಚಿಸುತ್ತದೆ.

ಕರ್ನಾಟಕದ ದೃಷ್ಟಿಯಿಂದ ದೊಡ್ಡ ಅಸಮಾಧಾನ ಮೂಲಸೌಕರ್ಯ ಹೂಡಿಕೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಹೈಸ್ಪೀಡ್ ರೈಲು ಯೋಜನೆಗಳು ಬೆಂಗಳೂರು-ಹೈದರಾಬಾದ್ ಮತ್ತು ಬೆಂಗಳೂರು-ಚೆನ್ನೈ ಮಾರ್ಗಗಳಿಗೆ ಮಾತ್ರ ಸೀಮಿತವಾಗಿವೆ. ಆದರೆ ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಅತ್ಯಂತ ಮುಖ್ಯವಾಗಿರುವ ಬೆಂಗಳೂರು-ಮುಂಬೈ, ಬೆಂಗಳೂರು-ಮಂಗಳೂರು, ಬೆಂಗಳೂರು-ಪುಣೆ ಮಾರ್ಗಗಳು ಸಂಪೂರ್ಣವಾಗಿ ನಿರ್ಲಕ್ಷಿತವಾಗಿವೆ. ಇದು ಪ್ರಾದೇಶಿಕ ಆದ್ಯತೆಗಳ ಹಂಚಿಕೆಯಲ್ಲಿ ಅಸಮತೋಲನವನ್ನು ತೋರಿಸುತ್ತದೆ. 'ವಿಕಸಿತ ಭಾರತ' ಎಂಬ ಘೋಷಣೆಯ ಜತೆಗೆ ಹೋಲಿಸಿದರೆ, ಈ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಲಭಿಸಿರುವುದು ಮಾತಿನ ಮಟ್ಟದ ಭರವಸೆಗಳಷ್ಟೇ ಎಂಬ ಅಭಿಪ್ರಾಯ ಬಲವಾಗುತ್ತಿದೆ.

ನೀರಾವರಿ ಕ್ಷೇತ್ರದಲ್ಲಿ ಪರಿಸ್ಥಿತಿ ಇನ್ನೂ ಗಂಭೀರವಾಗಿದೆ. ಭದ್ರಾ ಮೇಲ್ದಂಡೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳಾಗಿ ಘೋಷಿಸುವ ಬೇಡಿಕೆ ಈ ಬಜೆಟ್‌ನಲ್ಲಿಯೂ ಸ್ಥಾನ ಪಡೆಯಲಿಲ್ಲ. 2023-24ರಲ್ಲಿ ಭದ್ರಾ ಯೋಜನೆಗೆ ಘೋಷಿಸಿದ್ದ 5,300 ಕೋಟಿ ಅನುದಾನ ಇನ್ನೂ ಬಿಡುಗಡೆಯಾಗಿಲ್ಲ ಎಂಬುದು ಘೋಷಣೆ ಮತ್ತು ಅನುಷ್ಠಾನದ ನಡುವಿನ ಅಂತರವನ್ನು ಸ್ಪಷ್ಟಪಡಿಸುತ್ತದೆ. ಮೇಕೆದಾಟು ಮತ್ತು ಮಹದಾಯಿ ಯೋಜನೆಗಳಂತಹ ಅಂತರರಾಜ್ಯ ಜಲವಿವಾದಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಕೇಂದ್ರದ ಸ್ಪಷ್ಟ ಹಸ್ತಕ್ಷೇಪ ಕಾಣಿಸದಿರುವುದು ರಾಜ್ಯದ ನೀರಾವರಿ ಭದ್ರತೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಗಜೆಟ್ ನೋಟಿಫಿಕೇಶನ್ ಆಗದಿರುವುದು ಉತ್ತರ ಕರ್ನಾಟಕದ ಅಭಿವೃದ್ಧಿಗೆ ನೇರ ಅಡ್ಡಿಯಾಗಿರುವ ಅಂಶವಾಗಿದೆ.

ಬೇಳೆ ಕಾಳುಗಳಿಗೆ ಸಹಾಯ ಮಾಡಿ ಎಂದು ಕರ್ನಾಟಕ ಮನವಿ ಮಾಡಿತ್ತು. ಆದರೆ ಅದನ್ನು ಸಹ ಮಾಡಿಲ್ಲ. ತೆರಿಗೆ ಆದಾಯದಲ್ಲಿ ನಾವು ಕನಿಷ್ಠ ಶೇ.50 ಕೊಡಿ ಅಂತ ಕೇಳಿದ್ದೆವು. ಆದರೆ, ಶೇ.41 ಮಾತ್ರ ಕೊಟ್ಟಿದ್ದಾರೆ. 14ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಶೇ.4.71 ಮಾತ್ರ. 14ನೇ ಹಣಕಾಸಿಗಿಂತ ಜಾಸ್ತಿ ಮಾಡಿ ಕೊಡಿ ಎಂದರೆ 4.131 ಮಾತ್ರ ಕೊಟ್ಟಿದ್ದಾರೆ. ಈ ಮೂಲಕ ಕರ್ನಾಟಕಕ್ಕೆ 14ನೇ ಹಣಕಾಸಿನಷ್ಟು ಸಹ ಹಣ ನೀಡಿಲ್ಲ. ಉತ್ತರ ಪ್ರದೇಶಕ್ಕೆ ಹಾಗೂ ಕರ್ನಾಟಕಕ್ಕೆ ಹಣಕಾಸಿನ ಹಂಚಿಕೆಯಲ್ಲಿ ಭಾರಿ ತಾರತಮ್ಯವಾಗಿ ನಮಗೆ ಅನ್ಯಾಯವಾಗಿದೆ. ಬಜೆಟ್‌ಗೂ ಮುನ್ನ ನಮ್ಮ ರಾಜ್ಯದ ನೀರಾವರಿ, ಮೆಟ್ರೋ ಯೋಜನೆ, ಏಮ್ಸ್ ಕೊಡಬೇಕು ಎಂದು ಮನವಿ ಮಾಡಲಾಗಿತ್ತು. ಆದರೆ ಅದಾಗಿಲ್ಲ.

ತೆರಿಗೆ ಹಂಚಿಕೆ ವಿಷಯದಲ್ಲಿ ಮುಂದಿಟ್ಟಿರುವ ಅಂಕಿ-ಅಂಶಗಳು ಒಕ್ಕೂಟ ವ್ಯವಸ್ಥೆಯಲ್ಲಿ ಹಣಕಾಸು ಸಮತೋಲನದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತುತ್ತವೆ. ಕರ್ನಾಟಕ ಪ್ರತಿವರ್ಷ ಕೇಂದ್ರಕ್ಕೆ 4.5 ಲಕ್ಷ ಕೋಟಿಯಿಂದ 5.5 ಲಕ್ಷ ಕೋಟಿವರೆಗೆ ತೆರಿಗೆ ಕೊಡುಗೆ ನೀಡುವ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ಆದರೆ ವಾಪಸ್ಸಾಗಿ ಸಿಗುವ ಪಾಲು ಹೋಲಿಕೆಯಾಗಿ ಕಡಿಮೆ ಎನ್ನುವ ಭಾವನೆ, ಬಿಹಾರ್, ಉತ್ತರ ಪ್ರದೇಶ ಮುಂತಾದ ರಾಜ್ಯಗಳಿಗೆ ಹೆಚ್ಚು ಶೇಕಡಾವಾರು ಪಾಲು ಸಿಗುತ್ತಿರುವ ಹಂಚಿಕೆಯೊಂದಿಗೆ ಹೋಲಿಸಿದಾಗ ಮತ್ತಷ್ಟು ಗಟ್ಟಿಯಾಗುತ್ತದೆ. ತಲಾ ಆದಾಯದಲ್ಲಿ ಮುಂಚೂಣಿ, ಜಿಎಸ್‌ಟಿ ಸಂಗ್ರಹದಲ್ಲಿ ಎರಡನೇ ಸ್ಥಾನ, ವಿದೇಶಿ ಹೂಡಿಕೆಯಲ್ಲಿ ಮೊದಲ ಸ್ಥಾನದಲ್ಲಿರುವ ರಾಜ್ಯಕ್ಕೆ ಸಮರ್ಪಕ ಪ್ರತಿಫಲ ಸಿಗುತ್ತಿಲ್ಲ ಎಂಬ ವಾದ ಇಲ್ಲಿಂದಲೇ ಹುಟ್ಟುತ್ತದೆ.

ಸ್ಥಳೀಯ ಸಂಸ್ಥೆಗಳ ಅನುದಾನದಲ್ಲಿಯೂ ಇದೇ ಅಸಮಾನತೆ ಗೋಚರಿಸುತ್ತದೆ. ಐದು ವರ್ಷಗಳಿಗೆ ಉತ್ತರ ಪ್ರದೇಶಕ್ಕೆ 83,261 ಕೋಟಿ ರು., ಕರ್ನಾಟಕಕ್ಕೆ ಕೇವಲ 18,889 ಕೋಟಿ ರು. ಎಂಬ ಹಂಚಿಕೆ, ಅಭಿವೃದ್ಧಿ ಅಗತ್ಯಗಳು ಮತ್ತು ಕೊಡುಗೆ ಸಾಮರ್ಥ್ಯದ ನಡುವೆ ಹೊಂದಾಣಿಕೆ ಇಲ್ಲದಿರುವುದನ್ನು ತೋರಿಸುತ್ತದೆ. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ರಾಜ್ಯ ಪಾಲನ್ನು 60:40ಗೆ ಬದಲಾಯಿಸಿರುವುದು ರಾಜ್ಯದ ಹಣಕಾಸಿನ ಮೇಲಿನ ಒತ್ತಡವನ್ನು ಇನ್ನಷ್ಟು ಹೆಚ್ಚಿಸಿದೆ. ಜಲ ಜೀವನ್ ಮಿಷನ್‌ನಲ್ಲಿ ಬರಬೇಕಿದ್ದ ಸುಮಾರು 13,000 ಕೋಟಿ ಬಾಕಿ ಉಳಿದಿರುವುದು ಅನುಷ್ಠಾನಾತ್ಮಕ ಸಮಸ್ಯೆಗಳನ್ನೂ ಬಯಲು ಮಾಡುತ್ತದೆ.

ಇದರ ನಡುವೆ ಕಲ್ಯಾಣ ಕರ್ನಾಟಕ ಭಾಗದ ಕುರಿತು ಡಾ.ಎಂ.ಗೋವಿಂದರಾವ್ ಸಮಿತಿ ವರದಿ ಸೂಚಿಸಿರುವ 43 ಸಾವಿರ ಕೋಟಿ ಅಗತ್ಯವು ಪ್ರಾದೇಶಿಕ ಅಸಮತೋಲನದ ಗಂಭೀರತೆಯನ್ನು ನೆನಪಿಸುತ್ತದೆ. ಕೇಂದ್ರದಿಂದ ನಿರೀಕ್ಷಿತ ನೆರವು ಸಿಗದಿದ್ದರೂ, ಈ ಹೊರೆ ಹೆಚ್ಚಿನ ಮಟ್ಟಿಗೆ ರಾಜ್ಯ ಬಜೆಟ್ ಮೇಲೆಯೇ ಬೀಳುವ ಸಾಧ್ಯತೆ ಹೆಚ್ಚಾಗಿದೆ. ಒಟ್ಟಾರೆ, 2026-27ರ ಕೇಂದ್ರ ಬಜೆಟ್ ಕರ್ನಾಟಕದ ಪಾಲಿಗೆ ಅವಕಾಶಗಳಿಗಿಂತ ಪ್ರಶ್ನೆಗಳನ್ನೇ ಹೆಚ್ಚು ಬಿಟ್ಟಿದೆ. ಇದು ಕೇವಲ ಒಂದು ರಾಜ್ಯದ ಅಸಮಾಧಾನವಲ್ಲ, ಒಕ್ಕೂಟ ವ್ಯವಸ್ಥೆಯಲ್ಲಿ ಸಂಪನ್ಮೂಲ ಹಂಚಿಕೆ, ಪ್ರಾದೇಶಿಕ ಸಮತೋಲನ ಮತ್ತು ಘೋಷಣೆ-ಅನುಷ್ಠಾನದ ನಡುವಿನ ಅಂತರದ ಕುರಿತು ಮೂಡಿರುವ ದೊಡ್ಡ ಚರ್ಚೆಯ ಪ್ರತಿಬಿಂಬವಾಗಿದೆ.

X ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಇದು ಮಹಿಳಾ-ವಿರೋಧಿ, ರೈತ-ವಿರೋಧಿ, ಶಿಕ್ಷಣ-ವಿರೋಧಿ ಬಜೆಟ್. ಪ.ಬಂಗಾಳಕ್ಕೆ ಇದರಿಂದ ಯಾವುದೇ ಕೊಡುಗೆ ಸಿಕ್ಕಿಲ್ಲ. ಮೂರು ಕಾರಿಡಾರ್‌ಗಳ ಕುರಿತು ಉಲ್ಲೇಖಿಸಿರುವುದು ಸುಳ್ಳಿನ ಕಂತೆ. ಈ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿದೆ.

X ಲಕ್ಷ್ಮೀ ಹೆಬ್ಬಾಳ್ಕರ್
ಕರ್ನಾಟಕದ ಸಚಿವೆ

ಕೇಂದ್ರ ಸರಕಾರದಿಂದ ಕರ್ನಾಟಕಕ್ಕೆ ಪದೇಪದೇ ಅನ್ಯಾಯ ಆಗುತ್ತಿದೆ. ಈ ಬಾರಿಯ ಬಜೆಟ್‌ನಲ್ಲೂ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್ ರಾಜ್ಯವನ್ನು ಸಂಪೂರ್ಣ ನಿರ್ಲಕ್ಷಿಸಿದ್ದಾರೆ.

ಈ ಬಜೆಟ್ ಭಾರತದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆ. ಯುವಕರಿಗೆ ಉದ್ಯೋಗವಿಲ್ಲ, ಉತ್ಪಾದನೆ ಕುಸಿಯುತ್ತಿದೆ, ಹೂಡಿಕೆದಾರರು ಬಂಡವಾಳವನ್ನು ಹಿಂತೆಗೆದುಕೊಳ್ಳುತ್ತಿದ್ದಾರೆ, ರೈತರು ಸಂಕಷ್ಟದಲ್ಲಿದ್ದಾರೆ, ಕುಟುಂಬಗಳಲ್ಲಿ ಉಳಿತಾಯ ಪ್ರವೃತ್ತಿಗೆ ಧಕ್ಕೆಯಾಗಿದೆ. ಆದರೆ ಈ ಎಲ್ಲವನ್ನೂ ನಿರ್ಲಕ್ಷಿಸಲಾಗಿದೆ.

ರಾಹುಲ್ ಗಾಂಧಿ
ಲೋಕಸಭೆ ವಿಪಕ್ಷ ನಾಯಕ

ದೇಶದ ಸರ್ವಾಂಗೀಣ ಅಭಿವೃದ್ಧಿಯ ಬಜೆಟ್. ರಾಷ್ಟ್ರದ ಸಾರ್ವಭೌಮತೆ ಎತ್ತಿ ಹಿಡಿದ ಬಜೆಟ್. 25 ಕೋಟಿ ಜನ ಕಳೆದ ಹತ್ತು ವರ್ಷಗಳಲ್ಲಿ ಬಡತನ ರೇಖೆಯಿಂದ ಹೊರಗೆ ಬಂದಿದ್ದಾರೆ. ಬಜೆಟ್‌ನಲ್ಲಿ ಮೀನುಗಾರಿಕಾ ವಲಯಕ್ಕೆ, ಶ್ರೀಗಂಧ ಬೆಳೆಗೆ ವಿಶೇಷ ಯೋಜನೆ ಮಾಡಲಾಗಿದೆ. ರಸಗೊಬ್ಬರ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳ ಮೇಲಿನ ಆಮದು ಸುಂಕ ಕಡಿಮೆಯಾಗಿದೆ.

ಬಿ.ಎಸ್. ಯಡಿಯೂರಪ್ಪ,
ಮಾಜಿ ಮುಖ್ಯಮಂತ್ರಿ

ಬಾಂಗ್ಲಾದ ಪರಿಸ್ಥಿತಿಯ ಲಾಭ ಪಡೆದು ದೇಶದ ಜವಳಿ ಉದ್ಯಮ ಪುನಶ್ಚೇತನ ಹಾಗೂ ಕೃಷಿ ಆದಾಯ ದುಪ್ಪಟ್ಟುಗೊಳಿಸಿ ರೈತರ ಹಿತರಕ್ಷಣೆ ಮಾಡುವ ನಿರೀಕ್ಷೆ ಹುಸಿಯಾಗಿವೆ. ಜವಳಿ ಉದ್ಯಮ ಪುನಶ್ಚೇತನ, ಬಂಡವಾಳ ಹೂಡಲು ಉದ್ಯಮಿಗಳ ಆಕರ್ಷಣೆ ಹಾಗೂ ಸಿದ್ಧಉಡುಪು ರಫ್ತಿನ ಬಗ್ಗೆ ಸ್ಪಷ್ಟ ಚಿತ್ರಣವಿಲ್ಲ. ರೈತರ ಆದಾಯ ದ್ವಿಗುಣಕ್ಕೆ ಕ್ರಮಗಳನ್ನು ಪ್ರಸ್ತಾಪ ಮಾಡಿಲ್ಲ.

ಶಿವಾನಂದ ಪಾಟೀಲ
ಜವಳಿ ಸಚಿವ

ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆ ರಾಜ್ಯಕ್ಕೆ ವರದಾನವಾಗಲಿದೆ. ವಂದೇ ಭಾರತ್ ಸೇರಿದಂತೆ ಈಗಾಗಲೇ ಹಲವು ವೇಗದ ರೈಲುಗಳು ಕಾರ್ಯಾಚರಣೆ ನಡೆಸುತ್ತಿದ್ದು, ಈಗ ಹೈ ಸ್ಪೀಡ್ ರೈಲುಗಳು ರಾಜ್ಯಕ್ಕೆ ಬರುತ್ತಿರುವ ಹಿನ್ನೆಲೆಯಲ್ಲಿ ರೈಲು ಸಂಪರ್ಕದಲ್ಲಿ ಹೊಸ ಕ್ರಾಂತಿಯಾಗಲಿದೆ. ಇದು ಕೇವಲ ಅಂಕಿ ಅಂಶಗಳ ಮುಂಗಡ ಪತ್ರವಲ್ಲ, ವಿಕಸಿತ ಭಾರತ ಗುರಿ ಸಾಕಾರಕ್ಕೆ ಪೂರಕ ಬಜೆಟ್.

ಎಚ್.ಡಿ. ಕುಮಾರಸ್ವಾಮಿ
ಕೇಂದ್ರ ಸಚಿವ

ಕೇಂದ್ರ ಬಜೆಟ್ 2026



ಮೀನುಗಾರರಿಗೆ ಉತ್ತೇಜನ

500 ಜಲಾಶಯಗಳು ಮತ್ತು ಅಮೃತ ಸರೋವರಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಮೂಲಕ ಮೀನುಗಾರರಿಗೆ ಉತ್ತೇಜನ ನೀಡುವ ಕ್ರಮ

10,000 ಮಂದಿಯ 'ಪೈಲಟ್ ಯೋಜನೆ'

ಭಾರತೀಯ ನಿರ್ವಹಣಾ ಸಂಸ್ಥೆಯ ಸಹಯೋಗದೊಂದಿಗೆ 12 ವಾರಗಳ ಹೈಬ್ರಿಡ್ ತರಬೇತಿ ಮೂಲಕ 10,000 ಪ್ರವಾಸಿ ಮಾರ್ಗದರ್ಶಕರ ಪ್ರವಾಸಿ ಪೈಲಟ್ ಯೋಜನೆ.

ಸಾಲ ಆಧಾರಿತ ಸಬ್ಸಿಡಿ ಯೋಜನೆ

ಜಾನುವಾರುಗಳ ಸಾಕಾಣಿಕೆಗೆ ಆಧುನಿಕತೆಯ ಸ್ಪರ್ಶ ನೀಡಿ ಜಾನುವಾರು ಕೃಷಿಕರ ಉತ್ಪಾದಕ ಸಂಘಟನೆಗಳ ಆರಂಭಕ್ಕೆ ಹಸಿರು ನಿಶಾನೆ.

ಕೃಷಿ ಸ್ಟ್ಯಾಕ್ ಪೋರ್ಟಲ್

ಅನುಮೋದಿತ ಕೃಷಿ ಪದ್ಧತಿಗಳನ್ನು ಎಐ ವ್ಯವಸ್ಥೆಗಳೊಂದಿಗೆ ಸಂಯೋಜಿಸಿ ಕೃಷಿ ಸ್ಟ್ಯಾಕ್ ಪೋರ್ಟಲ್ ಮತ್ತು ಐಸೊವಿಆರ್ ಜತೆ ಸಂಯೋಜನೆಯ ಉದ್ದೇಶ.



ಭಾರತ್ ವಿಸ್ತಾರ್ ಆರಂಭದ ಕುರಿತಾಗಿ ಪ್ರಸ್ತಾಪ | 500 ಜಲಾಶಯ ಅಭಿವೃದ್ಧಿಗೂ ಉಪಕ್ರಮ

ಕೃತಕ ಬುದ್ಧಿಮತ್ತೆ ಮೂಲಕ ಕೃಷಿಗೆ ಬಲ

ರೈತರ ಆದಾಯವನ್ನು ಗಣನೀಯವಾಗಿ ಹೆಚ್ಚಿಸುವತ್ತ ಕೇಂದ್ರ ಸರಕಾರ ಈ ಬಾರಿಯ ಬಜೆಟ್ ಮೂಲಕ ತನ್ನ ದೃಢ ಹೆಜ್ಜೆ ಇರಿಸಿದೆ. ರೈತರಿಗೆ ಉಪಯುಕ್ತ ಸಲಹೆ ಮತ್ತು ಸಹಕಾರ ನೀಡುವ ಸಲುವಾಗಿ ಕೃತಕ ಬುದ್ಧಿಮತ್ತೆ (ಎಐ) ಪರಿಕರಗಳನ್ನು ಒದಗಿಸುವುದಾಗಿ ಘೋಷಿಸಿದೆ. ಕೃಷಿ ಕ್ಷೇತ್ರಕ್ಕೆ 1.63 ಲಕ್ಷ ಕೋಟಿ ರು.ಮೀಸಲಾಗಿರಿಸಿದ್ದು, 2025-26ರ ಬಜೆಟ್‌ಗೆ ಹೋಲಿಸಿದರೆ 7% ಅಧಿಕ.

ದೇಶದ ಕೃಷಿ ಸಂಪತ್ತನ್ನು ಸಂಯೋಜಿಸಲು ಮತ್ತು ಬಲಪಡಿಸಲು ವಿನ್ಯಾಸಗೊಳಿಸಲಾದ ಬಹುಭಾಷಾ ಎಐ-ಚಾಲಿತ ಸಾಧನವಾದ ಭಾರತ್ ವಿಸ್ತಾರ್ ಅನ್ನು ಪ್ರಾರಂಭಿಸುವ ಬಗ್ಗೆ ಈ ಬಜೆಟ್‌ನಲ್ಲಿ ಪ್ರಸ್ತಾಪ ಇದೆ. ಅಷ್ಟೇ ಅಲ್ಲದೆ, ರೈತರಿಗೆ ತಮ್ಮ ದುಡಿಮೆಯಲ್ಲಿ ಎದುರಾಗಿರುವ ಅಪಾಯಗಳನ್ನು ಕಡಿಮೆ ಮಾಡಲು, ಸಹಾಯ ಮತ್ತು ಸಲಹೆ ನೀಡುವ ನಿಟ್ಟಿನಲ್ಲಿ ಈ ಎಐ ಪರಿಕರಗಳು ಕಾರ್ಯ ನಿರ್ವಹಿಸಲಿವೆ.

ರೈತರ ಆದಾಯವನ್ನು ಹೆಚ್ಚಿಸುವ ಸಲುವಾಗಿ ಜಾನುವಾರು ಪೂರಕ ರೈತ ಉತ್ಪಾದಕ ಸಂಸ್ಥೆಗಳ ರಚನೆಯನ್ನು ಉತ್ತೇಜಿಸಲು ಕ್ರಮ ಕೈಗೊಳ್ಳಲಾಗಿದೆ. ಕ್ರೆಡಿಟ್ ಲಿಂಕ್ಡ್ ಸಬ್ಸಿಡಿ ಕಾರ್ಯಕ್ರಮದ ಮೂಲಕ ಪಶುಸಂಗೋಪನೆಯನ್ನು ಬೆಂಬಲಿಸಲಾಗುವುದು, ಜತೆಗೆ 500 ಜಲಾಶಯಗಳನ್ನು ಅಭಿವೃದ್ಧಿಪಡಿಸುವ ಉಪಕ್ರಮಗಳನ್ನು ಕೈಗೊಳ್ಳಲೂ ನಿರ್ಧರಿಸಲಾಗಿದೆ. ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆ ಮೌಲ್ಯ ಸರಪಳಿಯನ್ನು ಬಲಪಡಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ವಿವರಿಸಿದ್ದಾರೆ.

ಕರಾವಳಿ ರೈತರಿಗೆ ಪ್ರಮುಖ ಬೆಂಬಲ: ಕರಾವಳಿ ಪ್ರದೇಶಗಳಲ್ಲಿ ಗೋಡಂಬಿ ಮತ್ತು ತೆಂಗಿನಕಾಯಿ ಬೆಳೆಯುವ ರೈತರಿಗೆ ಅವರ ಆದಾಯವನ್ನು ಹೆಚ್ಚಿಸಲು ಹಣಕಾಸಿನ ನೆರವು ಮತ್ತು ಪ್ರೋತ್ಸಾಹವನ್ನೂ ಈ ಸಲದ ಬಜೆಟ್‌ನಲ್ಲಿ ಘೋಷಿಸಲಾಗಿದೆ. ರಫ್ತು ಹೆಚ್ಚಿಸುವ ಪ್ರೀಮಿಯಂ ಬ್ರ್ಯಾಂಡ್ ಆಗಿ ಭಾರತೀಯ ಗೋಡಂಬಿಯನ್ನು ಸ್ಥಾಪಿಸಲಾಗುವುದು ಎಂದೂ ಸರಕಾರ ಹೇಳಿದೆ.

ಗುಡ್ಡಗಾಡುಗಳಿಗೆ ವಿಶೇಷ ಪ್ಯಾಕೇಜ್: ಗುಡ್ಡಗಾಡು ಪ್ರದೇಶಗಳಲ್ಲಿ ಏಪ್ರಿಕಾಟ್, ವಾಲ್ನಟ್ ಮತ್ತು ಬಾದಾಮಿ ಕೃಷಿಯನ್ನು ಉತ್ತೇಜಿಸಲಾಗುವುದು. ಈ ಬೆಳೆಗಳಿಗೆ ವಿಶೇಷ ಪ್ರೋತ್ಸಾಹಕ ಯೋಜನೆಗಳನ್ನು ಜಾರಿಗೆ ತರಲಾಗುವುದು, ಇದರಿಂದಾಗಿ ರೈತರು ಕಷ್ಟಕರವಾದ ಭೌಗೋಳಿಕ ಪ್ರದೇಶಗಳಲ್ಲಿಯೂ ಸಹ ಹೆಚ್ಚು ಆದಾಯ ಗಳಿಸಲು ಸಾಧ್ಯವಾಗುತ್ತದೆ ಎಂಬುದು ಸರಕಾರದ ನಿರೀಕ್ಷೆಯಾಗಿದೆ.

ಕೋಕೋ-ಶ್ರೀಗಂಧ ಕೃಷಿಗೂ ಬೆಂಬಲ: ಚಾಕೊಲೇಟ್ ಮತ್ತು ಸಂಸ್ಕರಣಾ ಕೈಗಾರಿಕೆಗಳಿಗೆ ಸ್ಥಳೀಯ ಉತ್ಪಾದನೆಯನ್ನು ಬೆಂಬಲಿಸುವ ಮೂಲಕ ಕೋಕೋ ಕೃಷಿಯನ್ನು ಉತ್ತೇಜಿಸಲಾಗುವುದು. ದುಬಾರಿ ಮತ್ತು ಬೇಡಿಕೆಯಿರುವ ಈ ಬೆಳೆಗಳಿಗ ಮತ್ತೊಮ್ಮೆ ಭಾರತದ ವಿಶಿಷ್ಟ ಬೆಳೆಯಾಗಲು ರಾಜ್ಯಗಳು ಮತ್ತು ರೈತರಿಗೆ ಶ್ರೀಗಂಧದ ಕೃಷಿಗಾಗಿ ವಿಶೇಷ ನೆರವು ನೀಡಲಾಗುವುದು.

ಔಷಧೀಯ ಕೃಷಿಗೆ ನೇರ ಪ್ರಯೋಜನ: ಉತ್ತಮ ಗುಣಮಟ್ಟದ ಆಯುರ್ವೇದ ಉತ್ಪನ್ನಗಳ ರಫ್ತನ್ನು ಉತ್ತೇಜಿಸಲೂ ತಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ರಫ್ತು ಮಾರುಕಟ್ಟೆಯಲ್ಲಿ ಔಷಧ ಬೆಳೆಗಳ ಉತ್ಪನ್ನಗಳಾದ ಗಿಡಮೂಲಿಕೆಗಳ ಬೇಡಿಕೆ ನಿರಂತರವಾಗಿ ಹೆಚ್ಚುತ್ತಿರುವುದರಿಂದ ಈ ಯೋಜನೆ ರೈತರ ಆದಾಯವನ್ನು ನೇರವಾಗಿ ಹೆಚ್ಚಿಸಲಿದೆ.

ಆಹಾರ ಸಂಸ್ಕರಣೆಗೂ ಆದ್ಯತೆ

ಆಹಾರ ಸಂಸ್ಕರಣಾ ಸಚಿವಾಲಯಕ್ಕೆ ಬಜೆಟ್‌ನಲ್ಲಿ 4,364 ಕೋಟಿಗೂ ಹೆಚ್ಚು ಅನುದಾನ ಹಂಚಿಕೆಯಾಗಿದ್ದು, ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರೋತ್ಸಾಹ ನೀಡಲಾಗಿದೆ. ಮೈಕ್ರೋ ಫುಡ್ ಪ್ರೊಸೆಸಿಂಗ್ ಎಂಟರ್‌ಪ್ರೈಸಸ್ ಯೋಜನೆಯಡಿ ಸಣ್ಣ ಉದ್ಯಮಗಳಿಗೆ ಹೆಚ್ಚಿನ ನೆರವು ನೀಡುವುದು, ಕೃಷಿ-ತಂತ್ರಜ್ಞಾನ ಸ್ಟಾರ್ಟ್‌ಅಪ್‌ಗಳ ಮೂಲಕ ಮೌಲ್ಯವರ್ಧನೆ ಮತ್ತು ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದು ಇದರ ಮುಖ್ಯ ಗುರಿಯಾಗಿದೆ. ಅಸಂಘಟಿತ ಆಹಾರ ಸಂಸ್ಕರಣಾ ಘಟಕಗಳನ್ನು ಸುಸ್ಥಿರಗೊಳಿಸಲು ಹೆಚ್ಚಿನ ಹಣ ನಿಗದಿಗೊಳಿಸಲಾಗಿದೆ. ಅತಿಯಾದ ಸಂಸ್ಕರಿಸಿದ ಆಹಾರಗಳ ಮಾರಾಟ ಮತ್ತು ಜಾಹೀರಾತಿನ ಮೇಲೆ ನಿರ್ಬಂಧ ವಿಧಿಸಲು ಆರ್ಥಿಕ ಸಮೀಕ್ಷೆಯ ಸಲಹೆ, 41 ಫುಡ್ ಪಾರ್ಕ್‌ಗಳು ಮತ್ತು 400 ಶೀತಲ ಸರಪಳಿ ವ್ಯವಸ್ಥೆಗಳ ಅಭಿವೃದ್ಧಿಯನ್ನೂ ಕಾರ್ಯಗತಗೊಳಿಸುವ ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದೆ.



ಸಹಕಾರ ಕ್ಷೇತ್ರದಲ್ಲೂ ಸ್ಪಷ್ಟ ಮಾರ್ಗಸೂಚಿ

ಈ ಬಜೆಟ್‌ನಲ್ಲಿ ಸಹಕಾರ ಕ್ಷೇತ್ರಕ್ಕೆ ಭಾರಿ ಉತ್ತೇಜನ ಲಭಿಸಿದ್ದು, ಮುಂದಿನ ದಶಕದಲ್ಲಿ ಸಹಕಾರಿ ಸಂಸ್ಥೆಗಳ ಪಾಲು ಮೂರು ಪಟ್ಟು ಹೆಚ್ಚಿಸಲು ಬ್ಲೂಪ್ರಿಂಟ್ ರೂಪಿಸಲಾಗಿದೆ. ರಾಷ್ಟ್ರೀಯ ಸಹಕಾರ ನೀತಿಯ ಅಡಿಯಲ್ಲಿ ಗರಿಷ್ಠ ಜನರನ್ನು ಅದರ ವ್ಯಾಪ್ತಿಗೆ ತರುವುದು, ಹೊಸ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು ಮತ್ತು 2030ರ ವೇಳೆಗೆ ಗೋಡಂಬಿ/ಕೊಕೊ ಉತ್ಪಾದನೆಗೆ ಸ್ವಾವಲಂಬನೆ ಬೆಂಬಲ ನೀಡುವುದು ಮುಖ್ಯ ಸಹಕಾರ ರಂಗದ ಮುಖ್ಯ ಗುರಿಯಾಗಿದೆ.

ರಾಷ್ಟ್ರೀಯ ಸಹಕಾರ ನೀತಿಯ ಗುರಿಗಳನ್ನು ತಲುಪಲು 2026-27ರ ಬಜೆಟ್ ಸ್ಪಷ್ಟ ಮಾರ್ಗಸೂಚಿ ಒದಗಿಸಿದೆ. ಅಸ್ತಿತ್ವದಲ್ಲಿರುವ 300 ಮಿಲಿಯನ್ ಸದಸ್ಯರ ಸಂಖ್ಯೆಯನ್ನು 66%ಕ್ಕೆ ಹೆಚ್ಚಿಸಿ, ಸುಮಾರು 830,000 ಸಹಕಾರಿ ಸಂಘಗಳ ಸಂಖ್ಯೆಯಲ್ಲಿ 30% ಹೆಚ್ಚಳ ಮಾಡುವ ಗುರಿ ಹೊಂದಲಾಗಿದೆ.

ಕೈಮಗ್ಗ ಕೇಂದ್ರೀಕೃತ ಯೋಜನೆ: ಗಾಂಧೀಜಿ ಹೆಸರಿಗೆ ಮತ್ತೆ ಮಣೆ

'ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್' ಕೈಮಗ್ಗ ಕೇಂದ್ರಿತ ಯೋಜನೆಯಾಗಿದ್ದು ಈ ಮೂಲಕ ಸರಕಾರವು ಜವಳಿ ಉದ್ಯಮದಲ್ಲಿ ವಿಶೇಷವಾಗಿ ಖಾದಿ, ಕೈಮಗ್ಗ ಮತ್ತು ಕರಕುಶಲ ಕ್ಷೇತ್ರಗಳಲ್ಲಿ ಸುಧಾರಣೆಗಳನ್ನು ತರಲು ಮುಂದಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರವು ಮನರೇಗಾ ಉದ್ಯೋಗ ಯೋಜನೆಯನ್ನು ವಿಬಿ ಜಿ ರಾಮ್ ಜಿ ಎಂದು ಬದಲಾಯಿಸಿದ ಕೆಲವೇ ವಾರಗಳ ಅಂತರದಲ್ಲಿ ಈ ಘೋಷಣೆ ಹೊರ ಬಿದ್ದಿದೆ.

'ನಾವು ಮೆಗಾ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲಿದ್ದೇವೆ. ಖಾದಿ ಮತ್ತು ಕೈಮಗ್ಗವನ್ನು ಬಲಪಡಿಸಲು ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಯೋಜನೆ ಪ್ರಾರಂಭಿಸಲು ಮುಂದಾಗಿದ್ದೇವೆ ಎಂದು ವಿತ್ತ ಸಚಿವರು ಹೇಳಿದ್ದಾರೆ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯ ಸಮಯದಲ್ಲಿ ಖಾದಿಯನ್ನು ಗಾಂಧೀಜಿ ಸ್ವರಾಜ್ (ಸ್ವ-ಆಡಳಿತ) ಮತ್ತು ಸ್ವದೇಶಿ (ಸ್ಥಳೀಯ) ಘೋಷಣೆಯನ್ನು ಜನಪ್ರಿಯಗೊಳಿಸಿದ್ದರು.

ಈ ಯೋಜನೆಯ ಮೂಲಕ ಜಾಗತಿಕ ಮಾರುಕಟ್ಟೆ ಸಂಪರ್ಕ ಮತ್ತು ಬ್ರ್ಯಾಂಡಿಂಗ್ ಬೆಂಬಲವನ್ನು ಒದಗಿಸುವ ಗುರಿ ಹೊಂದಲಾಗಿದ್ದು, ತರಬೇತಿ, ಕೌಶಲ್ಯ ಮತ್ತು ಉತ್ಪಾದನಾ ಗುಣಮಟ್ಟವನ್ನು ಸುಧಾರಿಸಲಿದೆ. ಇದು ನೇಕಾರರು, ಗ್ರಾಮೀಣ ಕೈಗಾರಿಕೆಗಳು, ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆ ಮತ್ತು ಗ್ರಾಮೀಣ ಯುವ ಜನತೆಗೆ ಪ್ರಯೋಜನವನ್ನು ನೀಡುತ್ತದೆ ಎಂದು ವಿವರಿಸಿದ್ದಾರೆ.

ಹೈನುಗಾರಿಕಾ ವಲಯ: ರಾಷ್ಟ್ರೀಯ ಗೋಕುಲ ಮಿಷನ್‌ಗೂ ಮಹತ್ವ

ಕೇಂದ್ರ ಸರಕಾರದ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಇದಕ್ಕೂ ಈ ಬಜೆಟ್‌ನಲ್ಲಿ ಮಹತ್ವವನ್ನು ನೀಡಲಾಗಿದೆ. ಇದು 2014ರಿಂದ 2026ರ ಅವಧಿಯವರೆಗೆ ಸ್ಥಳೀಯ ಗೋತಳಿಗಳ ಸಂರಕ್ಷಣೆ ಮತ್ತು ತಳಿ ಅಭಿವೃದ್ಧಿಗ ಒತ್ತು ನೀಡುತ್ತಿದೆ. ದೇಶೀಯ ಹಸು ಮತ್ತು ಎಮ್ಮೆಗಳ ತಳಿ ಸುಧಾರಣೆ ಮಾಡುವುದು, ಹಾಲಿನ ಉತ್ಪಾದಕತೆಯನ್ನು ಹೆಚ್ಚಿಸುವುದು ಮತ್ತು ಗ್ರಾಮೀಣ ರೈತರ, ವಿಶೇಷವಾಗಿ ಮಹಿಳಾ ಪಶುಪಾಲಕರ ಜೀವನೋಪಾಯವನ್ನು ಸುಧಾರಿಸುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ. ಇದಕ್ಕಾಗಿ ಐವಿಎಫ್, ಲಿಂಗ ವಿಂಗಡಿತ ವೀರ್ಯ ಮತ್ತು ರಾಷ್ಟ್ರವ್ಯಾಪಿ ಕೃತಕ ಗರ್ಭಧಾರಣೆ ಕಾರ್ಯಕ್ರಮಗಳಂತಹ ಸುಧಾರಿತ ವೈಜ್ಞಾನಿಕ ತಂತ್ರಜ್ಞಾನಗಳನ್ನು ಬಳಸಲಾಗುತ್ತಿದೆ. ಸುಸ್ಥಿರ ಹೈನುಗಾರಿಕೆಯನ್ನು ಉತ್ತೇಜಿಸುವ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಹಾಲಿನ ಲಭ್ಯತೆಯನ್ನು ಹೆಚ್ಚಿಸಲು ಮತ್ತು ಹೈನುಗಾರಿಕೆಯನ್ನು ಲಾಭದಾಯಕ ಉದ್ಯಮವನ್ನಾಗಿ ಮಾಡಲು ಗೋಕುಲ ಮಿಷನ್ ಶ್ರಮಿಸುತ್ತಿದೆ.

ಯೋಜನೆಯ ಉದ್ದೇಶಗಳು: ಸುಧಾರಿತ ತಂತ್ರಜ್ಞಾನಗಳನ್ನು ಬಳಸಿ ಹೈನುರಾಸುಗಳ ಹಾಲು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು, ತಳೀಯವಾಗಿ ಉತ್ತಮ ಗುಣಮಟ್ಟದ ಹೋರಿಗಳನ್ನು ಸಂತಾನೋತ್ಪತ್ತಿಗೆ ಬಳಸುವುದು, ರೈತರ ಮನೆ ಬಾಗಿಲಿಗೇ ಗುಣಮಟ್ಟದ ಕೃತಕ ಗರ್ಭಧಾರಣೆ ಸೇವೆಗಳನ್ನು ತಲುಪಿಸುವುದು, ದೇಶೀಯ ಗೋತಳಿಗಳು ಮತ್ತು ಎಮ್ಮೆ ತಳಿಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸುವುದು, ಸಣ್ಣ ರೈತರು ಮತ್ತು ಮಹಿಳಾ ಪಶುಪಾಲಕರಿಗೆ ಹೈನುಗಾರಿಕೆಯನ್ನು ಹೆಚ್ಚು ಲಾಭದಾಯಕವಾಗಿಸುವುದು ಪ್ರಮುಖವಾಗಿದೆ.

ಫಲಾನುಭವಿಗಳು ಮತ್ತು ಪ್ರಯೋಜನಗಳು: ಈ ಯೋಜನೆಯು ಜಾತಿ, ವರ್ಗ ಅಥವಾ ಲಿಂಗದ ತಾರತಮ್ಯವಿಲ್ಲದೆ ಎಲ್ಲಾ ಡೈರಿ ರೈತರಿಗೆ ಮುಕ್ತವಾಗಿದೆ. ಈ ಕಾರ್ಯಕ್ರಮದ ಮೂಲಕ ಸುಮಾರು 1.5 ಕೋಟಿ ರೈತರು ಪ್ರಯೋಜನ ಪಡೆಯಲಿದ್ದು, ಮೂರು ವರ್ಷಗಳ ನಂತರ ರೈತರ ವಾರ್ಷಿಕ ಆದಾಯ ಸರಾಸರಿ 21,500 ರು. ಗಳಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ತ್ವರಿತ ತಳಿ ಸುಧಾರಣಾ ಕಾರ್ಯಕ್ರಮದ ಅಡಿಯಲ್ಲಿ ಐವಿಎಫ್ ತಂತ್ರಜ್ಞಾನ ಬಳಸಿ ಪಡೆಯುವ ಪ್ರತಿ ಖಚಿತ ಗರ್ಭಧಾರಣೆಗೆ ರೈತರಿಗೆ 5,000 ರು. ಗಳ ಸಬ್ಸಿಡಿ ನೀಡಲಾಗುತ್ತದೆ.



ಮೋದಿ ಅಭಿಮತ

ವಿಕಸಿತ ಭಾರತಕ್ಕೆ 2026ರ ಬಜೆಟ್ ಭದ್ರ ಅಡಿಪಾಯ

ದೆಹಲಿ: ಈ ಬಾರಿಯ ಕೇಂದ್ರ ಬಜೆಟ್ 140 ಕೋಟಿ ಭಾರತೀಯರ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಮೂಲಕ ವಿಕಸಿತ ಭಾರತ ನಿರ್ಮಾಣಕ್ಕೆ ಸ್ಪಷ್ಟ ಮಾರ್ಗಸೂಚಿಯನ್ನು ಒದಗಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಂತಸ ವ್ಯಕ್ತಪಡಿಸಿದ್ದಾರೆ.

ಬಜೆಟ್ ಕುರಿತು ಅವರು ಪ್ರತಿಕ್ರಿಯಿಸಿದ್ದು, ಇದು ಹಣಕಾಸಿನ ಕೊರತೆಯನ್ನು ಕಡಿಮೆ ಮಾಡುವ, ಹಣದುಬ್ಬರ ನಿಯಂತ್ರಣಕ್ಕೆ ತರುವತ್ತ ಗಮನಹರಿಸಿದ ವಿಶೇಷ ಬಜೆಟ್ ಆಗಿದೆ. ಅದೇ ರೀತಿ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿಗೆ ಪೂರಕವಾಗಿದೆ. ಯುವ ಜನತೆಗೆ ಮುಕ್ತ ಅವಕಾಶವನ್ನು ಒದಗಿಸುತ್ತದೆ ಎಂದು ಹೇಳಿದ್ದಾರೆ.

'ಈ ಬಾರಿಯ ಬಜೆಟ್ 2047ರ ವಿಕಸಿತ ಭಾರತ ನಿರ್ಮಾಣಕ್ಕೆ ಭದ್ರ ಅಡಿಪಾಯವಾಗಲಿದೆ. ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ ಅಭಿಯಾನಕ್ಕೆ ಹೊಸ ವೇಗವನ್ನು ನೀಡುವ ಮಹತ್ವಾಕಾಂಕ್ಷೆಯ ಮಾರ್ಗಸೂಚಿಯನ್ನು ಈ ಬಜೆಟ್‌ನಲ್ಲಿ ರೂಪಿಸಲಾಗಿದೆ. ಹೊಸ ಮತ್ತು ಉದಯೋನ್ಮುಖ ಕೈಗಾರಿಕೆಗಳ ವಲಯಕ್ಕೆ ಉತ್ತಮ ಬೆಂಬಲ ನೀಡಲಿದ್ದು, ಇದೊಂದು ಅಭೂತಪೂರ್ವ ಬಜೆಟ್ ಆಗಿದೆ ಎಂದಿದ್ದಾರೆ.

ಈ ಬಾರಿಯ ಬಜೆಟ್ ಭಾರತದ ಜಾಗತಿಕ ಪಾತ್ರವನ್ನು ಮತ್ತಷ್ಟು ಬಲಪಡಿಸುತ್ತದೆ. ಭಾರತ ಸಾಧ್ಯವಾದಷ್ಟು ಬೇಗ ಜಗತ್ತಿನ ಅತೀದೊಡ್ಡ ಜಾಗತಿಕ ಆರ್ಥಿಕತೆಯಾಗಬೇಕು ಎಂಬುದು 140 ಕೋಟಿ ಜನರ ಬಯಕೆಯಾಗಿದೆ. ವಿಶ್ವದಲ್ಲಿ ವಿಶ್ವಾಸಾರ್ಹ, ಗುಣಮಟ್ಟದ ಪೂರೈಕೆದಾರನಾಗಿ ಭಾರತ ತನ್ನ ಪಾತ್ರವನ್ನು ಯಶಸ್ವಿಯಾಗಿ ವಿಸ್ತರಿಸುತ್ತಿದೆ. ಇತ್ತೀಚೆಗೆ ಸಹಿ ಹಾಕಲಾದ ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದದಿಂದ ದೇಶದ ಯುವ ಜನರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಹೆಚ್ಚು ಪ್ರಯೋಜನವಾಗಲಿದೆ ಎಂದೂ ಮೋದಿ ಹೇಳಿದ್ದಾರೆ

ವಿವಿಧ ರಾಜ್ಯಗಳನ್ನು ಬಲಪಡಿಸುವ ಮೂಲಕ, ಬಜೆಟ್ ಸಮತೋಲಿತ ಮತ್ತು ಸಮಾನ ಅಭಿವೃದ್ಧಿಗೆ ಅಡಿಪಾಯ ಹಾಕಿದ್ದೇವೆ. ಮೂಲಸೌಕರ್ಯ ಮತ್ತು ಹಲವಾರು ಪ್ರಮುಖ ಉಪಕ್ರಮಗಳನ್ನು ಈ ಬಜೆಟ್‌ನಲ್ಲಿ ಅಳವಡಿಸಿಕೊಂಡಿದ್ದೇವೆ. ಹೈಸ್ಪೀಡ್ ರೈಲು ಕಾರಿಡಾರ್‌ಗಳ ನಿರ್ಮಾಣ, ಟಯರ್ 2 ಮತ್ತು ಟಯರ್ 3 ನಗರಗಳ ಬೆಳವಣಿಗೆಯ ಮೇಲೆ ವಿಶೇಷ ಗಮನ ಹರಿಸುವುದರಿಂದ ರಾಜ್ಯಗಳು ಅಭಿವೃದ್ಧಿಗೆ ಈ ಬಜೆಟ್ ಸಹಕಾರಿಯಾಗಿದೆ ಎಂದೂ ಪ್ರಧಾನಿ ಅಭಿಪ್ರಾಯಪಟ್ಟಿದ್ದಾರೆ.

ಬಜೆಟ್‌ನಲ್ಲಿ ಪ್ರವಾಸೋದ್ಯಮ ಕ್ಷೇತ್ರಕ್ಕೆ ಉತ್ತೇಜನ ನೀಡಲಾಗಿದೆ. ವಿಶೇಷವಾಗಿ ಈಶಾನ್ಯ ಭಾರತದಲ್ಲಿ ಪ್ರವಾಸೋದ್ಯಮ ಕ್ಷೇತ್ರವನ್ನು ಉತ್ತೇಜಿಸಲು ಮಹತ್ವದ ಕ್ರಮಗಳನ್ನು ಜಾರಿಗೆ ತರಲಾಗಿದೆ. ಈ ಬಜೆಟ್‌ನಲ್ಲಿ ವಿಶೇಷವಾಗಿ ಈಶಾನ್ಯ ಪ್ರದೇಶದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹಣಕಾಸಿನ ಕೊರತೆಯನ್ನು ಕಡಿಮೆ ಮಾಡುವುದು ಹಾಗೂ ಹಣದುಬ್ಬರವನ್ನು ನಿಯಂತ್ರಣ ಮಾಡುವ ಉದ್ದೇಶಗಳನ್ನು ಈ ಸಲದ ಬಜೆಟ್ ಒಳಗೊಂಡಿದೆ. ಭಾರತದ ಜಾಗತಿಕ ಪಾತ್ರವನ್ನು ಇದು ಮತ್ತಷ್ಟು ಬಲಪಡಿಸುತ್ತದೆ ಎಂದಿದ್ದಾರೆ.

ಈ ಸಲದ ಬಜೆಟ್ ನಾರಿಶಕ್ತಿಯ ಪ್ರತೀಕ ಎಂದೂ ಪ್ರಧಾನಿ ಹೇಳಿದರಲ್ಲದೆ, ಸತತ 9ನೇ ಸಲ ಬಜೆಟ್ ಮಂಡನೆ ಮಾಡಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಅಭಿನಂದಿಸಿದ್ದಾರೆ.

ಕೃಷಿ

ತೆಂಗಿನ ಉತ್ಪಾದನೆಗೆ ಪ್ರೋತ್ಸಾಹ: ರಾಜ್ಯಕ್ಕೆ ಖುಷಿ



ತೆಂಗು ಬೆಳೆಯುವ ರಾಜ್ಯಗಳಲ್ಲಿ ಹಳೆ ಮರ ತೆಗೆಯುವ ಬಗ್ಗೆ ಈ ಸಲದ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ತೆಂಗು ಬೆಳೆ, ತೆಂಗಿನಕಾಯಿ ಉತ್ಪಾದನೆ ಹೆಚ್ಚಳಕ್ಕಾಗಿ ಬಜೆಟ್‌ನಲ್ಲಿ ನಿರ್ಮಲಾ ಸೀತಾರಾಮನ್ ಅವರು ಯೋಜನೆಗಳನ್ನು ಪ್ರಸ್ತುತಪಡಿಸಿದ್ದಾರೆ. ಹಳೆಯ ತೆಂಗಿನ ಮರಗಳು, ಕಾಯಿ ನೀಡದ ಮರಗಳು, ರೋಗ ಬಂದಂತಹ, ಉಪಯೋಗವಿಲ್ಲದ ತೆಂಗಿನ ಮರಗಳನ್ನು ತೆಗೆದು ಹೊಸ ಗಿಡಗಳನ್ನು ನೆಡಲು ಒತ್ತು ನೀಡಲಾಗುತ್ತದೆ ಎನ್ನಲಾಗಿದೆ. ಹೊಸ ಗಿಡಗಳನ್ನು ನೆಟ್ಟು ಪ್ರಮುಖ ತೆಂಗು ಬೆಳೆಯುವ ಪ್ರದೇಶಗಳಲ್ಲಿ ಇದನ್ನು ಇನ್ನಷ್ಟು ಹೆಚ್ಚಳ ಮಾಡಿ ಉತ್ಪಾದನೆ ಹೆಚ್ಚಿಸಲಾಗುತ್ತದೆ ಎನ್ನಲಾಗಿದೆ. ತೆಂಗಿನಕಾಯಿ ಉತ್ಪಾದನೆಯಲ್ಲಿ ಸ್ಪರ್ಧಾತ್ಮಕತೆಯನ್ನು ಮತ್ತಷ್ಟು ಹೆಚ್ಚಿಸಲು, ಪ್ರಮುಖ ತೆಂಗಿನಕಾಯಿ ಬೆಳೆಯುವ ರಾಜ್ಯಗಳಲ್ಲಿ ಉತ್ಪಾದನೆ ಇಲ್ಲದ ಮರಗಳನ್ನು ಹೊಸ ಸಸಿಗಳು ಅಥವಾ ವಿವಿಧ ಸಸ್ಯಗಳೊಂದಿಗೆ ಬದಲಾಯಿಸುವುದು. ತೆಂಗಿನಕಾಯಿ ಉತ್ತೇಜನ ಯೋಜನೆಯನ್ನು ಪ್ರಸ್ತಾಪಿಸಿದ್ದಾರೆ.

ಹವಾಮಾನ

ಹವಾಮಾನ ಬದಲಾವಣೆ: ನಿರ್ಣಾಯಕ ಕ್ರಮ

2026ರ ಕೇಂದ್ರ ಬಜೆಟ್ ಹವಾಮಾನ ಬದಲಾವಣೆಯ ಸವಾಲುಗಳನ್ನು ಎದುರಿಸಲು ನಿರ್ಣಾಯಕ ಕ್ರಮಗಳನ್ನು ಕೈಗೊಂಡಿದೆ. ಹವಾಮಾನ-ನಿರೋಧಕ ಕೃಷಿ, ನವೀಕರಿಸಬಹುದಾದ ಇಂಧನ, ಹಸಿರು ಹೈಡ್ರೋಜನ್ ಮತ್ತು ಎಲೆಕ್ಟ್ರಿಕ್ ವಾಹನ ಮೂಲಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಹವಾಮಾನ ಬದಲಾವಣೆಯಿಂದ ಗ್ರಾಮೀಣ ಮಹಿಳೆಯರು ಮತ್ತು ಸಣ್ಣ ರೈತರನ್ನು ರಕ್ಷಿಸಲು, ಉತ್ಪಾದಕತೆಯನ್ನು ಹೆಚ್ಚಿಸಲು ವಿಶೇಷ ಕಾರ್ಯಕ್ರಮಗಳಿಗೆ ಅನುದಾನ ನೀಡಲಾಗಿದೆ. ನವೀಕರಿಸಬಹುದಾದ ಇಂಧನ ಮತ್ತು ಹಸಿರು ಬೆಳವಣಿಗೆಗಾಗಿ ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್ ಮತ್ತು ಕಡಲಾಚೆಯ ಗಾಳಿ ಶಕ್ತಿಗೆ ಹೆಚ್ಚಿನ ಹೂಡಿಕೆ ಮಾಡಲಾಗುತ್ತಿದೆ.

ಮೀನುಗಾರಿಕೆ

ಮೀನುಗಾರಿಕೆಗೆ- ಜಾನುವಾರು ಉದ್ಯೋಗಾವಕಾಶಕ್ಕೂ ಒತ್ತು

500 ಜಲಾಶಯಗಳು ಮತ್ತು ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿ, ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆ ಮೌಲ್ಯ ಸರಪಳಿಯನ್ನು ಬಲಪಡಿಸುವುದು ಮತ್ತು ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳೊಂದಿಗೆ ನವೋದ್ಯಮಗಳು ಮತ್ತು ಮಹಿಳಾ ನೇತೃತ್ವದ ಗುಂಪುಗಳನ್ನು ಒಳಗೊಂಡ ಮಾರುಕಟ್ಟೆ ಸಂಪರ್ಕವನ್ನು ಸಕ್ರಿಯಗೊಳಿಸುವುದು ಈ ಬಜೆಟ್‌ನ ವೈಶಿಷ್ಟ್ಯತೆ.

ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಗುಣಮಟ್ಟದ ಉದ್ಯೋಗಾವಕಾಶಗಳನ್ನು ಒದಗಿಸಲು, ಉದ್ಯಮಶೀಲತಾ ಅಭಿವೃದ್ಧಿಯಲ್ಲಿ ಪಶುಸಂಗೋಪನಾ ವಲಯವನ್ನು ಈ ಕೆಳಗಿನವುಗಳ ಮೂಲಕ ಕೇಂದ್ರ ಸರಕಾರ ಬೆಂಬಲಿಸಲಿದೆ. ಕ್ರೆಡಿಟ್-ಸಂಬಂಧಿತ ಸಬ್ಸಿಡಿ ಕಾರ್ಯಕ್ರಮ, ಜಾನುವಾರು ಉದ್ಯಮಗಳ ಸ್ಕೇಲಿಂಗ್-ಅಪ್ ಮತ್ತು ಆಧುನೀಕರಣ, ಜಾನುವಾರು, ಡೈರಿ ಮತ್ತು ಕೋಳಿ-ಕೇಂದ್ರಿತ ಸಮಗ್ರ-ಮೌಲ್ಯ ಸರಪಳಿಗಳ ಸೃಷ್ಟಿಯನ್ನು ಹೆಚ್ಚಿಸುವುದು, ಜಾನುವಾರು ರೈತ ಉತ್ಪಾದಕ ಸಂಸ್ಥೆಗಳ ಸೃಷ್ಟಿಯನ್ನು ಉತ್ತೇಜಿಸುವುದು.

ಪ್ರವಾಸ

ಇಕೋ ಟೂರಿಸಂಗೆ ಮನ್ನಣೆ



ಒಡಿಶಾ, ಕರ್ನಾಟಕ ಮತ್ತು ಕೇರಳದಲ್ಲಿಯೂ ಇಕೋ ಟೂರಿಸಂ ಅನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಕೇಂದ್ರ ವಿತ್ತ ಸಚಿವರು ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಆಮೆಗಳ ವೀಕ್ಷಣಾ ಹಾದಿ ಯೋಜನೆಯಡಿ ಒಡಿಶಾ ಮತ್ತು ಕೇರಳದ ಜತೆಗೆ ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಆಮೆಗಳ ಸಂತಾನೋತ್ಪತ್ತಿ ತಾಣಗಳಲ್ಲಿ ವೀಕ್ಷಣಾ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದ್ದಾರೆ.

ಪಾರಂಪರಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವ ಪ್ರಯತ್ನದ ಭಾಗವಾಗಿ ಸಾರನಾಥ ಮತ್ತು ಹಸ್ತಿನಾಪುರ ಸೇರಿದಂತೆ 15 ಪುರಾತತ್ವ ತಾಣಗಳನ್ನು ರೋಮಾಂಚಕ ಸಾಂಸ್ಕೃತಿಕ ಪ್ರದೇಶವನ್ನಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಹೇಳಿದ್ದಾರೆ.

ಆರೋಗ್ಯ

ಕ್ಯಾನ್ಸರ್, ಡಯಾಬಿಟಿಸ್ ಔಷಧ ಅಗ್ಗ

ಅಗತ್ಯ ಚಿಕಿತ್ಸೆ ಸೌಲಭ್ಯ ಎಲ್ಲರಿಗೂ ದೊರೆಯುವಂತೆ ಮಾಡಲು ಹಾಗೂ ಅಪರೂಪದ ಕಾಯಿಲೆಗಳ ಚಿಕಿತ್ಸಾ ವೆಚ್ಚವನ್ನು ಕಡಿಮೆ ಮಾಡುವ ಉದ್ದೇಶದಿಂದ 2026-27ರ ಕೇಂದ್ರ ಹಣಕಾಸು ಬಜೆಟ್‌ನಲ್ಲಿ ಅಪರೂಪದ ಕಾಯಿಲೆಗಳಿಗೆ ಆಮದು ಮಾಡುವ ಮತ್ತು ಕ್ಯಾನ್ಸರ್, ಡಯಾಬಿಟಿಸ್ ಔಷಧಗಳಿಗೆ ಸುಂಕ ವಿನಾಯಿತಿ ಘೋಷಿಸಲಾಗಿದೆ. ಇದರಿಂದ ಸಾಕಷ್ಟು ಮಧ್ಯಮ, ಬಡ ವರ್ಗದ ಕುಟುಂಬಗಳಿಗೆ ಪ್ರಯೋಜನವಾಗಲಿದೆ, ಔಷಧಗಳ ಮೇಲಿನ ಸುಂಕ ವಿನಾಯಿತಿಯು ಬಹು ಕ್ಯಾನ್ಸರ್ ಚಿಕಿತ್ಸೆಗಳಲ್ಲಿ ಬಳಸುವ ನಿರ್ಣಾಯಕ ಔಷಧಗಳ ಬೆಲೆಗಳನ್ನು ಕಡಿಮೆ ಮಾಡಲು ನೇರವಾಗಿ ಸಹಾಯ ಮಾಡುತ್ತದೆ ಎಂದು ಹೇಳಿದರು.

ಕ್ಯಾನ್ಸರ್ ಔಷಧಗಳ ಮೇಲೆ ಸುಂಕ ವಿನಾಯಿತಿ, ಅಪರೂಪದ ಕಾಯಿಲೆಗಳ ಔಷಧಗಳ ಮೇಲೆ ಆಮದು ವಿನಾಯಿತಿಗಳು ಚಿಕಿತ್ಸಾ ವೆಚ್ಚವನ್ನು ಕಡಿಮೆ ಮಾಡಲಿದೆ. ಈ ಹಿನ್ನೆಲೆಯಲ್ಲಿ 17 ಅಗತ್ಯ ಕ್ಯಾನ್ಸರ್ ಔಷಧಗಳಿಗೆ ಮೂಲ ಕಸ್ಟಮ್ಸ್ ಸುಂಕದಿಂದ ವಿನಾಯಿತಿ ನೀಡಲಾಗಿದ್ದು ಈ ಮೂಲಕ ಸರಕಾರವು ಕ್ಯಾನ್ಸರ್ ರೋಗಿಗಳಿಗೆ ಸುಲಭವಾಗಿ ಚಿಕಿತ್ಸೆ ದೊರೆಯುವಂತೆ ಮಾಡಿದೆ.

X ನಿಖಿಲ್ ಕುಮಾರಸ್ವಾಮಿ
ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ

ಬಜೆಟ್ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಹೊಸ ವೇಗ ನೀಡಿದೆ. ಪ್ರಮುಖವಾಗಿ ಹೈದರಾಬಾದ್-ಬೆಂಗಳೂರು ಮತ್ತು ಚೆನ್ನೈ-ಬೆಂಗಳೂರು ಹೈಸ್ಪೀಡ್ ರೈಲು ಕಾರಿಡಾರ್‌ಗಳಿಗೆ ಚಾಲನೆ. ಟರ್ಟಲ್ ಟ್ರಯಲ್ಸ್ ಮೂಲಕ ಪರಿಸರ ಪ್ರವಾಸೋದ್ಯಮಕ್ಕೆ ಹೊಸ ಕಳೆ ಸಿಕ್ಕಿದೆ. ಇದು ನವ ಕರ್ನಾಟಕದಿಂದ ನವ ಭಾರತದ ನಿರ್ಮಾಣ.

X ನಳಿನ್ ಕುಮಾರ್ ಕಟೀಲ್
ಮಾಜಿ ಸಂಸದ

ಕರಾವಳಿಯಲ್ಲಿ ಮೀನು ಸಹಕಾರ ಸಂಘಗಳ ಸ್ಥಾಪನೆ, ಮಧುಮೇಹ, ಕ್ಯಾನ್ಸರ್ ಔಷಧಿ, ಇವಿ ಬ್ಯಾಟರಿ ಅಗ್ಗ, ವಿದ್ಯಾರ್ಥಿ-ಐಟಿ ಉದ್ಯೋಗಿಗಳಿಗೆ ಹೊಸ ಸ್ಕೀಂ, ಕೊಕೋ, ಗೊಡಂಬಿ, ತೆಂಗು ಅಭಿವೃದ್ಧಿಗೆ ಆದ್ಯತೆ. ಔದ್ಯೋಗಿಕ ಪ್ರಗತಿ ಸಹಿತ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯನ್ನು ದೂರದೃಷ್ಟಿಯುಳ್ಳ ಬಜೆಟ್ ಇದಾಗಿದೆ.

ದೇಶದ ಪ್ರಗತಿಯ ಅಡಿಪಾಯವಾಗಿ ಮಾನವ ಸಾಮರ್ಥ್ಯವನ್ನು ಬಲಪಡಿಸುವ ಕಡೆಗೆ ಬಜೆಟ್ ಚಿಂತನಶೀಲ ಬದಲಾವಣೆ ಸೂಚಿಸುತ್ತದೆ. ಆರೋಗ್ಯ ಶಿಕ್ಷಣ, ಸಂಬಂಧಿತ ವಿಭಾಗಗಳು, ಕ್ಷೇಮ, ಆಯುರ್ವೇದ ಮತ್ತು ಆರೈಕೆದಾರರ ತರಬೇತಿಯ ಮೇಲೆ ವಿಶೇಷ ಒತ್ತು ನೀಡಿರುವುದು ಸ್ವಾಗತಾರ್ಹ. ಬಜೆಟ್ ಅಸಮಾನತೆಗಳನ್ನು ಕಡಿಮೆ ಮಾಡಲು ಮತ್ತು ಜೀವನೋಪಾಯವನ್ನು ಸೃಷ್ಟಿಸಲು ಅವಕಾಶ ಮಾಡಿಕೊಡುತ್ತದೆ.

ಡಾ.ವೀರೇಂದ್ರ ಹೆಗಡೆ
ರಾಜ್ಯಸಭಾ ಸದಸ್ಯರು

ಬೆಂಗಳೂರು-ಹೈದರಾಬಾದ್ ಮತ್ತು ಬೆಂಗಳೂರು- ಚೆನ್ನೈ ನಡುವೆ ಹೈಸ್ಪೀಡ್ ರೈಲು ಕಾರಿಡಾರ್ ಅಭಿವೃದ್ಧಿ ಘೋಷಣೆ ಸ್ವಾಗತಾರ್ಹ. ಆದರೆ ಇದರಿಂದ ರಾಜ್ಯಕ್ಕೆ ಹೆಚ್ಚು ಲಾಭವಿಲ್ಲ. ಈಗ ಘೋಷಿಸಿರುವ ಎರಡೂ ಮಾರ್ಗ ರಾಜ್ಯದಲ್ಲಿ 100 ಕಿಮೀ ಕೂಡ ಓಡುವುದಿಲ್ಲ. ಇದನ್ನು ಮೋದಿ ಸರಕಾರ ಪರಿಗಣಿಸದಿರುವುದು ದುರ್ದೈವದ ಸಂಗತಿ.

ಎಂ.ಬಿ. ಪಾಟೀಲ್
ಬೃಹತ್ ಕೈಗಾರಿಕಾ ಸಚಿವ

ಇದು 'ವಿಕಸಿತ ಭಾರತ 2047'ಕ್ಕೆ ಅಡಿಪಾಯ ಹಾಕುವ ಮತ್ತು ಭವಿಷ್ಯಕ್ಕೆ ಸಜ್ಜಾಗಿರುವ ಭಾರತಕ್ಕಾಗಿನ ಬಜೆಟ್. ಉತ್ಪಾದನಾ ವಲಯದ ಮೇಲೆ ಗಮನ ಹರಿಸಲಾಗಿರುವ ಈ ಬಜೆಟ್‌ನಲ್ಲಿ, ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ನಮ್ಮ ಆರ್ಥಿಕತೆಯನ್ನು ಮುನ್ನಡೆಸಲು ಹಲವು ಯೋಜನೆಗಳನ್ನು ಘೋಷಿಸಲಾಗಿದೆ. ತಯಾರಿಕಾ ವಲಯಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಹೀಗಾಗಿ, ಬದ್ಧತೆಯೊಂದಿಗೆ ಕೆಲಸ ಮಾಡಲು ಈ ಬಜೆಟ್ ಜನರನ್ನು ಉತ್ತೇಜಿಸುತ್ತದೆ.

ಪಿಯೂಷ್ ಗೋಯಲ್
ಕೇಂದ್ರ ಸಚಿವ

ಸರ್ವರನ್ನು ಒಳಗೊಂಡ, ಜನರಿಗೆ ಹಿತವಾದ ಬಜೆಟ್. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕೇಂದ್ರವೇ ವಿದ್ಯಾರ್ಥಿನಿಲಯ ಸ್ಥಾಪಿಸಲು ಮುಂದಾಗಿರುವುದು ಶ್ಲಾಘನೀಯ. ಶ್ರೀಗಂಧ ಬೆಳೆಗೆ ಉತ್ತೇಜನ ಕೊಡಲು ಕೇಂದ್ರ ಮುಂದಾಗಿದ್ದು, ತೆಂಗು ಅಭಿವೃದ್ಧಿಗೂ ಉತ್ತೇಜನ ನೀಡಲಾಗಿದೆ. ಟೂರಿಸ್ಟ್ ಗೈಡ್‌ಗಳಿಗೆ ತರಬೇತಿ ನೀಡಲು ಶಾಲೆ, ಕ್ಯಾನ್ಸರ್ ಔಷಧಿಗೆ ತೆರಿಗೆ ವಿನಾಯಿತಿ ಕೊಡಲಾಗಿದೆ. ಇದು ಜನಹಿತದ ಬಜೆಟ್, ತೆರಿಗೆ ಹೊರೆ ಹಾಕದ ಬಜೆಟ್.

ಆರ್.ಅಶೋಕ್
ವಿಪಕ್ಷ ನಾಯಕ

ಕೇಂದ್ರ ಬಜೆಟ್ 2026





10,000 ಪ್ರವಾಸಿ ಮಾರ್ಗದರ್ಶಕರ ಕೌಶಲ್ಯ ಹೆಚ್ಚಿಸುವ ಪೈಲಟ್ ಯೋಜನೆ ಘೋಷಣೆ

15 ಪುರಾತತ್ವ ಸ್ಥಳಗಳನ್ನು ರೋಮಾಂಚಕ, ಅನುಭವ ಆಧಾರಿತ ತಾಣಗಳಾಗಿ ಅಭಿವೃದ್ಧಿ

1.4 ಲಕ್ಷ ಕೋಟಿ ಮೀಸಲು
ಭಾರತದ ಡಿಜಿಟಲ್ ಕ್ರಿಯೇಟರ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು 14 ಲಕ್ಷ ಕೋಟಿ ರು. ಮೀಸಲಿಡಲಾಗಿದೆ.

ಕಂಟೆಂಟ್ ಕ್ರಿಯೇಟರ್ ಲ್ಯಾಬ್
ಮುಂಬೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಯೇಟಿವ್ ಟೆಕ್ನಾಲಜೀಸ್‌ನ ಬೆಂಬಲ ದೊಂದಿಗೆ 15000 ಮಾಧ್ಯಮಿಕ ಶಾಲೆ, 500 ಕಾಲೇಜುಗಳಲ್ಲಿ ಕಂಟೆಂಟ್ ಕ್ರಿಯೇಟರ್ ಲ್ಯಾಬ್ ಸ್ಥಾಪನೆ.

4,000 ದುರ್ಗಾಪುರದಲ್ಲಿ ಎಲೆಕ್ಟ್ರಿಕ್ ಬಸ್ಸುಗಳ ನಿಯೋಜನೆ

10,000 ಕೋಟಿ ರು. ಮುಂದಿನ ಐದು ವರ್ಷಗಳಲ್ಲಿ ಬಯೋ ಫಾರ್ಮಾ ವಲಯದಲ್ಲಿ ಹೂಡಿಕೆ ಪ್ರಸ್ತಾಪ

12.2 ಲಕ್ಷ ಕೋಟಿ ರು. ರಸ್ತೆ, ರೈಲ್ವೆ, ಮೆಟ್ರೊ, ಬಂದರು, ಸರಕು ಸಾಗಣೆಯನ್ನು ಇನ್ನಷ್ಟು ಉತ್ತಮಗೊಳಿಸಲು ಸಾರ್ವಜನಿಕ ಬಂಡವಾಳ ಹೆಚ್ಚಳ.

ಪ್ರಮುಖ ಪ್ರದೇಶಗಳಲ್ಲಿ ಪರ್ವತಚಾರಣಗಳ ಅಭಿವೃದ್ಧಿ | ಸೀಪ್ಲೇನ್‌ಗಳ ಉತ್ಪಾದನೆಗೆ ಪ್ರೋತ್ಸಾಹ

ಪ್ರವಾಸೋದ್ಯಮ ಉತ್ತೇಜನಕ್ಕೆ ಒತ್ತು

ಪ್ರವಾಸೋದ್ಯಮ ಮತ್ತು ಆತಿಥ್ಯ ವಲಯವನ್ನು ಬಲಪಡಿಸುವ ಮೂಲಕ ಆರ್ಥಿಕತೆಯನ್ನು ವಿಸ್ತರಿಸುವ ಗುರಿಯನ್ನು ಹೊಂದಿರುವ ಸರಣಿ ಉಪಕ್ರಮಗಳನ್ನು ಕೇಂದ್ರ ಬಜೆಟ್‌ನಲ್ಲಿ ಮಂಡಿಸಲಾಗಿದೆ.

ಭಾರತೀಯ ನಿರ್ವಹಣಾ ಸಂಸ್ಥೆ (IIM) ಸಹಯೋಗದೊಂದಿಗೆ ನಡೆಸಲಾಗುವ ಪ್ರಮಾಣೀಕೃತ 12 ವಾರಗಳ ಹೈಬ್ರಿಡ್ ತರಬೇತಿ ಕಾರ್ಯಕ್ರಮದ ಮೂಲಕ 20 ಪ್ರತಿಷ್ಠಿತ ತಾಣಗಳಲ್ಲಿ 10,000 ಪ್ರವಾಸಿ ಮಾರ್ಗದರ್ಶಕರ ಕೌಶಲ್ಯವನ್ನು ಹೆಚ್ಚಿಸುವ ಪೈಲಟ್ ಯೋಜನೆಯನ್ನು ಘೋಷಿಸಲಾಗಿದೆ. ದೇಶಾದ್ಯಂತ ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಪರಂಪರೆಯ ಮಹತ್ವದ ಸ್ಥಳಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸಲು ರಾಷ್ಟ್ರೀಯ ಗಮ್ಯಸ್ಥಾನ ಡಿಜಿಟಲ್ ಜ್ಞಾನ ಗ್ರಿಡ್ ಅನ್ನು ರಚಿಸಲಾಗುವುದು ಎಂದು ಹಣಕಾಸು ಸಚಿವರು ಹೇಳಿದರು.

ಲೋಥಾಲ್, ಧೋಲಾವಿರ, ರಾಖಿಗಢಿ, ಆದಿಚನಲ್ಲೂರು, ಸಾರನಾಥ, ಹಸ್ತಿನಾಪುರ ಮತ್ತು ಲೇಹ್ ಅರಮನೆ ಸೇರಿದಂತೆ 15 ಪುರಾತತ್ವ ಸ್ಥಳಗಳನ್ನು ಸರಕಾರವು ರೋಮಾಂಚಕ, ಅನುಭವ ಆಧಾರಿತ ಸಾಂಸ್ಕೃತಿಕ

ತಾಣಗಳಾಗಿ ಅಭಿವೃದ್ಧಿ ಪಡಿಸಲಿದೆ. ದುರ್ಗಾಪುರದಲ್ಲಿ ಉತ್ತಮ ಸಂಪರ್ಕ ಹೊಂದಿರುವ ಸಮಗ್ರ ಪೂರ್ವ ಕರಾವಳಿ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ, ಐದು ಈಶಾನ್ಯ ರಾಜ್ಯಗಳಲ್ಲಿ ಐದು ಪ್ರವಾಸೋದ್ಯಮ ತಾಣಗಳ ಸೃಷ್ಟಿ ಮತ್ತು 4,000 ಎಲೆಕ್ಟ್ರಿಕ್ ಬಸ್ಸುಗಳ ನಿಯೋಜನೆಯನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದರು.

ಅರುಣಾಚಲ ಪ್ರದೇಶ, ಸಿಕ್ಕಿಂ, ಅಸ್ಸಾಂ, ಮಣಿಪುರ, ಮಿಜೋರಾಂ ಮತ್ತು ತ್ರಿಪುರಗಳಲ್ಲಿ ಬೌದ್ಧ ಸರ್ಕ್ಯೂಟ್‌ಗಳನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಅವರು ಘೋಷಿಸಿದರು. ದೇವಾಲಯಗಳು ಮತ್ತು ಮಠಗಳನ್ನು ಒಳಗೊಂಡಂತೆ ವ್ಯಾಖ್ಯಾನ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯನ್ನು ಸಹ ಘೋಷಿಸಿದರು. ಸುಸ್ಥಿರ ಪ್ರವಾಸೋದ್ಯಮವನ್ನು ಉತ್ತೇಜಿಸಲು ಪ್ರಮುಖ ಪ್ರದೇಶಗಳಲ್ಲಿ ಪರಿಸರ ಸ್ನೇಹಿ ಪರ್ವತ ಚಾರಣಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಹೇಳಿದರು. ಹೋಟೆಲ್ ನಿರ್ವಹಣೆ ಮತ್ತು ಅಡುಗೆ ತಂತ್ರಜ್ಞಾನಕ್ಕಾಗಿ ರಾಷ್ಟ್ರೀಯ ಮಂಡಳಿಯನ್ನು ನವೀಕರಿಸುವ ಮೂಲಕ ರಾಷ್ಟ್ರೀಯ ಆತಿಥ್ಯ ಸಂಸ್ಥೆಯನ್ನು ಸ್ಥಾಪಿಸಲಾಗುವುದು ಎಂದು ಹಣಕಾಸು ಸಚಿವರು ಹೇಳಿದರು. ಸಂಪರ್ಕಕ್ಕೆ ಒತ್ತು ನೀಡುವುದಕ್ಕಾಗಿ ಕೊನೆಯ ಮೈಲಿ ಮತ್ತು ದೂರ ಪ್ರದೇಶಗಳಿಗೆ ಪ್ರವೇಶವನ್ನು ಸುಧಾರಿಸಲು ಮತ್ತು ಪ್ರವಾಸೋದ್ಯಮವನ್ನು ಹೆಚ್ಚಿಸಲು ಸೀಪ್ಲೇನ್‌ಗಳ ಉತ್ಪಾದನೆಗೆ ಪ್ರೋತ್ಸಾಹವನ್ನು ಪ್ರಸ್ತಾಪಿಸಿದರು.

ಪ್ರವಾಸೋದ್ಯಮಕ್ಕೆ ಏನೇನು ಸಿಕ್ಕಿದೆ?

- ಕರ್ನಾಟಕವೂ ಸೇರಿ ದೇಶದ 20 ಐತಿಹಾಸಿಕ ಸ್ಥಳಗಳಿಗೆ ಹತ್ತು ಸಾವಿರ ಪ್ರವಾಸಿ ಮಾರ್ಗದರ್ಶಕರನ್ನು ನೇಮಿಸಿ, ಅವರಿಗೆ ಉನ್ನತ ಮಟ್ಟದ ತರಬೇತಿ ನೀಡಲಾಗುತ್ತದೆ.
- ತರಬೇತುದಾರರಿಗೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸಹಯೋಗದೊಂದಿಗೆ ಹೈಬ್ರಿಡ್ ಮೋಡ್‌ನಲ್ಲಿ 12 ವಾರಗಳಲ್ಲಿ ಉತ್ತಮ ಗುಣಮಟ್ಟದ ತರಬೇತಿ
- ಪ್ರವಾಸಿಗರಿಗೆ ಅನುಕೂಲವಾಗುವಂತೆ ಐತಿಹಾಸಿಕ, ಸಾಂಸ್ಕೃತಿಕ, ಅಧ್ಯಾತ್ಮಿಕ, ಪಾರಂಪರಿಕ ಸ್ಥಳಗಳ ಮಾಹಿತಿ ಡಿಜಟಲೀಕರಣ
- ಹಿಮಾಚಲ ಪ್ರದೇಶ, ಉತ್ತರಾಖಂಡ ಹಾಗೂ ಜಮ್ಮು-ಕಾಶ್ಮೀರ ರಾಜ್ಯಗಳ ಪರಿಸರ ಸ್ನೇಹಿ ಚಾರಣ ತಾಣಗಳಿಗೆ ಮಾರ್ಗಗಳ ಅಭಿವೃದ್ಧಿ
- ಒಡಿಶಾ, ಕರ್ನಾಟಕ, ಕೇರಳ, ಕರಾವಳಿ ಪ್ರದೇಶಗಳ 'ಟರ್ಟಲ್ ಟ್ರೈಲ್ಸ್' ಅಥವಾ ಆಮೆ ಸಂರಕ್ಷಣಾ ಮಾರ್ಗಗಳಿಗೆ ಉತ್ತೇಜನ
- ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಪುಲಿಕಟ್ ಸರೋವರದ ಬಳಿ ಹಕ್ಕಿ ವೀಕ್ಷಣಾ ಮಾರ್ಗಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ

ವಿಶ್ಲೇಷಣೆ

ಬಿ.ಆರ್.ಗಣೇಶ್ ರಾವ್
ಅಧ್ಯಕ್ಷರು, ಕಾಸಿಯಾ

ಸಣ್ಣ ಉದ್ಯಮಗಳಿಗೆ ದೃಢ ಅಡಿಪಾಯ

ಕಾಸಿಯಾ 2026-27ನೇ ಸಾಲಿನ ಕೇಂದ್ರ ಬಜೆಟ್ ಅನ್ನು ಸ್ವಾಗತಿಸುತ್ತಿದ್ದು, ಎಂಎಸ್‌ಎಂಇಗಳಿಗೆ ಇನ್ನಷ್ಟು ಅವಕಾಶಗಳನ್ನು ನೀಡುವುದಕ್ಕೆ ಪೂರಕವಾಗಿರುವ ನೀತಿಗೆ ಗಮನ ಹಾಗೂ ಅಗತ್ಯ ನೀಡಲಾಗಿದೆ. ಬಜೆಟ್‌ನಲ್ಲಿ ದೇಶೀಯ ತಯಾರಿಕೆ ಬಲಪಡಿಸಲು, ಎಂಎಸ್‌ಎಂಇ ವಿಸ್ತರಣೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿರುವುದು ಸಮಗ್ರ ಅಭಿವೃದ್ಧಿ ದೃಷ್ಟಿಕೋನ ಪ್ರತಿಬಿಂಬಿಸುತ್ತದೆ. 10,000 ಕೋಟಿ ಮೊತ್ತದ ಎಸ್‌ಎಂಇ ಗ್ರೋತ್ ಫಂಡ್, ಸ್ವಾವಲಂಬನೆ ಇಂಡಿಯಾ ಫಂಡ್‌ಗೆ ಹೆಚ್ಚುವರಿಯಾಗಿ 4,000 ಕೋಟಿ ಟಾಪ್‌ಅಪ್, ಮತ್ತು ಪರಂಪರಾಗತ ಕ್ಷೇತ್ರಗಳಿಗೆ ಒಳಗೊಂಡಿರುವ ಬೆಂಬಲ ಕ್ರಮಗಳು ದೇಶಾದ್ಯಂತ ಸೂಕ್ಷ್ಮ ಹಾಗೂ ಸಣ್ಣ ಉದ್ಯಮಗಳಿಗೆ ಪ್ರೇರಣೆ ನೀಡಲಿವೆ. ಈ ಕ್ರಮಗಳು ಬಂಡವಾಳ ಪ್ರವೇಶವನ್ನು ಸುಧಾರಿಸಲಿವೆ.

ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯ ಮಹತ್ವವನ್ನು ಸರಕಾರ ಗುರುತಿಸಿದೆ. ಮೌಲ್ಯ ಸರಪಳಿ ಅಭಿವೃದ್ಧಿ ಮತ್ತು ಕ್ಲಸ್ಟರ್ ಆಧುನೀಕರಣದ ಮೇಲೆ ಬಜೆಟ್ ನೀಡಿರುವ ಒತ್ತು, ಸಣ್ಣ ಕೈಗಾರಿಕೆಗಳಿಗೆ ಹೊಸ ಅವಕಾಶಗಳನ್ನು ತೆರೆಯಬಹುದಾದರೂ, ನಿಯಂತ್ರಣಾತ್ಮಕ ಅನುಪಾಲನೆ ಸರಳೀಕರಣ, ಇನ್‌ಪುಟ್ ವೆಚ್ಚ ಕಡಿತ ಮತ್ತು ಸಾಲ ಪ್ರಕ್ರಿಯೆಗಳ ಸುಧಾರಣೆಗೆ ಇನ್ನಷ್ಟು ಗಮನ ಅಗತ್ಯವಿದೆ. ವಿಶೇಷವಾಗಿ ಕಾರ್ಮಿಕರ ಆಧಾರಿತ ಹಾಗೂ ಸಾಲ ನಿರ್ಬಂಧಿತ ಸೂಕ್ಷ್ಮ ಘಟಕಗಳ ನೆಲಮಟ್ಟದ

ಸಮಸ್ಯೆಗಳೊಂದಿಗೆ ನೀತಿ ಅನುಷ್ಠಾನವನ್ನು ಆದ್ಯತೆಯಾಗಿ ಮುಂದುವರಿಸಬೇಕು. ರಾಷ್ಟ್ರೀಯ ಫೈಬರ್ ಯೋಜನೆ, ವಿಸ್ತರಣಾ ಕ್ರಮಗಳು, ಮೆಗಾ ಟೆಕ್ಸ್‌ಟೈಲ್ ಪಾರ್ಕ್‌ಗಳು ಮತ್ತು ಹೆಚ್ಚುವರಿ ಉದ್ಯೋಗ ಯೋಜನೆಗಳನ್ನು ಒಳಗೊಂಡ ಸಮಗ್ರ ವಸ್ತ್ರ ಕಾರ್ಯಕ್ರಮವು ಪರಂಪರಾಗತ ಕ್ಲಸ್ಟರ್‌ಗಳನ್ನು ಆಧುನೀಕರಿಸಿ, ಸಣ್ಣ ನೇಕಾರರು ಮತ್ತು ಉಡುಪು ತಯಾರಕರಿಗೆ ಮಾರುಕಟ್ಟೆ ಪ್ರವೇಶವನ್ನು ಒದಗಿಸಲಿದೆ. ಕಂಟೈನರ್ ಮತ್ತು ಬಂಡವಾಳ ಸರಕು ತಯಾರಿಕೆಗೆ ನೀಡಿರುವ ಬಂಡವಾಳ ಬೆಂಬಲವು ದೇಶೀಯ ಸಾಮರ್ಥ್ಯವನ್ನು ಬಲಪಡಿಸಿ, ಆಮದು ಅವಲಂಬನೆ ಕಡಿಮೆ ಮಾಡಿ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಸಹಕಾರಿಯಾಗಲಿದೆ. ಸರಬರಾಜು ಸರಪಳಿ ಸುಧಾರಣೆಗಳು, ಹೆಚ್ಚಿದ ವ್ಯಾಪಾರ ಹಣಕಾಸು ಮತ್ತು ರಫ್ತು ಸಂಬಂಧಿತ ಯೋಜನೆಗಳ ಮೇಲೆ ಬಜೆಟ್ ನೀಡಿರುವ ಒತ್ತು ರಫ್ತುಗಾರರಿಗೆ ಭರವಸೆಯನ್ನು ನೀಡುತ್ತದೆ. ಆದರೂ ಕಚ್ಚಾ ವಸ್ತು ಆಮದು ಮೇಲಿನ ಶುಲ್ಕಗಳನ್ನು ತರ್ಕಬದ್ಧಗೊಳಿಸವುದು ಮತ್ತು ಕಾರ್ಯವಿಧಾನದ ವೆಚ್ಚಗಳನ್ನು ಸರಳೀಕರಣಗೊಳಿಸುವುದರಿಂದ ಹೊರಮುಖ ವ್ಯಾಪಾರ ಸಾಮರ್ಥ್ಯವನ್ನು ಇನ್ನಷ್ಟು ಬಲಪಡಿಸಲಿದೆ.

ಒಟ್ಟಾರೆ, ಬಜೆಟ್ 2026-27ಅನ್ನು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಬೆಳವಣಿಗೆ-ಆಧಾರಿತ ಹಾಗೂ ವಲಯ ಸಕ್ರಿಯಗೊಳಿಸುವ ಬಜೆಟ್ ಎಂದು ಪರಿಗಣಿಸಿದೆ. ಬಂಡವಾಳ ಒಳಹರಿವು, ಮೂಲಸೌಕರ್ಯ ವಿಸ್ತರಣೆ, ಕ್ಲಸ್ಟರ್ ಆಧುನೀಕರಣ ಮತ್ತು ನೀತಿ ಸುಧಾರಣೆಗಳ ಸಮತೋಲನ ವಿಸ್ತರಣೆ, ಸ್ಪರ್ಧಾತ್ಮಕತೆ ಮತ್ತು ಸ್ಥಿರ ಉದ್ಯೋಗ ಸೃಷ್ಟಿಗೆ ತಂತ್ರಾತ್ಮಕ ಚೌಕಟ್ಟನ್ನು ಒದಗಿಸುತ್ತದೆ. ಬಜೆಟ್ ಉದ್ದೇಶಗಳು ನೆಲಮಟ್ಟದಲ್ಲಿ ಸ್ಪಷ್ಟ ಫಲಿತಾಂಶಗಳಾಗಿ ಪರಿವರ್ತನೆಯಾಗಲು ಪರಿಣಾಮಕಾರಿ ಅನುಷ್ಠಾನ ಮತ್ತು ವಲಯ-ನಿರ್ದಿಷ್ಟ ನೀತಿ ಪರಿಷ್ಕರಣೆಗಳು ಅತ್ಯಂತ ಮುಖ್ಯವಾಗಿವೆ.

ದಿವ್ಯಾಂಗರಿಗೆ ಸಮಗ್ರ ತರಬೇತಿ

ದಿವ್ಯಾಂಗ ಸಹಾರಾ ಯೋಜನೆ ಮೂಲಕ ದಿವ್ಯಾಂಗ ಜನರಿಗೆ ಆಧುನಿಕ ರಿಟೇಲ್ ಶೈಲಿಯ ಕೇಂದ್ರಗಳಾಗಿ ಸಹಾಯಕ ತಂತ್ರಜ್ಞಾನ ಮಾರ್ಟ್ ಅನ್ನು ಸ್ಥಾಪನೆ ಮಾಡುವುದಾಗಿ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ದಿವ್ಯಾಂಗಜನ ಕೌಶಲ ಯೋಜನೆ: ಎವಿಜಿಸಿ ವಲಯಗಳು, ಆತಿಥ್ಯ ಮತ್ತು ಆಹಾರ ಮತ್ತು ಪಾನೀಯ ವಲಯಗಳು ದಿವ್ಯಾಂಗರಿಗೆ ಸೂಕ್ತವಾದ ಕಾರ್ಯ-ಆಧಾರಿತ ಮತ್ತು ಪ್ರಕ್ರಿಯೆ ಅಧರಿತ

ಪಾತ್ರಗಳನ್ನು ನೀಡುತ್ತವೆ. ಇದು ಪ್ರತಿಯೊಂದು ದಿವ್ಯಾಂಗ ಗುಂಪಿಗೆ ನಿರ್ದಿಷ್ಟವಾದ ಉದ್ಯಮ-ಸಂಬಂಧಿತ ಮತ್ತು ಸಮಗ್ರ ತರಬೇತಿಯ ಮೂಲಕ ಗೌರವಯುತ ಜೀವನೋಪಾಯದ ಅವಕಾಶಗಳನ್ನು ಖಚಿತಪಡಿಸುತ್ತದೆ.

ದಿವ್ಯಾಂಗ ಸಹಾರಾ ಯೋಜನೆ: ಎಲ್ಲ ಅರ್ಹ ದಿವ್ಯಾಂಗರಿಗೆ ಉತ್ತಮ ಗುಣಮಟ್ಟದ ಸಹಾಯಕ ಸಾಧನಗಳಿಗೆ ಸಕಾಲಿಕ ಲಭ್ಯತೆಯು ಮೂಲಭೂತ ಅಗತ್ಯವಾಗಿದೆ. ಸಹಾಯಕ ಸಾಧನಗಳ ಉತ್ಪಾದನೆಯನ್ನು ಹೆಚ್ಚಿಸಲು ಭಾರತೀಯ ಕೃತಕ ಅಂಗಗಳ ಉತ್ಪಾದನಾ ನಿಗಮವನ್ನು ಬೆಂಬಲಿಸಲು, ಸಂಶೋಧನೆ ಅಬಿವೃದ್ಧಿ ಮತ್ತು ಕೃತಕ ಬುದ್ಧಿಮತ್ತೆ ಏಕೀಕರಣದಲ್ಲಿ ಹೂಡಿಕೆ ಮಾಡಬಹುದಾಗಿದೆ. ಪಿಎಂ ದಿವ್ಯಾಶ ಕೇಂದ್ರಗಳನ್ನು ಬಲಪಡಿಸಲು ಮತ್ತು ದಿವ್ಯಾಂಗರು ಮತ್ತು ಹಿರಿಯ ನಾಗರಿಕರು ಸಹಾಯಕ ಉತ್ಪನ್ನಗಳನ್ನು ನೋಡಲು, ಪ್ರಯತ್ನಿಸಲು ಮತ್ತು ಖರೀದಿಸಲು ಆಧುನಿಕ ರಿಟೇಲ್ ಶೈಲಿಯ ಕೇಂದ್ರಗಳಾಗಿ ಸಹಾಯಕ ತಂತ್ರಜ್ಞಾನ ಮಾರ್ಟ್‌ಗಳನ್ನು ಸ್ಥಾಪನೆಗೆ ಬೆಂಬಲಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ರುಪಾಯಿ ಲೆಕ್ಕಚಾರ



ಪ್ರತಿ ರುಪಾಯಿ ಆದಾಯದಲ್ಲಿ 64 ಪೈಸೆ ತೆರಿಗೆಯಿಂದಲೇ ಸಂಗ್ರಹ

ಕೇಂದ್ರ ಸರಕಾರದ ಬೊಕ್ಕಸಕ್ಕೆ ಬರುವ ಪ್ರತಿ ರುಪಾಯಿ ಆದಾಯದಲ್ಲಿ 64 ಪೈಸೆ ನೇರ ಮತ್ತು ಪರೋಕ್ಷ ತೆರಿಗೆಗಳಿಂದ ಸಂಗ್ರಹವಾಗುತ್ತದೆ. 24 ಪೈಸೆ ಸಾಲದಿಂದ, 10 ಪೈಸೆ ಹೂಡಿಕೆ ಹಿಂತೆಗೆತದಂತಹ ತೆರಿಗೆಯೇತರ ಆದಾಯದಿಂದ ಮತ್ತು 2 ಪೈಸೆ ಸಾಲೇತರ ಬಂಡವಾಳ ಸ್ವೀಕೃತಿಗಳಿಂದ, ಆದಾಯ ತೆರಿಗೆಯಿಂದ 21 ಪೈಸೆ, ಕಾರ್ಪೊರೇಟ್ ತೆರಿಗೆಯಿಂದ 18 ಪೈಸೆ ಮತ್ತು ಜಿಎಸ್‌ಟಿಯಿಂದ 15 ಪೈಸೆ, ಅಬಕಾರಿ ಸುಂಕದಿಂದ 6 ಪೈಸೆ ಮತ್ತು ಕಸ್ಟಮ್ಸ್ ಸುಂಕದಿಂದ 4 ಪೈಸೆ ಗಳಿಸಲು ಯೋಜಿಸಿದೆ.

ರೈಲುಗಳಿಗೆ ವೇಗ

ಬೆಂಗಳೂರಿಗೆ ಎರಡು ಹೈಸ್ಪೀಡ್ ರೈಲು ಕಾರಿಡಾರ್‌ಗಳು ಸೇರಿದಂತೆ ದೇಶಾದ್ಯಂತ ಒಟ್ಟು ಏಳು ಯೋಜನೆಗಳನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಘೋಷಣೆ ಮಾಡಿದ್ದಾರೆ. ದೇಶದ ಮೊಟ್ಟ ಮೊದಲ ಬುಲೆಟ್ ಟ್ರೇನ್ ಮುಂಬೈ ಹಾಗೂ ಅಹಮದಾಬಾದ್ ನಡುವೆ ಮುಂದಿನ ವರ್ಷದ ಆಗಸ್ಟ್‌ನಲ್ಲಿ ಉದ್ಘಾಟನೆಯಾಗಲಿದೆ. ಅದರ ನಡುವೆಯೇ ಕೇಂದ್ರ ಸರಕಾರ ಮುಂದಿನ ಏಳು ಮಹತ್ವದ ಹೈಸ್ಪೀಡ್ ರೈಲು

ಕಾರಿಡಾರ್‌ಗಳನ್ನು ಘೋಷಣೆ ಮಾಡಿದ್ದು, ಅದರಲ್ಲಿ ಬೆಂಗಳೂರನ್ನು ಸಂಪರ್ಕಿಸುವ ಎರಡು ಯೋಜನೆ ಘೋಷಣೆಯಾಗಿದೆ. ಪ್ರಸ್ತಾವಿತ ಹೈಸ್ಪೀಡ್ ರೈಲು ಮಾರ್ಗಗಳು ಪ್ರಮುಖ ಮೆಟ್ರೋ ಪಾಲಿಟನ್ ನಗರಗಳನ್ನು ವೇಗವಾಗಿ ಬೆಳೆಯುತ್ತಿರುವ ನಗರ ಮತ್ತು ಕೈಗಾರಿಕಾ ಕೇಂದ್ರಗಳೊಂದಿಗೆ ಸಂಪರ್ಕಿಸಲಿವೆ. ಪ್ರಯಾಣದ ಸಮಯವನ್ನು ಗಮನಾರ್ಹವಾಗಿ ಕಡಿತಗೊಳಿಸುತ್ತದೆ ಮತ್ತು ರಸ್ತೆಗಳು ಮತ್ತು ಸಾಂಪ್ರದಾಯಿಕ ರೈಲು ಜಾಲಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಮುಂಬರುವ ತಿಂಗಳುಗಳಲ್ಲಿ ವಿವರವಾದ ಕಾರ್ಯಸಾಧ್ಯತಾ ಅಧ್ಯಯನಗಳು ಮತ್ತು ಭೂಸ್ವಾಧೀನ ಪ್ರಕ್ರಿಯೆಗಳನ್ನು ಕೈಗೊಳ್ಳುವುದರೊಂದಿಗೆ ಕಾರಿಡಾರ್‌ಗಳನ್ನು ಹಂತ ಹಂತಗಳಲ್ಲಿ ಅಭಿವೃದ್ಧಿ ಪಡಿಸಲಾಗುವುದು. 2014-15ರಲ್ಲಿ ಸಾರ್ವಜನಿಕ ಬಂಡವಾಳ ವೆಚ್ಚವು 2 ಲಕ್ಷ ಕೋಟಿಯಿಂದ ತೀವ್ರವಾಗಿ ಏರಿಕೆಯಾಗಿದೆ. ಇದು ಮೂಲಸೌಕರ್ಯ ನೇತೃತ್ವದ ಆರ್ಥಿಕ ಬೆಳವಣಿಗೆಯ ಮೇಲೆ ಸರಕಾರದ ಗಮನವನ್ನು ಪ್ರತಿ ಬಿಂಬಿಸುತ್ತದೆ. ಪ್ರಯಾಣಿಕರ ರೈಲು ನವೀಕರಣಗಳ ಜತೆಗೆ, ಬಜೆಟ್ ಸರಕು ಮತ್ತು ಲಾಜಿಸ್ಟಿಕ್ಸ್‌ಗಾಗಿ ಪ್ರಮುಖ ಯೋಜನೆಗಳಿಗೂ ಗಮನ ಹರಿಸಲಾಗಿದೆ. ಪೂರ್ವದಲ್ಲಿ ಡಂಕುನಿಯನ್ನು ಪಶ್ಚಿಮದಲ್ಲಿ ಸೂರತ್‌ನೊಂದಿಗೆ ಸಂಪರ್ಕಿಸುವ ಹೊಸ ಮೀಸಲಾದ ಪೂರ್ವ-ಪಶ್ಚಿಮ ಸರಕು ಕಾರಿಡಾರ್ ಅನ್ನು ಘೋಷಿಸಿದ್ದಾರೆ. ಬಹುಮಾದರಿ ಸಾರಿಗೆಯನ್ನು ಉತ್ತೇಜಿಸಲು ಮತ್ತು ಲಾಜಿಸ್ಟಿಕ್ಸ್ ವೆಚ್ಚವನ್ನು ಕಡಿಮೆ ಮಾಡಲು ಮುಂದಿನ ಐದು ವರ್ಷ ಗಳಲ್ಲಿ 22 ಹೊಸ ರಾಷ್ಟ್ರೀಯ ಜಲ ಮಾರ್ಗಗಳ ಕಾರ್ಯಾಚರಣೆಯನ್ನು ಸಹ ಅವರು ಪ್ರಸ್ತಾಪಿಸಿದರು.

ಪ್ರಸ್ತಾವಿತ ಹೈಸ್ಪೀಡ್ ರೈಲು ಕಾರಿಡಾರ್‌ಗಳು

- ಮುಂಬೈ-ಪುಣೆ
- ಹೈದರಾಬಾದ್-ಬೆಂಗಳೂರು
- ದೆಹಲಿ-ವಾರಣಾಸಿ
- ವಾರಣಾಸಿ-ಸಿಲಿಗುರಿ
- ಪುಣೆ-ಹೈದರಾಬಾದ್
- ಹೈದರಾಬಾದ್-ಚೆನ್ನೈ
- ಚೆನ್ನೈ-ಬೆಂಗಳೂರು

ಮಹಿಳಾ ಸಬಲೀಕರಣ

ದೇಶದ ಪ್ರತಿ ಜಿಲ್ಲೆಯಲ್ಲಿ ಬಾಲಕಿಯರ ಹಾಸ್ಟೆಲ್

ದೇಶದ ಪ್ರತಿ ಜಿಲ್ಲೆಯಲ್ಲಿ ಒಂದು ಬಾಲಕಿಯರ ಹಾಸ್ಟೆಲ್ ಸ್ಥಾಪಿಸುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದರು. ಇದು ಶಿಕ್ಷಣದಲ್ಲಿನ ಲಿಂಗ ಸಮಾನತೆಯನ್ನು ಉತ್ತೇಜಿಸುತ್ತದೆ. ವಿಶೇಷವಾಗಿ ಗ್ರಾಮೀಣ ಭಾಗದ ಪ್ರತಿಭಾವಂತ ಹೆಣ್ಣುಮಕ್ಕಳು ನಗರ ಪ್ರದೇಶಗಳಲ್ಲಿ ಸುರಕ್ಷಿತ ವಸತಿ ಇಲ್ಲದೆ ಶಿಕ್ಷಣ ಮೊಟಕುಗೊಳಿಸುವುದನ್ನು ಇದು ತಪ್ಪಿಸುತ್ತದೆ. ಹಾಸ್ಟೆಲ್‌ಗಳು ಲಭ್ಯವಾಗುವುದರಿಂದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿನಿಯರಿಗೂ ಗುಣಮಟ್ಟದ ವಸತಿ ವ್ಯವಸ್ಥೆ ಸಿಗಲಿದೆ. ಗ್ರಾಮೀಣ ಮಹಿಳೆಯರ ಆದಾಯವನ್ನು ಹೆಚ್ಚಿಸಲು, ಮಹಿಳಾ ನೇತೃತ್ವದ ಉದ್ಯಮಗಳಿಗಾಗಿ ಸ್ವಸಹಾಯ ಉದ್ಯಮಿ (SHE) ಮಾರ್ಟ್‌ಗಳನ್ನು ಸ್ಥಾಪಿಸಲು ಬಜೆಟ್‌ನಲ್ಲಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪ್ರಸ್ತಾಪಿಸಿದ್ದಾರೆ.



ಸಾರಿಗೆ

ಕರಾವಳಿಗೆ ಸಮುದ್ರ ವಿಮಾನದ ಕೊಡುಗೆ

ರಾಜ್ಯದ ಸುದೀರ್ಘ ಕರಾವಳಿಯ ಸಾರಿಗೆ ಸಾಮರ್ಥ್ಯ ಹೆಚ್ಚಿಸಲು 'ಕರಾವಳಿ ಸರಕು ಯೋಜನೆ' ಘೋಷಿಸಲಾಗಿದೆ. ಇದು ಮಂಗಳೂರು ಮತ್ತು ಕಾರವಾರ ಬಂದರುಗಳ ಮೂಲಕ ಸರಕು ಸಾಗಣೆಯ ಪಾಲನ್ನು ಹೆಚ್ಚಿಸಲಿದೆ. ಅಲ್ಲದೆ, ಗುಡ್ಡಗಾಡು ಮತ್ತು ದೂರದ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು ಸಮುದ್ರ ವಿಮಾನಗಳ ತಯಾರಿಕೆಗೆ ಬೆಂಬಲ ನೀಡಲಾಗುವುದು. ಅಲ್ಲದೇ, ದೂರದ ಮತ್ತು ದುರ್ಗಮ ಪ್ರದೇಶಗಳ ಸಂಪರ್ಕಕ್ಕಾಗಿ ಸರಕಾರವು ಸಮುದ್ರ ವಿಮಾನಗಳ ತಯಾರಿಕೆಗೆ ಉತ್ತೇಜನ ನೀಡಲಾಗಿದೆ. ಇದು ರಾಜ್ಯದ ಕರಾವಳಿ ಪ್ರದೇಶಗಳಿಗೆ ವರದಾನವಾಗಲಿದೆ.

ಯುವಜನ, ಕ್ರೀಡೆ

ಖೇಲೋ ಇಂಡಿಯಾ ಕಾರ್ಯಕ್ರಮಕ್ಕೆ ಉತ್ತೇಜನ

ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಘೋಷಣೆಗಳನ್ನು ಮಾಡಲಾಗಿದೆ. ತಳಮಟ್ಟದ ಕ್ರೀಡಾ ಪ್ರತಿಭೆಗಳನ್ನು ಹುಡುಕುವ ಖೇಲೋ ಇಂಡಿಯಾ ಕಾರ್ಯಕ್ರಮಕ್ಕೆ ಉತ್ತೇಜನ ನೀಡಲಾಗಿದೆ. ಮುಂದಿನ ದಶಕದಲ್ಲಿ ತರಬೇತಿ ಕೇಂದ್ರಗಳು ಮತ್ತು ತರಬೇತುದಾರರ ವ್ಯವಸ್ಥಿತ ಅಭಿವೃದ್ಧಿಯತ್ತ ಗಮನ ಹರಿಸಲು ಖೇಲೋ ಇಂಡಿಯಾ ಮಿಷನ್ ಅನ್ನು ಪ್ರಾರಂಭಿಸುವ ಪ್ರಸ್ತಾಪವನ್ನು ನಿರ್ಮಲಾ ಸೀತಾರಾಮನ್ ಮಂಡಿಸಿದರು. ಇದಕ್ಕಾಗಿ ಕೇಂದ್ರ ಸರಕಾರವು ವಿವಿಧ ರಾಜ್ಯಗಳಲ್ಲಿ ವಿಶೇಷ ತರಬೇತಿ ಕೇಂದ್ರಗಳನ್ನು ಸ್ಥಾಪಿಸುತ್ತದೆ. ಈ ಕೇಂದ್ರಗಳು ಕ್ರೀಡಾಪಟುಗಳಿಗೆ ಆಧುನಿಕ ಸೌಲಭ್ಯಗಳು ಮತ್ತು ವೈಜ್ಞಾನಿಕ ತರಬೇತಿಯನ್ನು ಒದಗಿಸುತ್ತವೆ. ಚಿಕ್ಕ ವಯಸ್ಸಿನಲ್ಲಿಯೇ ಸರಿಯಾದ ನಿರ್ದೇಶನವನ್ನು ಒದಗಿಸಲು ಶಾಲಾ ಮತ್ತು ಕಾಲೇಜು ಮಟ್ಟದಿಂದ ಆಟಗಾರರನ್ನು ಆಯ್ಕೆ ಮಾಡಲಾಗುತ್ತದೆ.

ಪ್ರವಾಸೋದ್ಯಮ

ಕರಾವಳಿಯಲ್ಲಿ ಆಮೆ ವೀಕ್ಷಣಾ ಅಭಿವೃದ್ಧಿ

ಆಮೆಗಳ ವೀಕ್ಷಣಾ ಹಾದಿ ಯೋಜನೆಯಡಿ ಒಡಿಶಾ ಮತ್ತು ಕೇರಳದ ಜತೆಗೆ ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಆಮೆಗಳ ಸಂತಾನೋತ್ಪತ್ತಿ ತಾಣಗಳಲ್ಲಿ ಆಮೆ ವೀಕ್ಷಣಾ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲಾಗುವುದು ಎಂದು ಹಣಕಾಸು ಸಚಿವರು ಹೇಳಿದ್ದಾರೆ. ಪರಿಸರ ಸ್ನೇಹಿ ಚಾರಣ ಮತ್ತು ಹೈಕಿಂಗ್‌ಗಾಗಿ ಪಶ್ಚಿಮ ಘಟ್ಟಗಳಲ್ಲಿ ವಿಶೇಷ ಟ್ರೇಲ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದೂ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಇದರಿಂದ ರಾಜ್ಯಕ್ಕೆ ಅನುಕೂಲವಾಗುವ ನಿರೀಕ್ಷೆ ಇದೆ. ಕರಾವಳಿ ಭಾಗದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಆಕರ್ಷಿಸಲು ಸಾಧ್ಯವಾಗಲಿದೆ.

ಬಂದರು

ಚಬಹಾರ್ ಬಂದರಿಗೆ ಹಣ ಮೀಸಲಿಟ್ಟಿಲ್ಲ

ಇರಾನ್‌ನ ಚಬಹಾರ್ ಬಂದರು ನಿರ್ಮಾಣಕ್ಕೆ ಬಜೆಟ್‌ನಲ್ಲಿ ಯಾವುದೇ ಹಣವನ್ನು ಮೀಸಲಿಟ್ಟಿಲ್ಲ. ಇರಾನ್‌ನ ಮೇಲೆ ಅಮೆರಿಕದ ಹೊಸ ನಿರ್ಬಂಧಗಳ ಹಿನ್ನೆಲೆಯಲ್ಲಿ ಸರಕಾರ ಈ ನಿರ್ಧಾರ ಕೈಗೊಂಡಿದೆ. ಕಳೆದ ಕೆಲವು ವರ್ಷಗಳಲ್ಲಿ ಇರಾನ್‌ನ ದಕ್ಷಿಣ ಕರಾವಳಿಯಲ್ಲಿರುವ ಸಿಸ್ತಾನ್-ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಮೆಗಾ ಸಂಪರ್ಕ ಯೋಜನೆಗೆ ವಾರ್ಷಿಕ 100 ಕೋಟಿ ರು. ಮೀಸಲಿಡಲಾಗಿತ್ತು. ಚಬಹಾರ್ ಬಂದರಿನ ಅಭಿವೃದ್ಧಿಯಲ್ಲಿ ಭಾರತ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ. ಭಾರತವು 2024-25ರಲ್ಲಿ ಈ ಯೋಜನೆಗೆ 400 ಕೋಟಿ ರು. ಮೀಸಲಿಟ್ಟಿತ್ತು. ಬಳಿಕ 2025-26ರ ಬಜೆಟ್ ನಲ್ಲಿ ಅಂದಾಜು 100 ಕೋಟಿ, ತದನಂತರ ಅದನ್ನು 400 ಕೋಟಿಗೆ ಹೆಚ್ಚಿಸಿತ್ತು. ಆದರೆ 2026-27 ರಲ್ಲಿ ಯಾವುದೇ ಹಣವನ್ನು ಮೀಸಲಿಟ್ಟಿಲ್ಲ.

X ರವೀಂದ್ರನ್
ಡಿಎಂಕೆ ವಕ್ತಾರ

ಎಂಎಸ್‌ಎಂಇ ಸೇರಿ ಯಾವುದೇ ವಲಯಕ್ಕೆ ಹೇಳಿಕೊಳ್ಳುವಂಥ ಏನೂ ಕೊಡುಗೆ ಸಿಕ್ಕಿಲ್ಲ. ಇದಕ್ಕೊಂದು ಗುರಿಯಾಗಲೀ, ಉದ್ದೇಶವಾಗಲೀ ಇಲ್ಲ. ಈ ದೇಶದ ಜನರ ಮನದಲ್ಲಿ ಒಂದು ತೆರನಾದ ಕಳವಳವನ್ನು ಹುಟ್ಟುಹಾಕಿರುವ ಬಜೆಟ್ ಇದು.

X ಅಮರ್ ಸಿಂಗ್
ಕಾಂಗ್ರೆಸ್ ಸಂಸದ

ಬಿಜೆಪಿ ನೇತೃತ್ವದ ಈ ಕೇಂದ್ರ ಸರಕಾರವು ಈಗಾಗಲೇ ಪಂಜಾಬ್ ರಾಜ್ಯದ ವಿಷಯದಲ್ಲಿ ಪಕ್ಷಪಾತ ಮಾಡಿದೆ. ಇವರೆಲ್ಲಾ ತಮಗಿರುವ ಬಹುಮತವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂಬುದು ಸ್ಪಷ್ಟಗೋಚರವಾಗಿ ಕಾಣುತ್ತಿದೆ.

ದೇಶದ ಜಿಡಿಪಿ ಹಾಗೂ ಕೇಂದ್ರ ತೆರಿಗೆ ಆದಾಯಕ್ಕೆ ಮಹತ್ತರ ಕೊಡುಗೆ ನೀಡುವ ಕರ್ನಾಟಕದಂತಹ ರಾಜ್ಯಕ್ಕೆ ಅಗತ್ಯವಾದ ಅನುದಾನ ಮತ್ತು ವಿಶೇಷ ಆದ್ಯತೆ ನೀಡದೆ ಕೇಂದ್ರ ಸರಕಾರ ನಿರ್ಲಕ್ಷ್ಯ ತೋರಿದೆ. ಹೆಚ್ಚಿನ ತೆರಿಗೆ ಕೊಡುಗೆ ನೀಡುವ ರಾಜ್ಯಗಳ ಅಗತ್ಯಗಳಿಗೆ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ.

ಡಾ. ಪ್ರಭಾ ಮಲ್ಲಿಕಾರ್ಜುನ್
ಸಂಸದೆ



ಕೇಂದ್ರ ಬಜೆಟ್ ಕೇವಲ ಆರ್ಥಿಕ ಪತ್ರವಲ್ಲ, ಅದು 'ವಿಕಸಿತ ಭಾರತ-2047'ರ ಗುರಿ ತಲುಪುವ ನಿಟ್ಟಿನಲ್ಲಿ ದೇಶದ ಅಭಿವೃದ್ಧಿಯ ಪಯಣಕ್ಕೆ ವೇಗ ನೀಡಿದ ಬಜೆಟ್. ಇದು ದೇಶದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಪ್ರಧಾನಿ ಮೋದಿ ಸರಕಾರದ ದೂರದರ್ಶಿತ್ವದ ದಿಕ್ಸೂಚಿ. ಯುವಶಕ್ತಿ, ಮೂಲಸೌಕರ್ಯ ಮತ್ತು ಕೃಷಿಗೆ ಆದ್ಯತೆ ನೀಡಲಾಗಿದೆ.

ಬಿ.ವೈ.ರಾಘವೇಂದ್ರ
ಸಂಸದ



ಈ ಬಜೆಟ್ ದೇಶದ ಆರ್ಥಿಕತೆಗೆ ರಜೆ ನೀಡುವಂತಿದೆ. ಸಂಪೂರ್ಣ ನಿರಾಶಾದಾಯಕ. ಗಣನೀಯ ಸುಧಾರಣೆಯಾಗಿಲ್ಲ. ಸರಕಾರಿ ವೆಚ್ಚಗಳ ಮೇಲೆ ನಿಯಂತ್ರಣವಿಲ್ಲ, ರೈತರ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನೀಡುವಲ್ಲಿ ಈ ಬಾರಿಯೂ ವಿಫಲವಾಗಿದೆ. 2 ಕೋಟಿ ಉದ್ಯೋಗದ ಭರವಸೆ ನೀಡಿದ್ದ ಕೇಂದ್ರ ನುಡಿದಂತೆ ನಡೆಯುವಲ್ಲಿ ವಿಫಲವಾಗಿದೆ.

ಈಶ್ವರ್ ಖಂಡ್ರೆ
ಅರಣ್ಯ ಸಚಿವ

ನಿರ್ಮಲಾ ಸೀತಾರಾಮನ್ ಅವರದ್ದು ಯುವಶಕ್ತಿ ಚಾಲಿತ ಬಜೆಟ್ ಆಗಿದೆ. ಉತ್ಪಾದನಾ ವಲಯಕ್ಕೆ ಆದ್ಯತೆ, ಕ್ಯಾನ್ಸರ್ ಔಷಧ ಮೇಲಿನ ವಿನಾಯಿತಿ ಸ್ವಾಗತಾರ್ಹ. 16ನೇ ಹಣಕಾಸು ಆಯೋಗದ ಶಿಫಾರಸಿನಲ್ಲಿ ರಾಜ್ಯಗಳಿಗೆ ಶೇ.41ರಷ್ಟು ತೆರಿಗೆ ಹಂಚಿಕೆ ಮಾಡಲಾಗುತ್ತಿರುವುದು ಗಮನಾರ್ಹವಾಗಿದೆ. ಕೈಗಾರಿಕಾ ವಲಯಕ್ಕೂ ವಿಶೇಷ ಒತ್ತು ನೀಡಲಾಗಿದೆ.

ಮುರುಗೇಶ್ ನಿರಾಣಿ
ಮಾಜಿ ಸಚಿವ

ಕೇಂದ್ರ ಬಜೆಟ್ 2026



ಟಿಸಿಎಸ್ ಶೇ.2ಕ್ಕೆ ಇಳಿಕೆ

ವಿದೇಶದಲ್ಲಿ ಶಿಕ್ಷಣ ಪಡೆಯುತ್ತಿರುವವರಿಗೆ ಉದಾರೀಕೃತ ಹಣ ರವಾನೆ ಯೋಜನೆ (ಎಲ್ಆರ್ಎಸ್)ಯಡಿ ವಿಧಿಸಲಾಗುತ್ತಿರುವ ಟಿಸಿಎಸ್ ಶೇ.5ರಿಂದ ಶೇ. 2ಕ್ಕೆ ಇಳಿಕೆ

ಹಡಗು ದುರಸ್ತಿ ಕೇಂದ್ರ

ಒಳನಾಡು ಜಲಸಾರಿಗೆಗೆ ಉತ್ತೇಜನ ನೀಡುವ ಭಾಗವಾಗಿ ವಾರಾಣಸಿ ಮತ್ತು ಪಟ್ನಾದಲ್ಲಿ ಹಡಗು ದುರಸ್ತಿ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ.

10,000 ಕೋಟಿ ರು.

ಮುಂದಿನ ಪೀಳಿಗೆಯ ಕ್ರೀಡಾಪಟುಗಳನ್ನು ರೂಪಿಸಲು ಭವಿಷ್ಯದ ಚಾಂಪಿಯನ್ (Future Champions) ಯೋಜನೆಗೆ 10,000 ಕೋಟಿ ರುಪಾಯಿಗಳ ಬೃಹತ್ ಅನುದಾನವನ್ನು ಪ್ರಕಟಿಸಿದೆ.

ರಾಷ್ಟ್ರೀಯ ಆತಿಥ್ಯ ಸಂಸ್ಥೆ

ಪ್ರವಾಸೋದ್ಯಮದಲ್ಲಿ ಅವಕಾಶಕ್ಕೆ ರಾಷ್ಟ್ರೀಯ ಆತಿಥ್ಯ ಸಂಸ್ಥೆ (National Institute of Hospital-ity) ಸ್ಥಾಪಿಸಲು ಕೇಂದ್ರ ತೀರ್ಮಾನ

ಆರೆಂಜ್ ಎಕಾನಮಿ

ಸಂಸ್ಕೃತಿ, ಮಾಧ್ಯಮ ಮತ್ತು ಮನರಂಜನಾ ಉದ್ಯಮಗಳನ್ನು ಒಳಗೊಂಡ ಆರೆಂಜ್ ಎಕಾನಮಿಗೆ ಹೆಚ್ಚಿನ ಬಲ ನೀಡಲು ನಿರ್ಧಾರ

ಚುನಾವಣೆ ನಡೆಯಲಿರುವ 5 ರಾಜ್ಯಗಳಿಗೆ ಬಂಪರ್ ಕೊಡುಗೆ

ಸದ್ಯದಲ್ಲೆ ವಿಧಾನಸಭೆ ಚುನಾವಣೆ ನಡೆಯಲಿರುವ 5 ರಾಜ್ಯಗಳಿಗೆ ಕೇಂದ್ರ ಸರಕಾರ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಬಂಪರ್ ಕೊಡುಗೆ ನೀಡುವ ಮೂಲಕ ಮತದಾರರ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದೆ. ಸಾಮಾನ್ಯವಾಗಿ ಆಯಾ ವರ್ಷಗಳಲ್ಲಿ ಚುನಾವಣೆ ನಡೆಯುವ ರಾಜ್ಯಗಳನ್ನು ಗುರಿಯಾಗಿಟ್ಟುಕೊಂಡು ಒಂದಿಷ್ಟು ಹೊಸ ಯೋಜನೆಗಳನ್ನು ಘೋಷಣೆ ಮಾಡುವ ಮೂಲಕ ಮತದಾರರನ್ನು ಸೆಳೆಯುವುದು ವಾಡಿಕೆಯಾಗಿದೆ. ಅದರಂತೆ ಸಂಸತ್‌ನಲ್ಲಿ 2026-27ನೇ ಸಾಲಿನ ಬಜೆಟ್ ಮಂಡಿಸಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಇದೇ ಮಾದರಿಯನ್ನು ಈ ಬಾರಿಯೂ ಅನುಸರಿಸಲಾಗಿದೆ. ಕೇಂದ್ರ ಸರಕಾರವು ವಿವಿಧ ರಾಜ್ಯಗಳಿಗೆ 2026ನೇ ಸಾಲಿನ ಬಜೆಟ್‌ನಲ್ಲಿ ಬಂಪರ್ ಘೋಷಣೆ ಮಾಡಿದೆ.

4 ಪ್ರಮುಖ ರಾಜ್ಯಗಳಿಗೆ ಅರ್ಥ್ ಮಿನರಲ್ ಕಾರಿಡಾರ್ ಘೋಷಣೆ ಮಾಡಲಾಗಿದೆ. ಕೇರಳ, ಒಡಿಶಾ, ತಮಿಳುನಾಡು ಹಾಗೂ ಆಂಧ್ರಪ್ರದೇಶ ರಾಜ್ಯಗಳಿಗೆ ಈ ಬಾರಿ ಬಂಪರ್ ಕೊಡುಗೆ ಬಜೆಟ್‌ನಲ್ಲಿ ಸಿಕ್ಕಂತಾಗಿದೆ. ಇದರಲ್ಲಿ ಗಮನಿಸಬೇಕಾದ ಅಂಶವೆಂದರೆ, 2026ನೇ ಸಾಲಿನಲ್ಲಿ ತಮಿಳುನಾಡು ಹಾಗೂ ಕೇರಳದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ. ಆಂಧ್ರಪ್ರದೇಶದಲ್ಲಿ ಮಿತ್ರ ಪಕ್ಷ ತೆಲುಗು ದೇಶಂ ಪಾರ್ಟಿ ಇದ್ದರೆ, ಒಡಿಶಾದಲ್ಲಿ ಈಚೆಗೆ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಬಜೆಟ್‌ನಲ್ಲಿ ಬಂಪರ್ ಕೊಡುಗೆ ಕೊಡಲಾಗಿದೆ.

2026ನೇ ಸಾಲಿನಲ್ಲಿ ಒಂದು ಕೇಂದ್ರಾಡಳಿತ ಪ್ರದೇಶವೂ ಸೇರಿದಂತೆ 4 ರಾಜ್ಯಗಳ ವಿಧಾನಸಭೆ ಚುನಾವಣೆ ನಡೆಯಲಿದೆ. ಈ ಬಾರಿ ವಿಧಾನಸಭೆ ಚುನಾವಣೆ ನಡೆಯಲಿರುವ ಪ್ರಮುಖ ರಾಜ್ಯಗಳಲ್ಲಿ ಬಿಜೆಪಿಯು ಒಂದೇ ಒಂದು ಬಾರಿಯೂ ಅಧಿಕಾರಕ್ಕೆ ಬಂದಿಲ್ಲ. ಈ ಕಾರಣದಿಂದ ಈ ಬಾರಿಯ ಕೇಂದ್ರ ಬಜೆಟ್ ಮಹತ್ವ ಪಡೆದುಕೊಂಡಿತ್ತು. 2026ನೇ ಸಾಲಿನಲ್ಲಿ ಅಸ್ಸಾಂ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಹಾಗೂ ಪುದುಚೇರಿಯ ವಿಧಾನಸಭೆ ಚುನಾವಣೆ ನಡೆಯಲಿದೆ. ಹೀಗಾಗಿ, ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಈ ರಾಜ್ಯಗಳಿಗೆ ಬಂಪರ್ ಕೊಡುಗೆ ಸಿಗಲಿದೆ. ಕಳೆದ ಬಾರಿ ಕೇಂದ್ರ ಸರಕಾರವು ಬಿಹಾರ ಹಾಗೂ ಆಂಧ್ರಪ್ರದೇಶ ರಾಜ್ಯಗಳಿಗೆ ಬಂಪರ್ ಕೊಡುಗೆಯನ್ನು ನೀಡಿತ್ತು. ಈ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಹಾಗೂ ಮೈತ್ರಿ ಪಕ್ಷಗಳನ್ನು ಮೆಚ್ಚಿಸುವ ತಂತ್ರವನ್ನು ಕೇಂದ್ರ ಸರಕಾರವು ಕಳೆದ ಬಾರಿ ಅನುಸರಿಸಿತ್ತು.

ಬೆಂಗಳೂರು ಸೇರಿ 7 ನಗರ ಆರ್ಥಿಕ ವಲಯ ಅಭಿವೃದ್ಧಿ

ನಗರಾಭಿವೃದ್ಧಿಯ ವೇಗವನ್ನು ಹೆಚ್ಚಿಸಲು ಕೇಂದ್ರ ಸರಕಾರ, ಬೆಂಗಳೂರು, ಸೂರತ್, ವಾರಾಣಸಿ ಸೇರಿ 7 ನಗರ ಆರ್ಥಿಕ ವಲಯಗಳನ್ನು (ಸಿಇಆರ್ಎಸ್) ಸಾರ್ವಜನಿಕ-ಖಾಸಗಿ ಪಾಲುದಾರಿಕೆಯಡಿ (ಪಿಪಿಪಿ) ಅಭಿವೃದ್ಧಿಪಡಿಸಲಿದೆ. ಇದಕ್ಕಾಗಿ ಮುಂದಿನ 5 ವರ್ಷಗಳ ಅವಧಿಗೆ ಪ್ರತಿ ನಗರ ಪ್ರದೇಶಕ್ಕೆ ₹5 ಸಾವಿರ ಕೋಟಿಯಂತೆ ಅನುದಾನ ಮೀಸಲಿಡಲಾಗಿದೆ. ನಗರಗಳು ದೇಶದ ಆರ್ಥಿಕ ಪ್ರಗತಿಯ ಚಾಲಕ ಶಕ್ತಿಗಳಾಗಿದ್ದು, ಆವಿಷ್ಕಾರ ಮತ್ತು ಅವಕಾಶಗಳ ಹೆಬ್ಬಾಗಿಲಾಗಿವೆ. 5 ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಎರಡು ಮತ್ತು ಮೂರನೇ ಹಂತದ ನಗರಗಳು, ತೀರ್ಥಕ್ಷೇತ್ರಗಳಲ್ಲಿ ಅತ್ಯಾಧುನಿಕ ಮೂಲಸೌಕರ್ಯ ಅಭಿವೃದ್ಧಿಪಡಿಸುವುದೂ ಈ ಯೋಜನೆಯಲ್ಲಿ ಸೇರಿದೆ.

ವಲಯವಾರು ವೆಚ್ಚ

ಕೋಟಿ ರು.ಗಳಲ್ಲಿ

ವಲಯ	ವೆಚ್ಚ
ರಕ್ಷಣೆ	7,84,000
ಸಾರಿಗೆ	5,98,520
ಗ್ರಾಮೀಣಾಭಿವೃದ್ಧಿ	2,73,108
ಗೃಹ	2,55,234
ಕೃಷಿ	1,62,671
ಶಿಕ್ಷಣ	1,39,289
ಇಂಧನ	1,09,029
ಆರೋಗ್ಯ	1,04,599
ನಗರಾಭಿವೃದ್ಧಿ	85,522
ಐಟಿ ಮತ್ತು ಟೆಲಿಕಾಂ	74,560
ವಾಣಿಜ್ಯ, ಕೈಗಾರಿಕೆ	70,296
ಸಮಾಜ ಕಲ್ಯಾಣ	62,362
ವೈಜ್ಞಾನಿಕ ಇಲಾಖೆಗಳು	55,756
ತೆರಿಗೆ ಆಡಳಿತ	45,500
ವಿದೇಶಾಂಗ ವ್ಯವಹಾರ	22,119
ಹಣಕಾಸು	20,649
ಈಶಾನ್ಯ ಅಭಿವೃದ್ಧಿ	6,812

ದೇಶದಲ್ಲಿ 3 ಹೊಸ ಆಯುರ್ವೇದ ಏಮ್ಸ್ ಸ್ಥಾಪನೆ ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳ ಸ್ಥಾಪನೆ

ಆಯುರ್ವೇದದಿಂದ ಆಯುಷ್ಯಾರೋಗ್ಯ

3 ಹೊಸ ಆಯುರ್ವೇದ ಏಮ್ಸ್‌ಗಳ ಸ್ಥಾಪನ | **5** ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳ ಸ್ಥಾಪನೆ | **17** ಕ್ಯಾನ್ಸರ್ ಸಂಬಂಧಿತ ಔಷಧಿಗಳಿಗೆ ವಿನಾಯಿತಿ

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಪ್ರಮುಖ ಘೋಷಣೆ ಮಾಡಿದ್ದಾರೆ. ದೇಶದಲ್ಲಿ ಮೂರು ಹೊಸ ಆಯುರ್ವೇದ ಏಮ್ಸ್‌ಗಳನ್ನು ತೆರೆಯಲಾಗುವುದು ಮತ್ತು ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳನ್ನು ಸಹ ಸ್ಥಾಪಿಸಲಾಗುವುದು ಎಂದು ಘೋಷಿಸಿದರು.

2025-26ರ ಕೇಂದ್ರ ಬಜೆಟ್ ಅನ್ನು ಲೋಕಸಭೆಯಲ್ಲಿ ಮಂಡಿಸುತ್ತಾ, ಕೋವಿಡ್-19 ಸಾಂಕ್ರಾಮಿಕ ರೋಗದ ನಂತರ ಆಯುರ್ವೇದವು ಜಾಗತಿಕ ಸ್ವೀಕಾರ ಮತ್ತು ಮನ್ನಣೆಯನ್ನು ಗಳಿಸಿದೆ. ಗಿಡಮೂಲಿಕೆಗಳನ್ನು ಬೆಳೆಯುವ ರೈತರು ಮತ್ತು ಉತ್ಪನ್ನಗಳನ್ನು ಸಂಸ್ಕರಿಸುವವರಿಗೆ ಗುಣಮಟ್ಟದ ಆಯುರ್ವೇದ ಉತ್ಪನ್ನಗಳು ಸಹಾಯ ಮಾಡುತ್ತವೆ. ದೇಶವಾಸಿಗಳಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಲು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುವುದು ಮತ್ತು ವೈದ್ಯಕೀಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿದ್ದಾರೆ. ಪ್ರಧಾನ ಮಂತ್ರಿಗಳು ವಿಶ್ವಸಂಸ್ಥೆಗೆ ಈಗಾಗಲೇ ವಿಶ್ವದ ಹಲವಾರು ಭಾಗಗಳಲ್ಲಿ ಗೌರವಿಸಲ್ಪಟ್ಟಿರುವ ಪ್ರಾಚೀನ ಭಾರತೀಯ ಯೋಗವನ್ನು ವಿಶ್ವಸಂಸ್ಥೆಗೆ ಕೊಂಡೊಯ್ದಾಗ ಸಾಮೂಹಿಕ ಜಾಗತಿಕ ಮನ್ನಣೆ ನೀಡಲಾಯಿತು. ಕೋವಿಡ್ ನಂತರ, ಆಯುರ್ವೇದವು ಇದೇ ರೀತಿಯ ಜಾಗತಿಕ ಮನ್ನಣೆ ಗಳಿಸಿತು ಎಂದು ಹೇಳಿದರು.

ಹೆಚ್ಚುತ್ತಿರುವ ಜಾಗತಿಕ ಬೇಡಿಕೆಯನ್ನು ಪೂರೈಸಲು, ಸೀತಾರಾಮನ್ ಮೂರು ಹೊಸ ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಲು, ಆಯುಷ್ ಔಷಧಾಲಯಗಳು ಮತ್ತು ಔಷಧ ಪರೀಕ್ಷಾ ಪ್ರಯೋಗಾಲಯಗಳನ್ನು ಪ್ರಮಾಣೀಕರಣ ಪರಿಸರ ವ್ಯವಸ್ಥೆಗಾಗಿ ಉನ್ನತ ಗುಣಮಟ್ಟಕ್ಕೆ ಅಪ್‌ಗ್ರೇಡ್ ಮಾಡಲು ಮತ್ತು ಹೆಚ್ಚು ನುರಿತ ಸಿಬ್ಬಂದಿ ನೇಮಕ ಮಾಡಲಾಗುವುದು ಎಂದಿದ್ದಾರೆ. ಇನ್ನೂ ಕ್ಯಾನ್ಸರ್ ಸಂಬಂಧಿತ 17 ಔಷಧಿಗಳಿಗೆ ವಿನಾಯಿತಿ ನೀಡುವುದಾಗಿ ಹಣಕಾಸು ಸಚಿವರು ಘೋಷಿಸಿದರು ಮತ್ತು ಇತರ ಏಳು ಅಪರೂಪದ ಕಾಯಿಲೆಗಳ ಔಷಧಿಗಳನ್ನು ನಿರ್ದಿಷ್ಟ ವೈದ್ಯಕೀಯ ಉದ್ದೇಶಗಳಿಗಾಗಿ ಆಮದಿನಿಂದಲೂ ವಿನಾಯಿತಿ ನೀಡಲಾಗುವುದು ಎಂದು ಹೇಳಿದರು. ಜಾಗತಿಕ ಸಾಂಪ್ರದಾಯಿಕ ಆರೋಗ್ಯ ವ್ಯವಸ್ಥೆಗಳಲ್ಲಿ ಭಾರತದ ಪಾತ್ರವನ್ನು ಬಲಪಡಿಸಲು ಗುಜರಾತ್ನ ಜಾಮ್ನಗರ ದಲ್ಲಿರುವ WHO ಜಾಗತಿಕ ಸಾಂಪ್ರದಾಯಿಕ ಔಷಧ ಕೇಂದ್ರ ವನ್ನು ಮೇಲ್ದರ್ಜೆಗೇರಿಸಲಾಗುವುದು.

ಉತ್ತರ ಭಾರತದಲ್ಲಿ ಮಾನಸಿಕ ಆರೋಗ್ಯ ರಕ್ಷಣೆಗಾಗಿ ಯಾವುದೇ ರಾಷ್ಟ್ರೀಯ ಸಂಸ್ಥೆಗಳಿಲ್ಲ. ಆದ್ದರಿಂದ ನಾವು ನಿಮ್ಹಾನ್ಸ್-2 ಅನ್ನು ಸ್ಥಾಪಿಸುತ್ತೇವೆ. ರಾಂಚಿ ಮತ್ತು ತೇಜ್ಪುರದಲ್ಲಿ ರಾಷ್ಟ್ರೀಯ ಮಾನಸಿಕ ಎಂಎನ್‌ಸಿ ಸಂಸ್ಥೆಗಳನ್ನು ಪ್ರಾದೇಶಿಕ ಉನ್ನತ ಸಂಸ್ಥೆಗಳಾಗಿ ಮೇಲ್ದರ್ಜೆಗೇರಿಸುವುದಾಗಿ ಹಣಕಾಸು ಸಚಿವರು ಹೇಳಿದರು. ಜಿಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಮತ್ತು ಆಘಾತ ಆರೈಕೆ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ತುರ್ತು ಪರಿಸ್ಥಿತಿಗಳಲ್ಲಿ ವಿಶೇಷವಾಗಿ ಬಡವರನ್ನು ಮತ್ತು ಅನಿರೀಕ್ಷಿತ ವೆಚ್ಚಗಳಿಗೆ ಗುರಿಯಾಗಿಸುವವರಿಗೆ ನೆರವು ನೀಡುವುದಾಗಿ ತಿಳಿಸಿದ್ದಾರೆ.

ಬಯೋಫಾರ್ಮಾದಲ್ಲಿ ₹10,000 ಕೋಟಿ ಹೂಡಿಕೆ: ಮುಂದಿನ 5 ವರ್ಷಗಳಲ್ಲಿ ಬಯೋಫಾರ್ಮಾ ವಲಯ ದಲ್ಲಿ ₹10,000 ಕೋಟಿ ಹೂಡಿಕೆಯನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದ್ದು, ಇದು ದೇಶದ ಔಷಧ ಉದ್ಯಮಕ್ಕೆ ಉತ್ತೇಜನ ನೀಡ ಲಿದೆ. ಬಯೋಫಾರ್ಮಾಸ್ಯುಟಿಕಲ್ಸ್ ಅಥವಾ ಜೈವಿಕ ವಸ್ತು ಗಳು, ರಾಸಾಯನಿಕ ಸಂಶ್ಲೇಷಣೆಯ ಮೂಲಕ ತಯಾರಿಕೆಗೆ ಬದಲಾಗಿ ಜೀವಂತ ಜೀವಿಗಳು, ಜೀವಕೋಶಗಳು ಅಥವಾ ಅಂಗಾಂಶಗಳಿಂದ ತಯಾರಿಸಲಾದ ಸಂಕೀರ್ಣ ಔಷಧಿಗಳಾಗಿವೆ.

ಜಿಲ್ಲಾ ಆಸ್ಪತ್ರೆಗಳಲ್ಲಿ ಕ್ಯಾನ್ಸರ್ ಡೇ ಕೇರ್ ಸೆಂಟರ್‌ಗಳು: ಕ್ಯಾನ್ಸರ್ ರೋಗಿಗಳು ಚಿಕಿತ್ಸೆಗಾಗಿ ದೂರದ ನಗರಗಳಿಗೆ ಅಲೆಯುವುದನ್ನು ತಪ್ಪಿಸಲು ಸರಕಾರವು ಮುಂದಿನ 3 ವರ್ಷಗಳಲ್ಲಿ ದೇಶದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ 'ಡೇ ಕೇರ್ ಕ್ಯಾನ್ಸರ್ ಸೆಂಟರ್'ಗಳನ್ನು ಸ್ಥಾಪಿಸಲಿದೆ.

ಕೆಲವು ಔಷಧಿಗಳ ಮೇಲಿನ ಕಸ್ಟಮ್ಸ್ ಸುಂಕ ರದ್ದು

ಕ್ಯಾನ್ಸರ್ ಔಷಧಿಗಳು ಮತ್ತು ಅಪರೂಪದ ಕಾಯಿಲೆಗಳಿಗೆ ಬಳಸುವ ಔಷಧಿಗಳ ಮೇಲೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಮುಖ ಕಸ್ಟಮ್ಸ್ ಸುಂಕ ವಿನಾಯಿತಿ ಘೋಷಿಸಿದ್ದಾರೆ. ಕ್ಯಾನ್ಸರ್ ರೋಗಿಗಳು ಕೇವಲ ಕೀಮೋಥೆರಪಿಯಿಂದ ಮಾತ್ರ ಗುಣಮುಖರಾಗುವುದಿಲ್ಲ. ಅದರ ಬಳಿಕ ಕೆಲವು ನಿರ್ದಿಷ್ಟ ಚಿಕಿತ್ಸೆ, ದೀರ್ಘಕಾಲೀನ ಆರೈಕೆಗಾಗಿ ವಿಶೇಷ ಔಷಧಿಗಳು, ಪೌಷ್ಟಿಕಾಂಶ ಪೂರಕಗಳು ಬೇಕು. ಇವುಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತದೆ. ಆ ಸಾಲಿನ 17 ಔಷಧಿಗಳ ಮೇಲಿನ ಕಸ್ಟಮ್ ಸುಂಕವನ್ನು ನಿರ್ಮಲಾ ಸೀತಾರಾಮನ್ ತೆಗೆದು ಹಾಕಿದ್ದಾರೆ. ಕ್ಯಾನ್ಸರ್ ಚಿಕಿತ್ಸೆಯು ದುಬಾರಿಯಾಗಿದ್ದು, ಅದರ ಜತೆಗೆ ಔಷಧಿ ಮೇಲಿನ ಕಸ್ಟಮ್ ಸುಂಕ ರೋಗಿಗಳಿಗೆ ಹೊರೆಯಾಗಿತ್ತು. ಈ ವಿನಾಯಿತಿ ಮೂಲಕ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವವರಿಗೆ ಅನುಕೂಲವಾಗಲಿದೆ. ಸುಂಕ ರಹಿತ ಔಷಧಿಗಳ ಪಟ್ಟಿಗೆ ಇನ್ನೂ ಏಳು ಅಪರೂಪದ ಕಾಯಿಲೆಗಳಿಗೆ ಬಳಸುವ ಔಷಧಿಗಳನ್ನು ಸೇರಿಸಲಾಗಿದೆ. ವಿದೇಶಗಳಿಂದ ಆಮದು ಮಾಡಿಕೊಳ್ಳುವ ವಿಶೇಷ ಥೆರಪಿಗಳು, ಔಷಧಿಗಳಿಗೆ ಈ ವಿನಾಯಿತಿಯಿಂದ ಅನುಕೂಲವಾಗಲಿದೆ.

ವಿಶ್ಲೇಷಣೆ

ರಂಗಸ್ವಾಮಿ ಮೂಕನಹಳ್ಳಿ
ಆರ್ಥಿಕ ತಜ್ಞರು

ಫಂಡ್ ಅಲೋಕೇಷನ್ ಬಜೆಟ್ ಮಂಡನೆ

ಈ ಬಾರಿಯ ಬಜೆಟ್‌ನ್ನು ಬಹಳಷ್ಟು ಜನ ನೀರಸ ಎಂದು ಬಣ್ಣಿಸಬಹುದು. ಏಕೆಂದರೆ ಕೇಂದ್ರ ಸರಕಾರ ಈ ವರ್ಷದ ಬಜೆಟ್‌ನಲ್ಲಿ ಯಾವುದೇ ಹೊಸ ಅಥವಾ ವಿಶೇಷವಾದ ಅಂಶಗಳನ್ನು ಮಂಡಿಸಿಲ್ಲ. ಈ ಬಜೆಟ್ ಬಹಳ ನಿರೀಕ್ಷಿತವಾಗಿತ್ತು. ಆರ್ಥಿಕತೆಯನ್ನು ಸದಾ ಗಮನಿಸುವ ಜನರಿಗೆ ಈ ಬಾರಿಯ ಬಜೆಟ್‌ನಲ್ಲಿ ವಿಶೇಷವೇನೂ ಇರುವುದಿಲ್ಲ ಎನ್ನುವುದು ತಿಳಿದಿತ್ತು. ಏಕೆಂದರೆ ಮಧ್ಯಮವರ್ಗಕ್ಕೆ ಬೇಕಾದ ಆದಾಯ ತೆರಿಗೆಯ ಅಂಶವನ್ನು ಕಳೆದ ವರ್ಷದ ಬಜೆಟ್‌ನಲ್ಲಿ ನೀಡಿ ಆಗಿತ್ತು. ಡಾಲರ್ ಆತಂರಿಕ ಮೌಲ್ಯ ಸರಿಸುಮಾರು ಹತ್ತು ಪ್ರತಿಶತ ಕುಸಿತವನ್ನು ಕಂಡಿದೆ. ಇದರರ್ಥ ಭಾರತೀಯ ರುಪಾಯಿ ಬಲಿಷ್ಠವಾಗಬೇಕಿತ್ತು. ಆದರೆ ರುಪಾಯಿ ಕೂಡ ಒಂದೇ ಸಮನೆ ಕುಸಿತವನ್ನು ಕಾಣುತ್ತಿದೆ. ಇದರ ಕಾರಣ ಆಮದು ಮತ್ತು ರಫ್ತು ವ್ಯಾಪಾರದಲ್ಲಿ ಬಹಳಷ್ಟು ಏರಿಳಿತಗಳಿವೆ. ಈ ಅಂಶವನ್ನು ಗಮನಿಸದವರಿಗೆ ಈ ಬಾರಿಯ ಬಜೆಟ್‌ನಲ್ಲಿ ಕಾರ್ಪೊರೇಟ್ ಹೌಸುಗಳಿಗೆ ಹೇಳಿಕೊಳ್ಳುವ ಬದಲಾವಣೆ ತರುವ ಯಾವ ಅಂಶವೂ ಇರುವುದಿಲ್ಲ. ಯಥಾಸ್ಥಿತಿ ಕಾಯ್ದುಕೊಳ್ಳುವುದು ಮಾತ್ರ ಉತ್ತಮ ಮಂತ್ರವಾಗಿರುತ್ತದೆ ಎನ್ನುವುದು ತಿಳಿದ ವಿಷಯವಾಗಿತ್ತು.

ಬಯೋ ಫಾರ್ಮ ವಲಯದಲ್ಲಿ ಮಾತ್ರ ಒಂದಷ್ಟು ಸಂಚಲನ ಉಂಟಾಗಬಹುದು, ಉಳಿದಂತೆ ಇದೊಂದು ಫಂಡ್ ಅಲೋಕೇಷನ್ ಬಜೆಟ್ ಆಗಿದೆ. ಅಂದರೆ ಪ್ರತಿವರ್ಷವೂ ಹಣವನ್ನು ವಲಯಗಳಿಗೆ ಇಷ್ಟಿಷ್ಟು ಎಂದು ಹಂಚುವುದು ವಾಡಿಕೆ. ಅದರ ಜತೆಗೆ ಹೊಸ ಅಂಶಗಳ ಸೇರ್ಪಡೆ ಇದ್ದೇ ಇರುತ್ತದೆ.

ಈ ಬಾರಿ ಹಣವನ್ನು ವಲಯವಾರು ಹಂಚಿಕೆ ಮಾಡುವುದಷ್ಟೇ ಬಜೆಟ್ ಉದ್ದೇಶವಾಗಿತ್ತು. ರೈಲ್ವೆ ವಲಯದ ಬಗ್ಗೆ ಸಾಕಷ್ಟು ನಿರೀಕ್ಷೆಗಳು ಇದ್ದರೂ ಅವುಗಳ ಬಗ್ಗೆ ಕೂಡ ಯಾವುದೇ ಹೇಳಿಕೊಳ್ಳುವ ಮಹತ್ತರ ಯೋಜಗಳ ಘೋಷಣೆಯಾಗಿಲ್ಲ.

ಷೇರು ಮಾರುಕಟ್ಟೆ ತತ್ತರಗೊಳ್ಳಲು ಕಾರಣಗಳೇ ಬೇಕಿಲ್ಲ. ಕಳೆದ ಎರಡು ಮೂರು ದಿನದಿಂದ ಲೋಹಗಳ ಮೌಲ್ಯದಲ್ಲಿ ಭಾರಿ ಕುಸಿತ ಉಂಟಾದ ಕಾರಣ ಕುಸಿತ ಕಂಡಿದ್ದ ಮಾರುಕಟ್ಟೆ , ಇಂದು ಬಜೆಟ್ ಅವಧಿಯಲ್ಲಿ ಮತ್ತಷ್ಟು ಕುಸಿಯಿತು. ಯಾವ ವಲಯಕ್ಕೂ ಚೇತರಿಕೆ ನೀಡುವ ಸುದ್ದಿ ಇಲ್ಲದ್ದು ಒಂದು ಕಾರಣವಾದರೆ, ಜ್ವರ ಬಂದವರಿಗೆ ಬರೆ ಎಳೆದಂತೆ ಫ್ಯೂಚರ್ ಮತ್ತು ಆಪ್ಷನ್ ಟ್ರೇಡ್ ಮೇಲಿನ ಸೆಕ್ಯುರಿಟೀಸ್ ಟ್ರಾನ್ಸಾಕ್ಷನ್ ಟ್ಯಾಕ್ಸ್ (ಎಸ್‌ಟಿಟಿ) ಹೆಚ್ಚಳ ಮಾಡಿದ್ದು ಮಾರುಕಟ್ಟೆ ಕುಸಿಯಲು ಇನ್ನೊಂದು ಪ್ರಮುಖ ಕಾರಣವಾಯ್ತು.

ಫ್ಯೂಚರ್ ಮೇಲಿನ ಎಸ್‌ಟಿಟಿ .0.02 ಇದ್ದದ್ದು 0.05 ಪ್ರತಿಶತ ಏರಿಕೆ ಮಾಡಿದ್ದಾರೆ. ಸಂಖ್ಯೆಯ ದೃಷ್ಟಿಯಲ್ಲಿ ಇದು ಬಹಳ ಕಡಿಮೆ ಎನ್ನಿಸಬಹುದು. ಪರ್ಸಂಟೇಜ್ ಲೆಕ್ಕಾಚಾರದಲ್ಲಿ ಇದು ಬಹಳ ದೊಡ್ಡದು. ಎರಡೂವರೆ ಪಟ್ಟು ಪ್ರತಿಶತ ಏರಿಕೆಯಾಗಿದೆ. ಆಪ್ಷನ್ ಪ್ರೀಮಿಯಂ ಎಸ್‌ಟಿಟಿ 010 ಇಂದ 0.15 ಪ್ರತಿಶತವಾಗಿದೆ. ಆಪ್ಷನ್ ಎಕ್ಸರ್ಸೈಸ್ 0.125 ಇದ್ದದ್ದು 0.15 ಪ್ರತಿಶತಕ್ಕೆ ಏರಿಕೆ ಕಂಡಿದೆ. ಮಾರುಕಟ್ಟೆಯಲ್ಲಿ ನಡೆಯುವ ವಹಿವಾಟಿನ ಲೆಕ್ಕಾಚಾರದಲ್ಲಿ ನೋಡಿದಾಗ ಇದು ಬಹುದೊಡ್ಡ ಹೊಡೆತ ಎನ್ನಬಹುದು. ಮಾರುಕಟ್ಟೆ ಬಹಳ ಸೆನ್ಸಿಟಿವ್ , ತೆರಿಗೆ ಹೆಚ್ಚಳ, ಜಾಗತಿಕ ವಿತ್ತಜಗತ್ತಿನಲ್ಲಿನ ಅಸ್ಥಿರತೆ ಮಾರುಕಟ್ಟೆ ಕುಸಿತಕ್ಕೆ ಕಾರಣವಾದವು.

ಒಟ್ಟಾರೆ ಜನ ಸಾಮಾನ್ಯನ ಭಾಷೆಯಲ್ಲಿ ನೀರಸ , ಬೋರಿಂಗ್ ಬಜೆಟ್ ಎನ್ನಲು ಅಡ್ಡಿಯಿಲ್ಲ. ಹೂಡಿಕೆದಾರರಿಗೂ, ವ್ಯಾಪಾರಸ್ಥರಿಗೂ ಹೇಳಿಕೊಳ್ಳುವ ಯಾವ ಸುದ್ದಿಯೂ ಇಲ್ಲದೆ, ಇದೊಂದು ಹಣವನ್ನು ವಲಯಗಳಿಗೆ ಅಂದರೆ ಆರೋಗ್ಯ, ಕೃಷಿ, ಶಿಕ್ಷಣ, ಮೂಲಭೂತ ಸೌಲಭ್ಯ ಇತ್ಯಾದಿಗಳಿಗೆ ಹಂಚುವ ಬಜೆಟ್ ಎನ್ನಬಹುದು. ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಹೆಚ್ಚಳ ಮಾಡಿರುವುದು ಮತ್ತು ಫಿಸ್ಕಲ್ ಡೆಫಿಸಿಟ್ 4.3ರಲ್ಲಿ ಇಟ್ಟಿರುವುದು ಈ ಬಜೆಟ್‌ನಿಂದ ಹೊರಬಂದಿರುವ ಧನಾತ್ಮಕ ಅಂಶ.

ದೇಶೀಯ ಉತ್ಪಾದನೆ

ದೇಶೀಯ ಉತ್ಪಾದನೆ ಬಲಪಡಿಸಲು ನಿರ್ಧಾರ

ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಹೆಚ್ಚಿನ ಮೌಲ್ಯದ ಮತ್ತು ತಾಂತ್ರಿಕವಾಗಿ ಮುಂದುವರಿದ ನಿರ್ಮಾಣ ಮತ್ತು ಮೂಲ ಸೌಕರ್ಯ ಉಪಕರಣಗಳ ದೇಶೀಯ ಉತ್ಪಾದನೆಯನ್ನು ಬಲಪಡಿಸಲು ನಿರ್ಮಾಣ ಮತ್ತು ಮೂಲಸೌಕರ್ಯ ಉಪಕರಣಗಳ ಬಲ ವರ್ಧನೆಗೆ ಒಂದು ಯೋಜನೆಯನ್ನು ಪರಿಚಯಿಸಲಾಗುವುದು ಎಂದರು. ಹೆಚ್ಚಿನ ಮೌಲ್ಯದ, ತಾಂತ್ರಿಕವಾಗಿ ಮುಂದುವರಿದ ಯಂತ್ರೋಪಕರಣಗಳ ದೇಶೀಯ ಉತ್ಪಾದನೆಯನ್ನು ಹೆಚ್ಚಿಸಲು, ಆಮದುಗಳ ಮೇಲಿನ ಅವಲಂಬನೆಯನ್ನು ಕಡಿತಗೊಳಿಸಲು ಮತ್ತು ಮೇಕ್-ಇನ್-ಇಂಡಿಯಾ ಉಪಕ್ರಮವನ್ನು ಬಲಪಡಿಸಲು ನಿರ್ಮಾಣ ಮತ್ತು ಮೂಲಸೌಕರ್ಯ ಉಪಕರಣಗಳ ಉತ್ಪಾದನೆಯನ್ನು ಉತ್ತೇಜಿಸಲು ಒಂದು ಯೋಜನೆಯನ್ನು ರೂಪಿಸಲು ಹಣಕಾಸು ಸಚಿವರು ಪ್ರಸ್ತಾಪಿಸಿದ್ದಾರೆ.

ನಗರಾಭಿವೃದ್ಧಿ

2, 3ನೇ ಹಂತದ ನಗರಕ್ಕೆ 5 ಸಾವಿರ ಕೋಟಿ ರು.

ಎರಡನೇ ಮತ್ತು ಮೂರನೇ ಹಂತದ ಮತ್ತು ಧಾರ್ಮಿಕ ಕೇಂದ್ರಗಳಿರುವ ನಗರ ಮತ್ತು ಪಟ್ಟಣ ಪ್ರದೇಶಗಳ ಅಭಿವೃದ್ಧಿಗೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ. ಅಂಥ ನಗರಗಳ ಮೂಲಸೌಕರ್ಯ ಮತ್ತು ಆಧುನಿಕರಣದತ್ತ ಗಮನ ಹರಿಸಲಾಗುತ್ತದೆ. ನಗರದ ಅಭಿವೃದ್ಧಿಯ ವೇಗವರ್ಧಕಗಳಾಗಿರುವ ಆರ್ಥಿಕ ಪ್ರದೇಶಗಳಲ್ಲಿ(ಸಿಇಆರ್) ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು 5 ವರ್ಷಗಳಲ್ಲಿ ಪ್ರತಿ ಸಿಇಆರ್‌ಗೆ ₹5 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಬಜೆಟ್ ಭಾಷಣದ ವೇಳೆ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಘೋಷಿಸಿದರು.

ರಾಜ್ಯ ರೈಲ್ವೆ

ರಾಜ್ಯರೈಲ್ವೆ ಯೋಜನೆಗೆ 7,748 ಕೋಟಿ ರು.



ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ಜೋಡಿ ಹಳಿ ಹಾಗೂ ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಬಜೆಟ್‌ನಲ್ಲಿ ₹7,748 ಕೋಟಿ ಹಂಚಿಕೆ ಮಾಡಲಾಗಿದೆ. ಬೆಂಗಳೂರು ಉಪನಗರ ರೈಲು ಮಾರ್ಗಕ್ಕೆ ಕಳೆದ ವರ್ಷ ₹350 ಕೋಟಿ ಹಂಚಿಕೆ ಮಾಡಲಾಗಿತ್ತು. ಈ ಸಲ ₹500 ಕೋಟಿ ಕೊಡಲಾಗಿದೆ. ಮೂಲ ಸೌಕರ್ಯ ವ್ಯವಸ್ಥೆ ಬಲಪಡಿಸಲು ಬೆಂಗಳೂರು-ಚೆನ್ನೈ, ಬೆಂಗಳೂರು-ಹೈದರಾಬಾದ್ ಸೇರಿದಂತೆ ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳನ್ನು ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. 2009-14ರ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ವಾರ್ಷಿಕ ₹835 ಕೋಟಿ ಅನುದಾನ ನೀಡಲಾಗುತ್ತಿತ್ತು. ಈಗ ಅನುದಾನ ಬಿಡುಗಡೆ ಪ್ರಮಾಣ ಒಂಬತ್ತು ಪಟ್ಟು ಹೆಚ್ಚಾಗಿದೆ.

ಮೂಲಸೌಕರ್ಯ

ಮುನ್ಸಿಪಲ್ ಬಾಂಡ್‌ಗೆ ಉತ್ತೇಜನಕ್ಕೆ ನಿರ್ಧಾರ



ದೊಡ್ಡ ನಗರಗಳಲ್ಲಿ ಅಧಿಕ ಮೌಲ್ಯದ ಮುನ್ಸಿಪಲ್ ಬಾಂಡ್‌ಗಳ ಒದಗಿಸುವುದನ್ನು ಉತ್ತೇಜಿಸಲು ನಿರ್ಧರಿಸಲಾಗಿದೆ. ₹1,000 ಕೋಟಿಗಿಂತ ಹೆಚ್ಚಿನ ಬಾಂಡ್‌ಗಳ ವಿತರಣೆಯ ಮೂಲಕ ಮೂಲ ಸೌಕರ್ಯ ಅಭಿವೃದ್ಧಿಗೆ ಸಾಲ ಪಡೆಯುವುದರ ಮೇಲೆ ₹100 ಕೋಟಿ ಪ್ರೋತ್ಸಾಹಧನವನ್ನು ಘೋಷಿಸಲಾಗಿದೆ. ಸಣ್ಣ ಮತ್ತು ಮಧ್ಯಮ ಹಂತದ ನಗರಗಳಿಗೆ ನೆರವು ನೀಡಲು ₹200 ಕೋಟಿವರೆಗಿನ ಮೌಲ್ಯದ ಬಾಂಡ್‌ಗಳಿಗೆ ಅಮೃತ ಯೋಜನೆಯಡಿ ನೀಡಲಾಗುವ ಪ್ರೋತ್ಸಾಹಧನವನ್ನು ಮುಂದುವರಿಸಲಾಗುವುದು ಎಂದು ನಿರ್ಮಲಾ ಸೀತರಾಮನ್ ತಿಳಿಸಿದ್ದಾರೆ.

ಕೌಶಲಾಭಿವೃದ್ಧಿ

ಕೌಶಲ ತರಬೇತಿಗೆ ₹1,000 ಕೋಟಿ

ವಿಕಸಿತ ಭಾರತ ಗುರಿಸಾಧಿಸಲು ದೇಶದ ಯುವಜನತೆಗೆ ಕೌಶಲಪೂರ್ಣ ವೃತ್ತಿಮಾರ್ಗಗಳನ್ನು ರೂಪಿಸಲು ವಿವಿಧ ಕಾರ್ಯಕ್ರಮಗಳನ್ನು ಕೇಂದ್ರ ಸರಕಾರ ಘೋಷಿಸಿದೆ. ಕೌಶಲಪೂರ್ಣ ಆರೋಗ್ಯ ವೃತ್ತಿಪರತೆಯಲ್ಲಿ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ 1 ಲಕ್ಷ ಮಂದಿ ಆರೋಗ್ಯ ವೃತ್ತಿಪರರಿಗೆ (ಎಎಚ್‌ಪಿಎಸ್) ಐದು ವರ್ಷಗಳ ತರಬೇತಿ ಒದಗಿಸುವ ಯೋಜನೆಯನ್ನು ಪ್ರಸ್ತಾಪಿಸಿದೆ. ಈ ಉದ್ದೇಶಕ್ಕಾಗಿ ಇದೇ ಮೊದಲ ಬಾರಿಗೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಆಯವ್ಯಯದಲ್ಲಿ ₹1,000 ಕೋಟಿ ಅನುದಾನ ಘೋಷಿಸಲಾಗಿದೆ. ಜತೆಗೆ ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚುತ್ತಿರುವ ಕಾರಣ ವೃದ್ಧರ ಆರೈಕೆಗೆಂದೇ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ 1.5 ಲಕ್ಷ ಮಂದಿಗೆ ತರಬೇತಿ ಒದಗಿಸಲಾಗುತ್ತದೆ ಎಂದು ತಿಳಿಸಿದೆ.

X ಶಶಿ ತರೂರ್
ಕಾಂಗ್ರೆಸ್ ಸಂಸದ

ಕೇರಳಕ್ಕೆ ವಿಶೇಷ ಯೋಜನೆಗಳು ದೊರಕಿಲ್ಲದಿರುವುದು ನಿರಾಸೆ ಮೂಡಿಸಿದೆ. ನಾವು ಅಖಿಲ ಭಾರತ ಆಯುರ್ವೇದ ಸಂಸ್ಥೆಗಾಗಿ ಕಾಯುತ್ತಿದ್ದೆವು. ಆದರೆ ಯಾವುದೂ ಸಿಗಲಿಲ್ಲ. ಕೆಳವರ್ಗ ಮತ್ತು ಮಧ್ಯಮ ವರ್ಗದವರಿಗೆ ಏನೂ ಸಿಕ್ಕಿಲ್ಲ.

X ಅಖಿಲೇಶ್‌ಯಾದವ್
ಎಸ್‌ಪಿ ಸಂಸದ

ಯಾವ ಸರಕಾರದ ಮೇಲೆ ಯಾವುದೇ ಭರವಸೆಯಿಲ್ಲವೋ ಅಂಥ ಸರಕಾರ ಮಂಡಿಸುತ್ತಿರುವ ಬಜೆಟ್‌ನಿಂದ ನಾವು ಏನು ತಾನೇ ನಿರೀಕ್ಷಿಸಲಾದೀತು? ಇದು ಕೇವಲ ಶೇ.5ರಷ್ಟು ಜನರಿಗೆ ಮಾತ್ರವೇ ಅನ್ವಯವಾಗುವ ಬಜೆಟ್.

2026-27 ಬಜೆಟ್‌ನಲ್ಲಿ ಸರಕಾರದ ನೀತಿಯ ಸ್ಥಿರತೆ ಮತ್ತು ತೆರಿಗೆ ಸ್ಪಷ್ಟತೆ ಕಾಪಾಡಿಕೊಂಡಿದೆ. ಗ್ರಾಮೀಣ ಹಾಗೂ ನಗರ, ಹಳೆಯ ಮತ್ತು ಹೊಸ ಉದ್ಯಮಗಳ ನಡುವೆ ಸಮ ತೋಲನ ಸಾಧಿಸುವ ಪ್ರಯತ್ನ ಮಾಡಲಾಗಿದೆ. ಉತ್ಪಾದನೆ, ಸೆಮಿಕಂಡಕ್ಟರ್, ಡೇಟಾ ಸೆಂಟರ್, ಕೃತಕ ಬುದ್ಧಿ ಮತ್ತೆ, ಮೂಲಸೌಕರ್ಯ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

ಚಲ್ಲಾ ಶ್ರೀನಿವಾಸುಲು ಶೆಟ್ಟಿ
ಅಧ್ಯಕ್ಷ, ಎಸ್‌ಬಿಐ

2047ಕ್ಕೆ ವಿಕಸಿತ ಭಾರತವನ್ನಾಗಿಸುವುದಕ್ಕಾಗಿ ಮಂಡಿಸಿರುವ ಸರ್ವಸ್ಪರ್ಶಿ ಬಜೆಟ್. ಕಳೆದ 10 ವರ್ಷಗಳಲ್ಲಿ 28 ಕೋಟಿಗೂ ಅಧಿಕ ಜನರನ್ನು ಬಡತನದಿಂದ ಮೇಲೆತ್ತಲಾಗಿದೆ. ಮಹಿಳೆಯರಲ್ಲಿ ಸ್ವಯಂ ಉದ್ಯೋಗಾವಕಾಶ, ರಸಗೊಬ್ಬರ ಉತ್ಪಾದನೆಗೆ ಅಗತ್ಯವಿರುವ ಕಚ್ಚಾ ವಸ್ತುಗಳ ಮೇಲಿನ ಆಮದು ಸುಂಕ ರದ್ದುಗೊಳಿಸಲಾಗಿದೆ.

ಮೋಹನ್ ವಿಶ್ವ
ಬಿಜೆಪಿ ವಕ್ತಾರ

ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು 2026-27ನೇ ಸಾಲಿಗಾಗಿ ಮಂಡಿಸಿದ ಬಜೆಟ್, ದೇಶವನ್ನು ಅಭಿವೃದ್ಧಿಯತ್ತ ತೆಗೆದುಕೊಂಡು ಹೋಗುವ ಹಾಗೂ ಬಡಪರ, ರೈತಪರ, ಮಹಿಳಾಪರ, ಯುವಕ-ಯುವತಿಯರ ಏಳಿಗೆಗಾಗಿ ರೂಪಿಸಿರುವ ಬಜೆಟ್ ಇದಾಗಿದೆ. ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡಿದೆ.

ಜಗದೀಶ ಶೆಟ್ಟರ್
ಸಂಸದ, ಮಾಜಿ ಮುಖ್ಯಮಂತ್ರಿ

ಜಗತ್ತು ಆರ್ಥಿಕ ಅನಿಶ್ಚಿತತೆಯ ತಲ್ಲಣಗಳಲ್ಲಿ ಮುಳುಗಿರುವ ಈ ಸಂದರ್ಭದಲ್ಲಿ ದೇಶದ ಜನತೆಯ ಮನಸ್ಸಿನಲ್ಲಿ ಆರ್ಥಿಕ ವಿಶ್ವಾಸ ತುಂಬಿರುವ ಸ್ವಾಗತಾರ್ಹ ಬಜೆಟ್. ದೀರ್ಘಕಾಲೀನ ಆರ್ಥಿಕ ಗುರಿಯನ್ನು ಮುಟ್ಟಲು ಅಗತ್ಯವಿರುವ ಅಲ್ಪ ಕಾಲಿನ ಯೋಜನೆಗಳೊಂದಿಗೆ ಸಂತುಲನೆಯ ಸಮದೃಷ್ಟಿಯ ಸಂತುಲಿತ ಬಜೆಟ್ ಆಗಿದೆ.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ವಿಧಾನಪರಿಷತ್ ಮಾಜಿ ಸದಸ್ಯ

ಕೇಂದ್ರ ಬಜೆಟ್ 2026



10,000 ಕೋಟಿ ರು.

ಜಾಗತಿಕ ರಫ್ತು ವಹಿವಾಟು ಕ್ಷೇತ್ರಕ್ಕೆ ಸ್ಪರ್ಧೆ ಒಡ್ಡಲು ಕಂಟೇನರ್ ತಯಾರಿಕಾ ಕ್ಷೇತ್ರಕ್ಕೆ 5 ವರ್ಷಗಳ ಅವಧಿಗೆ ₹10,000 ಕೋಟಿ

ಪೊಟ್ಯಾಷಿಯಂ ಸುಂಕ

ಈವರೆಗೆ ಸುಂಕ ರಹಿತವಾಗಿದ್ದ ಪೊಟ್ಯಾಷಿಯಂ ಹೈಡ್ರಾಕ್ಸೈಡ್ ರಾಸಾಯನಿಕ ಆಮದಿಗೆ ಫೆ.2ರಿಂದಲೇ ಶೇ.7.5 ಸುಂಕ.

ಆಮದು ಸುಂಕ ರದ್ದು

ನಾಗರಿಕ ವಿಮಾನಗಳ ಎಂಜಿನ್ ಸೇರಿದಂತೆ ವಿವಿಧ ಬಿಡಿಭಾಗಗಳ ಆಮದು ಮೇಲಿನ ಸುಂಕವನ್ನೂ ರದ್ದುಗೊಳಿಸಲಾಗಿದೆ.

ಶೂನ್ಯ ಸುಂಕ

ಮೈಕ್ರೊವೇವ್ ಓವನ್ ತಯಾರಿಕೆಗೆ ಬಳಸುವ ಕೆಲವು ನಿರ್ದಿಷ್ಟ ಬಿಡಿಭಾಗಗಳ ಆಮದು ಮೇಲಿನ ಸುಂಕ ಶೂನ್ಯಕ್ಕೆ ಇಳಿಸಲಾಗಿದೆ.

'ಟ್ರೇಡ್ ರಿಸೀವೆಬಲ್ ಡಿಸ್‌ಕೌಂಟಿಂಗ್ ಸಿಸ್ಟಂ' ಜತೆಗೆ 'ಇ-ಮಾರುಕಟ್ಟೆ ವೇದಿಕೆ' ಜೋಡಣೆಗೆ ಕ್ರಮ

ಎಂಎಸ್‌ಎಂಇ ವ್ಯಾಪಾರಕ್ಕೆ ಸಾಲ ಒದಗಿಸುವ ಸರಪಣಿಗಳಲ್ಲಿ ಕೆಲವು ಬಿಗಿ ಕ್ರಮಗಳಿಗೆ ಕೇಂದ್ರ ಚಿಂತನೆ

ಸಣ್ಣ, ಮಧ್ಯಮ ಕೈಗಾರಿಕೆಗೆ ಬೂಸ್ಟರ್

ದೇಶದ ಆರ್ಥಿಕತೆ ಉತ್ತೇಜಿಸಲು 'ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮ'(ಎಸ್ಎಂಇ)ಗಳಿಗಾಗಿ 10,000 ಕೋಟಿ ರು. ನಿಧಿ ಸ್ಥಾಪಿಸಲಾಗುವುದು ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಈ ಬಾರಿಯ ಮುಂಗಡಪತ್ರದಲ್ಲಿ ಹೇಳಿದ್ದಾರೆ. ಜಾಗತಿಕವಾಗಿ ಸ್ಪರ್ಧಾತ್ಮಕ ಪರಿಸರ ವ್ಯವಸ್ಥೆ ರಚಿಸಲು ಕಂಟೇನರ್‌ಗಳ ತಯಾರಿಕೆಗೂ ಒಂದು ಬೃಹತ್ ಯೋಜನೆಯನ್ನು ಪ್ರಸ್ತಾಪಿಸಿದ್ದಾರೆ. ಜವಳಿ ಉತ್ಪಾದನಾ ವಲಯದಲ್ಲಿ ತಾಂತ್ರಿಕ ಮೌಲ್ಯವರ್ಧನೆ ಮೇಲೆ ಗಮನ ಕೇಂದ್ರೀಕರಿಸಲು 'ಮೆಗಾ ಜವಳಿ ಪಾರ್ಕ್'ಗಳನ್ನು ಸ್ಥಾಪಿಸಲಾಗುವುದು ಎಂದು ಘೋಷಿಸಿದ್ದಾರೆ

ಎಂಎಸ್‌ಎಂಇಗೆ ನಿಧಿ: ದೊಡ್ಡ ಘಟಕಗಳಾಗಿ ಬೆಳೆಯುವ ಸಾಮರ್ಥ್ಯ ಮತ್ತು ಕಾರ್ಯಸಾಧ್ಯತೆ ಹೊಂದಿರುವ 'ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ'(ಎಂಎಸ್‌ಎಂಇ) ಘಟಕಗಳಿಗೆ ಆರ್ಥಿಕ ನೆರವು ನೀಡಲೆಂದು 50,000 ಕೋಟಿ ರು.ಗಳ ಧನ ಸಹಾಯ ನಿಧಿಯನ್ನು 2023ರಲ್ಲಿ ಘೋಷಿಸಲಾಗಿತ್ತು. ಈ ವರ್ಗದ 'ಎಂಎಸ್‌ಎಂಇ'ಗಳನ್ನು ಉತ್ತೇಜಿಸಲು 2026-27ನೇ ಹಣಕಾಸು ವರ್ಷದಲ್ಲಿ 'ಸ್ವಾವಲಂಬಿ ಭಾರತ ನಿಧಿ'ಗೆ 2,000 ಕೋಟಿ ರು.ಗಳನ್ನು ಒದಗಿಸಲಾಗುವುದು.

ಖಾದಿಗೆ ಒತ್ತು: ಖಾದಿ ಹಾಗೂ ಕೈಮಗ್ಗ ಉದ್ಯಮವನ್ನು ಬಲಪಡಿಸಲು 'ಮಹಾತ್ಮಾ ಗಾಂಧಿ ಗ್ರಾಮ ಸ್ವರಾಜ್' ಹೆಸರಿನಲ್ಲಿ ಹೊಸ ಕಾರ್ಯಕ್ರಮವನ್ನು ಆರಂಭಿಸಲಾಗುವುದು. ಅಲ್ಲದೆ, 200 ಪಾರಂಪರಿಕ ಕೈಗಾರಿಕಾ ಕ್ಲಸ್ಟರ್‌ಗಳನ್ನು ಪುನರುಜ್ಜೀವನಗೊಳಿಸುವ ಯೋಜನೆಯನ್ನೂ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ನೈಸರ್ಗಿಕ ನಾರು ಉತ್ಪಾದನೆ, ಜವಳಿ ವಿಸ್ತರಣೆ ಮತ್ತು ಉದ್ಯೋಗ ಸೃಷ್ಟಿ, ರಾಷ್ಟ್ರೀಯ ಕೈಮಗ್ಗ ಮತ್ತು ಕರಕುಶಲ ಕಾರ್ಯಕ್ರಮವನ್ನೂ ಸಚಿವೆ ನಿರ್ಮಲಾ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದಾರೆ. ಅಮೆರಿಕ ವಿಧಿಸಿರುವ ಶೇ.50 ಸುಂಕದ ಸವಾಲು ಎದುರಿಸುತ್ತಿರುವ ವಲಯಕ್ಕೆ ಸಹಾಯ ಮಾಡುವ ಸಲುವಾಗಿ 5 ಉಪ-ಭಾಗಗಳೊಂದಿಗೆ ಸಂಯೋಜಿತ ಜವಳಿ ಕಾರ್ಯಕ್ರಮ ರೂಪಿಸಲಾಗುತ್ತಿದೆ.

ವ್ಯಾಪಾರಕ್ಕೆ ಹಣಕಾಸು ಸಾಲ ಒದಗಿಸುವ ಸರಪಣಿಯಲ್ಲಿ ಕೇಂದ್ರ ಸರಕಾರ ಕೆಲವು ಬಿಗಿ ಕ್ರಮಗಳನ್ನು ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ. ಎಂಎಸ್‌ಎಂಇ ಉದ್ಯಮ ಕ್ಷೇತ್ರದ ಪೂರೈಕದಾರರ ವಿಭಾಗದಲ್ಲಿ ಹಣ ಪಾವತಿ ವ್ಯವಸ್ಥೆಯು ಸ್ಪಷ್ಟ ಗೋಚರ ಇರುವಂತೆ ಮಾಡುವುದಕ್ಕೂ ಸರಕಾರ ಮುಂದಾಗಿದೆ. ಅಲ್ಲದೇ, 'ಇ-ಮಾರುಕಟ್ಟೆ ವೇದಿಕೆ'ಯನ್ನು 'ಟ್ರೇಡ್ ರಿಸೀವಬಲ್ ಡಿಸ್‌ಕೌಂಟಿಂಗ್ ಸಿಸ್ಟಂ' ಜತೆಗೆ ಜೋಡಿಸುವ ಪ್ರಯತ್ನಕ್ಕೂ ಕೇಂದ್ರ ಹಣಕಾಸು ಸಚಿವಾಲಯ ಮುಂದಾಗಿದೆ ಎಂಬುದನ್ನು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಸಾಲ ಸೌಲಭ್ಯ: ಎಂಎಸ್‌ಎಂಇ ವಲಯದಲ್ಲಿ ಕೇಂದ್ರ ಸರಕಾರ ಒಡೆತನದ ಎಲ್ಲಾ ಉದ್ಯಮಗಳಿಗೂ ಟಿಆರ್‌ಇಡಿಎಸ್ ಸೆಟಲ್‌ಮೆಂಟ್ ಪ್ಲಾಟ್‌ಫಾರ್ಮ್ ಬಳಕೆ ಕಡ್ಡಾಯಗೊಳಿಸಲಾಗಿದೆ. ಎಂಎಸ್‌ಎಂಇ ಕ್ಷೇತ್ರದಲ್ಲಿನ ನಗದು ಹರಿವನ್ನು ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಸಾಲ ವಿತರಣೆ ವಹಿವಾಟಿನಲ್ಲಿ 5 ಲಕ್ಷ ಕೋಟಿ ರು.ವರೆಗೂ ಸ್ವೀಕರಿಸಬಹುದಾದಷ್ಟು ಮೊತ್ತವನ್ನು ಟಿಆರ್‌ಇಡಿಎಸ್ ಮೂಲಕ ವಿತರಿಸಲಾಗಿದೆ. ಇದರ ಮೊತ್ತ 2025ನೇ ಹಣಕಾಸು ವರ್ಷದಲ್ಲಿ 2.33 ಲಕ್ಷ ಕೋಟಿ ರು.ಗಳಷ್ಟಾಗಿದೆ. ಇದು ವರ್ಷಂಪ್ರತಿ ಶೇ.69ರಷ್ಟು ಹೆಚ್ಚಳ ಕಂಡಿದೆ ಎಂಬುದನ್ನೂ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಆರ್‌ಎಕ್ಸ್‌ಐಎಲ್ ವೇದಿಕೆ

ಕೇಂದ್ರ ಸರಕಾರದ ಉದ್ಯಮಗಳಾಗಿರುವ 'ಎಂಎಸ್ಎಂಇ'ಗಳಿಂದ ಎಲ್ಲಾ ಖರೀದಿಗಳಿಗೆ 'ವ್ಯಾಪಾರ ಸ್ವೀಕೃತಿ ರಿಯಾಯಿತಿ ವ್ಯವಸ್ಥೆ'ಯನ್ನು ವಹಿವಾಟು ವೇದಿಕೆಗಳಾಗಿ ಮಾಡಲಾಗುವುದು. 'ರಿಸೀವಬಲ್ಸ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿ.'(ಆರ್‌ಎಕ್ಸ್‌ಐಎಲ್) ಎಂಬುದು 'ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್'(ಎಸ್‌ಐಡಿಬಿಐ) ಮತ್ತು 'ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ'(ಎನ್‌ಎಸ್‌ಇ)ದಿಂದ ಉತ್ತೇಜಿಸಲ್ಪಟ್ಟ ಜಂಟಿ ಉದ್ಯಮವಾಗಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸದನದಲ್ಲಿ ಹೇಳಿದ್ದಾರೆ.

ರಾಷ್ಟ್ರಪತಿಯಿಂದ ಸಿಹಿ-ದಹಿ ಹಾರೈಕೆ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಕೇಂದ್ರ ಬಜೆಟ್ ಮಂಡಿಸುವುದಕ್ಕೂ ಮುನ್ನ ಭಾನುವಾರ ಬೆಳಗ್ಗೆಯೇ ರಾಷ್ಟ್ರಪತಿ ಭವನಕ್ಕೆ ತೆರಳಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿ, ತಾವು ಸತತ 9ನೇ ಮುಂಗಡಪತ್ರವನ್ನು ಸಂಸತ್ತಿನಲ್ಲಿ ಮಂಡಿಸಲಿರುವ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭ ಮುರ್ಮು ಅವರು ಸಂಪ್ರದಾಯದಂತೆ ವಿತ್ತ ಸಚಿವೆಗೆ ಸಕ್ಕರೆ ಬೆರೆಸಿದ ಮೊಸರನ್ನು ತಿನ್ನಿಸಿ ಶುಭ ಕೋರಿದರು.

ಐಟಿ ಸೇವೆಗಳ ಕ್ಷೇತ್ರದ ಗಳಿಕೆ (ಬಿ. ಡಾಲರ್)



ವಿದೇಶಿ ಸಂಸ್ಥೆಗೆ ತೆರಿಗೆ ರಜೆ

ಭಾರತದ ಡೇಟಾ ಸೆಂಟರ್(ದತ್ತಾಂಶ ಕೇಂದ್ರ)ಗಳನ್ನು ಬಳಸಿಕೊಂಡು ಕ್ಲೌಡ್ ಸೇವೆ ಒದಗಿಸುವ ವಿದೇಶಿ ಕಂಪನಿಗಳಿಗೆ ಸರಕಾರ 'ತೆರಿಗೆ ರಜೆ' ನೀಡಲು ಮುಂದಾಗಿದೆ.

ಭಾರತದಲ್ಲಿರುವ ಡೇಟಾ ಸೆಂಟರ್‌ಗಳನ್ನು ಬಳಸಿಕೊಂಡು ವಿಶ್ವಾದ್ಯಂತ ಗ್ರಾಹಕರಿಗೆ ಕ್ಲೌಡ್ ಸೇವೆಗಳನ್ನು ಒದಗಿಸುವ ವಿವಿಧ ದೇಶಗಳಲ್ಲಿ ಕಂಪನಿಗಳಿಗೆ 2047ನೇ ಹಣಕಾಸು ವರ್ಷದ ರವರೆಗೂ ತೆರಿಗೆ ರಜೆ ಸೌಲಭ್ಯ ಸಿಗಲಿದೆ. ಆದರೆ, ಕೆಲವು ಷರತ್ತುಗಳಿಗೆ ಒಳಪಟ್ಟು ತೆರಿಗೆ ರಜೆ ನೀಡಲಾಗುತ್ತದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮುಂಗಡಪತ್ರದಲ್ಲಿ ಹೇಳಿದ್ದಾರೆ.

ನಿರ್ಣಾಯಕ ಮೂಲಸೌಕರ್ಯಗಳನ್ನು ಸಕ್ರಿಯಗೊಳಿ ಸುವ ಮತ್ತು ದತ್ತಾಂಶ ಕೇಂದ್ರಗಳಲ್ಲಿ ಹೂಡಿಕೆಯನ್ನು ಹೆಚ್ಚಿಸುವ ಅಗತ್ಯವನ್ನು ಗುರುತಿಸಿರುವ ಭಾರತ ಸರಕಾರ, ವಿದೇಶಿ ಕಂಪನಿಗಳಿಗೆ ಈ ಅನುಕೂಲ ಮಾಡಿಕೊಡಲಿದೆ. ಈ ಕಂಪನಿಗಳು ಭಾರತೀಯ ಮರುಮಾರಾಟ ಗಾರರ ಘಟಕದ ಮೂಲಕ ಭಾರತೀಯ ಗ್ರಾಹಕರಿಗೆ ಸೇವೆಗಳನ್ನು

ಒದಗಿಸಬೇಕಾಗುತ್ತದೆ ಎಂದು ಅವರು ಹೇಳಿದರು.

ತೆರಿಗೆ ರಜೆ ನೀಡುವುದರಿಂದ ವಿದೇಶಿ ಕಂಪನಿಗಳನ್ನು ದೇಶದತ್ತ ಆಕರ್ಷಿಸಿ ಭಾರತವನ್ನು ಜಾಗತಿಕ ಡಿಜಿಟಲ್ ಮೂಲಸೌಕರ್ಯ ಕೇಂದ್ರವಾಗಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಸ್ಥಳೀಯ ಡೇಟಾ ಸಂಗ್ರಹಣೆ ಮತ್ತು ಸಂಸ್ಕರಣಾ ಸಾಮರ್ಥ್ಯಗಳನ್ನು ವಿಸ್ತರಿಸುವ ಮೂಲಕ ಈ ಕ್ಷೇತ್ರವನ್ನು ಪ್ರೋತ್ಸಾಹಿಸಿದಂತಾಗಲಿದೆ ಎಂದು ವಿತ್ತ ಸಚಿವೆ ಹೇಳಿದ್ದಾರೆ.

ಸೆಮಿಕಂಡಕ್ಟರ್ ₹40000 ಕೋಟಿ

2026-27ನೇ ಹಣಕಾಸು ವರ್ಷದ ಮುಂಗಡಪತ್ರದಲ್ಲಿ 'ಇಂಡಿಯ ಸೆಮಿಕಂಡಕ್ಟರ್ ಮಿಷನ್-2.0' ಯನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದ್ದಾರೆ. ಈ ಹೊಸ ಪ್ರಸ್ತಾವನೆಯ ಆರಂಭ ಮತ್ತು ಸಮರ್ಪಕ ಅನುಷ್ಠಾನಕ್ಕಾಗಿ 40 ಸಾವಿರ ಕೋಟಿ ರು.ಗಳ ಅನುದಾನವನ್ನೂ ಮುಂಗಡಪತ್ರದಲ್ಲಿ ಪ್ರಕಟಿಸಿದ್ದಾರೆ.

'ಇಂಡಿಯ ಸೆಮಿ ಕಂಡಕ್ಟರ್ ಮಿಷನ್ 1.0' ಯೋಜನೆಯು ಭಾರತದ ಸೆಮಿ ಕಂಡಕ್ಟರ್ ಉದ್ಯಮ ವಲಯವನ್ನು ಬಹಳಷ್ಟು ವಿಸ್ತರಿ ಸಿತು. ಇದರ ಆಧಾರದ ಮೇಲೆಯೇ ಕೇಂದ್ರದ ಎನ್‌ಡಿಎ ಸರಕಾರ, 'ಇಂಡಿಯ ಸೆಮಿ ಕಂಡಕ್ಟರ್ ಮಿಷನ್ 2.0' ಆರಂಭಿಸಲಿದೆ. ಆ ಮೂಲಕ ಸೆಮಿ ಕಂಡಕ್ಟರ್‌ಗಳ ಉತ್ಪಾದನೆಗೆ ಅಗತ್ಯ ಯಂತ್ರಗಳು- ಸಾಮಗ್ರಿಗಳ ತಯಾರಿಕೆ ಮತ್ತು ಆಮದು ಪ್ರಕ್ರಿಯೆಗೆ ಆದ್ಯತೆ ನೀಡ ಲಾಗುವುದು. ಸೆಮಿ ಕಂಡಕ್ಟರ್‌ಗಳ ಪೂರ್ಣ ಪ್ರಮಾಣದ ವಿನ್ಯಾಸ, ಭಾರತೀಯ ಬೌದ್ಧಿಕ ಆಸ್ತಿ ಅಭಿವೃದ್ಧಿ ಹಾಗೂ ಅಗತ್ಯ ಮೂಲ ಪರಿಕರಗಳು ಮತ್ತು ಕಚ್ಚಾ ಪದಾರ್ಥಗಳ ಸಂಗ್ರಹಣೆ-ಪೂರೈಕೆಗೂ ಒತ್ತು ನೀಡಲಾಗುವುದು ಎಂದು ಪ್ರಕಟಿಸಿದ್ದಾರೆ.

ಇದಿಷ್ಟೇ ಅಲ್ಲದೇ, ಉದ್ಯಮ ಆಧಾರಿತ ಸಂಶೋಧನೆಗೆ ಗಮನ ಹರಿಸಲಾಗುವುದು ಮತ್ತು ತಂತ್ರಜ್ಞಾನದ ಅಭಿವೃದ್ಧಿಗಾಗಿ ನುರಿತ ಮಾನವ ಸಂಪನ್ಮೂಲ ರೂಪಿಸುವುದು ಅದಕ್ಕಾಗಿ ಕೌಶಲ ಅಭಿವೃದ್ಧಿ ತರಬೇತಿ ಕೇಂದ್ರಗಳನ್ನು ಆರಂಭಿಸುವುದೂ ಸರಕಾರದ ಅವಲೋಕನದಲ್ಲಿದೆ ಎಂದಿದ್ದಾರೆ.

ಎಕೊಸಿಸ್ಟಂ 'ಶಕ್ತಿ'ಗೆ 10000 ಕೋಟಿ

ಅಲ್ಲದೇ, ಮುಂದಿನ ಐದು ವರ್ಷಗಳಲ್ಲಿ 'ಸೆಮಿ ಕಂಡಕ್ಟರ್ ಎಕೊಸಿಸ್ಟಂ' ಅಭಿವೃದ್ಧಿಪಡಿಸುವುದಕ್ಕಾಗಿ 'ಶಕ್ತಿ ಯೋಜನೆ'ಯನ್ನು ಈ ಬಾರಿಯ ಮುಂಗಡಪತ್ರದಲ್ಲಿ ಪ್ರಕಟಿಸಿರುವ ವಿತ್ತ ಸಚಿವೆ ನಿರ್ಮಲಾ ಅವರು, ಈ ವಿಶಿಷ್ಟ ಯೋಜನೆಯ ಕಾರ್ಯಗತಗೊಳಿಸಲು 10 ಸಾವಿರ ಕೋಟಿ ರು. ನಿಧಿ ಮೀಸಲಿಡಲಾಗುವುದು ಎಂದೂ ಘೋಷಿಸಿದ್ದಾರೆ. ಇದಲ್ಲದೇ ಕೇಂದ್ರ ಸರಕಾರ 2025ರ ಏಪ್ರಿಲ್‌ನಲ್ಲಿಯೇ 'ಎಲೆಕ್ಟ್ರಾನಿಕ್ಸ್ ಕಾಂಪೊನೆಂಟ್ಸ್ ಮ್ಯಾನುಫ್ಯಾಕ್ಚರಿಂಗ್ ಸ್ಕೀಂ' ಆರಂಭಿಸಿದ್ದು, ಅದರಡಿ 22,999 ಕೋಟಿ ರು.ಗಳಷ್ಟು ವೆಚ್ಚ ಮಾಡಲಾಗಿದೆ. ಹಾಗಾಗಿ ಈ ಬಾರಿ ಇದೇ ಸ್ಕೀಂನಲ್ಲಿನ ವೆಚ್ಚ ಪ್ರಮಾಣದ ಪ್ರಸ್ತಾವನೆಯನ್ನು 40 ಸಾವಿರ ಕೋಟಿ ರು. ಹೂಡಿಕೆ ನಿರೀಕ್ಷೆಗೆ ವಿಸ್ತರಿಸುವ ಚಿಂತನೆಯನ್ನು ಸರಕಾರ ಹೊಂದಿದೆ ಎಂದು ಸಚಿವೆ ಹೇಳಿದ್ದಾರೆ.

ವಿಶ್ಲೇಷಣೆ

ಕೆ.ರಾಧಾಕೃಷ್ಣ ಹೊಳ್ಳ
ಅಧ್ಯಕ್ಷ, ಟ್ರಾವೆಲ್ಸ್ ಮಾಲೀಕರ ಸಂಘ

ಪ್ರವಾಸೋದ್ಯಮ ವಿಕಸಿತ ಭಾರತದ ಆರ್ಥಿಕ ಶಕ್ತಿ

2026-27ರ ಕೇಂದ್ರ ಆಯವ್ಯಯ ನೈಸರ್ಗಿಕತೆಗೆ ಹೆಚ್ಚಿನ ಆದ್ಯತೆ ನೀಡಿದ್ದು, ಪ್ರವಾಸೋದ್ಯಮವೇ ವಿಕಸಿತ ಭಾರತಕ್ಕೆ ಹೊಸ ಆರ್ಥಿಕ ಶಕ್ತಿಯಾಗುವ ನಿಟ್ಟಿನಲ್ಲಿ ಬಜೆಟ್ ಮಂಡಿಸಲಾಗಿದೆ. ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಪ್ರವಾಸೋದ್ಯಮವನ್ನು ಸರಕಾರ ಕೇವಲ ಮನರಂಜನೆ ವಲಯವಾಗಿ ಅಲ್ಲದೆ ಉದ್ಯೋಗ ಸೃಷ್ಟಿ, ಗ್ರಾಮೀಣ ಸಬಲೀಕರಣ, ನೈಸರ್ಗಿಕ ಸಂಪತ್ತು, ಪ್ರಕೃತಿ ಸಂರಕ್ಷಣೆ ಮತ್ತು ಭಾರತದ ಜಾಗತಿಕ ಪ್ರತಿಷ್ಠೆ ನಿರ್ಮಾಣದ ಪ್ರಮುಖ ಆರ್ಥಿಕ ಸಾಧನವಾಗಿ ಮರು ಸ್ಥಾಪಿಸಿದೆ.

ತೆರಿಗೆ ಸುಧಾರಣೆಗಳ ಮೂಲಕ ಪ್ರವಾಸೋದ್ಯಮಕ್ಕೆ ವಿಶೇಷವಾಗಿ ವಿದೇಶಿ ಪ್ರವಾಸ ಪ್ಯಾಕೇಜ್‌ಗಳ ಮೇಲೆ ಟಿಸಿಎಸ್ ಅನ್ನುಶೇ.2ಕ್ಕೆ ಇಳಿಸಿದ್ದು, ನಗದು ಹರಿವಿನ ಒತ್ತಡ ಕಡಿಮೆಯಾಗುವುದರ ಜತೆಗೆ ಟ್ರಾವೆಲ್ ಏಜೆನ್ಸಿಗಳು ಮತ್ತು ಟೂರ್ ಆಪರೇಟರ್‌ಗಳಿಗೆ ವ್ಯವಹಾರ ಸುಲಭಗೊಳಿಸಿದೆ. ಈ ಮೂಲಕ ಭಾರತವನ್ನು ಜಾಗತಿಕ ಪ್ರವಾಸ ಮಾರುಕಟ್ಟೆಯಲ್ಲಿ ಹೆಚ್ಚು ಸ್ಪರ್ಧಾತ್ಮಕವಾಗಿಸುವತ್ತ ಗಮನಹರಿಸಿದೆ. ಮೊದಲ ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಸಮ್ಮಿಟ್ ಮೂಲಕ ಹುಲಿ, ಸಿಂಹ, ಚಿರತೆ ಮೊದಲಾದ ದೊಡ್ಡ ಪ್ರಾಣಿಗಳೊಂದಿಗೆ ವಾಸ, ಅಧ್ಯಯನ, ಸಂರಕ್ಷಣೆಯಲ್ಲಿ ಭಾರತದ ನಾಯಕತ್ವವನ್ನು ವಿಶ್ವದ ಮುಂದೆ ತರುತ್ತದೆ. ಅದೇ ರೀತಿ

ಟರ್ಟಲ್ ಟ್ರಯಲ್ಸ್ ಯೋಜನೆ ಮೂಲಕ ಕರ್ನಾಟಕದ ಕರಾವಳಿ ಮತ್ತು ಸಮುದ್ರ ಜೀವಿಗಳ ಸಂರಕ್ಷಣೆಯನ್ನು ಪ್ರವಾಸೋದ್ಯಮದ ಭಾಗವಾಗಿಸಲಾಗಿದೆ. ಇದು ಪ್ರವಾಸೋದ್ಯಮ ಪರಿಸರ ಸಂರಕ್ಷಣೆ, ಸ್ಥಳೀಯರ ಜೀವನೋಪಾಯ, ಉದ್ಯೋಗ ಸೃಷ್ಟಿ, ಈ ಮೂರು ಅಂಶಗಳ ಸಮತೋಲನದ ಮಾದರಿ. ಕೃಷಿ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಲಾಗಿದ್ದು, ಇದರಿಂದ ರೈತರಿಗೆ ಬೆಳೆಗಳ ಹೊರತಾದ ಆದಾಯದ ಹೊಸ ಮಾರ್ಗಗಳನ್ನು ತೆರೆದು, ಗ್ರಾಮೀಣ ಯುವಕರಿಗೆ ಉದ್ಯೋಗ ಸೃಷ್ಟಿಸುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಿಗೆ ಇದು ಅತ್ಯಂತ ಪ್ರಾಸಂಗಿಕ.

ಪ್ರವಾಸೋದ್ಯಮದ ಗುಣಮಟ್ಟವನ್ನು ನಿರ್ಧರಿಸುವ ಮಾನವ ಸಂಪನ್ಮೂಲವನ್ನು ಮನಗಂಡು ಸಾಂಸ್ಕೃತಿಕ, ಆಧ್ಯಾತ್ಮಿಕ ಮತ್ತು ಪರಂಪರಾ ಪ್ರವಾಸೋದ್ಯಮಕ್ಕೆ ವಿಶೇಷವಾದ 12 ವಾರಗಳ ಮಾನದಂಡಿತ ಮಾರ್ಗದರ್ಶಕ ತರಬೇತಿ ಘೋಷಿಸಿದ್ದು, ಪ್ರವಾಸಿ ಮಾರ್ಗದರ್ಶಕರಿಗೆ ಅಂತಾರಾಷ್ಟ್ರೀಯ ಮಟ್ಟದ ತರಬೇತಿ, ರಾಷ್ಟ್ರೀಯ ಆತಿಥ್ಯ ಸಂಸ್ಥೆ ಮತ್ತು ಡೆಸ್ಟಿನೇಷನ್‌ಗಳ ಡಿಜಿಟಲ್ ಜ್ಞಾನ ಜಾಲ ಪ್ರವಾಸೋದ್ಯಮವನ್ನು ವೃತ್ತಿಪರ ಮತ್ತು ವಿಶ್ವಾಸಾರ್ಹ ಕ್ಷೇತ್ರವಾಗಿ ರೂಪಿಸುವ ಮಹತ್ವದ ಹೆಜ್ಜೆಗಳಾಗಿವೆ. ಸೀಪ್ಲೇನ್ ವಿಯಾಬಿಲಿಟಿ ಗ್ಯಾಪ್ ಫಂಡಿಂಗ್ , ಹೊಸ ಜಲಮಾರ್ಗಗಳ ಕಾರ್ಯಗತಗೊಳಿಕೆಮತ್ತು ಪ್ರಾದೇಶಿಕ ವಿಮಾನ ಸಂಪರ್ಕ ವಿಸ್ತರಣೆ-ಇವು ಕರಾವಳಿ ಮತ್ತು ಒಳನಾಡಿನ ದೂರದ ತಾಣಗಳಿಗೂ ಪ್ರವಾಸದ ಬಾಗಿಲು ತೆರೆಯುತ್ತವೆ. ಸ್ವಚ್ಛ ಮತ್ತು ಕಡಿಮೆ ವೆಚ್ಚದ ಸಾರಿಗೆಯ ಮೂಲಕ ಪ್ರವಾಸೋದ್ಯಮದ ಭೌಗೋಳಿಕ ವ್ಯಾಪ್ತಿ ವಿಸ್ತಾರಗೊಳ್ಳುತ್ತದೆ.

ಒಟ್ಟಿನಲ್ಲಿ 2026-27ರ ಕೇಂದ್ರ ಆಯವ್ಯಯ, ಪ್ರವಾಸೋದ್ಯಮ ದೃಷ್ಟಿಕೋನವು ತೆರಿಗೆ ಸುಲಭತೆ, ಯಾತ್ರಾ, ಪರಂಪರೆ ಅಭಿವೃದ್ಧಿ, ಪ್ರಕೃತಿ ಸಂರಕ್ಷಣೆ, ಕೌಶಲ್ಯ ನಿರ್ಮಾಣ ಮತ್ತು ಸಂಪರ್ಕ ಬಲವರ್ಧನೆ ಸೇರಿ ಈ ಎಲ್ಲವನ್ನು ಒಂದೇ ಚೌಕಟ್ಟಿನಲ್ಲಿ ಒಗ್ಗೂಡಿಸಿದೆ. ವಿಕಸಿತ ಭಾರತದ ದಾರಿಯಲ್ಲಿ ಪ್ರವಾಸೋದ್ಯಮವನ್ನು ಕೇಂದ ್ರಬಿಂದುಗೊಳಿಸಿದ ಈ ಆಯವ್ಯಯ, ದೀರ್ಘಕಾಲೀನ ಬೆಳವಣಿಗೆಗೆ ದಿಟ್ಟ ದಿಕ್ಕು ತೋರಿಸಿದೆ.

ವಿತ್ತೀಯ ಶಿಸ್ತು

ವಿತ್ತೀಯ ಶಿಸ್ತು, ಸತತ ಪ್ರಗತಿಯೇ ನಮ್ಮ ಗುರಿ

ಸರಕಾರದಲ್ಲಿ ವಿತ್ತೀಯ ಶಿಸ್ತು ಮತ್ತು ನಿರಂತರ ಆರ್ಥಿಕ ಬೆಳವಣಿಗೆಯೇ ಎನ್‌ಡಿಎ ಸರಕಾರದ ಪ್ರಮುಖ ಗುರಿ. ಭಾರತದ ಆರ್ಥಿಕತೆ ಸ್ಥಿರವಾಗಿ ಇರುವುದರ ಜತೆಗೇ ವೇಗವಾಗಿ ಬೆಳೆಯುವಂತೆ ಮಾಡುವುದಕ್ಕೂ ಸರಕಾರ ಬದ್ಧವಾಗಿದೆ. ಅಭಿವೃದ್ಧಿ ಯೋಜನೆಗಳಿಗೆ ಬೆಂಬಲ ನೀಡುತ್ತಲೇ ವಿತ್ತೀಯ ಕೊರತೆ ನಿಯಂತ್ರಣದಲ್ಲಿಡುವುದಕ್ಕೂ ಸರಕಾರ ಆದ್ಯತೆ ನೀಡುತ್ತಿದೆ. ಕಳೆದ 12 ವರ್ಷಗಳಲ್ಲಿ ಅನಿಶ್ಚಿತತೆಗಳ ಹೊರತಾಗಿಯೂ ಸ್ಥಿರ ಆರ್ಥಿಕತೆ ಕಾಯ್ದುಕೊಳ್ಳಲಾಗಿದೆ. ರೈತರು, ಯುವಕರು, ಮಹಿಳೆಯರು, ಬಡವರು, ಪರಿಶಿಷ್ಟ ಜಾತಿ-ಪಂಗಡಗಳವರು ಸರಕಾರದ ವಿವಿಧ ಯೋಜನೆಗಳ ಪ್ರಯೋಜನ ಪಡೆಯುವುದನ್ನು ಖಚಿತಪಡಿಸಿದ್ದೇವೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ಬಜೆಟ್ ಮಂಡನೆ ವೇಳೆ ಹೇಳಿದರು.

ರಫ್ತು

ಆರ್ಥಿಕತೆಗೆ ಆಮದು ಇಳಿಸಿ ರಫ್ತು ಹೆಚ್ಚಿಸಿ

ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆಯಾಗುವತ್ತಲ ಪಯಣದಲ್ಲಿ ಸರಕಾರದ ಜತೆ ನಿಂತಿದ್ದಕ್ಕಾಗಿ ಜನರಿಗೆ ಧನ್ಯವಾದ. ದೂರಗಾಮಿ ರಚನಾತ್ಮಕ ಸುಧಾರಣೆಗಳು, ಸ್ವಾವಲಂಬನೆಯೇ ಪ್ರಮುಖ ಉದ್ದೇಶವಾಗಿವೆ. ಆಮದು ಅವಲಂಬನೆ ತಗ್ಗಿಸಿದ್ದೇವೆ. ಭಾರತ ಜಾಗತಿಕ ಮಾರುಕಟ್ಟೆಗಳಲ್ಲಿ ಸಂಯೋಜನೆಗೊಳ್ಳುತ್ತಲೇ ರಫ್ತು ಹೆಚ್ಚಳಕ್ಕೆ ಗಮನ ಹರಿಸಿದೆ. ಉತ್ಪಾದನಾ ವ್ಯವಸ್ಥೆಗಳಲ್ಲಿ ಪರಿವರ್ತನೆಯನ್ನು ಹೊಸ ತಂತ್ರಜ್ಞಾನ ತಂದು ಕೊಡುತ್ತಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

3 ಮಂತ್ರ ಕರ್ತವ್ಯ

ಕರ್ತವ್ಯಗಳಿಂದ ಪ್ರೇರಿತ ಸರಕಾರದ್ದು 3 ಮಂತ್ರ

ಕರ್ತವ್ಯ ಭವನದಲ್ಲಿ ಸಿದ್ಧಪಡಿಸಿದ ಪ್ರಥಮ ಬಜೆಟ್ ಇದಾಗಿರುವುದರಿಂದ ನಾವು 3 ಕರ್ತವ್ಯಗಳಿಂದ ಪ್ರೇರಿತರಾಗಿದ್ದೇವೆ. ಸತತ ಆರ್ಥಿಕ ಪ್ರಗತಿ, ಜನರ ನಿರೀಕ್ಷೆಗಳ ಈಡೇರಿಕೆ, ಸಬ್ ಕಾ ಸಾಥ್ -ಸಬ್ ಕಾ ವಿಕಾಸ್ ನಮ್ಮ ಸರಕಾರದ 3 ಮಂತ್ರಗಳಾಗಿವೆ. 1ನೆಯದು 'ಉತ್ಪಾದಕತೆ-ಸ್ಪರ್ಧಾತ್ಮಕತೆ ಹೆಚ್ಚಿಸುವ ಮೂಲಕ ಹಾಗೂ ಅಸ್ಥಿರ ಜಾಗತಿಕ ಚಲನಶೀಲತೆಗೆ ಸ್ಥಿತಿಸ್ಥಾಪಕತ್ವ ತಂದುಕೊಡುವ ಮೂಲಕ ಆರ್ಥಿಕ ಬೆಳವಣಿಗೆ ವೇಗಗೊಳಿಸಿ ಮುಂದುವರಿಸುವುದು. 2ನೆಯದು, ಜನರ ಆಕಾಂಕ್ಷೆಗಳ ಈಡೇರಿಕೆ ಮತ್ತು ಅವರ ದುಡಿಮೆ ಸಾಮರ್ಥ್ಯ ಹೆಚ್ಚಿಸುವುದು, ಆ ಮೂಲಕ ದೇಶದ ಸಮೃದ್ಧಿ ಹಾದಿಯಲ್ಲಿ ಪ್ರಬಲ ಪಾಲುದಾರರನ್ನಾಗಿಸುವುದು. 3ನೆಯದು, ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಖಚಿತಪಡಿಸಿಕೊಳ್ಳುವುದು. ಪ್ರತಿ ಕುಟುಂಬ-ಸಮುದಾಯ-ಪ್ರದೇಶವು ಸಂಪನ್ಮೂಲ, ಸೌಲಭ್ಯ ಮತ್ತು ಅರ್ಥ ಪೂರ್ಣ ಭಾಗವಹಿಸುವಿಕೆಗೆ ಅವಕಾಶಗಳನ್ನು ಹೊಂದಿದೆ ಎಂಬುದನ್ನು ಖಚಿತಪಡಿಸುವುದು ಎಂದು ನಿರ್ಮಲಾ ಹೇಳಿದರು.

ಸಂಪುಟ ಸಮ್ಮತಿ

ಬಜೆಟ್ ಪ್ರಸ್ತಾವಕ್ಕೆ ಸಂಪುಟ ಸಭೆ ಸಮ್ಮತಿ



ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಭಾನುವಾರ ಬೆಳಗ್ಗೆ ಮುಂಗಡಪತ್ರ ಮಂಡನೆಗೂ ಮುನ್ನ ಬೆಳಗ್ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಚಿವ ಸಂಪುಟ ಸಭೆ ನಡೆದಿದ್ದು, 2026-27ನೇ ಹಣಕಾಸು ವರ್ಷದ ಕೇಂದ್ರ ಮುಂಗಡಪತ್ರ ಪ್ರಸ್ತಾವನೆಗೆ ಸಂಪುಟ ಸಭೆ ಅನುಮೋದನೆ ನೀಡಿತು. ಈ ಬಾರಿ ಸದನದಲ್ಲಿ ಮಂಡನೆ ಆಗುತ್ತಿರುವುದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ ಒಟ್ಟಾರೆ 15ನೇ ಬಜೆಟ್ ಆಗಿದೆ. ಅಲ್ಲದೇ, ಪ್ರಧಾನಿ ಮೋದಿ ಅವರ 3ನೇ ಅವಧಿಯಲ್ಲಿನ 2ನೇ ಪೂರ್ಣಾವಧಿ ಬಜೆಟ್ ಎನಿಸಿಕೊಂಡಿದೆ.

ಶಿಕ್ಷಣ

2-3 ಶ್ರೇಣಿ ನಗರ ಅಭಿವೃದ್ಧಿಗೆ ಹಣ

5 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರುವ 2 ಮತ್ತು 3ನೇ ಶ್ರೇಣಿಯ ನಗರಗಳ ಅಭಿವೃದ್ಧಿಗಾಗಿ 12.2 ಲಕ್ಷ ಕೋಟಿ ರು.ಗಳನ್ನು ಖರ್ಚು ಮಾಡುವುದಾಗಿ 2026-27ನೇ ಹಣಕಾಸು ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ದೇಶಾದ್ಯಂತ ಇರುವ 15,000 ಮಾಧ್ಯಮಿಕ ಶಾಲೆಗಳು ಮತ್ತು 500 ಕಾಲೇಜುಗಳಲ್ಲಿ ಡಿಜಿಟಲ್ ಕೌಶಲ ಉತ್ತೇಜನಕ್ಕಾಗಿ ಕಂಟೆಂಟ್ ಕ್ರಿಯೇಟಿಂಗ್ ಪ್ರಯೋಗಾಲಯಗಳನ್ನು ಸ್ಥಾಪಿಸುವುದನ್ನೂ ಈ ಬಾರಿಯ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ವಿಧಾನಸಭೆ ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಪುದುಚೇರಿ ಮತ್ತು ಕೇರಳ ರಾಜ್ಯಗಳಿಗೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಭರ್ಜರಿ ಕೊಡುಗೆ ಘೋಷಿಸಲಾಗಿದೆ. ಒಡಿಶಾ, ತಮಿಳುನಾಡು ಮತ್ತು ಆಂಧ್ರದಲ್ಲಿ ಅಪರೂಪದ ಖನಿಜಗಳ ಮೀಸಲು ವಲಯ ಸ್ಥಾಪಿಸುವ ಘೋಷಣೆ ಮಾಡಲಾಗಿದೆ. ತಮಿಳುನಾಡು, ಕೇರಳ, ಒಡಿಶಾ ಮತ್ತು ಆಂಧ್ರ ಕಾರಿಡಾರ್ ಸ್ಥಾಪನೆ ಉದ್ದೇಶ ಹೊಂದಲಾಗಿದೆ.

X ವಿ. ಸುನಿಲ್ ಕುಮಾರ್
ಶಾಸಕರು

ಈ ಬಜೆಟ್ ದೇಶದ ಸಮಗ್ರ ಬೆಳವಣಿಗೆಗೆ ಪೂರಕವಾಗಿದೆ. ಐಟಿ ನವೀನತೆ, ಪ್ರವಾಸೋದ್ಯಮ ವಿಸ್ತರಣೆ, ಒಳನಾಡು ಜಲ ಸಂಪರ್ಕ, ಹೈ-ಸ್ಪೀಡ್ ರೈಲು, ಎಂಎಸ್‌ಎಂಇಗಳು ಹಾಗೂ ಸೇವಾ ಕ್ಷೇತ್ರಗಳಿಗೆ ಒತ್ತು ನೀಡಿದೆ.

X ಶತ್ರುಘ್ನ ಸಿನ್ಹಾ
ಟಿಎಂಸಿ ಸಂಸದ

ಇದು 'ವಿಕಸಿತ ಭಾರತ' ಕ್ಕಾಗಿನ ಬಜೆಟ್ ಅಲ್ಲ, ಇದೊಂದು ಹುಸಿ ಮತ್ತು ಉತ್ಪ್ರೇಕ್ಷಿತ ಬಜೆಟ್. ಇದು, ದೇಶವು ಹೊತ್ತಿರುವ ಸಾಲವನ್ನೂ ತೀರಿಸು ವುದಿಲ್ಲ, ನಿರುದ್ಯೋಗ ಸಮಸ್ಯೆ ಯ ನ್ನೂ ಬಗೆಹರಿಸುವುದಿಲ್ಲ.

ಹೊಸ ತೆರಿಗೆಗೆ ಅವಕಾಶ ನೀಡದೆ, ಹೊಸ ತೆರಿಗೆ ವಿಧಿಸದೇ ಸರ್ವ ಸ್ಪರ್ಶಿ, ಸರ್ವ ವ್ಯಾಪಿಯಂತೆ ಎಲ್ಲ ಕ್ಷೇತ್ರಕ್ಕೂ ಆದ್ಯತೆ ನೀಡಿದ್ದಾರೆ. ದೇಶದ ಸರ್ವತೋಮುಖ ಅಭಿವೃದ್ಧಿ, ಭಾರತದ ಆರ್ಥಿಕವಾಗಿ ಸದೃಢವಾಗುವ, ವಿಶ್ವಗುರು ಆಗುವ ನಿಟ್ಟನಲ್ಲಿ ಯೋಜನೆಗಳನ್ನು ಬಜೆಟ್‌ನಲ್ಲಿ ರೂಪಿಸಿದ್ದಾರೆ. ದೇಶದ ಪ್ರತಿ ಪ್ರಜೆಗೂ ಬಜೆಟ್ ಪೂರಕವಾಗಿದೆ.

ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ಸುಧಾರಣಾ ಎಕ್ಸ್‌ಪ್ರೆಸ್ ಮೂಲಕ ವಿಕಸಿತ ಭಾರತಕ್ಕೆ ಬಜೆಟ್ ಮುನ್ನುಡಿ ಬರೆದಿದೆ. ಈ ಬಜೆಟ್ ಪ್ರಗತಿಪರ, ಅಭಿವೃದ್ಧಿಪರ ಮತ್ತು ದೂರದೃಷ್ಟಿಯ ಆಯವ್ಯಯ. ಇದೊಂದು ಕೇವಲ ಅಂಕಿ-ಅಂಶಗಳ ಲೆಕ್ಕಾಚಾರವಲ್ಲ, ಬದಲಿಗೆ ಆಧುನಿಕ ತಂತ್ರಜ್ಞಾನ ಮತ್ತು ನವಭಾರತದ ಕನಸುಗಳನ್ನು ಬೆಸೆಯುವ ಸಮಗ್ರ ನೀಲನಕ್ಷೆ.

ಟಿ.ಎ. ಶರವಣ
ವಿಧಾನ ಪರಿಷತ್ ಶಾಸಕ



ವಿಶ್ವದ ಹಲವು ರಾಷ್ಟ್ರಗಳು ಜಾಗತಿಕ ಆರ್ಥಿಕ ಸಂಕಷ್ಟದಲ್ಲಿರುವಾಗ ಭಾರತ ತನ್ನ ಆರ್ಥಿಕ ಪ್ರಗತಿ ಮುಂದುವರಿಸಿಕೊಂಡು ಹೋಗುವ ಅಭಿವೃದ್ಧಿ ಪರವಾದ ಬಜೆಟ್. ಭವಿಷ್ಯದ ಚಾಂಪಿಯನ್‌ಗಳಿಗಾಗಿ ಸುಮಾರು 10 ಸಾವಿರ ಕೋಟಿ ರು. ಆರ್ಥಿಕ ನೆರವು ಕೊಡುವಂತಹ ಯೋಜನೆ ಮಾಡಿದ್ದಾರೆ.

ಬಸವರಾಜ ಬೊಮ್ಮಾಯಿ
ಮಾಜಿ ಮುಖ್ಯಮಂತ್ರಿ

ಬಜೆಟ್ ಸುತ್ತಲಿನ ಪ್ರಚಾರಕ್ಕೆ ತಕ್ಕಂತೆ ಹೊಮ್ಮುವಲ್ಲಿ ಬಜೆಟ್ ವಿಫಲವಾಗಿದೆ, ಹಣಕಾಸು ಸಚಿವರ ಭಾಷಣದಲ್ಲಿ ಪಾರದರ್ಶಕತೆಯ ಕೊರತೆಯಿತ್ತು. ಪ್ರಮುಖ ಕಾರ್ಯಕ್ರಮಗಳು ಮತ್ತು ಯೋಜನೆಗಳಿಗೆ ಬಜೆಟ್ ಹಂಚಿಕೆಗಳ ಬಗ್ಗೆ ಯಾವುದೇ ಕಲ್ಪನೆಯನ್ನು ನೀಡದ ಕಾರಣ ಭಾಷಣವು ಪಾರದರ್ಶಕವಾಗಿರಲಿಲ್ಲ.

ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಕೇಂದ್ರ ಬಜೆಟ್ 2026





20,000 ಕೋಟಿ ರು.

5 ಉದ್ದಿಮೆಗಳ ಕಾರ್ಬನ್ ಕ್ಯಾಪ್ಚರ್ ಯುಟಿಲೈಸೇಷನ್-ಸ್ಟೋರೇಜ್ ಟೆಕ್ನಾಲಜೀಸ್ ವೆಚ್ಚಕ್ಕೆ 5 ವರ್ಷಕ್ಕೆ 20,000 ಕೋಟಿ ರು. ಮೀಸಲು.

350 ಸುಧಾರಣಾ ಕ್ರಮ ಜಾರಿ

2025ರ ಆ.15 ಪ್ರಧಾನಿ ಮೋದಿ ಘೋಷಿಸಿದಂತೆ ಜಿಎಸ್‌ಟಿ ಸರಳೀಕರಣ ಸೇರಿ ಸಮಗ್ರ ಆರ್ಥಿಕ ಸುಧಾರಣೆ ಮಾಡಿ 350 ಕ್ರಮಗಳನ್ನು ಜಾರಿಗೊಳಿಸಲಾಗಿದೆ.

26 ವರ್ಷಕ್ಕೆ ಶೇ.40 ಏರಿಕೆ

ರಕ್ಷಣಾ ಇಲಾಖೆಗಳ ವೆಚ್ಚವು ಕಳೆದ 26 ವರ್ಷಗಳಲ್ಲಿ ಶೇ.40ರಷ್ಟು ಏರಿಕೆಯಾಗಿದೆ. ಸ್ಥಳೀಯ ಸಂಶೋಧನೆ ಮತ್ತು ಉತ್ಪಾದನೆಯನ್ನು ಪ್ರೋತ್ಸಾಹಿಸಲಿದೆ.

ಉನ್ನತ ಶಿಕ್ಷಣಕ್ಕೆ ಒತ್ತು

ದೇಶದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಕ್ಯಾಂಪಸ್ ಮೂಲ ಸೌಕರ್ಯಕ್ಕಾಗಿ 55,724 ಕೋಟಿ ರು. ಬಜೆಟ್ ಅನುದಾನ ಘೋಷಿಸಲಾಗಿದೆ.

2025-26ನೇ ಹಣಕಾಸು ವರ್ಷ ಬಜೆಟ್‌ಗಿಂತ 2026-27ರ ಬಜೆಟ್ ಗಾತ್ರ ಶೇ.15.3 ಅಧಿಕ

ಭಾರತೀಯ ಸೇನೆ ಆಧುನೀಕರಣಕ್ಕೆ 2.19 ಲಕ್ಷ ಕೋಟಿ ರು., ವಾರ್ಷಿಕ ಶೇ. 21.84ರ ಹೆಚ್ಚಳ

ದೇಶದ ರಕ್ಷಣೆಗೆ ₹7.84 ಲಕ್ಷ ಕೋಟಿ

ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ 2026-27ನೇ ಹಣಕಾಸು ವರ್ಷದಲ್ಲಿ ಶಸ್ತ್ರಾಸ್ತ್ರಗಳ ಖರೀದಿ, ಸುಧಾರಣೆ, ವೇತನ, ವೇತನೇತರ ವೆಚ್ಚಕ್ಕಾಗಿ ದೇಶದ ರಕ್ಷಣಾ ಇಲಾಖೆಗೆ 7.84 ಲಕ್ಷ ಕೋಟಿ ರು.ಗಳಷ್ಟು ಗಣನೀಯ ಪ್ರಮಾಣದ ನಿಧಿ ಮೀಸಲಿರಿಸಿದೆ. ಆ ಮೂಲಕ ಹಿಂದಿನ ಹಣಕಾಸು ವರ್ಷದ ಅನುದಾನಕ್ಕೆ ಹೋಲಿಸಿದಲ್ಲಿ ಶೇ.15.3ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಕೇಂದ್ರ ಸರಕಾರ ಹೇಳಿದೆ.

ವಾಸ್ತವವಾಗಿ, ರಕ್ಷಣಾ ಸಚಿವಾಲಯವು ಶೇಕಡಾ 20 ರಷ್ಟು ಹೆಚ್ಚಳವನ್ನು ಬಯಸಿತ್ತು. ಆದರೆ, ಹಣಕಾಸು ಸಚಿವಾಲಯ ಶೇ.15.3ರಷ್ಟು ಹೆಚ್ಚಳ ಮಾಡಿದೆ ಎಂಬುದು ಉಲ್ಲೇಖಾರ್ಹ. ರಕ್ಷಣಾ ಇಲಾಖೆ 2025ರ ಮೇ ತಿಂಗಳಲ್ಲಿಯೂ 50,000 ಕೋಟಿ ರು.ಗಳಷ್ಟು ಬಜೆಟ್ ಹೆಚ್ಚಳವನ್ನು ಪ್ರಸ್ತಾಪಿಸಿತ್ತು. 1971ರ ಯುದ್ಧದ ಬಳಿಕ ಪಾಕಿಸ್ತಾನ ಜತೆಗೆ ದೊಡ್ಡ ಮಟ್ಟದಲ್ಲಿ ನಡೆದ ಸೇನಾ ಸಂಘರ್ಷ 'ಆಪರೇಷನ್ ಸಿಂದೂರ್' ನಂತರ ಸಶಸ್ತ್ರ ಪಡೆಗಳ ಮೇಲಿನ ವೆಚ್ಚವನ್ನು ಹೆಚ್ಚಿಸಲಾಗಿದೆ ಎಂಬುದು ಗಮನಾರ್ಹ. 2025-26ನೇ ಹಣಕಾಸು ವರ್ಷದಲ್ಲಿ ದೇಶದ 3 ಸಶಸ್ತ್ರ ಪಡೆ ಗಳನ್ನು ಒಳಗೊಂಡ ರಕ್ಷಣಾ ಪಡೆಗಳಿಗೆ 6.81 ಲಕ್ಷ ಕೋಟಿ ರು.ಗಳನ್ನು ಮೀಸಲಿಡಲಾಗಿತ್ತು. ಅಂದರೆ, ಹಿಂದಿನ(2024-25) ವರ್ಷಕ್ಕೆ ಹೋಲಿಸಿದಲ್ಲಿ ಕಳೆದ ಸಾಲಿನ ಬಜೆಟ್‌ನಲ್ಲಿ ಈ ರಕ್ಷಣಾ ಅನುದಾನಕ್ಕೆ ಹೋಲಿಸಿದಲ್ಲಿ ಶೇ.9.2ರಷ್ಟು ಹೆಚ್ಚಳ ಮಾಡಲಾಗಿತ್ತು. 2026ರ ಹಣಕಾಸು ವರ್ಷದಲ್ಲಿ ರಕ್ಷಣಾ ಸಚಿವಾಲಯದ ಬಂಡವಾಳ ವೆಚ್ಚದ ಬಜೆಟ್ ಪ್ರಮಾಣವೇ 1.8 ಲಕ್ಷ ಕೋಟಿ ರು.ಗಳಾಗಿದೆ. ಯುದ್ಧ ವಿಮಾನಗಳು ಮತ್ತು ಏರೋ ಎಂಜಿನ್‌ಗಳಿಗೆ 63,733 ಕೋಟಿ ರು.ಗಳನ್ನು ಹಂಚಿಕೆ ಮಾಡಲಾಗಿದೆ. ಭಾರತದ ಸೇನಾಪಡೆಗಳ ಆಧುನೀಕರಣಕ್ಕಾಗಿ 2026-27ರ ಹಣಕಾಸು ವರ್ಷಕ್ಕಾಗಿ 2.19 ಲಕ್ಷ ಕೋಟಿ ರು. ಅನುದಾನದ ಭರವಸೆ ನೀಡಲಾಗಿದೆ. ಅಂದರೆ 2025-26ನೇ ಹಣಕಾಸು ವರ್ಷಕ್ಕೆ ಹೋಲಿಸಿದಲ್ಲಿ ಶೇ. 21.84ರಷ್ಟು ಹೆಚ್ಚಳವಾಗಿದೆ. ಪಿಂಚಣಿ ಪಾವತಿಗಾಗಿ ಅನುದಾನ ಹಂಚಿಕೆಯನ್ನು ಶೇ.6.53ರಷ್ಟು ಹೆಚ್ಚಿಸಿ 1.71 ಲಕ್ಷ ಕೋಟಿ ರು. ಮೀಸಲಿಡಲಾಗಿದೆ. ನಿರ್ವಹಣೆ, ಮದ್ದುಗುಂಡುಗಳು, ಇಂಧನ, ದುರಸ್ತಿ ಮೊದಲಾದ ಪುನರಾವರ್ತಿತ ವೆಚ್ಚಗಳು ಮತ್ತು ಸಹಾಯಕ ಸಿಬ್ಬಂದಿ ವೇತನ ಸೇರಿದಂತೆ ನಿತ್ಯದ ಕಾರ್ಯಾಚರಣೆಗಳಿಗೆ ಮೀಸಲಿಡಬೇಕಾದ ಬಜೆಟ್ ಮೊತ್ತದಲ್ಲಿ ಶೇ.17.24ರಷ್ಟು ಹೆಚ್ಚಳ ಮಾಡಲಾಗಿದೆ.

ಆಮದು ಸುಂಕ ಮನ್ನಾ

ರಕ್ಷಣಾ ವಲಯದ ಘಟಕಗಳಿಂದ ನಿರ್ವಹಣೆ, ದುರಸ್ತಿ ಅಥವಾ ಕೂಲಂಕಷ ಪರೀಕ್ಷೆಗೆ ಬಳಸುವ ವಿಮಾನಗಳ ಬಿಡಿಭಾಗಗಳ ತಯಾರಿಸಲು ಆಮದು ಮಾಡಿಕೊಳ್ಳುವ ಕಚ್ಚಾ ವಸ್ತುಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕ ಮನ್ನಾ ಮಾಡುವುದಾಗಿ ಈ ಬಾರಿಯ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಸ್ತಾಪಿಸಿದ್ದಾರೆ.

ರಕ್ಷಣಾ ವೆಚ್ಚ ಹೆಚ್ಚಳ

2020 ₹4.71 ಲಕ್ಷ ಕೋಟಿ	2023 ₹5.94 ಲಕ್ಷ ಕೋಟಿ
2021 ₹4.78 ಲಕ್ಷ ಕೋಟಿ	2024 ₹6.21 ಲಕ್ಷ ಕೋಟಿ
2022 ₹5.25 ಲಕ್ಷ ಕೋಟಿ	2025 ₹ 6.81ಲಕ್ಷ ಕೋಟಿ

ಉಡಾನ್: ಶೇ.27ರಷ್ಟು ಅನುದಾನ ಹೆಚ್ಚಳ

2026-27ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರಕಾರದ ಮಹತ್ವಾಕಾಂಕ್ಷೆಯ ಪ್ರಾದೇಶಿಕ ವಾಯು ಸಂಪರ್ಕ ಯೋಜನೆಗೆ (ಉಡಾನ್) ಸುಮಾರು ಶೇ.27ರಷ್ಟು ಹೆಚ್ಚುವರಿ ಅನುದಾನ ದೊರೆಯಲಿದೆ. 2025-26ನೇ ಸಾಲಿನ ಪರಿಷ್ಕೃತ ಬಜೆಟ್ ಅಂದಾಜಿನ ಪ್ರಕಾರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಾಗರಿಕ ವಿಮಾನಯಾನ ಸಚಿವಾಲಯದ ಒಟ್ಟು ಅನುದಾನ ಹಂಚಿಕೆಯನ್ನು ₹4,688.03 ಕೋಟಿಗೆ ನಿಗದಿಪಡಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಈ ಅನುದಾನ ಹಂಚಿಕೆ ₹4,669.92 ಕೋಟಿಗೆ ತಲುಪಲಿದೆ.

ಹೀಗಾಗಿ ಉಡಾನ್‌ಗೆ ಹೆಚ್ಚಿನ ಅನುದಾನ ದೊರೆಯುವ ನಿರೀಕ್ಷೆ ಇದೆ. ಪ್ರಸಕ್ತ ವರ್ಷದಲ್ಲಿ ಉಡಾನ್ ಯೋಜನೆಯ ಅನುದಾನ 434.50 ಕೋಟಿ ಆಗಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಇದು ₹550 ಕೋಟಿಗೆ ಏರಿಕೆಯಾಗಲಿದೆ ಎಂದು ಬಜೆಟ್ ದಾಖಲೆಗಳಿಂದ ತಿಳಿದುಬಂದಿದೆ. ಹೀಗಾದರೆ ಉಡಾನ್ ಅನುದಾನ ಹಂಚಿಕೆಯಲ್ಲಿ ಶೇ.27 ಹೆಚ್ಚಳವಾದಂತಾಗುತ್ತದೆ. ಪ್ರಾದೇಶಿಕ ವಿಮಾನಯಾನ ಕ್ಷೇತ್ರದಲ್ಲಿ ಸುಧಾರಣೆ ತಂದು ವಾಯುಯಾನ ಸೇವೆಯನ್ನು ಉತ್ತೇಜಿಸುವ ಉದ್ದೇಶವನ್ನು ಉಡಾನ್ ಹೊಂದಿದೆ.



ಸುಧಾರಣೆ, ಅಭಿವೃದ್ಧಿಯೇ ಗುರಿ

ಬಜೆಟ್ ಮಂಡನೆ ಬಳಿಕ ನಿರ್ಮಲಾ ಸುದ್ದಿಗೋಷ್ಠಿ

ತಮ್ಮ 9ನೇ ಬಜೆಟ್ ಮಂಡನೆಯಲ್ಲಿ ಆರೋಗ್ಯ, ಕೃಷಿ, ಶಿಕ್ಷಣ, ತಂತ್ರಜ್ಞಾನ, ರಕ್ಷಣೆ, ರಫ್ತು ವಹಿವಾಟು, ತಯಾರಿಕಾ ಉದ್ಯಮ, ಮೂಲ ಸೌಕರ್ಯ, ಮಹಿಳೆಯರನ್ನು ಉದ್ಯಮಿಗಳಾಗಿಸುವುದು ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೆ ಒತ್ತು ನೀಡಿರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಬಜೆಟ್ ಮಂಡನೆ ನಂತರ ಸುದ್ದಿಗೋಷ್ಠಿ ನಡೆಸಿದ ಅವರು, ಸೆಮಿಕಂಡಕ್ಟರ್ ಉದ್ಯಮ ಕ್ಷೇತ್ರವು ಭಾರತಕ್ಕೆ ಸ್ವಾವಲಂಬನೆ ತರಲಿದೆ. ಹಾಗಾಗಿ ಆ ಕ್ಷೇತ್ರವನ್ನು ಬಲಪಡಿಸುವ ಮತ್ತು ಐಪಿ-ಸಂಬಂಧಿತ ವಿಷಯಗಳನ್ನು ಪರಿಹರಿಸುವ 2 ಪ್ರಮುಖ ಘೋಷಣೆಗಳನ್ನು ಮಾಡಲಾಗಿದೆ. ಸೆಮಿಕಂಡಕ್ಟರ್ ಮಿಷನ್ 2.0 ಜಾರಿಗಾಗಿ 40 ಸಾವಿರ ಕೋಟಿ ರು. ಮೀಸಲಿಡಲಾಗಿದೆ. ಈ ಕ್ರಮದಿಂದ ಎಲೆಕ್ಟ್ರಾನಿಕ್ಸ್ ಉದ್ಯಮ ವಲಯವನ್ನು ಸ್ವಾವಲಂಬಿಯನ್ನಾಗಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಭಾರತ ಕಚ್ಚಾಪದಾರ್ಥಗಳು, ರಾಸಾಯನಿಕಗಳ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಸಲುವಾಗಿ ತಮಿಳುನಾಡು, ಒಡಿಶಾ, ಕೇರಳ, ಆಂಧ್ರಪ್ರದೇಶ ಸೇರಿದಂತೆ ದೇಶದ ವಿವಿಧೆಡೆ 'ಅಪರೂಪದ ಭೂ ಖನಿಜಗಳ'(ರೇರ್ ಅರ್ಥ ಮಿನರಲ್ಸ್) ಕಾರಿಡಾರ್‌ಗಳ ಸ್ಥಾಪನೆ ಮಾಡಲಿದೆ. ಇದು ಲೀಥಿಯಂ, ಆಯಸ್ಕಾಂತ ಮತ್ತು ಅಪರೂಪದ ಭೂ ಖನಿಜಗಳ ಮೇಲಿನ ಆಮದು ಅವಲಂಬನೆಯನ್ನು ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಲಿದೆ. ಇದರಿಂದ ಭಾರತದ ಆರ್ಥಿಕತೆ ಮೇಲೆ ದೊಡ್ಡ ಮಟ್ಟದ ಪರಿಣಾಮ ಬೀರಲಿದೆ ಎಂದರು.

ಔಷಧಗಳು ಮತ್ತು ವಿಶೇಷ ವೈದ್ಯಕೀಯ ಆಹಾರಕ್ಕಾಗಿ ಆಮದು ಸುಂಕ ವಿನಾಯಿತಿಯ ಅಡಿಯಲ್ಲಿ 7 ಹೆಚ್ಚುವರಿ ಅಪರೂಪದ ಕಾಯಿಲೆಗಳನ್ನು ಸೇರಿಸಲಾಗಿದೆ. 3 ಹೊಸ ಆಯುಷ್ ಸಂಸ್ಥೆಗಳ ಸ್ಥಾಪನೆ ಘೋಷಣೆ ಮಾಡಲಾಗಿದೆ. ಕ್ಯಾನ್ಸರ್ ಔಷಧಿಗಳಿಗೆ ಕಸ್ಟಮ್ಸ್ ಸುಂಕ ರದ್ದು ಮಾಡಲಾಗಿದೆ ಎಂದರು. 21ನೇ ಶತಮಾನ ಪೂರ್ಣ ತಂತ್ರಜ್ಞಾನದಿಂದ ನಡೆಸಲ್ಪಡುತ್ತದೆ. ಜನರಿಗೆ ಪ್ರಯೋಜನವಾಗುವಂತೆ ತಂತ್ರಜ್ಞಾನ ಜಾರಿಗೆ ತರುವುದು ನಮ್ಮ ಉದ್ದೇಶ. ಇದಲ್ಲದೇ 7 ಹೈಸ್ಪೀಡ್ ರೈಲು ಕಾರಿಡಾರ್‌ಗಳ ನಿರ್ಮಾಣಕ್ಕೂ ಆದ್ಯತೆ ನೀಡಲಾಗಿದೆ ಎಂದರು.

ನಾರಿ ಉದ್ಯಮಿಯಾಗಲು ದಾರಿ

ಮಹಿಳೆಯರು ಸಾಲ ಆಧಾರಿತ ಜೀವನೋಪಾಯದಿಂದ ತಮ್ಮದೇ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅವಕಾಶವಾಗುವಂತೆ ಮಹಿಳೆಯರಿಗೆ ನೆರವಾಗಲು ಈ ಬಾರಿಯ ಬಜೆಟ್‌ನಲ್ಲಿ ಕೇಂದ್ರ ಸರಕಾರ 'ಶಿ ಮಾರ್ಟ್' ಆರಂಭಿಸಲಾಗುವುದು ಎಂದು ವಿತ್ತ ಸಚಿವೆ ನಿರ್ಮಲಾ ಪ್ರಕಟಿಸಿದ್ದಾರೆ. ಈ ಯೋಜನೆ ಗ್ರಾಮೀಣ ಭಾಗದ ಉದ್ಯಮಶೀಲ ವನಿತೆಯರನ್ನು ಮತ್ತಷ್ಟು ಸ್ವಾವಲಂಬಿಯಾಗಿಸಲಿದೆ ಎಂದಿದ್ದಾರೆ.

ಉದ್ಯಮಿಯಾಗಲು ಬಯಸುವ ವನಿತೆಯರು 'ಶಿ ಮಾರ್ಟ್' ಯೋಜನೆಯಡಿ ತಮ್ಮದೇ ಆದ ಬ್ರ್ಯಾಂಡ್ ಉತ್ಪನ್ನಗಳನ್ನು ಸೃಷ್ಟಿಸಬಹುದಾಗಿದೆ. ಅವುಗಳನ್ನು ದೊಡ್ಡ ಮಾರುಕಟ್ಟೆವರೆಗೂ ಕೊಂಡೊಯ್ಯಬಹುದಾಗಿದೆ. ಅದಕ್ಕಾಗಿ ಸ್ಥಳೀಯ ಸಂಸ್ಥೆಗಳು, ಸ್ವಸಹಾಯ ಸಂಘಗಳ ನೆರವನ್ನೂ ಬಳಸಿಕೊಳ್ಳಬಹುದಾಗಿದೆ. ಆ ಮೂಲಕ ಸುಸ್ಥಿರ ಆದಾಯದ ಮಾರ್ಗವನ್ನು ಕಂಡುಕೊಳ್ಳಬಹುದಾಗಿದೆ ಎಂದು ಉತ್ತೇಜನದ ಮಾತುಗಳನ್ನಾಡಿದರು.

ಗ್ರಾಮೀಣ ಉತ್ಪನ್ನಗಳಿಗೆ ದೊಡ್ಡ ಮಾರುಕಟ್ಟೆ ದೊರಕಿಸಿಕೊಡುವ ಸಲುವಾಗಿ ಕ್ಲಸ್ಟರ್ ಮಟ್ಟದಲ್ಲಿ 'ಶಿ ಮಾರ್ಟ್' ಮಳಿಗೆಗಳ ನಿರ್ಮಾಣಕ್ಕೂ ಸರಕಾರ ಒತ್ತು ನೀಡಲಿದೆ ಎಂದರು. ಉದ್ಯಮಿಗಳಾಗಲು ಬಯಸುವ ಮಹಿಳೆಯರು 'ಶಿ ಮಾರ್ಟ್' ಯೋಜನೆಯಡಿ ಸ್ವತಃ ಉದ್ಯಮಿಗಳಾಗಬಹುದು ಮತ್ತು ಸಮುದಾಯದ ಒಡೆತನದಲ್ಲಿ ಚಿಲ್ಲರೆ ಮಾರಾಟ ಮಳಿಗೆಗಳನ್ನೂ ಆರಂಭಿಸಬಹುದಾಗಿದೆ. ಅಲ್ಲದೇ, ಸಮುದಾಯ ಅಥವಾ ಸ್ವಂತ ಸ್ವಾಮ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ಒಕ್ಕೂಟಗಳಲ್ಲಿಯೂ ಸ್ಥಾಪಿಸಬಹುದಾಗಿದೆ. ಅದಕ್ಕಾಗಿ ಮೌಲ್ಯವರ್ಧಿತ ಮತ್ತು ನವೀನ ಹಣಕಾಸು ಸಾಧನಗಳ ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಲಖ್‌ಪತಿ ದೀದಿ ಪ್ರಭಾವಿತ

ಕೇಂದ್ರದ ಎನ್‌ಡಿಎ ಸರಕಾರ ಕೆಲ ವರ್ಷ ಹಿಂದೆ ಆರಂಭಿಸಿದ 'ಲಖ್‌ಪತಿ ದೀದಿ' ಕಾರ್ಯಕ್ರಮ ಯಶಸ್ವಿಯಾಗಿದೆ. ಲಖ್ಪತಿ ದೀದಿ ಕಾರ್ಯಕ್ರಮದಲ್ಲಿ ವನಿತೆಯರಿಗೆ ಡ್ರೋನ್ ದುರಸ್ತಿ, ನಲ್ಲಿ ರಿಪೇರಿ, ಎಲ್‌ಇಡಿ ಬಲ್ಬ್‌ಗಳ ತಯಾರಿಕೆ ಮೊದಲಾದ ಕೌಶಲಗಳಿಗೆ ತರಬೇತಿ ನೀಡಲಾಗಿದೆ. ಈ ಯೋಜನೆಯಿಂದ ಪ್ರಭಾವಿತವಾಗಿಯೇ 'ಶಿ ಮಾರ್ಟ್' ಯೋಜನೆ ಆರಂಭಕ್ಕೆ ಪ್ರಸ್ತಾವನೆ ಮಾಡಲಾಗಿದೆ.

ವಿಶ್ಲೇಷಣೆ

ಪ್ರೊ.ಜವಹರ್ ದೊರೆಸ್ವಾಮಿ
ಕುಲಪತಿ, ಪಿಇಎಸ್ ವಿಶ್ವವಿದ್ಯಾಲಯ

ಶಿಕ್ಷಣ, ಉದ್ಯೋಗ, ಉದ್ಯಮ ಒಗ್ಗೂಡಿಸುವತ್ತ ಬಜೆಟ್ ದೃಷ್ಟಿ

ಪಿಇಎಸ್ ಸಂಸ್ಥಾಪಕರು, ನನ್ನ ತಂದೆ ದಿ.ಎಂ.ಆರ್. ದೊರೆಸ್ವಾಮಿ ಅವರು ಶಿಕ್ಷಣ ಕೇವಲ 'ಪಠ್ಯಪುಸ್ತಕಗಳಿಗೆ ಸೀಮಿತವಾದ ವಿಷಯವಲ್ಲ' ಎಂದು ಹೇಳುತ್ತಿದ್ದರು. ಈ ಮಾತು 2026-27ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸ್ಪಷ್ಟವಾಗಿದೆ. ಅವರ ಮಾತಿನಂತೆ ಈ ಬಾರಿಯ ಬಜೆಟ್ 'ಶಿಕ್ಷಣ-ಉದ್ಯೋಗ-ಉದ್ಯಮ'ವನ್ನು ಒಗ್ಗೂಡಿಸುವ ನಿಟ್ಟಿನಲ್ಲಿದೆ.

ಬಜೆಟ್‌ನಲ್ಲಿ ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮದೊಂದಿಗೆ ಜೋಡಿಸುವ ಸ್ಪಷ್ಟ ದೃಷ್ಟಿಕೋನವು ಅತ್ಯಂತ ಮಹತ್ವದ ಮತ್ತು ಭವಿಷ್ಯಮುಖಿ ಹೆಜ್ಜೆಯಾಗಿದೆ. ಈ ಆಶಯವು 1972ರಲ್ಲಿ ಸ್ಥಾಪನೆಯಾದ ಪಿಇಎಸ್ ಸಂಸ್ಥೆಯ ಮೂಲ ತತ್ವಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತದೆ. ಶಿಕ್ಷಣ ಎಂದರೆ ಕೇವಲ ಪಾಠ ಪುಸ್ತಕಗಳಿಗೆ ಸೀಮಿತವಾದ ವಿಷಯವಲ್ಲ. ಅದು ಜೀವನೋಪಾಯ, ನವೋದ್ಯಮ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಶಕ್ತಿಯಾದ ಸಾಧನವಾಗಿತ್ತು. ಪಿಇಎಸ್ ಸ್ಥಾಪನೆಯಾದ ದಿನದಿಂದಲೂ ಈ ನಿಟ್ಟಿನಲ್ಲಿಯೇ ಆಲೋಚನೆ ಮಾಡುವುದಷ್ಟೇ ಅಲ್ಲದೇ, ಶಿಕ್ಷಣ- ಉದ್ಯೋಗ-ಉದ್ಯಮ ಅಂಶಗಳ ನಡುವಿನ ಅಂತರವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ನಿರಂತರವಾಗಿ ರೂಪಿಸಿಕೊಂಡಿದೆ. ಮೊದಲ ಮೂರು ದಶಕಗಳಲ್ಲಿ ಪಠ್ಯಕ್ರಮ ವಿನ್ಯಾಸ, ಬೋಧನಾ ವಿಧಾನ, ಅಧ್ಯಯನ ಪ್ರಕ್ರಿಯೆಗಳು ಮತ್ತು ಮೌಲ್ಯಮಾಪನ ವ್ಯವಸ್ಥೆಗಳನ್ನು ಉದ್ಯೋಗ ಮಾರುಕಟ್ಟೆಯ ಅಗತ್ಯಗಳಿಗೆ ಹೊಂದಾಣಿಕೆಗೊಳಿಸುವುದರ ಮೇಲೆ ಪ್ರಧಾನವಾಗಿ ಗಮನಹರಿಸಿತು. ಇದೀಗ ನಮ್ಮ ಆಲೋಚನೆಗೆ ತಕ್ಕಂತೆ ಕೇಂದ್ರ ಸರಕಾರ ಬಜೆಟ್‌ನಲ್ಲಿ ಕಾರ್ಯಯೋಜನೆ ರೂಪಿಸಿರುವುದು ಸಂಸ್ಥೆಗೆ ಹೆಮ್ಮೆಯ ಸಂಗತಿ. 'ಶಿಕ್ಷಣ-ಉದ್ಯೋಗ-ಉದ್ಯಮ' ತತ್ವಗಳು ರಾಷ್ಟ್ರೀಯ ನೀತಿಯಲ್ಲಿ ಸ್ಪಷ್ಟವಾಗಿ ಪ್ರತಿಫಲಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಪಿಇಎಸ್ ಸಂಸ್ಥೆ ತನ್ನ ಆರಂಭದಿಂದಲೂ ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮ ದೊಂದಿಗೆ ಸಂಯೋಜಿಸುವ ಉದ್ದೇಶದಿಂದ ಕಾರ್ಯನಿರ್ವಹಿಸುತ್ತ ಬಂದಿದೆ. ಮುಂದಿನ ಒಂದು ದಶಕದಲ್ಲಿ, ಪಿಇಎಸ್ ತನ್ನ ಗಮನವನ್ನು ಉದ್ಯಮಶೀಲತೆಯನ್ನು ಉತ್ತೇಜಿಸುವ ದಿಕ್ಕಿನಲ್ಲಿ ವಿಸ್ತರಿಸಿತು. ಇದರ ಭಾಗವಾಗಿ ನವೋದ್ಯಮ ಮತ್ತು ಉದ್ಯಮಶೀಲತೆ ಕೇಂದ್ರ ಮತ್ತು ಪಿಇಎಸ್ ವೆಂಚರ್ ಲ್ಯಾಬ್‌ಗಳನ್ನು ಸ್ಥಾಪಿಸಲಾಯಿತು. ಇವು ವಿದ್ಯಾರ್ಥಿ ಗಳಿಗೆ ತಮ್ಮ ಆಲೋಚನೆಗಳನ್ನು ಯಶಸ್ವಿ ಉದ್ಯಮಗಳಾಗಿ ರೂಪಿಸುವ ವೇದಿಕೆಯನ್ನು ಒದಗಿಸಿವೆ.

2026-27ರ ಬಜೆಟ್‌ನ ಪ್ರಮುಖ ಅಂಶವೆಂದರೆ ಕೇವಲ ಅನುದಾನ ಹಂಚಿಕೆಗೆ ಸೀಮಿತವಾಗದೆ. ಫಲಿತಾಂಶ ಆಧಾರಿತ ವ್ಯವಸ್ಥೆಯತ್ತ ನಡೆದಿರುವ ಬದಲಾವಣೆ. ಶಿಕ್ಷಣವನ್ನು ನೇರವಾಗಿ ಉದ್ಯೋಗ ಮತ್ತು ಉದ್ಯಮ ಸೃಷ್ಟಿಯೊಂದಿಗೆ ಸಂಪರ್ಕಿಸುವ ಈ ಕ್ರಮವು ಭವಿಷ್ಯಸಿದ್ಧ, ಪ್ರಾಯೋಗಿಕ ಮತ್ತು ಬೆಳವಣಿಗೆ ಮುಖಿ ಶಿಕ್ಷಣ ವ್ಯವಸ್ಥೆಯತ್ತ ಸಾಗುವ ಸಂಕೇತವಾಗಿದೆ. ಈ ಬಜೆಟ್, ಶಿಕ್ಷಣವನ್ನು ಭಾರತದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯ ಮೂಲಸ್ತಂಭವೆಂದು ಪುನರುಚ್ಚರಿಸಿದೆ. ಮೂಲಸೌಕರ್ಯ ಅಭಿವೃದ್ಧಿ, ಸಮಾವೇಶ ಮತ್ತು ಭವಿಷ್ಯಮುಖಿ ಕೌಶಲ್ಯ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಪಿಇಎಸ್ ಸಂಸ್ಥೆ ಕಳೆದ ಐದು ದಶಕಗಳಿಂದಲೇ ಈ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಹೆಮ್ಮೆಯಿಂದ ಉಲ್ಲೇಖಿಸಬಹುದು. ಶಿಕ್ಷಣವನ್ನು ಉದ್ಯೋಗ ಮತ್ತು ಉದ್ಯಮದೊಂದಿಗೆ ಅರ್ಥಪೂರ್ಣವಾಗಿ ಜೋಡಿಸಿದಾಗ ಅದು ರಾಷ್ಟ್ರದ ಪ್ರಗತಿಗೆ ಅತ್ಯಂತ ಶಕ್ತಿಶಾಲಿ ಚಾಲಕ ಶಕ್ತಿಯಾಗುತ್ತದೆ ಎಂಬ ನಂಬಿಕೆಯನ್ನು ಕೇಂದ್ರ ಬಜೆಟ್ 2026-27 ಮತ್ತಷ್ಟು ದೃಢಪಡಿಸಿದೆ.

ಗ್ರಾಮ ಸ್ವರಾಜ್

ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್

'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ'(ಎಂ-ನರೇಗಾ) ಬದಲಿಸಿ 'ವಿಬಿ ಜಿ ರಾಮ್ ಜಿ' ಹೆಸರಿನ ಯೋಜನೆ ಪರಿಚಯಿಸಿದ ಕೇಂದ್ರ ಸರಕಾರ, ಗಾಂಧಿ ಹೆಸರನ್ನು ಕೈಬಿಟ್ಟಿದ್ದಕ್ಕೆ ಟೀಕೆ ವ್ಯಕ್ತವಾಗಿದ್ದರಿಂದ ಈ ಬಾರಿಯ ಬಜೆಟ್‌ನಲ್ಲಿ 'ಗಾಂಧಿ' ಹೆಸರಿನಲ್ಲಿ ಹೊಸ ಯೋಜನೆಯನ್ನು ಪ್ರಕಟಿಸಲಾಗಿದೆ.ಖಾದಿ, ಕೈಮಗ್ಗ ಮತ್ತು ಕರಕುಶಲ ವಲಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ 'ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಯೋಜನೆ'ಯನ್ನು ಜಾರಿಗೆ ತರುವುದಾಗಿ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಭಾಷಣದಲ್ಲಿ ಘೋಷಿಸಿದ್ದಾರೆ. 'ಒಂದು ಜಿಲ್ಲೆ-ಒಂದು ಉತ್ಪನ್ನ' ಪರಿಕಲ್ಪನೆಯಡಿ 'ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಯೋಜನೆ' ಅನುಷ್ಠಾನಕ್ಕೆ ಬರಲಿದೆ. ಈ ಯೋಜನೆ ಮೂಲಕ ಖಾದಿ ಉದ್ಯಮ ಮತ್ತು ಕರಕುಶಲ ವಸ್ತುಗಳ ಉತ್ಪಾದನೆ, ತರಬೇತಿ, ಕೌಶಲಾಭಿವೃದ್ಧಿ ಮತ್ತು ಜಾಗತಿಕ ಮಾರುಕಟ್ಟೆ ಪ್ರವೇಶಕ್ಕೆ ಅವಕಾಶ ಹೆಚ್ಚಿಸಲಾ ಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ಗೃಹ ಖಾತೆ

ಗೃಹ ಸಚಿವಾಲಯಕ್ಕೆ ₹2.55 ಲಕ್ಷ ಕೋಟಿ

ಕೇಂದ್ರದ ಗೃಹ ಸಚಿವಾಲಯಕ್ಕಾಗಿ 2026-27ನೇ ಹಣಕಾಸು ವರ್ಷದ ಬಜೆಟ್‌ನಲ್ಲಿ 2.55 ಲಕ್ಷ ಕೋಟಿ ರು. ಅನುದಾನ ನೀಡುವ ಪ್ರಸ್ತಾವನೆ ಮಾಡಲಾಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ 2.33 ಲಕ್ಷ ಕೋಟಿ ರು. ಅನುದಾನ ನೀಡಲಾಗಿತ್ತು. ಇದರಲ್ಲಿ 1.73 ಲಕ್ಷ ಕೋಟಿ ರು.(ಶೇ.68ರಷ್ಟು) ಪೊಲೀಸ್ ಇಲಾಖೆಗೆ ವೆಚ್ಚವಾಗಲಿದೆ. ಇದರಲ್ಲಿಯೇ ಇಂಟೆಲಿಜೆನ್ಸ್ ಬ್ಯೂರೊ (ಐಬಿ), ಕೇಂದ್ರ ಸಶಸ್ತ್ರ ಪೊಲೀಸ್ ಪಡೆ(ಸಿಎಪಿಎಫ್)ಗಳಾದ ನಕ್ಸಲ್ ನಿಗ್ರಹ ಚಟುವಟಿಕೆ ಸೇರಿದಂತೆ ಭದ್ರತಾ ಕರ್ತವ್ಯಗಳಿಗೆ ಸಂಭಂಧಿಸಿದ ಸಿಆರ್‌ಪಿಎಫ್, ಗಡಿ ಭದ್ರತೆಗೆ ನಿಯೋಜನೆಗೊಳ್ಳುವ ಬಿಎಸ್‌ಎಫ್ ಮತ್ತು ಐಟಿಬಿಪಿ ಹಾಗೂ ವಿಮಾನ ನಿಲ್ದಾಣ ನಿಯೋಜನೆಗೊಳ್ಳುವ ಸಿಐಎಸ್‌ಎಫ್ ಸೇರಲಿದ್ದಾರೆ.

ರಾಮ್ ಜಿ

ವಿಬಿ-ಜಿ ರಾಮ್ ಜಿಗೆ 95,000 ಕೋಟಿ ರು.

ಬಲು ಚರ್ಚೆಗೆ ಒಳಗಾಗಿರುವ, ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳಿಂದ ತೀವ್ರ ವಿರೋಧ ಎದುರಿಸುತ್ತಿರುವ 'ವಿಬಿ-ಜಿ ರಾಮ್ ಜಿ' ಯೋಜನೆಗಾಗಿ ಈ ಬಾರಿ ಬಜೆಟ್‌ನಲ್ಲಿ 95,692.31 ಕೋಟಿ ರು. ಮೀಸಲಿಟ್ಟಿರುವುದಾಗಿ ಕೇಂದ್ರ ಸರಕಾರ ಹೇಳಿದೆ. ಈವರೆಗೂ ಜಾರಿಯಲ್ಲಿದ್ದ ಹಳೆಯ 'ಎಂ-ನರೇಗಾ' ಯೋಜನೆ ಜಾರಿಗಾಗಿ 30,000 ಕೋಟಿ ರು. ನೀಡಲಾಗಿದೆ ಎಂಬುದು ಗಮನಾರ್ಹ. 'ವಿಕಸಿತ ಭಾರತ-ಗ್ಯಾರಂಟಿ ಫಾರ್ ರೋಜ್ಗಾರ್ ಆಜೀವಿಕಾ ಮಿಷನ್- ಗ್ರಾಮೀಣ' ಅರ್ಥಾತ್ 'ವಿಬಿ-ಜಿ ರಾಮ್ ಜಿ' ಯೋಜನೆ ಪ್ರತಿ ವರ್ಷ ಗ್ರಾಮೀಣ ಭಾಗದ ಜನ ರಿಗೆ 125 ದಿನಗಳ ಕೆಲಸದ ಭರವಸೆ ನೀಡುತ್ತದೆ. ಎಂ-ನರೇ ಗಾದಲ್ಲಿ ಕೆಲಸದ ದಿನಗಳ ಅವಧಿ ವರ್ಷದಲ್ಲಿ ಕೇವಲ 100 ದಿನಗಳಾಗಿವೆ ಎಂದು ಕೇಂದ್ರ ಸರಕಾರ ಹೋಲಿಕೆ ಮಾಡಿ ಹೇಳಿದೆ. ಎಂ-ನರೇಗಾಗೆ 2025-26ರಲ್ಲಿ(ಪರಿಷ್ಕೃತ ಅಂದಾ ಜು) 88,000 ಕೋಟಿ ರು. ವೆಚ್ಚ ಮಾಡಲಾಗಿದೆ. 'ವಿಬಿ-ಜಿ ರಾಮ್ ಜಿ' ಜಾರಿ ಆಗುವವರೆಗೂ ಎಂ-ನರೇಗಾ ಮುಂದುವರಿಯುತ್ತದೆ.

ಕೇಂದ್ರ ಶಿಕ್ಷಣ

ಕೇಂದ್ರೀಯ ಶಾಲೆಗೆ ₹10,129 ಕೋಟಿ

ಕೇಂದ್ರ ಶಿಕ್ಷಣ ಪಠ್ಯ ಕ್ರಮದ ಶಾಲೆಗಳಾದ ಕೇಂದ್ರೀಯ ವಿದ್ಯಾಲಯ ಮತ್ತು ಜವಾಹರ್ ನವೋದಯ ವಿದ್ಯಾಲಯ ಶಾಲೆಗಳಲ್ಲಿನ ಸುಧಾರಣೆಗಾಗಿ ಈ ಬಾರಿಯ ಕೇಂದ್ರ ಮುಂಗಡಪತ್ರದಲ್ಲಿ 10,129.41 ಕೋಟಿ ರು. ಅನುದಾನ ನೀಡುವ ಪ್ರಸ್ತಾವ ಮಂಡಿಸಲಾಗಿದೆ. ಕೇಂದ್ರೀಯ ವಿದ್ಯಾಲಯ ಸಂಘಟನ್(ಕೆವಿಎಸ್)ಗೆ 2025-26ನೇ ಹಣಕಾಸು ವರ್ಷದಲ್ಲಿ 9,503.84 ಕೋಟಿ ರು. ಅನುದಾನ ನೀಡಲಾಗಿತ್ತು. ಅದಕ್ಕೆ ಹೋಲಿಸಿದಲ್ಲಿ ಈ ಬಾರಿ 625 ಕೋಟಿ ರು.ಗಳಷ್ಟು ಹೆಚ್ಚಳ ಮಾಡಲಾಗಿದೆ. ಕೇಂದ್ರೀಯ ಶಾಲೆಗಳಲ್ಲಿನ ಮೂಲ ಸೌಕರ್ಯ ಅಭಿವೃದ್ಧಿ, ದಿನನಿತ್ಯ ಚಟುವಟಿಕೆಗಳಿಗೆ ಅಗತ್ಯವಾದ ಹಣಕ್ಕಾಗಿ ಈ ಅನುದಾನವನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ.

ಗ್ರಾಮೀಣ

ಗ್ರಾಮೀಣಾಭಿವೃದ್ಧಿಗೆ ₹ 1.94 ಲಕ್ಷ ಕೋಟಿ

ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಈ ಬಾರಿಯ ಮುಂಗಡಪತ್ರದಲ್ಲಿ ಒಟ್ಟು 1,94,368.81 ಕೋಟಿ ರು. ಅನುದಾನ ನೀಡುವ ಪ್ರಸ್ತಾವನೆ ಮಾಡಲಾಗಿದೆ. ಕಳೆದ ವರ್ಷದ ಬಜೆಟ್‌ನಲ್ಲಿ 1,86,995.61 ಕೋಟಿ ರು. ಘೋಷಿಸಲಾಗಿತ್ತು. ಭೂಸಂಪನ್ಮೂಲ ಇಲಾಖೆಗೆ 2,654.33 ಕೋಟಿ ರು. ನೀಡುವ ಪ್ರಸ್ತಾವನೆ ಮಾಡಲಾಗಿದೆ. 'ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ'ಗೆ 2026-27ನೇ ಹಣಕಾಸು ವರ್ಷಕ್ಕೆ 19,000 ಕೋಟಿ ರು. ಅನುದಾನ ಘೋಷಣೆಯಾಗಿದೆ. ಕಳೆದ ವರ್ಷ 11,000 ಕೋಟಿ ರು. ವೆಚ್ಚ ಮಾಡಲಾಗಿತ್ತು. 'ದೀನದ ಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್'ಗಾಗಿ 2026-27ನೇ ಹಣಕಾಸು ವರ್ಷಕ್ಕೆ 19,200 ಕೋಟಿ ರು.ಗಳ ಹಂಚಿಕೆಯಾಗಲಿದೆ. ಕಳೆದ ವರ್ಷ ಈ ಮಿಷನ್‌ಗೆ 19,005 ಕೋಟಿ ರು. ನೀಡಲಾಗಿತ್ತು. 'ಪ್ರಧಾನ ಮಂತ್ರಿ ಗ್ರಾಮೀಣ ಆವಾಸ್ ಯೋಜನೆ'ಗೆ 54,916.70 ಕೋಟಿ ರು. ನೀಡುವ ಪ್ರಸ್ತಾವನೆ ಮಾಡಲಾಗಿದೆ.

X ಸಚಿನ್ ಪೈಲಟ್, ಕಾಂಗ್ರೆಸ್ ನಾಯಕ

ಈ ಸರಕಾರ ಹೆಚ್ಚು ಪರಿಣಾಮ ಬೀರದ ವಿಷಯಗಳ ಮೇಲೆಯೇ ತನ್ನ ಗಮನ ಕೇಂದ್ರೀಕರಿಸಿ ಬಜೆಟ್ ರೂಪಿಸುತ್ತಿದೆ. 'ಮನರೇಗಾ' ಯೋಜನೆ ಸುಧಾರಿಸುವುದಾಗಿ ಹೇಳಿಕೊಳ್ಳುತ್ತಿದೆ, ಆದರೆ ಈ ಯೋಜನೆಯನ್ನು ಬಹುತೇಕ ರದ್ದುಗೊಳಿಸಲು ಅದು ಹೊಸ ಕಾನೂನನ್ನು ರೂಪಿಸಿದೆ.

X ವಿ.ಸೋಮಣ್ಣ, ರೈಲ್ವೆ ಸಚಿವ

ವಿಕಸಿತ ಭಾರತ ನಿರ್ಮಾಣದ ನಿಟ್ಟಿನಲ್ಲಿ ಸಮರ್ಥ, ಸರ್ವಕ್ಷೇತ್ರಗಳಿಗೂ ಶಕ್ತಿ ನೀಡುವ ಬಜೆಟ್ ಇದಾಗಿದೆ. ದೇಶದಲ್ಲಿ ತಯಾರಿಕಾ ವಲಯಕ್ಕೆ, ಸೆಮಿಕಂಡಕ್ಟರ್ ವಲಯಕ್ಕೆ, ಎಐ ವಲಯಕ್ಕೆ, ಮೂಲಸೌಕರ್ಯ ವಲಯಕ್ಕೆ, ಪ್ರೋತ್ಸಾಹ ನೀಡಲಾಗಿರುವುದು ಸಂತಸದ ಸಂಗತಿ.

ಪ್ರಧಾನಿ ನರೇಂದ್ರ ಮೋದಿ ದೃಷ್ಟಿಯತ್ತ ಪರಿಪೂರ್ಣ ವಿಕಸಿತ ಭಾರತದತ್ತ ದಾಪುಗಾಲು ಹಾಕುವ ದಿಟ್ಟ ಆರ್ಥಿಕ ಪ್ರಗತಿ ಪ್ರೇರಿತ ಬಜೆಟ್ . ಏಳು ವಲಯಗಳ ಅಭಿವೃದ್ಧಿಯತ್ತ ಕೇಂದ್ರೀತವಾಗಿದ್ದು, ಇದರಲ್ಲಿ ದೇಶದ ಔಷಧ ಕ್ಷೇತ್ರದ ಸಮಗ್ರ ವಿಕಾಸಕ್ಕೆ 10,000 ಕೋಟಿಗಳ ಅನುದಾನ ನೀಡಿ ಆರೋಗ್ಯ ಕ್ಷೇತ್ರದ ಸುಧಾರಣೆಯತ್ತ ಮುಖ ಮಾಡಿದೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕೇಂದ್ರದ ಐತಿಹಾಸಿಕ ಬಜೆಟ್ - ಕ್ರಾಂತಿಕಾರಿ, ಜನಸ್ನೇಹಿ ಹಾಗೂ ದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಆರ್ಥಿಕ ಶಿಸ್ತಿನ ಬಜೆಟ್ ಇದಾಗಿದೆ. ಸುಮಾರು 53.50 ಲಕ್ಷ ಕೋಟಿ ಮೊತ್ತದ ಈ ಬಜೆಟ್ ದೇಶದಲ್ಲಿ ಅಭಿವೃದ್ಧಿ ಕ್ರಾಂತಿಗೆ ದಿಕ್ಕು ತೋರಿಸುವುದರ ಜತೆಗೆ, ಸರ್ವತೋಮುಖ ಅಭಿವೃದ್ಧಿಗೆ ಬಲ ತುಂಬುವಂತಹದ್ದಾಗಿದೆ.

ಎನ್. ರವಿಕುಮಾರ್, ಎಂಎಲ್‌ಸಿ

ಕರ್ನಾಟಕ ಶೇ.60ರಷ್ಟು ಕೃಷಿ ಯಾಧಾರಿತ ರಾಜ್ಯವಾಗಿದ್ದು, ಕೃಷಿಗೆ ಸಂಬಂಧಿಸಿದಂತೆ ಕೇಂದ್ರ ಬಜೆಟ್‌ನಲ್ಲಿ ಯಾವುದೇ ಒತ್ತು ನೀಡಿಲ್ಲ . ಕೇಂದ್ರ ಸರಕಾರದ ಈ ಬಜೆಟ್ ರಾಜ್ಯಕ್ಕೆ ನಿರಾಶದಾಯಕ ಬಜೆಟ್ ಆಗಿದೆ. ರಾಜ್ಯದ 19 ಸಂಸದರಿದ್ದು, ಮೂವರು ಮಂತ್ರಿಗಳಿದ್ದಾರೆ. ಬಿಜೆಪಿ ಸಂಸದರು, ಮಂತ್ರಿಗಳು ಒತ್ತಡ ಹಾಕಿ ರಾಜ್ಯಕ್ಕೆ ಯೋಜನೆ ತರಲು ಮುಂದಾಗಬೇಕಿತ್ತು.

ಚಲುವರಾಯಸ್ವಾಮಿ, ಸಚಿವ

ತೆಂಗು ಹಾಗೂ ಗೋಡಂಬಿ ಬೆಳೆಗಾರರಿಗೆ ವಿಶೇಷ ಪ್ರೋತ್ಸಾಹ ನೀಡಲಾಗಿದ್ದು, ಜವಳಿ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಮತ್ತು ರಫ್ತು ಹೆಚ್ಚಳಕ್ಕೆ ಒತ್ತು ನೀಡಲಾಗಿದೆ. 2047ರ ವೇಳೆಗೆ ಜಾಗತಿಕ ಐಟಿ ಕ್ಷೇತ್ರದಲ್ಲಿ ಭಾರತದ ಪಾಲು ಶೇ. 10ಕ್ಕೆ ಏರಿಸುವ ಗುರಿಯಿಂದಾಗಿ ಬೆಂಗಳೂರಿನಲ್ಲಿ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗಲಿದೆ.

ತೇಜಸ್ವಿ ಸೂರ್ಯ, ಸಂಸದ

ಸಂಪಾದಕೀಯ

ಪ್ರಭಾವಿಗಳ ಪ್ರಭಾವಳಿ

ಮಹಾರಾಷ್ಟ್ರದ ಬಾರಾಮತಿಯಲ್ಲಿ ಇತ್ತೀಚೆಗೆ ಸಂಭವಿಸಿದ ವಿಮಾನ ದುರಂತದಲ್ಲಿ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿಯ (ಎನ್‌ಸಿಪಿ) ಅಜಿತ್ ಬಣದ ನಾಯಕ ಹಾಗೂ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಅಸುನೀಗಿದ್ದು ದುಃಖಕರ ಸಂಗತಿ. ವ್ಯಕ್ತಿಯೊಬ್ಬರು ಸಾಮಾನ್ಯರೇ ಇರಲಿ, ಅಸಾಮಾನ್ಯರೇ ಇರಲಿ 'ಸಾವು' ಎಂಬುದು ಅವರ ಅವಲಂಬಿತರಿಗೆ ನೋವಿನ ಸಂಗತಿಯೇ. ಇಂಥ ವೇಳೆ ಕೊಂಕುಮಾತು ಅಥವಾ ವಿವಾದಾತ್ಮಕ ನುಡಿಗಳನ್ನು ಆಡುವುದು ತರವಲ್ಲ. ಆದರೆ, ಓರ್ವ ಜನಪ್ರತಿನಿಧಿಯು ಹೀಗೆ ಅಕಾಲಿಕ ಮರಣಕ್ಕೆ ತುತ್ತಾದಾಗ, ಅವರು ಪ್ರತಿನಿಧಿಸುತ್ತಿದ್ದ ಕ್ಷೇತ್ರಕ್ಕೆ ಅಥವಾ ಅವರು ನಿರ್ವಹಿಸುತ್ತಿದ್ದ ಹುದ್ದೆಗೆ, ಅವರ ಸಂಗಾತಿಯನ್ನೋ ಅಥವಾ ಅವಲಂಬಿತರನ್ನೋ ತಂದು ಕೂರಿಸುವುದು ಮತದಾರರಿಗೆ ಮಾಡಿಸುವ ಬಲವಂತದ ಮಾಘಸ್ನಾನ ಆಗುವುದಿಲ್ಲವೇ? ಎಂಬ ಪ್ರಶ್ನೆ ಕಾಡುತ್ತದೆ. ಅಜಿತ್ ಪವಾರ್ ಅಸುನೀಗಿದ್ದರಿಂದಾಗಿ ಅವರ ಪತ್ನಿ ಸುನೇತ್ರಾ ಪವಾರ್‌ರನ್ನು ಪತಿಯ 'ರಾಜಕೀಯ ಉತ್ತರಾಧಿಕಾರಿ' ಎಂಬಂತೆ ಉಪಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಿದ ಬೆಳವಣಿಗೆಯು ಈ ಪ್ರಶ್ನೆಯನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿದೆ. ಇಲ್ಲಿ ಆಯಾ ರಾಜಕೀಯ ಪಕ್ಷದವರು 'ಅನುಕಂಪ' ಎಂಬ ಅಂಶದ ಬೆನ್ನತ್ತುವುದೂ ಇದಕ್ಕೆ ಕಾರಣವಿರಬಹುದು ಮತ್ತು ಹೀಗೆ ಉತ್ತರಾಧಿಕಾರಿತ್ವವನ್ನು ಸ್ವೀಕರಿಸಿದವರು 'ಸಮರ್ಥರೂ' ಇರಬಹುದು. ಆದರೆ, ಇಲ್ಲಿ ಸಾಮರ್ಥ್ಯಕ್ಕಿಂತ ಬಹುತೇಕವಾಗಿ ಕೆಲಸ ಮಾಡುವುದು 'ಕಣ್ಮರೆಯಾದ' ಪ್ರಭಾವಿ ವ್ಯಕ್ತಿಯ ಪ್ರಭಾವಳಿಯಲ್ಲವೇ? ಎಂಬುದು ಪ್ರಶ್ನೆ. ತಮಿಳುನಾಡು ಮುಖ್ಯಮಂತ್ರಿಯಾಗಿದ್ದ ಎಂ.ಜಿ.ರಾಮಚಂದ್ರನ್‌ರವರು ಅಸುನೀಗಿದಾಗ, ರಾಜಕೀಯದಲ್ಲಿ ಸಕ್ರಿಯರೇ ಆಗಿರದಿದ್ದ ಅವರ ಪತ್ನಿ ಜಾನಕಿ ರಾಮಚಂದ್ರನ್‌ರನ್ನು ಮುಖ್ಯಮಂತ್ರಿ ಗದ್ದುಗೆಯಲ್ಲಿ ಕೂರಿಸಲಾಯಿತು ಮತ್ತು 23 ದಿನಗಳವರೆಗೆ ಅವರು ಆ ಹುದ್ದೆಯಲ್ಲಿದ್ದರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು. 'ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು, ಕೆಲವರು ಹೆಚ್ಚು ಸಮಾನರು' ಎಂಬ ಗ್ರಹಿಕೆ ಹುಟ್ಟಿಕೊಂಡಿರುವುದು ಇದಕ್ಕೇನಾ?!

ಸೊಂಪಾದಕೀಯ

ಮನೆಕೆಲಸದವರ ಕೈ ಕೆಲಸ

ಇತ್ತೀಚೆಗೆ ರಾಜಧಾನಿ ಬೆಂಗಳೂರಿನಲ್ಲಿ ಮನೆಗೆಲಸದವರ ಕೈ ಕೆಲಸ ಹೆಚ್ಚು ಸುದ್ದಿ ಆಗ್ತಿದೆ. ಶ್ರೀಮಂತರ ಮನೆಗಳಲ್ಲಿ ಮನೆಗೆಲಸಕ್ಕೆ ಅಂತ ಸೇರಿಕೊಂಡು ಅವರ ಚಲನವಲನಗಳನ್ನು ಗಮನಿಸಿಕೊಂಡು ಮನೆಯಲ್ಲಿನ ಹಣ-ಚಿನ್ನ ಕದ್ದು, ಪರಾರಿ ಆಗುತ್ತಿರೋರ ಸಂಖ್ಯೆ ಜಾಸ್ತಿ ಆಗಿದೆ. ಇದರಲ್ಲಿ ಬಹುತೇಕರು ಪರಭಾಷಿಕರು ಮತ್ತು ಉತ್ತರ ಭಾರತದಿಂದ ಬಂದವರೇ ಆಗಿದ್ದಾರೆ ಅನ್ನೋದು ವಿಶೇಷ. ನಮ್ಮವರು ಕೂಡಾ 'ಎಲ್ಲಿಂದಲೇ ಬಂದವರು' ಅಂತ ಅನುಮಾನಿಸದೆ

ಹಿಂದೆ ಮುಂದೆ ನೋಡದೆ ಕೆಲಸ ಕೊಟ್ಟು ನಂತರ ಅವರು ಕಳ್ಳತನ ಮಾಡಿಕೊಂಡು ಹೋದಮೇಲೆ 'ಮೇಲೆ-ಕೆಳಗೆ' ನೋಡುವಂತಾಗಿದೆ. ಮೊನ್ನೆ ಮನೆಗೆಲಸದವರೊಬ್ಬರು ಸುಮಾರು 18 ಕೋಟಿ ರು. ಮೊತ್ತದ ಆಭರಣ, ನಗದನ್ನು ಕದ್ದು ಒಯ್ದಿದ್ದಾರೆ. ಈ ಮಹಾನುಭಾವರು ಅಷ್ಟೊಂದು ಚಿನ್ನವನ್ನು ಮನೆಯಲ್ಲಿ ಏಕೆ ಇಟ್ಟುಕೊಂಡಿದ್ದರೋ ಗೊತ್ತಿಲ್ಲ. ಐಟಿ ರೈಡ್ ಆಗಿದ್ದಿದ್ರೂ ಈ ಚಿನ್ನಕ್ಕೆ ಕನ್ನ ಬೀಳುತ್ತಿತ್ತು ಅನ್ನೋದೇನೋ ನಿಜ. ಆದರೆ ಇದು ಮನೆಗೆಲಸದವರ ರೈಡ್. ಹಾಗಾಗಿ ಐಟಿ ರೈಡ್‌ನಲ್ಲಿ ಅಲ್ಪಸ್ವಲ್ಪವಾದ್ರೂ ಉಳಿಯುವ ಸಾಧ್ಯತೆ ಇತ್ತು. ಆದರೆ ಇವರ ವಿಷಯದಲ್ಲಿ ಫುಲ್ ಖಾಲಿ ಆಗಿದೆ. ಮನೆಯಲ್ಲಿ ಕಸ ಸ್ವೀಪ್ ಮಾಡುವ ಕೆಲಸಕ್ಕೆ ಬಂದು ಸೇರಿಕೊಂಡು ಬರೋಬ್ಬರಿ 18 ಕೋಟಿ ಮೊತ್ತದ ಚಿನ್ನ, ಹಣವನ್ನು 'ಕ್ಲೀನ್ ಸ್ವೀಪ್' ಮಾಡಿಕೊಂಡು ಹೋಗಿದ್ದಾರೆ. ಈಗಿನ ಕಾಲದಲ್ಲಿ ಕಣ್ಣುಮುಚ್ಚಿಕೊಂಡು ಹೆಣ್ಣು ಗಂಡು ಕೊಟ್ಟು ಮದುವೆ ಮಾಡಬಹುದು. ಆದರೆ, ಕೆಲಸಕ್ಕೆ ಜನರನ್ನು ತೆಗೆದುಕೊಳ್ಳುವಾಗ ತುಂಬಾ ಹುಷಾರಾಗಿ ಇರಬೇಕು ಅನ್ನೋದು ಇಂಥ ಪ್ರಕರಣಗಳಿಂದ ಸಾಬೀತಾಗುತ್ತದೆ. ಅಲ್ಲದೆ ಇವರ ಸಂಬಳ ಕೂಡಾ ಏನೂ ಕಮ್ಮಿ ಇರಲ್ಲ. ಪದವಿ ಪಡೆದವರಿಗೂ ಕೊಡದ ಸಂಬಳವನ್ನು ಇವರಿಗೆ ಕೊಡಲಾಗುತ್ತದೆ; ಅದೇ ಕರ್ನಾಟಕದ ಜನ ಕೆಲಸಕ್ಕೆ ಬಂದ್ರೆ ಅವರಿಗೆ ಕೊಡುವ ಹಣದಲ್ಲಿ ಚೌಕಾಸಿ ಮಾಡುವ ನಮ್ಮವರು ಪರರಾಜ್ಯಗಳಿಂದ ಬಂದವರಿಗೆ ಕೈ ತುಂಬಾ ಹಣ ಕೊಟ್ಟು ಕೆಲಸಕ್ಕೆ ಸೇರಿಸಿಕೊಳ್ಳುತ್ತಾರೆ. ಆದರೆ ಕೊನೆಗೆ ಅವರೇ ಇವರಿಗೆ ಪಂಗನಾಮ ಹಾಕಿ ಎಲ್ಲವನ್ನೂ ಎತ್ತಿಕೊಂಡು ಪರಾರಿ ಆಗುತ್ತಿದ್ದಾರೆ ಅನ್ನೋದು ವಿಪರ್ಯಾಸ.

ಸಂಪಾದಕರ ಸದ್ಯಶೋಧನೆ

ಹೋಲಿ ಗ್ರೇಲ್ ಎಂದರೇನು?

ಬಿಡಿಸಲಾಗದ ಒಗಟು ಅಥವಾ ರಹಸ್ಯ ಎಂದು ಹೇಳುವಾಗಲೆಲ್ಲ 'ಹೋಲಿ ಗ್ರೇಲ್' (Holy Grail) ಎಂಬ ಪದವನ್ನು ಬಳಸುವುದನ್ನು ಗಮನಿಸಿರಬಹುದು. ಹಾಗಾದರೆ ಹೋಲಿ ಗ್ರೇಲ್ ಎಂದರೇನು? ರಹಸ್ಯಕ್ಕೂ, ಇದಕ್ಕೂ ಏನು ಸಂಬಂಧ? 'ಹೋಲಿ ಗ್ರೇಲ್' ಎನ್ನುವುದು ಕೇವಲ ಒಂದು ಪಾತ್ರೆ ಅಥವಾ ಕಪ್ ಅಲ್ಲ. ಇದು ಶತಮಾನಗಳಿಂದ ಮಾನವ ಕುಲವನ್ನು ಕಾಡುತ್ತಿರುವ, ಸಾಹಿತ್ಯ, ಕಲೆ ಮತ್ತು ಸಿನಿಮಾ ರಂಗದಲ್ಲಿ ಅತಿ ಹೆಚ್ಚು ಚರ್ಚೆಗೊಳಗಾಗಿರುವ ಒಂದು ಮಹಾನ್ ರಹಸ್ಯ. ಇದನ್ನು ಪತ್ತೆಹಚ್ಚಲು ಸಾವಿರಾರು ವೀರರು, ಸಂಶೋಧಕರು ಮತ್ತು ಇತಿಹಾಸಕಾರರು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದಾರೆ. ಕ್ರೈಸ್ತ ಧರ್ಮದ ನಂಬಿಕೆಗಳ ಪ್ರಕಾರ, ಏಸು ಕ್ರಿಸ್ತ ತಮ್ಮ ಶಿಷ್ಯರೊಂದಿಗೆ ನಡೆಸಿದ ಕೊನೆಯ ಔತಣಕೂಟದಲ್ಲಿ (The Last Supper) ದ್ರಾಕ್ಷಾರಸ ಕುಡಿಯಲು ಬಳಸಿದ ಕಪ್ ಅಥವಾ ಪಾತ್ರೆಯನ್ನು 'ಹೋಲಿ ಗ್ರೇಲ್' ಎಂದು ಕರೆಯಲಾಗುತ್ತದೆ. ಮತ್ತೊಂದು ಪ್ರಬಲ ನಂಬಿಕೆಯ ಪ್ರಕಾರ, ಕ್ರಿಸ್ತರನ್ನು ಶಿಲುಬೆಗೇರಿಸಿದಾಗ ಅವರ ದೇಹದಿಂದ ಹರಿದ ಪವಿತ್ರ ರಕ್ತವನ್ನು ಸಂಗ್ರಹಿಸಲು ಜೋಸೆಫ್ ಆಫ್ ಅರಿಮತಿಯಾ ಇದೇ ಪಾತ್ರೆಯನ್ನು ಬಳಸಿದ್ದರು ಎನ್ನಲಾಗುತ್ತದೆ. ಈ ಕಾರಣಕ್ಕಾಗಿಯೇ ಇದಕ್ಕೆ ಪವಿತ್ರವಾದ ಮತ್ತು ಅದ್ಭುತ ಶಕ್ತಿಗಳಿರುವ ಪಾತ್ರೆ ಎಂಬ ಗೌರವ ಬಂದಿದೆ. ಹೋಲಿ ಗ್ರೇಲ್ ಎಂಬ ಪರಿಕಲ್ಪನೆಯು 12ನೇ ಶತಮಾನದ ಅಂತ್ಯದಲ್ಲಿ ಮತ್ತು 13ನೇ ಶತಮಾನದ ಆರಂಭದಲ್ಲಿ ಯುರೋಪಿಯನ್ ಸಾಹಿತ್ಯದಲ್ಲಿ ಹೆಚ್ಚು ಪ್ರಸಿದ್ಧಿಯಾಯಿತು. ಕ್ರೆಟಿಯನ್ ಡಿ ಟ್ರಾಯ್ಸ್ ಬರೆದ 'ಪರ್ಸೆವಲ್' ಎಂಬ ಅಪೂರ್ಣ ಕಾವ್ಯದಲ್ಲಿ ಮೊದಲ ಬಾರಿಗೆ ಈ ಗ್ರೇಲ್ ಎಂಬ ಪದ ಬಳಕೆಯಾಯಿತು. ಇಲ್ಲಿ ಇದು ಕೇವಲ ಒಂದು ಚಿನ್ನದ ಪಾತ್ರೆಯಾಗಿತ್ತು. ರಾಬರ್ಟ್ ಡಿ ಬೊರಾನ್ ಈ ಗ್ರೇಲ್‌ಗೆ ಧಾರ್ಮಿಕ ಆಯಾಮ ನೀಡಿದರು. ಇದನ್ನು ಕ್ರಿಸ್ತರ ಕೊನೆಯ ಔತಣಕೂಟಕ್ಕೆ ಲಿಂಕ್ ಮಾಡಿದವರು ಇವರೇ. ಬ್ರಿಟಿಷ್ ಜಾನಪದ ಕಥೆಗಳ ಪ್ರಕಾರ, ಕಿಂಗ್ ಆರ್ಥರ್‌ನ ಆಸ್ಥಾನದ ಶೂರ ಸೈನಿಕರು ಈ ಪವಿತ್ರ ಪಾತ್ರೆಯನ್ನು ಹುಡುಕಲು ಸಾಹಸಯಾತ್ರೆಗಳನ್ನು ಕೈಗೊಳ್ಳುತ್ತಿದ್ದರು. ಅವರಲ್ಲಿ ಸರ್ ಗಲಾಹಾಡ್ ಎಂಬುವವನು ಅತ್ಯಂತ ಪವಿತ್ರ ವ್ಯಕ್ತಿಯಾಗಿದ್ದರಿಂದ ಅವನಿಗೆ ಮಾತ್ರ ಗ್ರೇಲ್ ದರ್ಶನವಾಯಿತು ಎಂಬ ಕಥೆಯಿದೆ. ಹೋಲಿ ಗ್ರೇಲ್ ಹೇಗಿರುತ್ತದೆ ಎಂಬ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಅನೇಕರು ಇದು ರತ್ನಖಚಿತವಾದ ಚಿನ್ನದ ಪಾತ್ರೆ ಎಂದು ನಂಬುತ್ತಾರೆ. ಕ್ರಿಸ್ತ ಬಡತನದ ಸಂಕೇತವಾಗಿದ್ದರಿಂದ, ಅವರು ಬಳಸಿದ ಕಪ್ ಸಾಮಾನ್ಯ ಮಣ್ಣಿನದ್ದಾಗಿರಬೇಕು ಎಂಬ ತರ್ಕವೂ ಇದೆ ('ಇಂಡಿಯಾನಾ ಜೋನ್ಸ್' ಸಿನಿಮಾದಲ್ಲಿ ಇದನ್ನು ತೋರಿಸಲಾಗಿದೆ). ಜರ್ಮನ್ ಕವಿ ವೋಲ್ಫ್ರಾಮ್ ವಾನ್ ಎಸ್ಚೆನ್‌ಬಾಚ್ ಪ್ರಕಾರ, ಗ್ರೇಲ್ ಎನ್ನುವುದು ಆಕಾಶದಿಂದ ಬಿದ್ದ ಒಂದು ಅಮೂಲ್ಯವಾದ ಕಲ್ಲು. ಆಧುನಿಕ ಸಂಶೋಧಕರು ಇದು ಭೌತಿಕ ವಸ್ತುವಲ್ಲ, ಬದಲಿಗೆ ಆಂತರಿಕ ಜ್ಞಾನ ಅಥವಾ ಏಸು ಕ್ರಿಸ್ತರ ವಂಶಾವಳಿ ಎಂದು ವಾದಿಸುತ್ತಾರೆ. 'ದ ವಿನ್ಸಿ ಕೋಡ್' ಕಾದಂಬರಿಯಲ್ಲಿ ಡಾನ್ ಬ್ರೌನ್ ಇದೇ ಸಿದ್ಧಾಂತವನ್ನು ಮಂಡಿಸಿದ್ದಾರೆ. ಜಾನಪದ ಕಥೆಗಳ ಪ್ರಕಾರ, ಯಾರು ಹೋಲಿ ಗ್ರೇಲ್ ಅನ್ನು ಪತ್ತೆಹಚ್ಚುತ್ತಾರೋ ಅಥವಾ ಅದನ್ನು ಮುಟ್ಟುತ್ತಾರೋ ಅವರಿಗೆ ಎಂದೂ ಸಾವು ಬರುವುದಿಲ್ಲವಂತೆ. ಗುಣಪಡಿಸಲಾಗದ ಕಾಯಿಲೆಯನ್ನೂ ಇದು ಗುಣಪಡಿಸುತ್ತದಂತೆ. ಇದನ್ನು ಅಕ್ಷಯ ಪಾತ್ರೆ ಎಂದೂ ನಂಬಲಾಗುತ್ತದೆ. ಇದನ್ನು ಹೊಂದಿರುವವರಿಗೆ ಬ್ರಹ್ಮಾಂಡದ ರಹಸ್ಯಗಳನ್ನು ತಿಳಿಯುವ ಶಕ್ತಿ ದೊರೆಯುತ್ತದಂತೆ. ಇಂಗ್ಲೆಂಡ್ ನ ಗ್ಲ್ಯಾಸ್ಟನ್‌ಬರಿ ಟಾರ್‌ನಲ್ಲಿ ಜೋಸೆಫ್ ಅವರು ಇಲ್ಲಿಗೆ ಬಂದು ಗ್ರೇಲ್ ಅನ್ನು ಹೂತುಹಾಕಿದರು ಮತ್ತು ಅಲ್ಲಿ 'ಚಾಲಿಸ್ ವೆಲ್' ಎಂಬ ಬುಗ್ಗೆ ಉಕ್ಕಿಬಂತು ಎಂಬ ನಂಬಿಕೆಯಿದೆ. ಸ್ಪೇನ್‌ನಲ್ಲಿರುವ ವೆಲೆನ್ಸಿಯಾ ಕ್ಯಾಥೆಡ್ರಲ್‌ನಲ್ಲಿ ಒಂದು ಪ್ರಾಚೀನ ಕಪ್ ಇದೆ. ಇದನ್ನು ಅಧಿಕೃತವಾಗಿ ಹೋಲಿ ಗ್ರೇಲ್ ಎಂದು ಅನೇಕರು ನಂಬುತ್ತಾರೆ. ಸ್ಕಾಟ್ಲೆಂಡ್‌ನ ರೋಸ್ಲಿನ್ ಚಾಪೆಲ್‌ನಲ್ಲಿನ ರಹಸ್ಯ ಸುರಂಗಗಳಲ್ಲಿ ಗ್ರೇಲ್ ಅನ್ನು ಅಡಗಿಸಿಡಲಾಗಿದೆ ಎಂಬ ವದಂತಿಯಿದೆ. ಇಂದು 'ಹೋಲಿ ಗ್ರೇಲ್' ಎನ್ನುವ ಪದವನ್ನು ಕೇವಲ ಧಾರ್ಮಿಕವಾಗಿ ಬಳಸುತ್ತಿಲ್ಲ. ಇದು ಒಂದು ರೂಪಕವಾಗಿ (Metaphor) ಬದಲಾಗಿದೆ. ಕ್ಯಾನ್ಸರ್‌ಗೆ ರಾಮಬಾಣ ಪತ್ತೆಹಚ್ಚುವುದನ್ನು ಅಥವಾ ವಿಜ್ಞಾನದ ದೊಡ್ಡ ರಹಸ್ಯ ಭೇದಿಸುವುದನ್ನು Holy Grail of Science ಎನ್ನಲಾಗುತ್ತದೆ. ಹೋಲಿ ಗ್ರೇಲ್ ಎನ್ನುವುದು ಕೇವಲ ಒಂದು ಐತಿಹಾಸಿಕ ವಸ್ತುವಲ್ಲ, ಅದು ಮನುಷ್ಯನ ನಿರಂತರ ಹುಡುಕಾಟದ ಸಂಕೇತ. ಅದು ಎಲ್ಲಿದೆ ಅಥವಾ ಅದು ನಿಜವಾಗಿಯೂ ಇದೆಯೇ ಎನ್ನುವುದಕ್ಕಿಂತ, ಅದನ್ನು ಹುಡುಕುವ ಹಾದಿಯಲ್ಲಿ ಸೃಷ್ಟಿಯಾದ ಸಾಹಿತ್ಯ, ಶೌರ್ಯದ ಕಥೆಗಳು ಮತ್ತು ಮಾನವನ ಕುತೂಹಲವೇ ಹೆಚ್ಚು ಅಮೂಲ್ಯವಾದದ್ದು.

ಶಾಮನೂರು ಸಾಮ್ರಾಜ್ಯಕ್ಕೆ ಓವೈಸಿ ಎಂಟ್ರಿ?

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ

vveditoped@gmail.com

ಕಳೆದ ವಾರ ರಾಜ್ಯದ ಕಾಂಗ್ರೆಸ್ ನಾಯಕರಿಗೆ ತಲುಪಿದ ಸುದ್ದಿ ಅಷ್ಟೇನೂ ಹಿತಕರವಾಗಿರಲಿಲ್ಲ. ಕಾರಣ? ಹೈದರಾಬಾದ್‌ನ ಕಟ್ಟರ್ ಮುಸ್ಲಿಂ ನಾಯಕ ಅಸಾದುದ್ದೀನ್ ಓವೈಸಿ ಕರ್ನಾಟಕದ ರಾಜಕಾರಣಕ್ಕೆ ಎಂಟ್ರಿ ಆಗಲಿದ್ದಾರೆ ಎಂಬ ಸುದ್ದಿ. ಅಂದ ಹಾಗೆ, 'ಆಲ್ ಇಂಡಿಯಾ ಮಜ್ಲಿಸ್ ಎ ಇತ್ತೆಹಾದ್ ಮುಸ್ಲಿಮಿನ್' ಪಕ್ಷದ ಸರ್ವೋಚ್ಚ ನಾಯಕರಾದ ಅಸಾದುದ್ದೀನ್ ಓವೈಸಿ ಅವರಿಗೆ ಕರ್ನಾಟಕದ ರಾಜಕಾರಣದ ಮೇಲೆ ಒಂದು ಕಣ್ಣು ಇದ್ದೇ ಇದೆ. ಹೀಗಾಗಿಯೇ ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕದ ಹಲವು ಕ್ಷೇತ್ರಗಳಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಅವರು ಯೋಚಿಸಿದ್ದರು.

ಅದೇ ಸಂದರ್ಭದಲ್ಲಿ ರಾಜ್ಯದ ಜೆಡಿಎಸ್ ನಾಯಕರು, ತೆಲಂಗಾಣದ ಮುಖ್ಯಮಂತ್ರಿಯಾಗಿದ್ದ ಚಂದ್ರಶೇಖರರಾವ್ ಅವರ ಜತೆ ಕೈ ಜೋಡಿಸಲು ಓಡಾಡುತ್ತಿದ್ದುದರಿಂದ ಓವೈಸಿ ಅವರು ಡೆಡ್ಲಿ ಆಗುವ ಸಾಧ್ಯತೆಗಳಿದ್ದವು. ಯಾಕೆಂದರೆ ಒಂದು ಕಡೆಯಿಂದ ಚಂದ್ರಶೇಖರರಾವ್ ಇಲ್ಲಿಗೆ ಎಂಟ್ರಿ ಕೊಟ್ಟು, ಮತ್ತೊಂದು ಕಡೆಯಿಂದ ಓವೈಸಿ ನುಗ್ಗಿದ್ದರೆ ಕರ್ನಾಟಕದ ಮುಸ್ಲಿಂ ಮತಗಳು ಚೆದುರುವ, ಆ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಹೊಡೆತ ಬೀಳುವ ಸಾಧ್ಯತೆಗಳಿದ್ದವು. ಆದರೆ ಕೊನೇ ಗಳಿಗೆಯಲ್ಲಿ ಚಿತ್ರ ಬದಲಾಯಿತು. ಅತ್ತ ಚಂದ್ರಶೇಖರರಾವ್ ಅವರು ಜೆಡಿಎಸ್ ಜತೆಗಿನ ಸಖ್ಯವನ್ನು ಮುಂದುವರಿಸಲಿಲ್ಲ. ಓವೈಸಿ ಕೂಡಾ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಮನಸ್ಸು ಮಾಡಲಿಲ್ಲ. ಅಲ್ಲಿಗೆ ಕರ್ನಾಟಕ ಏಕಪಕ್ಷೀಯವಾಗಿ ಕಾಂಗ್ರೆಸ್ ಪಾಲಾಯಿತು.

ಮೂಲಗಳ ಪ್ರಕಾರ, ಕೊನೇ ಗಳಿಗೆಯಲ್ಲಿ ಓವೈಸಿ ಕರ್ನಾಟಕಕ್ಕೆ ದೊಡ್ಡ ಮಟ್ಟದ ಎಂಟ್ರಿ ಕೊಡದೇ ಇರಲು ಅವರಿಗಿದ್ದ ಐತಿಹಾಸಿಕ ಧಾವಂತವೂ ಕಾರಣ. ಅದೆಂದರೆ, ಕರ್ನಾಟಕದ ಹಳೆ ಮೈಸೂರು ಭಾಗದಲ್ಲಿರುವ ಬಹುತೇಕ ಮುಸ್ಲಿಮರು ಹೈದರಾಬಾದ್ ಮೂಲದ ಮುಸ್ಲಿಂ ನಾಯಕರನ್ನು ಇಷ್ಟಪಡುವುದಿಲ್ಲ. ಇದಕ್ಕೆ ಕಾರಣ ಟಿಪ್ಪು ಸುಲ್ತಾನನ ಅವನತಿಗೆ ಹೈದರಾಬಾದ್‌ನ ನಿಜಾಮರು ಕೂಡಾ ಕಾರಣ ಎಂಬುದು. ಅವತ್ತು ಬ್ರಿಟಿಷರ ವಿರುದ್ಧ ಒಂದಾಗಿ ಹೋರಾಡುವಂತೆ ಟಿಪ್ಪು ಸುಲ್ತಾನ್ ಅದೆಷ್ಟು ಪರಿಪರಿಯಾಗಿ ಕೇಳಿಕೊಂಡರೂ ನಿಜಾಮರು ತೆರೆಯ ಹಿಂದೆ ಬ್ರಿಟಿಷರ ಜತೆ ಕೈ ಜೋಡಿಸಿದರು ಮತ್ತು ಟಿಪ್ಪುವಿನ ಪತನಕ್ಕೆ ಕಾರಣರಾದರು ಎಂಬುದು ಇವತ್ತಿಗೂ ಹಳೆ ಮೈಸೂರು ಭಾಗದ ಮುಸ್ಲಿಮರ ಮನಸ್ಸಿನಲ್ಲಿ ರಕ್ತಗತವಾಗಿ ಉಳಿದುಕೊಂಡಿದೆ. ಹೀಗೆ ಹೈದರಾಬಾದ್ ನಿಜಾಮರ ಮೇಲಿನ ಸಿಟ್ಟು ಉಳಿದುಕೊಂಡಿರುವುದರಿಂದ ಅವರು ಇವತ್ತಿಗೂ ಹೈದರಾಬಾದ್ ಮೂಲದ ಮುಸ್ಲಿಂ ನಾಯಕರನ್ನು ಇಷ್ಟಪಡುವುದಿಲ್ಲ. ಇದು ಗೊತ್ತಿರುವುದರಿಂದ ಓವೈಸಿ ಕೂಡಾ ಕರ್ನಾಟಕಕ್ಕೆ ದೊಡ್ಡ ಮಟ್ಟದಲ್ಲಿ ಎಂಟ್ರಿ ಕೊಡಲು ಹಿಂಜರಿಯುತ್ತಿದ್ದರು.

ಒಂದು ಕಾಲದಲ್ಲಿ ಕರ್ನಾಟಕದ ಮುಸ್ಲಿಂ ಸಮುದಾಯದ ಜನಪ್ರಿಯ ನಾಯಕರಾಗಿದ್ದ ರೋಷನ್ ಬೇಗ್ ವಿರುದ್ಧ ಅಸಹನೆ ಹೊಂದಿದ್ದ ಓವೈಸಿ, ಶಿವಾಜಿನಗರ ವಿಧಾನಸಭಾ ಕ್ಷೇತ್ರಕ್ಕೆ ನುಗ್ಗಿ ಆಟ ಆಡಲು ಬಯಸಿದ್ದರು. ಆದರೆ ಅವತ್ತು ಮಂತ್ರಿಯಾಗಿದ್ದ ರೋಷನ್ ಬೇಗ್ ತಮ್ಮ ಪವರ್ ಬಳಸಿ ಓವೈಸಿಯವರು ಶಿವಾಜಿ ನಗರಕ್ಕೆ ನುಗ್ಗದಂತೆ ನೋಡಿಕೊಂಡಿದ್ದರು.

ಹೀಗಾಗಿ ಅಲ್ಲಿಂದ ಮುಂದೆ ಗುಲ್ಬರ್ಗ ಸೇರಿದಂತೆ ಹೈದರಾಬಾದ್-ಕರ್ನಾಟಕದ ಕೆಲ ಕ್ಷೇತ್ರಗಳಲ್ಲಿ ಓವೈಸಿ ಒಂದು ಲೆವೆಲ್ಲಿನ ಆಟ ಆಡುತ್ತಾ ಬಂದಿದ್ದಾರಾದರೂ ಅವರಿಗೆ ದೊಡ್ಡ ಮಟ್ಟದ ಯಶಸ್ಸು ಸಿಕ್ಕಿಲ್ಲ. ಆದರೆ ಕರ್ನಾಟಕದ ಮುಸ್ಲಿಂ ರಾಜಕಾರಣ ದಿನದಿಂದ ದಿನಕ್ಕೆ ಅತಂತ್ರವಾಗುತ್ತಿರುವುದು, ಅಜೀಜ್ ಸೇಠ್, ಜಾಫರ್ ಷರೀಫ್ ಮತ್ತು ರೋಷನ್ ಬೇಗ್ ಅವರಂಥ ನಾಯಕರು ಕಣ್ಣಿಗೆ ಕಾಣಿಸದೇ ಇರುವುದು ಓವೈಸಿಯವರ ಕರ್ನಾಟಕ 'ಅರಂಗೇಟ್ರಂ'ಗೆ ಅನುಕೂಲಕರವಾಗಿ ಕಾಣುತ್ತಿದೆ.

ಅದರಲ್ಲೂ ದಾವಣಗೆರೆಯ ಧಣಿ ಶಾಮನೂರು ಶಿವಶಂಕರಪ್ಪ ಅವರ ನಿಧನದ ನಂತರ ತೆರವಾಗಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಕುಟುಂಬದವರಿಗೇ ಪಕ್ಷದ ಟಿಕೆಟ್ ಸಿಗಬೇಕು ಎಂದು ಶಾಮನೂರು ಫ್ಯಾಮಿಲಿ ಪಟ್ಟು ಹಿಡಿದಿರುವುದರಿಂದ ಕ್ಷೇತ್ರದ 'ನಂಬರ್-1' ಶಕ್ತಿ ಅನ್ನಿಸಿಕೊಂಡ ಮುಸ್ಲಿಮರು ಅಸಹನೆಯಿಂದ ಕುದಿಯುತ್ತಿದ್ದಾರೆ. ಪರಿಣಾಮ? ತಮಗೆ ಟಿಕೆಟ್ ಸಿಗದೆ ಹೋದರೆ ಕಾಂಗ್ರೆಸ್ ವಿರುದ್ಧವೇ ಸ್ಪರ್ಧಿಸಲು ಕಸರತ್ತು ನಡೆಸುತ್ತಿದ್ದಾರೆ. ಇವತ್ತು ಓವೈಸಿ ಕರ್ನಾಟಕದ ಕಡೆ ಕಣ್ಣು ಹಾಕಲು ಈ ಅಂಶ ಬಹುಮುಖ್ಯ ಕಾರಣ. ಪರಿಣಾಮ? ಕೆಲ ದಿನಗಳ ಹಿಂದೆ ದಾವಣಗೆರೆಯಲ್ಲಿ ಓವೈಸಿ ಅಭಿಮಾನಿಗಳ ಪಡೆ ಒಂದು ಸಭೆ ನಡೆಸಿ ನಿರ್ಣಾಯಕ ಆಟಕ್ಕಿಳಿಯಲು ತೀರ್ಮಾನಿಸಿದೆ.

ಧಣಿಯ ಮನೆಯ ಲೆಕ್ಕಾಚಾರ

ಅಂದ ಹಾಗೆ, ಶಾಮನೂರು ಶಿವಶಂಕರಪ್ಪ ಅವರ ನಿಧನದ ನಂತರ ಅವರ ಕುಟುಂಬದಲ್ಲಿ ಹಲವು ಬಗೆಯ ಲೆಕ್ಕಾಚಾರಗಳು ಆರಂಭವಾಗಿವೆ. ಅದರ ಪ್ರಕಾರ, ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದವರು ತಮ್ಮ ಕುಟುಂಬದವರಾದ್ದರಿಂದ ಈಗ ಎದುರಾಗಲಿರುವ ಉಪಚುನಾವಣೆಯಲ್ಲಿ ತಮ್ಮ ಕುಟುಂಬದವರೇ ಸ್ಪರ್ಧಿಸಬೇಕು ಎಂಬುದು ಒಟ್ಟಾರೆ ತೀರ್ಮಾನ. ಹೀಗಾಗಿ ಕಣಕ್ಕೆ ಶಾಮನೂರು ಶಿವಶಂಕರಪ್ಪನವರ ಎರಡನೇ ಪುತ್ರ ಗಣೇಶ್ ಇಳಿಯಬೇಕೋ? ಅಥವಾ ಸಚಿವ ಮಲ್ಲಿಕಾರ್ಜುನ್ ಅವರ ಪುತ್ರ ಸಮರ್ಥ್ ಇಳಿಯಬೇಕೋ? ಎಂಬ ಚರ್ಚೆ ಶುರುವಾಗಿದೆ. ಈ ಪೈಕಿ ಗಣೇಶ್ ಅವರು ಇದುವರೆಗೆ ರಾಜಕಾರಣದ ಪಡಸಾಲೆಯಲ್ಲಿ ಹೆಚ್ಚಾಗಿ ಕಂಡವರಲ್ಲ. ಇದೇ ರೀತಿ ಸಮರ್ಥ್ ಅವರು ವಯಸ್ಸಿನಲ್ಲಿ ಕಿರಿಯರು ಎಂಬ ಮಾತುಗಳು ಕೇಳಿಬರುತ್ತಿವೆಯಾದರೂ ರಾಜಕಾರಣದಲ್ಲಿ ಅಂಥ ಮಾತುಗಳಿಗೆ ಶಕ್ತಿ ಕಡಿಮೆ. ಎಲ್ಲಕ್ಕಿಂತ ಮುಖ್ಯವಾಗಿ ಶಾಮನೂರು ಸಾಮ್ರಾಜ್ಯದ ಶಕ್ತಿ ಉಳಿಯಬೇಕಿರುವುದರಿಂದ ಕುಟುಂಬದ ಈ ಇಬ್ಬರ ಪೈಕಿ ಒಬ್ಬರನ್ನು ಕಣಕ್ಕಿಳಿಸಬೇಕು ಅಂತ ಕುಟುಂಬ ಬಯಸಿದೆ.

ಮುಸ್ಲಿಮರ ಯೋಚನೆ ಏನು?

ಹೀಗೆ ಶಾಮನೂರು ಕುಟುಂಬದ ಲೆಕ್ಕಾಚಾರ ಒಂದು ಬಗೆಯಲ್ಲಿದ್ದರೆ ಮತ್ತೊಂದು ಕಡೆ ಮುಸ್ಲಿಮ್ ಮತಬ್ಯಾಂಕಿನ ಲೆಕ್ಕಾಚಾರ ಬೇರೆಯೇ ಇದೆ. ಅಂದ ಹಾಗೆ, ಕ್ಷೇತ್ರದಲ್ಲಿರುವ 2.30 ಲಕ್ಷ ಮತದಾರರ ಪೈಕಿ ಎಂಬತ್ತು ಸಾವಿರದಷ್ಟು ಮುಸ್ಲಿಂ ಮತದಾರರಿದ್ದು, ಸಂಖ್ಯೆಯ ದೃಷ್ಟಿಯಿಂದ ನಂಬರ್ ಒನ್ ಸ್ಥಾನದಲ್ಲಿದ್ದಾರೆ. ಇಂಥ ಕಾರಣಕ್ಕಾಗಿಯೇ ಹಿಂದೆ ಸೈಯ್ಯದ್ ಸೈಫುಲ್ಲಾ ಅವರಿಗೆ ಪಕ್ಷದ 'ಬಿ ಫಾರಂ' ನೀಡಲಾಗಿತ್ತಾದರೂ ಕೊನೇ ಗಳಿಗೆಯಲ್ಲಿ ಅವರ ಬದಲಿಗೆ ಶಾಮನೂರು ಶಿವಶಂಕರಪ್ಪನವರಿಗೆ ಟಿಕೆಟ್ ನೀಡಲಾಗಿತ್ತು.

ಆದರೆ ಇದಾಗಿ ಸಾಕಷ್ಟು ಕಾಲ ಕಳೆದಿದ್ದು ಈಗ ಮುಸ್ಲಿಮರೊಬ್ಬರಿಗೆ ಟಿಕೆಟ್ ನೀಡಬೇಕು ಎಂಬುದು ಈ ಮತಬ್ಯಾಂಕಿನ ಪಟ್ಟು. ಹೀಗಾಗಿ ಖಾಲಿದ್, ಅಬ್ದುಲ್ ಜಬ್ಬಾರ್ ಮತ್ತು ಮೆಹಬೂಬ್ ಪಾಷಾ ಅವರ ಹೆಸರುಗಳು ಫ್ರಂಟ್‌ಲೈನಿಗೆ ಬಂದಿದ್ದು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಗಮನ ಸೆಳೆಯುತ್ತಿವೆ. ಆದರೆ ಹೀಗೆ ಶಾಮನೂರು ಕುಟುಂಬದ ಲೆಕ್ಕಾಚಾರ ಮತ್ತು ಮುಸ್ಲಿಂ ಮತಬ್ಯಾಂಕಿನ ಲೆಕ್ಕಾಚಾರಗಳು ಪರಸ್ಪರ ಘಟ್ಟಿಸುತ್ತಿರುವುದರಿಂದ ಮುಂದೇನು? ಎಂಬ ಪ್ರಶ್ನೆ ಶುರುವಾಗಿದೆ.

ಫೀಲ್ಡಿಗಿಳಿದರು ಸುನೀಲ್, ಬೆಲ್ಲದ್

ಈ ಮಧ್ಯೆ, ರಾಜ್ಯ ಬಿಜೆಪಿಯಲ್ಲಿ ಆಟ ಬದಲಾಗಿರುವ ಲಕ್ಷಣಗಳು ಕಾಣುತ್ತಿವೆ. ಇದಕ್ಕೆ ವಿಧಾನಸಭೆಯ ಬೆಳವಣಿಗೆಗಳೇ ಸಾಕ್ಷಿ. ಅಂದ ಹಾಗೆ, ವಿಧಾನಸಭೆ ಕಲಾಪದಲ್ಲಿ ಸರಕಾರದ ವಿರುದ್ಧ ಮುಗಿಬೀಳುವ ಅವಕಾಶ ಸಿಕ್ಕಿದರೆ ಪ್ರತಿಪಕ್ಷ ನಾಯಕರು ಅದನ್ನು ಬಳಸಿಕೊಳ್ಳಬೇಕು. ಆದರೆ ಅವರು ಅವಕಾಶವನ್ನು ಬಳಸಿಕೊಳ್ಳುವುದಕ್ಕಿಂತ ಬೇಗ ಮಾಜಿ ಸಚಿವ ಸುನೀಲ್ ಕುಮಾರ್ ಮತ್ತು ಅರವಿಂದ್ ಬೆಲ್ಲದ್ ಬಳಸಿಕೊಳ್ಳುತ್ತಿದ್ದಾರೆ. ಅರ್ಥಾತ್, ಸರಕಾರದ ವಿರುದ್ಧ ನಾಯಕರಿಗಿಂತ ಹೆಚ್ಚಾಗಿ ಇವರೇ ಅಬ್ಬರಿಸುತ್ತಿದ್ದಾರೆ.

ಕುತೂಹಲದ ಸಂಗತಿ ಎಂದರೆ ಸುನೀಲ್ ಕುಮಾರ್ ಮತ್ತು ಬೆಲ್ಲದ್ ಹೀಗೆ ಮಾಡುವುದಕ್ಕೂ ಕೆಲ ದಿನಗಳ ಹಿಂದೆ ಪಕ್ಷದ ಕೆಲ ಶಾಸಕರು ಹಿರಿಯ ನಾಯಕ ರಾಮ್ ಮಾಧವ್ ಅವರನ್ನು ಭೇಟಿ ಮಾಡಿದ್ದಾರೆ. 'ಗ್ರೇಟರ್ ಬೆಂಗಳೂರು ಅಥಾರಿಟಿ' (ಜಿಬಿಎ) ಚುನಾವಣೆಯ ಉಸ್ತುವಾರಿಯಾಗಿ ನೇಮಕಗೊಂಡ ರಾಮ್ ಮಾಧವ್ ಅವರು ನೇರವಾಗಿ ಸಂಘಪರಿವಾರದ ನಾಯಕ. ಇಂಥ ರಾಮ್ ಮಾಧವ್ ಅವರನ್ನು ಭೇಟಿ ಮಾಡಿದ ಈ ಶಾಸಕರು ತಮ್ಮ ಪಕ್ಷದ ನಾಯಕರ ಬಗ್ಗೆ ಕಂಪ್ಲೇಂಟು ಪಟ್ಟಿ ಸಲ್ಲಿಸಿದ್ದಾರೆ. ''ನಾವು ಸರಕಾರದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಡಬಹುದು. ಆದರೆ ಸಿಎಂ-ಡಿಸಿಎಂ ವಿರುದ್ಧ ಮುಗಿಬೀಳಲಾಗದೆ ನಮ್ಮ ನಾಯಕರು ಅವಕಾಶ ಕೈಚೆಲ್ಲುತ್ತಿದ್ದಾರೆ'' ಎಂದವರು ಹೇಳಿದಾಗ ರಾಮ್ ಮಾಧವ್ ಕನಲಿದರಂತೆ. ಅಷ್ಟೇ ಅಲ್ಲ, ''ರೀ, ಹಾಗೇನಾದರೂ ಆಗುತ್ತಿದೆ ಎಂದರೆ ಉಳಿದವರೇಕೆ ಸುಮ್ಮನಿರುತ್ತೀರಿ? ನೀವು ಹೋರಾಟಕ್ಕಿಳಿಯಿರಿ. ಇದು ಒಬ್ಬಿಬ್ಬರಿಗಾಗಿ ಕಾಯುತ್ತಾ ಕೂರುವ ಸಮಯವಲ್ಲ. ಗೋ ಅಹೆಡ್'' ಅಂತ ಗ್ರೀನ್ ಸಿಗ್ನಲ್ಲು ಕೊಟ್ಟಿದ್ದಾರೆ.

ಹೀಗೆ ರಾಮ್ ಮಾಧವ್ ಗ್ರೀನ್ ಸಿಗ್ನಲ್ಲು ಕೊಟ್ಟ ಬೆನ್ನಲ್ಲಿಯೇ ರಾಜ್ಯ ಬಿಜೆಪಿಯ ಚಹರೆ ಪಟ್ಟಿ ಬದಲಾಗಿದೆ. ಮಾಜಿ ಸಚಿವ ಸುನೀಲ್ ಕುಮಾರ್, ಅರವಿಂದ ಬೆಲ್ಲದ್ ಅವರೆಲ್ಲ ಇದ್ದಕ್ಕಿದ್ದಂತೆ ಫೀಲ್ಡಿಗಿಳಿದಿದ್ದಾರೆ. ಈ ಮಧ್ಯೆ ಸೀನಿಯರ್ ಟೈಗರ್ ಎಸ್.ಸುರೇಶ್ ಕುಮಾರ್ ಕೂಡಾ ಅದ್ಭುತ ಲಯಕ್ಕೆ ಮರಳಿದ್ದು ಇದರ ಪರಿಣಾಮವಾಗಿ ಸದನದಲ್ಲಿ ಬಿಜೆಪಿಯ ಖದರ್ ಹೆಚ್ಚಾಗಿದೆ. ಬಿಜೆಪಿ ಮೂಲಗಳ ಪ್ರಕಾರ, ಪಕ್ಷದಲ್ಲಿ ಇತ್ತೀಚೆಗೆ ಪದೇ ಪದೆ ಕಾಣುತ್ತಿದ್ದ ಶಾಸಕರ ಅಸಮಾಧಾನಗಳಿಗೆ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ಸರಿಯಾಗಿ ಮದ್ದು ಅರೆಯುತ್ತಿಲ್ಲ. ಆದ್ದರಿಂದ ಹಲವರು ಕೇಂದ್ರ ಸಚಿವ ಅಮಿತ್ ಶಾ ಅವರಿಗೆ ಈ ಬಗ್ಗೆ ದೂರು ಸಲ್ಲಿಸಿದ್ದರು.

ಹೀಗಾಗಿ ಇಂಥ ಕಂಪ್ಲೇಂಟುಗಳನ್ನು ಕೇಳಿ ಕೇಳಿ ಸುಸ್ತಾದ ಅಮಿತ್ ಶಾ ಅವರು ಗ್ರೇಟರ್ ಬೆಂಗಳೂರು ಅಥಾರಿಟಿ ಚುನಾವಣೆಯ ಹೆಸರಿನಲ್ಲಿ ರಾಮ್ ಮಾಧವ್ ಅವರನ್ನು ಕರ್ನಾಟಕಕ್ಕೆ ಕಳಿಸಲು ವ್ಯವಸ್ಥೆ ಮಾಡಿದ್ದಾರೆ. ಪರಿಣಾಮ? ರಾಜ್ಯ ಬಿಜೆಪಿಯಲ್ಲಿ ಸಾಮೂಹಿಕ ನಾಯಕತ್ವದ ಆಟ ಶುರುವಾಗಿದೆ. ಮುಂದಿನ ದಿನಗಳಲ್ಲಿ ಇದು ಮತ್ತಷ್ಟು ಎಫೆಕ್ಟಿವ್ ಆಗಲಿದೆ.

ಲಾಸ್ಟ್ ಸಿಪ್

ಇನ್ನು ಕರ್ನಾಟಕದ ವಿಷಯದಲ್ಲಿ ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ತುಂಬ ಆ್ಯಕ್ಟಿವ್ ಆಗಿದ್ದಾರೆ. ಹೀಗೆ ಅವರು ಆ್ಯಕ್ಟಿವ್ ಆಗಲು ಸಂಘ ಪರಿವಾರದ ಸಿಗ್ನಲ್ಲು ಕಾರಣವಾದರೂ, ಕರ್ನಾಟಕದ ವಿಷಯದಲ್ಲಿ ಸಂತೋಷ್ ಅವರನ್ನು ಹೆಚ್ಚು ಹೆಚ್ಚಾಗಿ ಬಳಸಿಕೊಳ್ಳಲು ಸಂಘ ಪರಿವಾರ ಉತ್ಸುಕವಾಗಿದೆ ಎಂಬುದೂ ಅಷ್ಟೇ ನಿಜ. ಹೀಗಾಗಿ ಪರಿವಾರದ ಸಿಗ್ನಲ್ಲಿನ ಮೇಲೆ ರಾಜ್ಯದಲ್ಲಿ ನಡೆಯುತ್ತಿರುವ ಹಿಂದೂ ಸಮಾಜೋತ್ಸವ ಕಾರ್ಯಕ್ರಮಕ್ಕಾಗಿ ಮಂಡ್ಯ, ತುಮಕೂರು, ದಾವಣಗೆರೆ ಸೇರಿದಂತೆ ಒಂದೇ ವಾರದಲ್ಲಿ ಹಲವು ಜಿಲ್ಲೆಗಳಿಗೆ ಭೇಟಿ ನೀಡಿರುವ ಸಂತೋಷ್ ಮುಂದಿನ ದಿನಗಳಲ್ಲಿ ಮತ್ತಷ್ಟು ಆ್ಯಕ್ಟಿವ್ ಆಗುವುದು ಗ್ಯಾರಂಟಿ. ಹೀಗೆ ಸಂತೋಷ್ ಅವರನ್ನು ಹೆಚ್ಚೆಚ್ಚಾಗಿ ಕರ್ನಾಟಕದಲ್ಲಿ ಆ್ಯಕ್ಟಿವ್ ಮಾಡುವ ಮೂಲಕ ರಾಜ್ಯದ ಮೂಲೆ ಮೂಲೆಯಲ್ಲಿರುವ ಪರಿವಾರದ ಕಾರ್ಯಕರ್ತರಿಗೆ ಬಲ ತುಂಬುವುದು ಸಂಘದ ನಾಯಕರ ಲೆಕ್ಕಾಚಾರ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸಾಲ ಮಾಡಿ ತುಪ್ಪ!

ಈ ಸಲದ ಕೇಂದ್ರ ಬಜೆಟ್ ಪ್ರಕಾರ ಸರಕಾರಕ್ಕೆ ಶೇಕಡಾ 24ರಷ್ಟು ಆದಾಯವು ಸಾಲದ ರೂಪದಲ್ಲಿ ಬರಲಿದೆ ಮತ್ತು ಶೇಕಡಾ 20ರಷ್ಟು ಖರ್ಚು ಸಾಲದ ಬಡ್ಡಿಗೆ ಹೋಗಲಿದೆ. ಅಂದರೆ, ಹೊಸ ಸಾಲದಲ್ಲಿನ ಸಿಂಹಪಾಲು, ಹಳೆಯ ಸಾಲಗಳ ಬಡ್ಡಿಗೆ ಪಾವತಿಯಾಗಲಿದೆ. 'ಋಣಂ ಕೃತ್ವಾ ಘೃತಂ ಪಿಬೇತ್' ಎಂದು ಸಂಸ್ಕೃತದಲ್ಲಿ ಸೂಕ್ತಿಯೊಂದಿದೆ. ಇದರರ್ಥ 'ಸಾಲಮಾಡಿಯಾದರೂ ತುಪ್ಪ ತಿನ್ನಬೇಕು' ಅಂತ. ಆದರೆ ಈಗ ನಾವು, ಸಾಲ ಮಾಡಿ ಬಡ್ಡಿ ಎಂಬ ಕಪ್ಪ ತೆರುವ ಪರಿಸ್ಥಿತಿಯನ್ನು ತಂದುಕೊಂಡಿದ್ದೇವೆ!

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಗಾಂಧೀಜಿ ಮತ್ತು ಶ್ರೀರಾಮ

ಮೋಹನ್ ವಿಶ್ವ ಅವರು ತಮ್ಮ 'ವೀಕೆಂಡ್ ವಿತ್ ಮೋಹನ್' ಅಂಕಣದಲ್ಲಿ (ಜ.31) ಮಹಾತ್ಮ ಗಾಂಧಿಯವರಿಗೆ ಮಾದರಿಯಾಗಿದ್ದ ಶ್ರೀರಾಮನ ಬಗ್ಗೆ ನೆನಪಿಸಿದ್ದಾರೆ. ತ್ರೇತಾಯುಗದ ಶ್ರೀರಾಮನು ಪ್ರತಿಯೊಬ್ಬ ಹಿಂದೂ ವ್ಯಕ್ತಿಯ ಆರಾಧ್ಯದೈವ ಎಂಬುದರಲ್ಲಿ ಎರಡು ಮಾತಿಲ್ಲ. ಪರಸ್ಪರ ಭೇಟಿಯಾದಾಗ ನಮ್ಮಲ್ಲಿ



ಬಹುತೇಕರು ಹೇಳುವುದೇ 'ರಾಮ್ ರಾಮ್' ಅಂತ. ತನ್ನ ಹಲವು ನಾಮಗಳಿಂದ ದೇಶದ ಪ್ರತಿ ಮನೆಯಲ್ಲಿ ಶ್ರೀರಾಮ ಇಂದು ವಿರಾಜಮಾನ. ಹೀಗಾಗಿ ಇಡೀ ದೇಶವೇ ರಾಮ ಮಯ. ಇಂಥ ಮರ್ಯಾದಾ ಪುರುಷೋತ್ತಮನನ್ನು ತಮ್ಮ ಆದರ್ಶ ಎಂದು ಪ್ರತಿಪಾದಿಸುವ, ನಿತ್ಯವೂ ಅವನ ಸ್ಮರಣೆ ಮಾಡುವ ಗಣನೀಯ ಸಂಖ್ಯೆಯ ಭಕ್ತರು ಇರುವ ಪವಿತ್ರ ನೆಲವೇ ಭಾರತ. ಶ್ರೀರಾಮನ ಭಕ್ತರ ಸಮೂಹದಲ್ಲಿ ಗಾಂಧೀಜಿ ಕೂಡ ಇದ್ದರು ಎಂಬುದನ್ನು ಲೇಖಕರು ಅನೇಕ ಸನ್ನಿವೇಶಗಳ ಮೂಲಕ ತಿಳಿಸಿದ್ದಾರೆ. ಇನ್ನು ಶ್ರೀರಾಮನ ವಿರೋಧಿಗಳಿಗೆ ಕೂಡ ಇಲ್ಲಿ ಕೊರತೆಯಿಲ್ಲ. 'ರಾಮ ಒಬ್ಬ ಕಾಲ್ಪನಿಕ ವ್ಯಕ್ತಿ' ಎನ್ನುತ್ತಾ ಕೆಲವರು ಅವನ ಅಸ್ತಿತ್ವವನ್ನು ಪ್ರಶ್ನಿಸುತ್ತಾರೆ. ಕೆಲವೊಮ್ಮೆ ತಮ್ಮ ಹೆಸರಲ್ಲೇ 'ರಾಮ' ಇದ್ದರೂ ಆತನನ್ನು ನಂಬದವರು ಈ ವರ್ಗದ ಜನ. ನಾವು ಕಂಡಿರದ, ಆದರೆ ಮನೆಯ ಹಿರಿಯರು ಹೇಳಿದ ಮೇಲೆ, ನೂರಿನ್ನೂರು ವರ್ಷಗಳ ಹಿಂದಿನ ನಮ್ಮ ಪೂರ್ವಜರ ಇರುವಿಕೆಯನ್ನು ನಂಬುವ ನಾವು, ಒಂದು ಕಾಲದಲ್ಲಿ ಶ್ರೀರಾಮ ಎಂಬ ವಿಶೇಷ ವ್ಯಕ್ತಿಯೂ ಅವತರಿಸಿದ್ದ ಎಂಬ ಅದೇ ಹಿರಿಯರ ಮಾತನ್ನು ಒಪ್ಪದಿರುವುದು ನಮ್ಮ ಅಜ್ಞಾನ. ಇದು ನಮ್ಮ ಮತಿಗೆ ತುಕ್ಕು ಹಿಡಿದಿರುವುದರ ದ್ಯೋತಕ. ರಾಮನನ್ನು ಒಪ್ಪಿದ ಮತ್ತು ಒಪ್ಪದ ಎರಡೂ ಪಂಗಡಗಳು ಇಂದು ಭಾರತದಲ್ಲಿರುವುದು ನಾವು ನೋಡುವ ಸನ್ನಿವೇಶ. ಏನೇ ಆದರೂ ಎಲ್ಲರೂ ಶ್ರೀರಾಮನ ಸುತ್ತ ಪ್ರದಕ್ಷಿಣೆ ಹಾಕುತ್ತಿರುವುದು ಮಾತ್ರ ವಿಶೇಷ.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ದಯಮಾಡಿ ಟ್ರೇಲರ್ ರಿಲೀಸ್ ಮಾಡಬೇಡಿ...

ವಿದೇಶವಾಸಿ

ಕಿರಣ್ ಉಪಾಧ್ಯಾಯ, ಬಹ್ರೈನ್

vveditoped@gmail.com

ಈ ಬಾರಿ ಭಾರತಕ್ಕೆ ಬರುವ ಪೂರ್ವದಲ್ಲಿ, ಒಂದಷ್ಟು ಕನ್ನಡ ಚಲನಚಿತ್ರಗಳನ್ನು ನೋಡಬೇಕು ಎಂದು ತೀರ್ಮಾನಿಸಿದ್ದೆ. ಅವುಗಳಲ್ಲಿ ಹಿಂದಿಯ 'ಧುರಂಧರ್', 'ಬಾರ್ಡರ್-2' ಚಿತ್ರಗಳೊಂದಿಗೆ ಕೆಲವು ಕನ್ನಡ ಚಲನಚಿತ್ರಗಳೂ ಸೇರಿಕೊಂಡಿದ್ದವು. ಕನ್ನಡದಲ್ಲಿ ಪ್ರಮುಖವಾಗಿ ದರ್ಶನ್ ಅಭಿನಯದ 'ಡೆವಿಲ್', ಸುದೀಪ್ ಅಭಿನಯದ 'ಮಾರ್ಕ್', ಶಿವರಾಜ್ ಕುಮಾರ್, ಉಪೇಂದ್ರ ಮತ್ತು ರಾಜ್ ಶೆಟ್ಟಿ ಅಭಿನಯದ '45' ಸಿನಿಮಾಗಳು ನನ್ನ ಬಕೆಟ್ ಲಿಸ್ಟ್‌ನಲ್ಲಿದ್ದವು. ಏಕೆಂದರೆ 2025ರ ವರ್ಷಾಂತ್ಯದಲ್ಲಿ ಬಿಡುಗಡೆಗೂ ಮುನ್ನ ಮತ್ತು ಬಿಡುಗಡೆಯಾದ ದಿನಗಳಲ್ಲಿ ಭಾರಿ ಸುದ್ದಿ ಮಾಡಿದ ಚಿತ್ರಗಳು ಇವು.

ದರ್ಶನ್ ಜೈಲಿನಲ್ಲಿದ್ದರೂ 'ಡೆವಿಲ್' ಚಿತ್ರವನ್ನು ಮುಗಿಸಿ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡಿದ್ದು ಒಂದು ಕಡೆಯಾದರೆ, ಸಂಗೀತ ನಿರ್ದೇಶಕರಾಗಿದ್ದು ಚಿತ್ರವನ್ನು ನಿರ್ದೇಶಿಸಿದ, ಅದರಲ್ಲೂ ಮೂವರು ದಿಗ್ಗಜ ನಟರನ್ನು ತಮ್ಮ ಚಿತ್ರಕ್ಕೆ ಕರೆ ತರುವುದಕ್ಕೂ ಮೊದಲು ಸುಮಾರು ಮುಕ್ಕಾಲು ಭಾಗ ಚಿತ್ರವನ್ನು ಕೃತಕ ಬುದ್ಧಿಮತ್ತೆಯಲ್ಲಿ (ಎಐ) ರಚಿಸಿ ತೋರಿಸಿದ್ದ ಅರ್ಜುನ್ ಜನ್ಯ ಅವರ '45' ಚಿತ್ರ ಇನ್ನೊಂದು ಕಡೆ. ಹಾಗೆಯೇ 'ಮ್ಯಾಕ್ಸ್' ನಂತರ ಬರುತ್ತಿರುವ ಸುದೀಪ್ ಅವರ 'ಮಾರ್ಕ್' ಚಿತ್ರ. ಇವುಗಳ ಕುರಿತಾಗಿ ಇದ್ದ ಆಶಾಗೋಪುರಗಳು, ಸುದ್ದಿ ಸಂಭ್ರಮಗಳು, ಈ ಮೂರೂ ಚಲನಚಿತ್ರಗಳನ್ನು ನೋಡಬೇಕು ಎನ್ನುವ ಕೌತುಕವನ್ನು ಹೆಚ್ಚಿಸಿದ್ದವು. ಆದ್ದರಿಂದ, ಬೆಂಗಳೂರಿಗೆ ಬಂದು ಇಳಿಯುತ್ತಿದ್ದಂತೆಯೇ 2-3 ವಾರದ ಹಿಂದೆಯಷ್ಟೇ ಬಿಡುಗಡೆಯಾಗಿದ್ದ ಕನ್ನಡದ ಈ ಮೂರೂ ಚಿತ್ರಗಳನ್ನು ಚಿತ್ರಮಂದಿರಗಳಲ್ಲಿ ಹುಡುಕಿದೆ. ತಿಳಿದು ಬಂದ ವಿಷಯವೆಂದರೆ, ಬೆಂಗಳೂರಿನ ಯಾವ ಚಿತ್ರಮಂದಿರದಲ್ಲೂ ಈ ಮೂರು ಚಿತ್ರಗಳು ಇಲ್ಲ ಎಂಬುದು. ಅದಕ್ಕಿಂತ ಮೊದಲು ಬಿಡುಗಡೆಯಾದ 'ಧುರಂಧರ್' ಮತ್ತು ಮೊನ್ನೆ ಮೊನ್ನೆ ಬಿಡುಗಡೆಯಾದ 'ಬಾರ್ಡರ್-2' ಚಿತ್ರಮಂದಿರಗಳಲ್ಲಿ ಮುಂದುವರಿದಿದ್ದು, ಕನ್ನಡದ ಮೂರೂ ದೊಡ್ಡ ಬಜೆಟ್ ಚಿತ್ರಗಳ ಕಥೆ ನೀರಿನಲ್ಲಿ ನೆನೆದ ಪಟಾಕಿಯಂತಾದದ್ದು ತಿಳಿದು ಬೇಸರವಾಯಿತು.

ಈಗ, ಕಳೆದ ವಾರ ತೆರೆಗೆ ಬಂದ ಇನ್ನೆರಡು ಬಿಗ್ ಬಜೆಟ್ ಚಿತ್ರಗಳಾದ 'ಲ್ಯಾಂಡ್‌ಲಾರ್ಡ್' ಮತ್ತು 'ಕಲ್ಟ್' ಕಥೆ ಏನು ಎಂದು ತಿಳಿಯುವ ಹೊತ್ತಿಗೆ, ಒಂದೇ ದಿನ ಆರು ಹೊಸ ಚಿತ್ರಗಳು ಬಿಡುಗಡೆಯಾಗುತ್ತಿವೆಯಂತೆ. ಅದರೊಂದಿಗೆ ಒಂದು ವಾರ ನಡೆಯುವ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಬೇರೆ. ಅಲ್ಲಿ ಅರವತ್ತು ದೇಶಗಳ ಇನ್ನೂರಕ್ಕೂ ಹೆಚ್ಚು ಚಲನಚಿತ್ರಗಳ ಪ್ರದರ್ಶನ. ಮೊದಲೇ ಉಲ್ಲಾಸ, ಮೇಲಿಂದ ಫಾಲ್ಗುಣ ಮಾಸ...! 'ಜನ ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಬರುತ್ತಿಲ್ಲ' ಎನ್ನುವ ಕೂಗಿನ ನಡುವೆಯೇ ಇಷ್ಟೆಲ್ಲ ನಡೆಯುತ್ತಿದೆ!

ಇನ್ನು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಉದ್ಘಾಟನಾ ಸಮಾರಂಭದ ಕಥೆ ಹೇಳುವುದಕ್ಕಿಂತ ಹೇಳದೇ ಇದ್ದರೇ ಒಳ್ಳೆಯದು. ಇಂಥ ಒಂದು ಚಿತ್ರೋತ್ಸವದ ಉದ್ದೇಶ ಒಳ್ಳೆಯದೇ. ಆದರೆ, ಸರಕಾರ ಅದಕ್ಕೆ ಖರ್ಚು ಮಾಡುವ ಹಣ ಎಷ್ಟು ಎಂದು ಕೇಳಿದರೆ, ಅದನ್ನು ನಿರ್ವಹಿಸುತ್ತಿರುವ ರೀತಿಯನ್ನು ನೋಡಿದರೆ, ಆಯೋಜಕರಿಗೇ ಪ್ರೀತಿಯಾಗಬೇಕು. ಅರವತ್ತು ದೇಶಗಳು ಭಾಗವಹಿಸುತ್ತಿರುವ ಈ ಚಿತ್ರೋತ್ಸವದಲ್ಲಿ ಕಂಡದ್ದು ಎರಡೋ-ಮೂರೋ ವಿದೇಶಿ ಮುಖಗಳು ಮಾತ್ರ. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ ಅವರ, ಕನ್ನಡ ಸಿನಿಮಾಗಳ ನಿರ್ಮಾಣದಿಂದ ಬಿಡುಗಡೆಯವರೆಗಿನ ಪರವಾನಗಿ ಪಡೆಯುವ ಪ್ರಯಾಣದ ಗೋಳಿನ ಭಾಷಣ! ತಾವು ಮಾತನಾಡುತ್ತಿರುವುದು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ವೇದಿಕೆಯಲ್ಲಿ ಎನ್ನುವುದು ಅವರಿಗೇ ನೆನಪಿದ್ದಂತಿಲ್ಲ. ಬಿಡಿ, 99 ವರ್ಷದ ಇತಿಹಾಸವಿರುವ ಕನ್ನಡ ಚಲನಚಿತ್ರೋದ್ಯಮದಿಂದ ಈ ಉತ್ಸವದಲ್ಲಿ ಎಷ್ಟು ಜನ ಭಾಗಿಯಾಗಿದ್ದರೆಂದು ಎಣಿಸಿದರೆ, ಮಾಧ್ಯಮದವರ ಕ್ಯಾಮರಾ ಸಂಖ್ಯೆಗಿಂತಲೂ ಕಡಿಮೆ. ಅವರಿಗೂ ಕುಳಿತುಕೊಳ್ಳಲು ಸ್ಥಳದ ಅಭಾವ. ಚಿತ್ರೋದ್ಯಮ ದಲ್ಲಿರುವ ವರಿಗಿಂತಲೂ ಹೊರಗಿನವರೇ ಹೆಚ್ಚು ಎಂದರೂ ತಪ್ಪಿಲ್ಲ. ಹೌದು, ಚಿತ್ರೋದ್ಯಮದವರೆಲ್ಲ ಎಲ್ಲಿದ್ದರು? ಅವರೇ ಮನೆಯಲ್ಲಿ ಕುಳಿತು, ಜನ ತಮ್ಮ ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಬರುತ್ತಿಲ್ಲ ಎನ್ನುವುದು ಎಷ್ಟು ಸರಿ? ಅವರ ಗೋಳೂ ಸರಿಯೇ ಬಿಡಿ, 'ಪ್ರೀಮಿಯರ್ ಶೋ' ನೋಡಲು ಬಂದಷ್ಟು ಜನವೂ ಚಿತ್ರಮಂದಿರದಲ್ಲಿ ಸಿನಿಮಾ ಬಿಡುಗಡೆಯಾದಾಗ ನೋಡಲು ಬರದಿದ್ದರೆ ಅವರಾದರೂ ಏನು ಮಾಡಬೇಕು? ಪಾಪ, ತಮ್ಮ ಪಾಪವನ್ನು ಜನರ ಮೇಲೆ ಎತ್ತಿ ಹಾಕುವುದೊಂದೇ ದಾರಿ.

ಇಲ್ಲಿ ಇನ್ನೂ ಒಂದು ಪ್ರಶ್ನೆ ಮೂಡುವುದು ಸಹಜ. ಟೀಸರ್ ಬಿಡುಗಡೆಯಾದ ಒಂದೋ-ಎರಡೋ ಗಂಟೆಯ ಅವಧಿಯಲ್ಲಿ ಲಕ್ಷಗಟ್ಟಲೆ ಜನ ನೋಡುತ್ತಾರೆ, ಆದರೆ ಚಿತ್ರ ನೋಡಲು ಚಿತ್ರಮಂದಿರಕ್ಕೆ ಬರುವುದಿಲ್ಲ. ಅಥವಾ ಕೆಲವು ದಿನಗಳ ನಂತರ ಓಟಿಟಿಯಲ್ಲಿ ಬಿಡುಗಡೆಯಾದಾಗಲೂ ಆ ಚಿತ್ರವನ್ನು ನೋಡುವುದಿಲ್ಲ ಎಂದಾದರೆ ಇದರ ಹಿಂದಿನ ಕಾರಣವೇನು? ಟೀಸರ್‌ಗಳು, ಟ್ರೇಲರ್‌ಗಳು ಪ್ರೇಕ್ಷಕರನ್ನು ಚಿತ್ರ ನೋಡಲು ಪ್ರೇರೇಪಿಸುವಂತಿರಬೇಕು, ಚಿತ್ರಮಂದಿರದತ್ತ ಸೆಳೆಯುವಂತಿರಬೇಕು. ಟ್ರೇಲರ್ ನೋಡಿಯೇ 'ಸಾಕಪ್ಪಾ ಸಾಕು' ಎನ್ನುವಂತಿರಬಾರದು ಅಲ್ಲವೇ? ಇತ್ತೀಚಿನ ಸಿನಿಮಾಗಳ ಟ್ರೇಲರ್ ನೋಡಿ, ಮುಕ್ಕಾಲು ಭಾಗ ಕತ್ತಲೆ. ಸಿನಿಮಾವೂ ಕತ್ತಲೆಯೇ. ಎಷ್ಟಾದರೂ ಟ್ರೇಲರ್ ಎನ್ನುವುದು ಸಿನಿಮಾದ ಒಂದು ಝಲಕ್ ತಾನೆ? ಇನ್ನುಳಿದ ಬೆಳಕಿನ ಭಾಗದಲ್ಲಿ ಬೆಂಕಿ, ಬಾಂಬು, ಕಾರುಗಳನ್ನು ಸ್ಫೋಟಿಸುವುದು, ಹೆಲಿಕಾಪ್ಟರ್ ಉಡಾಯಿಸುವುದು ಇತ್ಯಾದಿ, ಇತ್ಯಾದಿ. ಅದರ ಹೊರತಾಗಿ ಅಲ್ಪ-ಸ್ವಲ್ಪ ಬೆಳಕು ಕಾಣಬೇಕು ಎಂದರೆ ಹೀರೋ ಸಿಗರೇಟ್ ಹೊತ್ತಿಸಬೇಕು. ಆ ಸಿಗರೇಟ್ ಬೆಳಕಿನಲ್ಲಿಯೇ ಹೀರೋ, ವಿಲನ್‌ಗಳ ಗಡ್ಡ, ಮೀಸೆಯಿಂದ ತುಂಬಿದ ಎರಡು ಕಣ್ಣು, ಒಂದು ಮೂಗು ಮಾತ್ರ ಕಾಣುವ ಮುಖ ಕಾಣಬೇಕು. ಮೊದಲೇ ಕತ್ತಲು, ಮುಖದ ತುಂಬ ಕೂದಲು, ಇನ್ನು ಅಭಿನಯ ಎಲ್ಲಿಂದ ಕಾಣಬೇಕು? ಒಂದು ಲೆಕ್ಕದಲ್ಲಿ ಅದು ಒಳ್ಳೆಯದೇ. ಅಭಿನಯ ಬರದಿದ್ದವರಿಗೆ, ಕೆಟ್ಟ ಅಭಿನಯ ಮಾಡುವವರಿಗೆ ಅದೇ ಒಳ್ಳೆಯದು. ಕೆಲವರು ಅದೇ ಕಾರಣಕ್ಕೆ ಮುಖದ ತುಂಬ ರೋಮ ಬೆಳೆಸಿದ್ದೂ ಇರಬಹುದು, ಯಾರಿಗೆ ಗೊತ್ತು?

ಇಂಥ ಟ್ರೇಲರ್ ನೋಡಿ ಜನ ಸಿನಿಮಾ ನೋಡಲು ಬರುತ್ತಾರೆಂದು ಚಿತ್ರದ ನಿರ್ಮಾಪಕರೋ, ನಿರ್ದೇಶಕರೋ ತಿಳಿಯುವುದಾದರೆ, ಇಂಥ ಟ್ರೇಲರ್ ನೋಡಿ ಬರದೇ ಇರುವವರೂ ಇರುತ್ತಾರೆ, ದಿನದಿಂದ ದಿನಕ್ಕೆ ಅವರ ಸಂಖ್ಯೆಯೇ ಹೆಚ್ಚಾಗುತ್ತಿದೆ ಎನ್ನುವ ಸತ್ಯವನ್ನೂ ತಿಳಿಯಬೇಕು. ಹೆಚ್ಚು ಜನರು ಟ್ರೇಲರ್ ನೋಡಿದ್ದಾರೆ ಎಂದ ಮಾತ್ರಕ್ಕೆ ಸಿನಿಮಾವನ್ನೂ ಹೆಚ್ಚು ಜನ ನೋಡುತ್ತಾರೆ ಎಂಬ ತಪ್ಪು ಕಲ್ಪನೆಯಲ್ಲೇ ಇದ್ದರೆ, ಅಂಥವರ ಸಹಾಯಕ್ಕೆ ಜನರೂ ಬರುವುದಿಲ್ಲ, ಯುಟ್ಯೂಬೂ ಬರುವುದಿಲ್ಲ. 'ನಿಮ್ಮ ಸಿನಿಮಾಕ್ಕೆ ಜನ ಬರಬೇಕು ಎಂದರೆ, ದಯಮಾಡಿ ನಿಮ್ಮ ಚಿತ್ರದ ಟ್ರೇಲರ್, ಟೀಸರ್ ಬಿಡುಗಡೆ ಮಾಡಬೇಡಿ' ಎನ್ನುವಂತಾಗಿದೆ. ಆ ಕಾರಣದಿಂದಾದರೂ ಸ್ವಲ್ಪ ಮಟ್ಟಿನ ಕುತೂಹಲ ಉಳಿಸಿಕೊಂಡ ಪ್ರೇಕ್ಷಕ ಚಿತ್ರಮಂದಿರದ ಕಡೆ ಸುಳಿದರೂ ಸುಳಿಯಬಹುದು.

ಹಾಗಾದರೆ ಕನ್ನಡದ ಪ್ರೇಕ್ಷಕ ಚಿತ್ರಮಂದಿರದ ಕಡೆ ಸುಳಿಯುವುದೇ ಇಲ್ಲ ಎನ್ನುವ ವಾದವನ್ನು 'ಕಾಂತಾರ', 'ಮಾದೇವ', 'ಸು ಫ್ರಮ್ ಸೋ' ಚಿತ್ರಗಳು ಸುಳ್ಳಾಗಿಸಿವೆ. ಒಂದು ವಿಷಯ ಗಮನಿಸಿ, ಇವೆಲ್ಲ ಹೆಚ್ಚು ಪ್ರಚಾರವಿಲ್ಲದೇ ತೆರೆಗೆ ಬಂದ ಚಿತ್ರಗಳು. ಬಿಡುಗಡೆಯಾದ ನಂತರವೂ ಪ್ರಚಾರಕ್ಕೆ ಹೆಚ್ಚು ಒತ್ತು ನೀಡಿದ ಚಿತ್ರಗಳಲ್ಲ. ರಿಯಾಲಿಟಿ ಶೋದಲ್ಲಿ ಭಾಗವಹಿಸಿದವರ ಜತೆ ಸಿನಿಮಾ ನೋಡುವುದು, ಮುಖ್ಯಮಂತ್ರಿಗಳೊಂದಿಗೆ ಸಿನಿಮಾ ನೋಡುವುದು ಮುಂತಾದ ಪ್ರಚಾರದ ಗಿಮಿಕ್‌ಗಳು ಹೆಚ್ಚು ಕೆಲಸ ಮಾಡುವುದಿಲ್ಲ. ಆ ಕಾರಣಕ್ಕೆ ಜನ ಚಿತ್ರಮಂದಿರಕ್ಕೆ ಬರುವುದಿಲ್ಲ. ಒಂದು ವೇಳೆ ಬಂದರೆ ಅದು ತಾವು ಇಷ್ಟಪಟ್ಟವರನ್ನು ನೋಡಲೆಂದೇ ಹೊರತು, ಸಿನಿಮಾ ನೋಡಲು ಅಲ್ಲ. ಸಮಸ್ಯೆ ಏನು ಎಂದರೆ, ಇದನ್ನೆಲ್ಲ ಹೇಳಿದರೆ ಇವರಿಗೆ ಅರ್ಥವೂ ಆಗುವುದಿಲ್ಲ. 'ಹೆತ್ತವರಿಗೆ ಹೆಗ್ಗಣ ಮುದ್ದು' ಎನ್ನುವುದು ಸರಿ, ಆದರೆ ಆ ಹೆಗ್ಗಣವೂ ಸತ್ತು ನಾರುತ್ತಿರುವಾಗ ಏನು ಮಾಡುವುದು?

ಇನ್ನೊಂದು ಗಂಭೀರ ವಿಷಯವೆಂದರೆ, ಕನ್ನಡದ ಪ್ರೇಕ್ಷಕರು, ಅದರಲ್ಲೂ ಯುವಜನರು ಕನ್ನಡ ಚಲನಚಿತ್ರಗಳಿಂದ ದೂರವಾಗುತ್ತಿರುವುದು. ಇಂದಿನ ಯುವಜನರು ಇಂಗ್ಲಿಷ್, ಹಿಂದಿ ಕಡೆ ತಿರುಗಿದ್ದಾರೆ. ಕನ್ನಡದ ಪ್ರೇಕ್ಷಕರು ಕನ್ನಡ ಸಿನಿಮಾ, ಧಾರಾವಾಹಿ ನೋಡದೇ, ಕೊರಿಯನ್ ಧಾರಾವಾಹಿ, ಮಲಯಾಳಂ, ತೆಲುಗು, ಮರಾಠಿ ಸಿನಿಮಾಗಳತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಒಂದು ಕಾಲದಲ್ಲಿ, ಕರ್ನಾಟಕದಲ್ಲಿ ಮಲಯಾಳಂ ಸಿನಿಮಾಗಳು ಮ್ಯಾಟಿನಿಗೆ ಮಾತ್ರ ಸೀಮಿತ ವಾಗಿರುತ್ತಿದ್ದವು. ಸಿನಿಮಾ ಮಧ್ಯದಲ್ಲಿ ಕಥೆಗೆ ಸಂಬಂಧವೇ ಇಲ್ಲದ ಅಶ್ಲೀಲ ವಿಡಿಯೋ ತುಣುಕುಗಳು ಇರುತ್ತಿದ್ದವು. ಸಭ್ಯರೆಂದು ಕರೆಸಿಕೊಳ್ಳುವವರು ಆ ಕಾರಣಕ್ಕೆ ಅಂಥ ಸಿನಿಮಾಕ್ಕೆ ಹೋಗುತ್ತಿರಲಿಲ್ಲ, ಮಕ್ಕಳನ್ನಂತೂ ಕಳಿಸುತ್ತಲೇ ಇರಲಿಲ್ಲ. ಅದನ್ನು ನೋಡಲೆಂದೇ ಹೋಗುವವರೂ ಇದ್ದರು ಅನ್ನಿ. ಆದರೆ ಇಂದು ಮಲಯಾಳಂ ಸಿನಿಮಾ ಸಂಪೂರ್ಣ ಬದಲಾಗಿದೆ ಎನ್ನುವುದನ್ನು ಒಪ್ಪಲೇಬೇಕು. ಮಲಯಾಳಂ ಸಿನಿಮಾ ಎಂದರೆ ಮೂಗುಮುರಿಯುವ ಸಮಯ, ಸಂದರ್ಭದಿಂದ ಈ ರೀತಿಯ ಬದಲಾವಣೆ ಸಾಮಾನ್ಯವಾದದ್ದಲ್ಲ.

ಮಾತೆತ್ತಿದರೆ 'ಅಪ್ಪಾಜಿ', 'ಅಣ್ಣಾವ್ರು', 'ದೇವರು' ಎಂದು ಡಾ. ರಾಜ್‌ಕುಮಾರ್ ಅವರನ್ನು ಹೊಗಳುವ, ಜಪಿಸುವ ಚಿತ್ರರಂಗ ಅವರ ಆದರ್ಶವನ್ನು ಯಾಕೆ ಪಾಲಿಸುತ್ತಿಲ್ಲ ಅಥವಾ ಪ್ರೇರಣೆ ಪಡೆಯುತ್ತಿಲ್ಲ? ಹಾಗಾದರೆ ಇವರ ಹೊಗಳಿಕೆಗಳೆಲ್ಲ ತೋರಿಕೆಗೆ ಮಾತ್ರ ಸೀಮಿತವೇ? ಡಾ. ರಾಜ್‌ಕುಮಾರ್ ಎಷ್ಟು ಸಿನಿಮಾದಲ್ಲಿ ಸಿಗರೇಟ್ ಸೇದಿದ್ದರು? ಮದ್ಯದ ಬಾಟಲಿ ಹಿಡಿದಿದ್ದರು? ಎಷ್ಟು ಸಿನಿಮಾದಲ್ಲಿ ಮುಖದ ತುಂಬ ಗಡ್ಡ ಮೀಸೆ ತುಂಬಿಕೊಂಡಿದ್ದರು? ಎಷ್ಟು ಸಿನಿಮಾದಲ್ಲಿ ಮಚ್ಚು, ಮಷಿನ್ ಗನ್ ಹಿಡಿದಿದ್ದರು? ಎಷ್ಟು ಕಾರು ಸುಟ್ಟರು? ಅವರು ಅಭಿನಯಿಸಿದ ಇನ್ನೂರು ಚಿತ್ರಗಳ ಪೈಕಿ ಕುಟುಂಬ ಸಮೇತ ನೋಡಲಾಗದ, ಮಕ್ಕಳನ್ನು ಕರೆದುಕೊಂಡು ಹೋಗಬಾರದ ಸಿನಿಮಾಗಳ ಸಂಖ್ಯೆ ಎಷ್ಟು? ಅವರಾಗಲಿ, ಅವರ ನಿರ್ಮಾಪಕ, ನಿರ್ದೇಶಕರಾಗಲಿ ದಡ್ಡರೇ ಇರಬೇಕು ಅಲ್ಲವೇ? ಇದಕ್ಕೆಲ್ಲ ಯಾರೂ ಉತ್ತರಿಸುವುದಿಲ್ಲ. ಹೋಗಲಿ, ಅವರ ಚಿತ್ರದ ಹೆಸರುಗಳಾದರೂ ಹೇಗಿರುತ್ತಿದ್ದವು? 'ಭಾಗ್ಯವಂತರು', 'ಕಾಮನ ಬಿಲ್ಲು', 'ಚಲಿಸುವ ಮೋಡಗಳು', 'ಹಾಲು ಜೇನು'... ಹೆಸರು ನೋಡಿಯೇ ಸಿನಿಮಾಕ್ಕೆ ಹೋಗಬೇಕು ಅನ್ನಿಸುತ್ತಿತ್ತು. ಇಂದಿನ ಸಿನಿಮಾದ ಹೆಸರುಗಳು...? ಇಂದು ಜನ ಇದನ್ನು ಬಯಸುತ್ತಾರೆ ಎಂದು ಹೇಳಬೇಡಿ. ಇದನ್ನೆಲ್ಲ ಜನ ಬಯಸುವುದೇ ಹೌದಾಗಿದ್ದರೆ, ಇಂದಿನ ಸಿನಿಮಾಗಳೆಲ್ಲ ಸೂಪರ್ ಹಿಟ್ ಆಗಬೇಕಿತ್ತಲ್ಲ? ಇನ್ನೂ ಎಷ್ಟು ದಿನ ಇದೇ ಭ್ರಮಾ ಲೋಕದಲ್ಲಿರಬೇಕು? ಇನ್ನೂ ಎಷ್ಟು ಕೈ ಸುಟ್ಟುಕೊಳ್ಳಬೇಕು? ತಮಗೆ ಸರಿ ಕಂಡದ್ದು ಜನ ಇಷ್ಟಪಡಬೇಕು ಎನ್ನುವುದು ಎಷ್ಟು ಸರಿ? ಕನ್ನಡ ಚಿತ್ರರಂಗದವರು ಒಂದು ತಿಳಿಯಬೇಕು. ಮೊದಲು, ಚಿತ್ರಮಂದಿರದಲ್ಲಿ ಸಿನಿಮಾ ನೋಡುವ ಕಾಲದಲ್ಲಿ ಸಿನಿಮಾ ಚೆನ್ನಾಗಿಲ್ಲದಿದ್ದರೆ ಮಧ್ಯಂತರದಲ್ಲಿ ಎದ್ದು ಹೋಗುತ್ತಿದ್ದರು. ಈಗ ಜನ ಚಿತ್ರಮಂದಿರಕ್ಕೆ ಬರುವುದು ಕಡಿಮೆಯಾಗಿದೆ, ಓಟಿಟಿಯಲ್ಲಿ ಸಿನಿಮಾ ನೋಡುತ್ತಿದ್ದಾರೆ ಅಂದುಕೊಳ್ಳಿ. ಈಗ ಮಧ್ಯಂತರದವರೆಗೂ ಕಾಯಬೇಕಾಗಿಲ್ಲ. ರಿಮೋಟ್ ಕೈಯಲ್ಲೇ ಇರುತ್ತದೆ ಎನ್ನುವುದು ಗೊತ್ತಿರಬೇಕು.

ಹೆಚ್ಚು ಹೇಳದೇ, ಒಂದು ಉದಾಹರಣೆಯೊಂದಿಗೆ ಮುಗಿಸುತ್ತೇನೆ. ಇಲ್ಲವಾದರೆ ನಾನು ಯಾರದ್ದೋ ಪರ ವಕಾಲತ್ತು ಮಾಡಿದಂತೆ ಅನಿಸಬಹುದು. ಮಲಯಾಳಂ ನಟ ಮಮ್ಮೂಟಿಯ 'ಕಲಮ್ಕಾವಲ್' ಸಿನಿಮಾ ಇತ್ತೀಚೆಗೆ ತೆರೆಗೆ ಬಂತು. ಅದರ ಆಯ-ವ್ಯಯ ನೋಡುತ್ತಿದ್ದೆ. ಆ ಚಿತ್ರ ನಿರ್ಮಾಣಕ್ಕೆ ಮೂವತ್ತರಿಂದ ಮೂವತ್ತೈದು ಕೋಟಿ ರುಪಾಯಿ ಖರ್ಚಾಗಿದೆಯಂತೆ. ಸಿನಿಮಾ ನೋಡಿದರೆ ಅಷ್ಟು ಖರ್ಚಾಗಿರಲಿಕ್ಕಿಲ್ಲ ಅನ್ನಿಸಿತು. ಇರಲಿ, ನಿನ್ನೆಯವರೆಗೆ ಅದರ ಆದಾಯ ಎಂಬತ್ತು ಕೋಟಿ ದಾಟಿದೆ.

ಅದೇ ನಮ್ಮ ಕನ್ನಡದ '45', 'ಮಾರ್ಕ್', 'ಡೆವಿಲ್' ಚಿತ್ರಗಳ ಬಜೆಟ್ ಅದಕ್ಕಿಂತಲೂ ಹೆಚ್ಚು. ಆದರೆ ಗಳಿಕೆ? ಚಿರಂಜೀವಿ, ವೆಂಕಟೇಶ್ ನಟಿಸಿದ ತೆಲುಗು ಚಿತ್ರ 'ಮನ ಶಂಕರ ವರಪ್ರಸಾದ ಗಾರು' ಚಿತ್ರಕ್ಕೆ ಅರವತ್ತೈದು ಕೋಟಿ ಖರ್ಚಾಗಿದೆಯಂತೆ. ಚಿತ್ರದ ಗಳಿಕೆ ಈಗಾಗಲೇ ಮುನ್ನೂರ ಐವತ್ತು ಕೋಟಿ ದಾಟಿದೆ. ಹಾಗಾದರೆ ಬೇರೆ ಭಾಷೆಯ ಚಿತ್ರಗಳು ಸೋಲುವುದೇ ಇಲ್ಲವೇ? ಖಂಡಿತ ಸೋಲುತ್ತವೆ. ಆದರೆ ಎಷ್ಟು ಚಿತ್ರ ನಿರ್ಮಾಣಗೊಳ್ಳುತ್ತದೆ, ಎಷ್ಟು ಗೆಲ್ಲುತ್ತದೆ, ಎಷ್ಟು ಸೋಲುತ್ತದೆ ಎಂದು ನೋಡಿ. ಕನ್ನಡಕ್ಕಿಂತ ದಕ್ಷಿಣ ಭಾರತದ ಎಲ್ಲ ಭಾಷೆಯ ಚಿತ್ರಗಳ, ಮರಾಠಿ, ಗುಜರಾತಿ ಚಿತ್ರಗಳ ಯಶಸ್ಸಿನ ಸಂಖ್ಯೆ ಹೆಚ್ಚು ಎಂದಾದರೆ ಅದಕ್ಕೆ ಕಾರಣ ಹುಡುಕಬೇಡವೇ?

ಕನ್ನಡದ ಮಾಸ್ ಹೀರೋಗಳು, ಸೂಪರ್ ಸ್ಟಾರ್‌ಗಳ ಸಿನಿಮಾಗಳನ್ನು ಗೆಲ್ಲಿಸಲು ಸಾಧ್ಯವಾಗುತ್ತಿಲ್ಲ ಎನ್ನುವ ಸಂದರ್ಭದಲ್ಲಿ ಅವರ ಹಿಂದೆ ಕೋಟಿ ಕೋಟಿ ಸುರಿಯುವ ಬದಲು, ಕೋಟಿಯ ಒಳಗೇ ಚಿತ್ರ ನಿರ್ಮಿಸಿ ಲಾಭಗಳಿಸುವುದು ಬುದ್ಧಿವಂತಿಕೆ ಅಲ್ಲವೇ? ಒಂದು ವೇಳೆ ನಷ್ಟವೇ ಆದರೂ ಸಣ್ಣದರಲ್ಲಿಯೇ ಹೋಯಿತು ಎಂಬ ಸಮಾಧಾನವಾದರೂ ಇರುತ್ತದಲ್ಲ?

ಈ ಎಲ್ಲ ಕಥೆಗಳ ನಡುವೆ ನನಗೆ ನೋಡಲು ಸಿಕ್ಕಿದ್ದು ಯಾವ ಪ್ರಚಾರವೂ ಇಲ್ಲದೇ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಪಿ. ಶೇಷಾದ್ರಿ ನಿರ್ದೇಶನದ, ಪೋಸ್ಟರ್ ರಿಲೀಸ್, ಸಾಂಗ್ ರಿಲೀಸ್, ಟೀಸರ್ ರಿಲೀಸ್, ಯಾವುದೂ ಇಲ್ಲದ 'ರೂಬಿಕ್ಯೂಬ್' ಎಂಬ ಸಣ್ಣ ಬಜೆಟ್‌ನ ಅತ್ಯುತ್ತಮ ಚಿತ್ರ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:17, Issue:19

ಸಮಾಚಾರ ಸಣ್ಣದಲ್ಲ

ವಿಜಯಪುರ: ರೌಡಿಯನ್ನು ಕೊಚ್ಚಿ ಬರ್ಬರ ಹತ್ಯೆ

ವಿಜಯಪುರ: ಭೀಮಾತೀರದಲ್ಲಿ ಮತ್ತೆ ನೆತ್ತರು ಹರಿದಿದೆ. ಕತ್ತು ಕೊಯ್ದು ರೌಡಿಶೀಟರ್‌ನನ್ನು ಬರ್ಬರವಾಗಿ ಹತ್ಯೆ ಮಾಡಿದ ಘಟನೆ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಬರಗುಡಿ ಗ್ರಾಮದಲ್ಲಿ ನಡೆದಿದೆ. ಸಿದ್ದರಾಮ ದೊಂಡಿಬಾ ಕ್ಷತ್ರಿ (29) ಕೊಲೆಯಾದ ರೌಡಿಶೀಟರ್ ಎನ್ನಲಾಗಿದೆ. ರೌಡಿಶೀಟರ್‌ನನ್ನು ಕೊಲೆ ಮಾಡಿ, ದುಷ್ಕರ್ಮಿಗಳು ಎಸ್ಕೇಪ್ ಆಗಿದ್ದಾರೆ. ಹಣ ಹಾಗೂ ಹೆಣ್ಣಿಗಾಗಿ ಹತ್ಯೆಗೈದಿರಬಹುದು ಎಂದು ಪೊಲೀಸರ ಶಂಕಿಸಿದ್ದಾರೆ. ಈ ಸಂಬಂಧ ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

3 ಮಕ್ಕಳ ಕೊಂದು ತಾಯಿ ಆತ್ಮಹತ್ಯೆ

ಬಾಗಲಕೋಟೆ: ಮೂವರು ಮಕ್ಕಳಿಗೆ ನೇಣು ಬಿಗಿದು, ತಾಯಿ ಕೂಡ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಜಿಲ್ಲೆಯ ಬಾದಾಮಿ ತಾಲೂಕಿನ ಹಿರೇಮುಚ್ಚಳಗುಡ್ಡದಲ್ಲಿ ನಡೆದಿದೆ. ಸಮೃದ್ಧಿ (5), ಪ್ರೀತಂ (4) ಹಾಗೂ ಸುಕ್ಷಿತ್ (2) ಮೃತ ದುರ್ದೈವಿಗಳು. ರೂಪಾ ಹನುಮಂತ ಗೌಡರ (27)ಮಕ್ಕಳ ಕೊಲೆಗೈದು ಆತ್ಮಹತ್ಯೆ ಯತ್ನಿಸಿದ ತಾಯಿ. ಕುಟುಂಬದಲ್ಲಿನ ಜಗಳದಿಂದ ರೂಪಾ ದುಡುಕಿನ ನಿರ್ಧಾರ ಕೈಗೊಂಡು ಮೂವರು ಮಕ್ಕಳಿಗೆ ನೇಣು ಬಿಗಿದು, ತಾನು ಡಿಸೇಲ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ಸ್ಥಳಕ್ಕೆ ಎಸ್ಪಿ ಸಿದ್ದಾರ್ಥ ಗೋಯಲ್, ಸಿಪಿಐ ಬನ್ನಿ ಹಾಗೂ ಪಿಎಸ್ಐ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಎಸ್ಪಿ ಸಿದ್ಧಾರ್ಥ ಗೋಯಲ್, ಅತ್ತೆ ಮಾವನ ಕಿರುಕಳ ಬಗ್ಗೆ ಹೆಚ್ಚು ಆರೋಪ ಇದೆ. ಆದರೆ, ತಾಯಿ ಕಂಡಿಷನ್ ನೋಡಿಕೊಂಡು ವೈದ್ಯರ ಸಲಹೆ ಮೇರೆಗೆ ತಾಯಿ ಸ್ಟೇಟಮೆಂಟ್ ಪಡೆಯುತ್ತವೆ. ನಾವು ಮತ್ತು ಎಕ್ಸಿಕ್ಯುಟಿವ್ ಮೆಜಿಸ್ಟ್ರೇಟ್ ಕಡೆಯಿಂದ ರೆಕಾರ್ಡ್ ಮಾಡಿ ಮಾಹಿತಿ ಪಡೆಯುತ್ತೇವೆ. ಮಧ್ಯಾಹ್ನ 2 ಗಂಟೆಯೊಳಗೆ ಘಟನೆ ನಡೆದಿದ್ದು, ಗಂಡ ಮನೆಗೆ ಬಂದು ನೋಡಿದಾಗ ಘಟನೆ ಬಗ್ಗೆ ಗೊತ್ತಾಗಿದೆ. ಸಂಪೂರ್ಣ ತನಿಖೆ ನಂತರವೇ ಘಟನೆಗೆ ನಿಖರ ಕಾರಣ ತಿಳಿಯಲಿದೆ ಎಂದು ತಿಳಿಸಿದರು.

ಗೃಹಿಣಿ ಆತ್ಮಹತ್ಯೆ

ಹಾಸನ: ವರದಕ್ಷಿಣೆಗಾಗಿ ನೀಡುತ್ತಿದ್ದ ಕಿರುಕುಳ ಹಾಗೂ ಸಂದೇಹ ಸಹಿಸಲಾಗದೇ ವಿಷ ಸೇವಿಸಿ ಗೃಹಿಣಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನ ಜಿಲ್ಲೆಯ ಎಚ್.ಮೈಲಳ್ಳಿ ಗ್ರಾಮದಲ್ಲಿ ನಡೆದಿದೆ. ಎಚ್.ಎಲ್. ಇಂದ್ರ (24) ಮೃತ ಗೃಹಿಣಿ. ಕಳೆದ ನಾಲ್ಕು ವರ್ಷಗಳ ಹಿಂದೆ ಎಚ್.ಮೈಲಳ್ಳಿ ಗ್ರಾಮದ ಸ್ವಾಮಿ ಜತೆ ವಿವಾಹವಾಗಿದ್ದರು. ಮದುವೆ ವೇಳೆ ವರದಕ್ಷಿಣೆ ರೂಪದಲ್ಲಿ 60 ಗ್ರಾಂ ಚಿನ್ನ ಹಾಗೂ 1.30 ಲಕ್ಷ ರು. ಹಣವನ್ನು ಇಂದ್ರ ಪೋಷಕರು ನೀಡಿದ್ದರು. ಮತ್ತೆ ವರದಕ್ಷಿಣೆಗೆ ಕಿರುಕುಳ ಕೊಟ್ಟಿದ್ದರು ಎನ್ನಲಾಗಿದೆ.

ಕನಕಗುರು ಪೀಠ ಜಾತ್ಯತೀತ ಪೀಠ | ಶಿಕ್ಷಣ, ಆಧ್ಯಾತ್ಮಿಕತೆಗೆ ಒತ್ತು ನೀಡಿದ್ದ ಸಿದ್ದರಾಮಾನಂದಪುರಿ ಶ್ರೀ: ಸಿಎಂ ಸಿದ್ದರಾಮಯ್ಯ

ಸಮಸಮಾಜ ಕಟ್ಟುವುದು ಕಾಗಿನೆಲೆ ಪೀಠದ ಉದ್ದೇಶ

ರಾಯಚೂರು: ರಾಜ್ಯದಲ್ಲಿ ಕನಕ ಗುರುಪೀಠ ಜಾತ್ಯಾತೀತ ಪೀಠವಾಗಿ ಕೆಲಸ ಮಾಡುತ್ತಿದ್ದು, ಗುರುಪೀಠದಲ್ಲಿ ಪೂಜ್ಯಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರು ಶಿಕ್ಷಣ, ಆಧ್ಯಾತ್ಮ ಮತ್ತು ಜಾತ್ಯತೀತ ಮನೋಭಾವಕ್ಕೆ ಹೆಚ್ಚು ಒತ್ತು ನೀಡಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ತಿಂಥಣಿ ಬ್ರಿಡ್ಜ್ ವತಿಯಿಂದ ಆಯೋಜಿಸಲಾಗಿದ್ದ ಬ್ರಹ್ಮಲೀನರಾದ ಪರಮಪೂಜ್ಯ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕುರುಬ ಸಮುದಾಯಕ್ಕೆ ಮೊದಲ ಬಾರಿಗೆ ಕಾಗಿನೆಲೆ ಗುರುಪೀಠ 1992 ರಲ್ಲಿ ಸ್ಥಾಪಿತವಾಗಿ, ಶ್ರೀ ತಾರಕಾ ನಂದ ಸ್ವಾಮೀಜಿಯವರು ಅದರ ಮೊದಲ ಗುರು ಗಳಾಗಿದ್ದರು. ಕಲ್ಯಾಣ ಕರ್ನಾಟಕ, ಬೆಂಗಳೂರು, ಮೈಸೂರು ಮುಂಬಯಿ ಕರ್ನಾಟಕ ವಿಭಾಗಗಳಿದ್ದು, ಈ ಎಲ್ಲಾ ವಿಭಾಗಗಳಿಗೂ ಪ್ರತ್ಯೇಕ ಗುರುಗಳಿದ್ದು, ಕಲಬುರಗಿ ವಿಭಾಗಕ್ಕೆ ಶ್ರೀ ಸಿದ್ದರಾಮಾನಂದಪುರಿ ಸ್ವಾಮೀಜಿಯವರು ಗುರುಗಳಾಗಿದ್ದರು. ಗುರುಪೀಠದಲ್ಲಿ ಶಿಕ್ಷಣ, ಆಧ್ಯಾತ್ಮ, ಜಾತ್ಯಾತೀತ ಮನೋಭಾವಕ್ಕೆ ಹೆಚ್ಚು ಒತ್ತು ನೀಡಿದರು. ಕಾಗಿನೆಲೆ ಗುರುಪೀಠ ಸ್ಥಾಪನೆಯ ಉದ್ದೇಶವೇ ಸಮಸಮಾಜ ನಿರ್ಮಾಣ ವಾಗಿದೆ.ಅವರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಕುಟುಂಬ ವರ್ಗ ಹಾಗೂ ಇಡೀ ಸಮಾಜಕ್ಕೆ ಅವರ ಅಗಲಿಕೆಯನ್ನು ಭರಿಸುವ ಶಕ್ತಿ ಭಗವಂತ ನೀಡಲಿ ಎಂದು ಪ್ರಾರ್ಥಿಸುವುದಾಗಿ ತಿಳಿಸಿದರು.

ಲಿಂಗೈಕ್ಯ ಸಿದ್ದರಾಮಾನಂದಪುರಿ ಸ್ವಾಮೀಜಿ ಅವರಿಗೆ ಕನಕ ಗುರುಪೀಠ ತಿಂಥಣಿ ಬ್ರಿಡ್ಜ್‌ನಲ್ಲಿ ಆಯೋಜನೆ ಮಾಡಲಾಗಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಕನಕದಾಸರು ಕುಲಕುಲವೆಂದು ಹೊಡೆದಾಡದಿರಿ ಎಂದಂತೆ ಬುದ್ಧ ಬಸವಾದಿಶರಣರು ಜಾತಿ ವ್ಯವಸ್ಥೆಯನ್ನು ವಿರೋಧಿಸುತ್ತಾ ಬಂದಿದ್ದಾರೆ. ನಮ್ಮ ಸಮಾಜ ವಿವಿಧ ಜಾತಿ ಧರ್ಮ ವರ್ಗ ಭಾಷೆಗಳಿಂದ ಕೂಡಿದೆ. ಮನುಜರೆಲ್ಲರೂ ಒಂದೇ ಕುಟುಂಬ ಎಂದು ಭಾವಿಸಬೇಕು. ಸಾಮಾಜಿಕ ಚಿಂತಕರಾದ ಲೋಹಿಯಾ ಅವರು ಮುಂದುವರಿದ ಜಾತಿಯವರು ಸಮಾಜವನ್ನು ದಾರಿತಪ್ಪಿಸುವ ಕೆಲಸವನ್ನು ಮಾಡುತ್ತಾರೆ ಎಂದಿದ್ದರು. ಸಮಾನ ಅವಕಾಶವಿರುವ ಸಮಸಮಾಜವನ್ನು ನಿರ್ಮಿಸುವುದು ಅವಶ್ಯಕ. ಶಿಕ್ಷಣವಿಲ್ಲದೇ ಪ್ರಗತಿ ಸಾಧ್ಯವಿಲ್ಲ. ಕಾಗಿನೆಲೆ ಗುರುಪೀಠ ಸ್ಥಾಪನೆಯ ಉದ್ದೇಶವೇ ಸಮಸಮಾಜ ನಿರ್ಮಾಣವಾಗಿದೆ. ಯಾವುದೇ ಧರ್ಮವೂ ಪ್ರೀತಿಯನ್ನು ಬೋಧಿಸುತ್ತದೆಯೇ ಹೊರತು ದ್ವೇಷಿಸುವುದನ್ನು ಬೋಧಿಸುವುದಿಲ್ಲ ಎಂದರು.

ಗುಲಾಮಗಿರಿ ಮನಸ್ಥಿತಿಯಿಂದ ಹೊರಬನ್ನಿ: ಕೆಲವರು ಶಿಕ್ಷಣ ದೊರೆತರೂ ಗುಲಾಮಗಿರಿಯ ಮನಸ್ಥಿತಿಯಿಂದ ಹೊರಬಂದಿಲ್ಲ. ಸ್ವಾಭೀಮಾನಿಗಳಾಗಿ ಬದುಕುವುದು ಮುಖ್ಯ. ವೈಚಾರಿಕ ಮತ್ತು ವೈಜ್ಞಾನಿಕ ಶಿಕ್ಷಣ ಯುವಪೀಳಿಗೆ ಬೆಳೆಸಿಕೊಳ್ಳಬೇಕು. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಶೇ. 15 ರಷ್ಟಿದ್ದ ಶಿಕ್ಷಣ ಈಗ ಶೇ.76 ಆಗಿದ್ದರೂ, ನಮ್ಮಲ್ಲಿ ಜಾತಿ ವ್ಯವಸ್ಥೆ ನಶಿಸಿಲ್ಲ. ಜಡತ್ವದಿಂದ ಕೂಡಿದ ಸಮಾಜಕ್ಕೆ ಚಲನೆ ಬರಲು ಆರ್ಥಿಕ, ಸಾಮಾಜಿಕ ಸಮಾನತೆ ಬೇಕು. ಸಮಾಜದ ಮೌಢ್ಯಗಳನ್ನು ಅಳಿಸುವ ಕಾರ್ಯದಲ್ಲಿ ಸ್ವಾಮೀ ಜಿಯವರು ತೊಡಗಿದ್ದರು ಎಂದರು.

ಈ ವೇಳೆ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್, ಎನ್.ಎಸ್.ಬೋಸರಾಜು, ಶಿವರಾಜ್ ತಂಗಡಗಿ, ಮಾಜಿ ಸಚಿವ ಬಂಡೆಪ್ಪ ಕಾಂಶೆಂಪುರ್, ಶಾಸಕರಾದ ಭೀಮ್ ಸೇನ್ ಚಿಮ್ಮನಕಟ್ಟಿ, ಕರೆಮ್ಮ ನಾಯಕ ಸೇರಿ ನಾಡಿನ ಹಲವಾರು ಮಠಗಳ ಮಠಾಧೀಶರು, ಶಾಸಕರು, ಮುಖಂಡರು ಮತ್ತು ಉಪಸ್ಥಿತರಿದ್ದರು.

ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸಲು ಶಿಫಾರಸು

ಇಡೀ ರಾಜ್ಯಕ್ಕೆ ಕನಕಗುರುಪೀಠ ಜಾತ್ಯತೀತ ಪೀಠವಾಗಿ ಕೆಲಸ ಮಾಡುತ್ತಿದೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ವಸತಿ ನಿಲಯ, ಯಾತ್ರಿನಿವಾಸ ಸೇರಿದಂತೆ ಹಲವು ಬೇಡಿಕೆಗಳಿಗೆ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು. ಎಲ್ಲ ದಲಿತ ಹಾಗೂ ಹಿಂದುಳಿದ ವರ್ಗಗಳ ಮಠಗಳಿಗೆ ಬೆಂಗಳೂರಿಗೆ ಸುಮಾರು 50 ಎಕರೆ ಪ್ರದೇಶವನ್ನು ನೀಡಲು ಇತ್ತೀಚೆಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಕುರುಬ ಸಮುದಾಯಕ್ಕೆ ಎಸ್ ಟಿ ಗೆ ಸೇರಿಸುವ ನಿರ್ಧಾರವನ್ನು ಕೇಂದ್ರ ಸರಕಾರ ಕೈಗೊಳ್ಳಲಿದ್ದು, ರಾಜ್ಯ ಸರಕಾರ ಈಗಾಗಲೇ ತನ್ನ ಶಿಫಾರಸು ಕೇಂದ್ರಕ್ಕೆ ಸಲ್ಲಿಸಿದೆ. ಜಾತಿಗಣತಿ ವರದಿಯನ್ನು ಇನ್ನೊಂದು ತಿಂಗಳ ಅವಧಿಯಲ್ಲಿ ಸಲ್ಲಿಕೆಯಾಗಲಿದ್ದು, ಸೂಕ್ತ ಚರ್ಚೆಯ ನಂತರ ಅಂಗೀಕರಿಸಿ ಜಾರಿಗೊಳಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

> **ಜನರ ಆಶೀರ್ವಾದದಿಂದ 8 ಬಾರಿ ಗೆದ್ದು, ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದೇನೆ. ನಾಡಿನ ಎಲ್ಲ ಜನರ ಪ್ರೀತಿಯಿಂದಲೇ ರಾಜಕೀಯದಲ್ಲಿಯೂ ಇಂದಿಗೂ ಬದುಕಿದ್ದೇನೆ. ಈ ಸಮಾಜದ ಪ್ರೀತಿಗೆ ಬೆಲೆಕಟ್ಟಲಾಗದು. ಧ್ವನಿಯಿಲ್ಲದವರ ಪರವಾಗಿ ಹೋರಾಡುವುದೇ ನನ್ನ ಕೆಲಸ.**
> **ಸಿದ್ದರಾಮಯ್ಯ, ಮುಖ್ಯಮಂತ್ರಿ**

ಪ್ರಾಣಿಗಳ ಸಮರ್ಪಕ ಆರೈಕೆ ಮಾಡದಿದ್ದರೆ ಮೃಗಾಲಯ ಬಂದ್ ಮಾಡಿ: ಸರಕಾರಕ್ಕೆ ಎಚ್ಚರಿಕೆ

ಪಿಲಿಕುಳ ಮೃಗಾಲಯದ ಕುರಿತು ಹೈಕೋರ್ಟ್ ಕಳವಳ

ಮಂಗಳೂರು: ಪ್ರಸಿದ್ಧ ಪಿಲಿಕುಳ ಮೃಗಾಲಯದ ಅವ್ಯವಸ್ಥೆ ಕಂಡು ಹೈಕೋರ್ಟ್ ನ್ಯಾಯಾಧೀಶರು ಶಾಕ್ ಆಗಿದ್ದಾರೆ. ಪ್ರಾಣಿಗಳ ದಯನೀಯ ಸ್ಥಿತಿ ಕಂಡು ಕೆಂಡಾಮಂಡಲವಾಗಿರೋ ನ್ಯಾಯಪೀಠ, ಪ್ರಾಣಿಗಳನ್ನು ಸರಿಯಾಗಿ ನೋಡಿಕೊಳ್ಳಲು ಆಗದಿದ್ದರೆ ತಕ್ಷಣ ಮೃಗಾಲಯ ಬಂದ್ ಮಾಡಿ ಎಂದು ಸರಕಾರಕ್ಕೆ ಖಡಕ್ ವಾರ್ನಿಂಗ್ ಕೊಟ್ಟಿದೆ.

ಸುಮಾರು 370 ಎಕರೆಯ ಈ ಪಾರ್ಕ್, ದೇಶದ ಅತ್ಯಂತ ನೈಸರ್ಗಿಕವಾದ ಮೃಗಾಲಯಗಳಲ್ಲಿ ಒಂದು. ಪಿಲಿ ಎಂದರೆ ಹುಲಿ, ಕುಳ ಎಂದರೆ ಕೆರೆ. ಒಂದು ಕಾಲದಲ್ಲಿ ಹುಲಿಗಳು ಬಂದು ನೀರು ಕುಡಿಯುತ್ತಿದ್ದ ಈ ಜಾಗವನ್ನ ಇಂದು ಅಂತಾರಾಷ್ಟ್ರೀಯ ಮಟ್ಟದ ಜೈವಿಕ ಉದ್ಯಾನವನವಾಗಿ ರೂಪಿಸಲಾಗಿದೆ. ಪಶ್ಚಿಮ ಘಟ್ಟಗಳ ಅಳಿವಿನಂಚಿನಲ್ಲಿರುವ ವನ್ಯಜೀವಿಗಳಿಗೆ ಆಶ್ರಯ ತಾಣವಾಗಿರೋ ಪಿಲಿಕುಳ, ಕರಾವಳಿಗೆ ಬರೋ ಪ್ರವಾಸಿಗರ ಮೊದಲ ಆಯ್ಕೆ. ಅಂತಹ ಸುಂದರ ತಾಣ ಇಂದು ಅವ್ಯವಸ್ಥೆಯ ತಾಣವಾಗಿ ಮಾರ್ಪಟ್ಟಿದೆ. ಇಲ್ಲಿನ ಅವ್ಯವಸ್ಥೆ, ಪ್ರಾಣಿಗಳ ದಯಾನೀಯ ಸ್ಥಿತಿ ಕಂಡು ಹೈಕೋರ್ಟ್ ನ್ಯಾಯಧೀಶರು ಕಳವಳ ವ್ಯಕ್ತಪಡಿಸಿದ್ದಾರೆ. ತುಕ್ಕು ಹಿಡಿದ ಪಂಜರ, ಕಲುಷಿತ ನೀರು, ಅಶುಚಿ ವಾತಾವರಣ, ಸರಿಯಾದ ಆಹಾರ ಇಲ್ಲದೇ ಇರೋದು, ಇದು ಪಿಲಿಕುಳ ಮೃಗಾಲಯದ ಸದ್ಯದ ಸ್ಥಿತಿ. ವನ್ಯಜೀವಿ ಸಂರಕ್ಷಕ ಭುವನ್ ಎಂಬವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವೇಳೆ ಪಿಲಿಕುಳ ಮೃಗಾಲಯದ ಕರ್ಮ ಕಾಂಡಗಳು ಹೈಕೋರ್ಟ್‌ನಲ್ಲಿ ಹೊರ ಬಿದ್ದಿವೆ. ಪ್ರಾಣಿಗಳನ್ನು ಇರಿಸಿರುವ ಪಂಜರಗಳು ಸಂಪೂರ್ಣ ತುಕ್ಕು ಹಿಡಿದಿವೆ. ಅಲ್ಲಿ ಸರಿಯಾದ ಭದ್ರತೆಯೇ ಇಲ್ಲ. ಅಶುಚಿಯಾದ ಪರಿಸರದಲ್ಲಿ ಪ್ರಾಣಿಗಳು ನರಳುತ್ತಿರುವ ಫೋಟೊಗಳನ್ನು ನೋಡಿ ನ್ಯಾಯಪೀಠ ಕೆಂಡಾಮಂಡಲವಾಗಿದೆ.

ವಿಚಾರಣೆ ವೇಳೆ ಕೇಂದ್ರ ಸರಕಾರದ ಪರ ವಕೀಲರು, ಪರವಾನಗಿ ವಿಸ್ತರಣೆಗೆ ಅರ್ಜಿ ಸಲ್ಲಿಸಲಾಗಿದೆ. ಅದು ಪರಿಶೀಲನೆಯಲ್ಲಿದೆ ಎಂದು ಸಮರ್ಥನೆ ನೀಡಿದ್ದಾರೆ. ನ್ಯಾಯಾಲಯ ಮಾತ್ರ ಇದನ್ನು ಒಪ್ಪಿಲ್ಲ. ಪ್ರಾಣಿಗಳಿಗೆ ರಕ್ಷಣೆ ನೀಡಲಾಗದಿದ್ದರೆ ಅದನ್ನು ಮುಚ್ಚಿಬಿಡಿ ಎಂದು ಸರಕಾರಕ್ಕೆ ಹೈಕೋರ್ಟ್ ಎಚ್ಚರಿಕೆ ನೀಡಿದೆ. ಫೆ.5ಕ್ಕೆ ಅರ್ಜಿಯ ವಿಚಾರಣೆ ಮುಂದೂಡಲಾಗಿದೆ.

ಅವಧಿ ಮುಗಿದರೂ ಲೈಸೆನ್ಸ್ ನವೀಕರಣ ಇಲ್ಲ

ಈ ಪಾರ್ಕ್‌ನ ಲೈಸೆನ್ಸ್ ಅವಧಿ 2025ರ ಡಿಸೆಂಬರ್ 1ಕ್ಕೇ ಮುಕ್ತಾಯವಾಗಿದೆ. ಸದ್ಯ ಯಾವುದೇ ಪರವಾನಗಿ ಇಲ್ಲದೆ ಪಿಲಿಕುಳ ಮೃಗಾಲಯ ನಡೀತಿದೆ. ಇಷ್ಟೆಲ್ಲಾ ಅವ್ಯವಸ್ಥೆ ಬಗ್ಗೆ ಕೇಂದ್ರ ಪ್ರಾಣಿ ಸಂಗ್ರಹಾಲಯ ಪ್ರಾಧಿಕಾರ 2023 ಮತ್ತು 2025ರಲ್ಲಿ ಶೋಕಾಸ್ ನೋಟಿಸ್ ನೀಡಿದರೂ ಅಧಿಕಾರಿಗಳು ಕ್ಯಾರೆ ಅಂದಿಲ್ಲ. ಮಲಿನಗೊಂಡ ನೀರು ಕುಡಿದು,ಚ ಸರಿಯಾದ ಚಿಕಿತ್ಸೆ ಸಿಗದೆ ಮೂಕ ಪ್ರಾಣಿಗಳು ಸಾವು-ಬದುಕಿನ ನಡುವೆ ಹೋರಾಟ ಮಾಡ್ತಿವೆ ಎನ್ನುವುದು ಅರ್ಜಿದಾರರ ಗಂಭೀರ ಆರೋಪ.

ಪೊಲೀಸರ ಮೇಲೆ ಹಲ್ಲೆ: ಬಂಧನ

ದಾವಣಗೆರೆ: ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಕಾಂಗ್ರೆಸ್ ಮುಖಂಡ ಅಯೂಬ್ ಪೈಲ್ವಾನ್ ಎಂಬವರ ಪುತ್ರ ಹಸೇನ್ ಹಾಗೂ ಆತನ ಸ್ನೇಹಿತನನ್ನು ದಾವಣಗೆರೆ ಪೊಲೀಸರು ಬಂಧಿಸಿದ್ದಾರೆ.

ಅಯೂಬ್ ಪೈಲ್ವಾನ್ ಅವರ ಇನ್ನೊಬ್ಬ ಪುತ್ರ ಹುಸೇನ್‌ಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಒಂದೇ ಕೋಮಿನ ಎರಡು ಯುವಕರ ಗುಂಪಿನ ನಡುವೆ ಘರ್ಷಣೆ ನಡೆಯುತ್ತಿತ್ತು. ಈ ವೇಳೆ ನಿಯಂತ್ರಣಕ್ಕೆ ಮುಂದಾದ ಕಾನ್‌ಸ್ಟೆಬಲ್ ಹರೀಶ್ ಹಾಗೂ ಕೆಂಚಪ್ಪ ಎಂಬವರ ಮೇಲೆ ಕಿಡಿಗೇಡಿಗಳು ಏಕಾಏಕಿ ಹಲ್ಲೆ ಮಾಡಿದ್ದರು. ಪೊಲೀಸ್ ಸಿಬ್ಬಂದಿ ತಲೆ ಹಾಗೂ ಮುಖಕ್ಕೆ ಗಾಯಗಳಾಗಿದ್ದು, ಅನಿರೀಕ್ಷಿತ ಹಲ್ಲೆಯಿಂದ ಆಘಾತಕ್ಕೊಳಗಾಗಿದ್ದಾರೆ. ರಾತ್ರಿಯಿಂದ ಜ್ವರದಿಂದ ಬಳಲುತ್ತಿದ್ದಾರೆ. ಗಾಯಾಳುಗಳಿಗೆ ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಹಲ್ಲೆಗೆ ಸಂಬಂಧಿಸಿದಂತೆ 10 ಜನ ಯುವಕರ ವಿರುದ್ಧ ಪ್ರಕರಣ ದಾಖಲಾಗಿದೆ. ಉಳಿದ ಆರೋಪಿಗಳಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲಿ ಪೊಲೀಸರು ಭದ್ರತೆ ಕೈಗೊಂಡಿದ್ದಾರೆ.



ಕೇಂದ್ರ ಸರಕಾರದಿಂದ ರಾಜ್ಯಕ್ಕೆ ದ್ರೋಹ

ದಾವಣಗೆರೆ: ಕೇಂದ್ರ ಸರಕಾರ ಕನ್ನಡಿಗರಿಗೆ ಅಕ್ಷರಶಃ ನಾಮ ಇಡುತ್ತಿದೆ. ಇದರಲ್ಲಿ ಅನುಮಾನವೇ ಇಲ್ಲ. ರಾಜ್ಯಕ್ಕೆ ವಿಶೇಷ ಯೋಜನೆಗಳನ್ನು ಘೋಷಿಸಿಲ್ಲ ಎಂಬುದು ಒಂದೆಡೆ ಯಾದರೆ, ಕೇಂದ್ರ ಸರಕಾರದ ಯೋಜನೆಗಳಲ್ಲೂ ಸರಿಯಾಗಿ ಅನುದಾನ ನೀಡುತ್ತಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದ್ದಾರೆ.



ಕೇಂದ್ರ ಸಚಿವೆ ನಿರ್ಮಲಾ ಸೀತರಾಮನ್ ಅವರು ಕಳೆದ ಐದು ವರ್ಷಗಳಿಂದ ಕರ್ನಾಟಕಕ್ಕೆ ದ್ರೋಹ ಬಗೆದಿದ್ದಾರೆ. ಕೇಂದ್ರ ಸರಕಾರ ಕರ್ನಾಟಕದ ವಿರುದ್ಧ ವಿಷಕಾರುತ್ತಿದೆ. ಕೇಂದ್ರ ಸರಕಾರದ ಯೋಜನೆಗಳಲ್ಲೂ ರಾಜ್ಯ ಸರಕಾರ 50%ಗಿಂತ ಹೆಚ್ಚು ಅನುದಾನವನ್ನು ಭರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದ್ದಾರೆ.15ನೇ ಹಣಕಾಸು ಆಯೋಗದಲ್ಲಿ ಇದನ್ನು 3.64%ಗೆ ಇಳಿಸಲಾಗಿತ್ತು. ಇದರ ಪರಿಣಾಮವಾಗಿ ಕರ್ನಾಟಕಕ್ಕೆ ತೆರಿಗೆ ಪಾಲಿನಲ್ಲಿ 80 ಸಾವಿರ ಕೋಟಿ ರು.ನಷ್ಟವಾಗಿದೆ. ಕೇಂದ್ರ ಸರಕಾರದ ಯೋಜನೆಗಳಲ್ಲಿ ಕರ್ನಾಟಕದ ಪಾಲು 50%ಗಿಂತ ಹೆಚ್ಚಾಗಿದೆ. ಕೇಂದ್ರದ ಯೋಜನೆಗಳಿಗೆ ಕೇಂದ್ರ ಸರಕಾರ ಅನುದಾನ ನೀಡದ ಕಾರಣ ಕರ್ನಾಟಕಕ್ಕೆ 23,402 ಕೋಟಿ ರು. ಹೆಚ್ಚಿನ ಹೊರೆ ಬಿದ್ದಿದೆ. ಕಾಂಗ್ರೆಸ್ ಆಡಳಿತ ಇರುವ ನಮ್ಮ ರಾಜ್ಯಕ್ಕೆ ಬಜೆಟ್‌ನಲ್ಲಿ ಕೇಂದ್ರದ ಪಾಲು ಕೇವಲ 16% ಮಾತ್ರ ಕೊಟ್ಟಿದೆ. ಆದರೆ ಬಿಜೆಪಿ ಆಡಳಿತ ಇರುವ ರಾಜ್ಯಗಳಾದ ಬಿಹಾರಕ್ಕೆ 74%, ಉತ್ತರ ಪ್ರದೇಶಕ್ಕೆ 52%, ಮಹಾರಾಷ್ಟ್ರಕ್ಕೆ 29% ಕೇಂದ್ರ ಸರ್ಕಾರ ಕೊಡುಗೆ ನೀಡಿದೆ. ಇದು ಕರ್ನಾಟಕದ ಮೇಲೆ ಕೇಂದ್ರ ಸರಕಾರದ ತೆರಿಗೆ ದಬ್ಬಾಳಿಕೆಯಲ್ಲವೇ ಎಂದು ಕಿಡಿಕಾರಿದ್ದಾರೆ.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ವಿಜಯಪುರ
ಸಂಖ್ಯೆ: ವಿಜೆಪಿ/ಸಾಅವಿ/ಇ-ಪ್ರೊಕ್ಯೂರ್‌ಮೆಂಟ್/ಕ.ಟೆಂ/2025-26
ದಿನಾಂಕ: 30.01.2026
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
2025-26 ನೇ ಸಾಲಿನಲ್ಲಿ ವಿಜಯಪುರ ಸಾಮಾಜಿಕ ಅರಣ್ಯ ಉಪ-ವಿಭಾಗದ ಅಧೀನ ಸಾಮಾಜಿಕ ಅರಣ್ಯ ವಲಯಗಳಲ್ಲಿ ಮುಂಗಡ ಗುಂಡಿ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ: 30.01.2026 ರಿಂದ 07.02.2026 ರವರೆಗೆ ಅರ್ಹ ನೋಂದಾಯಿತ ಅರಣ್ಯ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಅರಣ್ಯೀಕರಣ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ಹಾಗೂ **(ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: 09.02.2026 ರಂದು ಬೆಳಿಗ್ಗೆ 11.00 ಘಂಟೆಗೆ)** ಭಾಗವಹಿಸಲಿಚ್ಚಿಸುವವರು ತಮಗೆ ಅನುಕೂಲವಾಗುವ ಟೆಂಡರ್ ವಿವರಗಳನ್ನು www.kppp.karnataka.gov.in ಮೂಲಕ ಟೆಂಡರ್ ಮಾಹಿತಿಯನ್ನು ಪಡೆದುಕೊಳ್ಳಬಹುದು.
ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/653/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಐ.ಎಫ್.ಟಿ.ಸಂಖ್ಯೆ: 33/2025-26 ದಿನಾಂಕ: 27.01.2026
ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ-1,2&3ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗಳಿಗೆ ಒಂದು ಹಾಗೂ ಎರಡು ಲಕೋಟೆ ಪದ್ಧತಿಯಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಮೊತ್ತ ರೂ.80.59 ಲಕ್ಷಗಳು ಮತ್ತು ಕನಿಷ್ಠ ಟೆಂಡರ್ ಮೊತ್ತ ರೂ.3.20 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 05-02-2026 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆಪಿಪಿ-ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/-ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/999/ಕೆಎಸ್‌ಎಂಸಿಎ/2025-26

9 ಪುಟಗಳ ಡೆತ್‌ನೋಟ್ ಪತ್ತೆ | ಐಟಿ ವಿರುದ್ಧ ಮೋಹನ್‌ದಾಸ್ ಪೈ ಆಕ್ರೋಶ

ಮಣ್ಣಲ್ಲಿ ಮಣ್ಣಾದ ಉದ್ಯಮಿ ಸಿ.ಜೆ.ರಾಯ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಉದ್ಯಮ ವಲಯದಲ್ಲಿ ಭಾರಿ ಸಂಚಲನ ಮೂಡಿಸಿದ್ದ ಕಾನ್ಫಿಡೆಂಟ್ ಗ್ರೂಪ್ ಮಾಲೀಕ ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ, ವಿಚಾರಣೆಯ ನಡು ವೆಯೇ, ಭಾನುವಾರ ರಾಯ್ ಇಚ್ಛೆಯಂತೆ ಅಂತ್ಯಸಂಸ್ಕಾರ ನೆರವೇರಿದೆ. ರಾಯ್ ಅವರ ಕೊನೆಯ ಆಸೆಯಂತೆ ಬನ್ನೇರುಘಟ್ಟ ಸಮೀಪದ ಕಾನ್ಫಿಡೆಂಟ್ ಗ್ರೂಪ್‌ನ ರಾಜ್ ಕುಮಾರ್ ಪಾರ್ಕ್‌ನಲ್ಲಿ ಕ್ರಿಶ್ಚಿಯನ್ ಸಂಪ್ರದಾಯದ ವಿಧಿ ವಿಧಾನಗಳೊಂದಿಗೆ ಭಾನುವಾರ ನೆರವೇರಿತು. ರಾಯ್ ಅವರ ತಾಯಿ, ಸಹೋದರ ಬಾಬು, ಪತ್ನಿ ಹಾಗೂ ಮಕ್ಕಳು ಕಣ್ಣೀರು ಹಾಕುತ್ತಾ ಅಂತಿಮ ವಿದಾಯ ಹೇಳಿದರು. ಸಿ.ಜೆ. ರಾಯ್ ಕಾರುಗಳ ಪ್ರೇಮಿಯಾಗಿದ್ದು, ಅವರ ಇಚ್ಛೆಯಂತೆಯೇ ಅತೀವವಾಗಿ ಇಷ್ಟಪಡುತ್ತಿದ್ದ ರೋಲ್ಸ್ ರಾಯ್ಸ್, ಬೆನ್ಜ್, ಬಿಎಂಡಬ್ಲ್ಯೂ ಮತ್ತು ಆಡಿ ಸೇರಿದಂತೆ ಹಲವು ಐಷಾರಾಮಿ ಕಾರುಗಳ ಮೆರವಣಿಗೆಯೊಂದಿಗೆ ಅಂತಿಮ ಯಾತ್ರೆ ಕೈಗೊಳ್ಳಲಾಯಿತು. ಕುಟುಂಬಸ್ಥರು ಈ ಕಾರುಗಳಲ್ಲೇ ಪಾರ್ಥಿವ ಶರೀರವನ್ನು ಹಿಂಬಾಲಿಸಿದರು. ಬನ್ನೇರುಘಟ್ಟ ರಸ್ತೆಯ ಕಲ್ಕೆರೆ ಬಳಿಯ ಸೇಂಟ್ ಜೋಸೆಫ್ ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು. ಈ ವೇಳೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ಎಸ್.ಎನ್. ನಾರಾಯಣಸ್ವಾಮಿ, ಎನ್.ಎ. ಹ್ಯಾರಿಸ್, ಮೊಹ್ಮದ್ ನಲಪಾಡ್ ಸೇರಿದಂತೆ ರಾಜಕೀಯ, ಚಲನಚಿತ್ರ ಮತ್ತು ಉದ್ಯಮ ರಂಗದ ಹಲವು ಗಣ್ಯರು ಆಗಮಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಡೆತ್‌ನೋಟ್ ಪತ್ತೆ: ಆತ್ಮಹತ್ಯೆ ಮಾಡಿಕೊಂಡ ಕಾನ್ಫಿಡೆಂಟ್ ಗ್ರೂಪ್ ಮಾಲೀಕ ಸಿ.ಜೆ. ರಾಯ್ ಅವರ ಸಾವು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಪ್ರಕರಣದ ತನಿಖೆಯ ಹೊಣೆಯನ್ನು ಎಸ್‌ಐಟಿ ವಹಿಸಿಕೊಂಡಿದ್ದು, 9 ಪುಟಗಳ ಡೆತ್‌ನೋಟ್ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆತ್ಮಹತ್ಯೆಗೂ ಮುನ್ನ 9 ಪುಟಗಳ ಸುದೀರ್ಘ ಡೆತ್ ನೋಟ್ ಬರೆದಿಟ್ಟಿದ್ದಾರೆ ಎಂದು ಕುಟುಂಬ ಸದಸ್ಯರು ಹೇಳಿದ್ದಾರೆ. ಈ ಪತ್ರದಲ್ಲಿ ಅವರು ಐಟಿ ದಾಳಿ, ಮಾನಸಿಕ ಒತ್ತಡ ಅಥವಾ ಉದ್ಯಮದಲ್ಲಿನ ಬಿಕ್ಕಟ್ಟುಗಳ ಬಗ್ಗೆ ಉಲ್ಲೇಖಿಸಿರಬಹುದು ಎಂದು ಶಂಕಿಸಲಾಗಿದೆ. ಆತ್ಮಹತ್ಯೆಗೂ ಮುನ್ನವೇ ಅವರು ಈ ಬಗ್ಗೆ ಕುಟುಂಬದವರಿಗೆ ಸುಳಿವು ನೀಡಿದ್ದರು ಎನ್ನಲಾಗಿದೆ. ತಮಗೆ ಯಾರಿಂದ ಎಷ್ಟೆಷ್ಟು ಹಣ ಬರಬೇಕು ಎಂಬ ವಿವರವನ್ನು ಪ್ರಸ್ತಾಪಿಸಿದ್ದು, ಮುಂದೆ ತಮ್ಮ ವ್ಯವಹಾರವನ್ನು ಯಾರು ನೋಡಿಕೊಳ್ಳಬೇಕು ಎಂಬುದನ್ನು ಡೆತ್‌ನೋಟ್‌ನಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ತೆರಿಗೆ ಅಧಿಕಾರಿಗಳೊಂದಿಗೆ ವಾಗ್ವಾದ ನಡೆದಿಲ್ಲ

ಈ ನಡುವೆ ಆದಾಯ ತೆರಿಗೆ ಅಧಿಕಾರಿಗಳ ನಿರಂತರ ಒತ್ತಡದಿಂದ ರಾಯ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಹಲವು ಆಕ್ಷೇಪವ್ಯಕ್ತಪಡಿಸುತ್ತಿದ್ದಾರೆ. ಆದರೆ ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ರಾಯ್ ಅವರನ್ನು ತೀವ್ರ ವಿಚಾರಣೆಯನ್ನಾಗಿ, ಅಧಿಕಾರಿಗಳು ಹಾಗೂ ರಾಯ್ ನಡುವೆ ವಾಕ್ಸಮರವಾಗಲಿ ನಡೆದಿರಲಿಲ್ಲ. ಸಿಸಿಟಿವಿ ವಿಡಿಯೊಗಳು ಬಹಿರಂಗವಾಗಿಲ್ಲವಾದರೂ, ರಾಯ್ ಹಾಗೂ ಐಟಿ ಅಧಿಕಾರಿಗಳು ಪ್ರತ್ಯೇಕ ಕೋಣೆಯಲ್ಲಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

ಉದ್ಯಮಿಗಳಿಗೆ ಭೀತಿ

ರಾಯ್ ಸಿ.ಕೆ. ಆತ್ಮಹತ್ಯೆಗೆ ಸಂಬಂಧಿಸಿದಂತೆ ಆತಂಕ ವ್ಯಕ್ತಪಡಿಸಿರುವ ಇನ್ಫೋಸಿಸ್ ಮಾಜಿ ಸಿಎಫ್‌ಒ ಹಾಗೂ ಐಟಿ ಉದ್ಯಮಿ ಮೋಹನ್ ದಾಸ್ ಪೈ, ಪ್ರಧಾನಿ ನರೇಂದ್ರ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಟ್ವೀಟ್ ಮಾಡಿ ತೆರಿಗೆ ಭಯೋತ್ಪಾದನೆ ಕುರಿತು ಪ್ರಶ್ನಿಸಿದ್ದಾರೆ. ತೆರಿಗೆ ಭಯೋತ್ಪಾದನೆಯಿಂದ ಈಗಾಗಲೇ ಕಾಫಿ ಡೇ ಸಂಸ್ಥಾಪಕ ಸಿದ್ದಾರ್ಥ್ ಅವರನ್ನು ಕಳೆದುಕೊಂಡಿದ್ದೇವೆ. ಈಗ ರಾಯ್ ಸರದಿ. ತೆರಿಗೆ ಅಧಿಕಾರಿಗಳ ವರ್ತನೆಯಿಂದ ಉದ್ಯಮಿಗಳು ಭಯಭೀತರಾಗಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ತೆರಿಗೆ ಇಲಾಖೆ ಅಧಿಕಾರಿಗಳ ದಾಳಿ ಪ್ರಕ್ರಿಯೆಗಳು ಕ್ರೂರವಾಗಿವೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಧಿಕಾರಿಗಳಿಗೆ ಮಿತಿಮೀರಿದ ಅಧಿಕಾರ ನೀಡಿದ್ದಾರೆ. ಇದರಿಂದ ನಾಗರಿಕರು ಮತ್ತು ತೆರಿಗೆದಾರರ ಹಕ್ಕುಗಳ ರಕ್ಷಣೆ ಸಾಧ್ಯವೇ? ಅಧಿಕಾರಿಗಳು ನಡೆಸುವ ತಪ್ಪು ದಾಳಿಗಳಿಂದ ಉದ್ಯಮಿಗಳ ಬದುಕು ನಾಶವಾದರೆ, ಅಂತಹ ಅಧಿಕಾರಿಗಳಿಗೆ ಶಿಕ್ಷೆಯಾಗುತ್ತಿದೆಯೇ?, ಕಳೆದ 3 ವರ್ಷಗಳಲ್ಲಿ ಸಂಗ್ರಹವಾದ 72 ಲಕ್ಷ ಕೋಟಿ ರು. ನೇರ ತೆರಿಗೆಯಲ್ಲಿ ಇಂತಹ ದಾಳಿಗಳ ಪಾಲು ಎಷ್ಟಿದೆ ಎಂದು ಪ್ರಶ್ನಿಸಿದ್ದಾರೆ.

ಕಿಶೋರ್ ಶೇಠ್‌ನ ಬಂಧಿಸಿ ತನಿಖೆ ತೀವ್ರಗೊಳಿಸಿರುವ ಮಹಾರಾಷ್ಟ್ರ ಎಸ್‌ಐಟಿ

400 ಕೋಟಿ ರು. ದರೋಡೆ ಕಿಂಗ್‌ಪಿನ್ ಶರಣಾಗತಿ

ವಿನಾಯಕ ಮಠಪತಿ ಬೆಳಗಾವಿ

ತೀವ್ರ ಕುತೂಹಲ ಮೂಡಿಸಿದ್ದ 400 ಕೋಟಿ ರು. ಹಣ ಇದ್ದ ಎರಡು ಕಂಟೇನರ್ ಅಪಹರಣ ಪ್ರಕರಣಕ್ಕೆ ಸದ್ಯ ರೋಚಕ ಟ್ವಿಸ್ಟ್ ಸಿಕ್ಕಿದೆ. ಹಣದ ಮೂಲ ಎಂದೇ ಬಿಂಬಿತವಾಗಿದ್ದ ಮಹಾರಾಷ್ಟ್ರ ಮೂಲದ ಉದ್ಯಮಿ ಕಿಶೋರ್ ಶೇಠ್ ಮಹಾರಾಷ್ಟ್ರದ ಎಸ್ ಐಟಿ ಅಧಿಕಾರಿಗಳ ಮುಂದೆ ಸ್ವಯಂ ಪ್ರೇರಿತವಾಗಿ ಶರಣಾ ಗಿದ್ದು ತನಿಖೆ ತೀವ್ರಗೊಂಡಿದೆ.

ಬೆಳಗಾವಿಯ ಚೋರ್ಲಾ ಘಾಟ್ ನಲ್ಲಿ 400 ಕೋಟಿ ಹಣ ಇದ್ದ ಕಂಟೇನರ್ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಕಿಂಗ್ ಪಿನ್ ಕಿಶೋರ್ ಶೇಠ್ ನನ್ನು ಮಹಾರಾಷ್ಟ್ರದ ಎಸ್‌ಐಟಿ ಅಧಿಕಾರಿಗಳ ಮುಂದೆ ಶರಣಾಗಿದ್ದಾನೆ. ಪ್ರಕರಣ ಪ್ರಮುಖ ಆರೋಪಿಯಾಗಿದ್ದ ಕಿಶೋರ್ ಶೇಠ್ ನಿಂದ ಮಹಾರಾಷ್ಟ್ರ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.

ದರೋಡೆ ಪ್ರಕರಣ ಗೋವಾ, ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶದ ಹಾಗೂ ಗುಜರಾತ್ ರಾಜ್ಯಕ್ಕೆ ವ್ಯಾಪಿಸಿದೆ. ಗುಜರಾತ್ ಮೂಲದ ರಾಜಕಾರಣಿಯದ್ದು ಎಂದು ಹೇಳಲಾಗುತ್ತಿರುವ 400 ಕೋಟಿಯ 2 ಸಾವಿರ ಮುಖಬೆಲೆಯ ಹಣವನ್ನು ಚಲಾವಣೆ ಮೊತ್ತಕ್ಕೆ ಬದಲಾಯಿಸುವ ಜವಾಬ್ದಾರಿಯನ್ನು ಇದೇ ಕಿಶೋರ್ ಶೇಠ್ ಹೆಗಲಿಗೆ ಒಪ್ಪಿಸಲಾಗಿತ್ತು ಎಂಬ ಮಾಹಿತಿ ಹೊರಬಿದ್ದಿದ್ದೆ. ಈ ಹಿನ್ನೆಲೆಯಲ್ಲಿ ಹಣದ ಮೂಲ ಹೊರಬರುವ ಸಾಧ್ಯತೆ ಇದೆ.

ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೆ ಒಳಗಾದ ಕಿಶೋರ್ ಶೇಠ್ ಹಾಗೂ ಜಯೇಶ್ ಮಧ್ಯೆ ನಡೆದಿರುವ ವಾಟ್ಸಪ್ ಸಂಭಾಷಣೆ ಮಹಾರಾಷ್ಟ್ರದ ಎಸ್‌ಐಟಿ ಅಧಿಕಾರಿಗಳ ಕೈಸೇರಿದೆ. ಇದರಲ್ಲಿ ಹಣ ಗುಜರಾತ್ ಮೂಲದ ರಾಜಕಾರಣಿಗೆ ಸಂಬಂಧಿಸಿದಿದ್ದು. ತಿರುಮಲ ಟ್ರಸ್ಟ್‌ನಲ್ಲಿ ಕಪ್ಪು ಹಣ ಬದಲಾಯಿಸಲು ಬೆಳಗಾವಿ ಮಾರ್ಗವಾಗಿ ಸಾಗಿಸಾಗಿತ್ತು ಎಂಬುದು ತಿಳಿದುಬಂದಿದೆ.

ಪ್ರಕರಣದ ದಿಕ್ಕು ಬದಲಿಸುತ್ತಾ ಕಿಶೋರ್ ಬಂಧನ

ಚಲಾವಣೆಯಿಂದ ನಿರ್ಬಂಧಿಸಲ್ಪಟ್ಟ 2 ಸಾವಿರ ಮುಖ ಬೆಲೆಯ 400 ಕೋಟಿ ಹಣವನ್ನು ಚಲಾವಣೆ ಮೊತ್ತಕ್ಕೆ ಬದಲಾಯಿಸುವ ಜವಾಬ್ದಾರಿಯನ್ನು ಇದೇ ಕಿಶೋರ್ ಶೇಠ್ ವಹಿಸಿಕೊಂಡಿದ್ದ. ಸದ್ಯ ಪ್ರಕರಣದ ಮೂಲ ಆರೋಪಿ ತಾನಾಗಿಯೇ ಎಸ್‌ಐಟಿ ಅಧಿಕಾರಿಗಳ ಮುಂದೆ ಶರಣಾಗಿದ್ದು ಇನ್ನಷ್ಟು ಕುತೂಹಲ ಮೂಡಿಸಿದೆ. ಅಪಹರಣ ಪ್ರಕರಣ ದಾಖಲಿಸಿದ್ದ ಸಂದೀಪ್ ಪಾಟೀಲ ಕಿಶೋರ್ ಕುರಿತು ಸಾಕಷ್ಟು ಮಾಹಿತಿ ನೀಡಿದ್ದ.

ಬಂಧಿತರ ಸಂಖ್ಯೆ 8ಕ್ಕೆ ಏರಿಕೆ

400 ಕೋಟಿ ರು.ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಎಸ್‌ಐಟಿ ಅಧಿಕಾರಿಗಳು ಎಂಟು ಜನರನ್ನು ಬಂಧಿಸಿದ್ದಾರೆ. ಅಜರ್ ಎಂಬಾತ ತಲೆಮರೆಸಿಕೊಂಡಿದ್ದು ಆತನಿಗಾಗಿ ಹುಡುಕಾಟ ಮುಂದುವರಿದಿದೆ. ಎಸ್‌ಐಟಿ ವಶದಲ್ಲಿದ್ದ ಇನ್ನೊಬ್ಬ ಆರೋಪಿ ವಿರಾಟ್ ಗಾಂಧಿ ಎಂಬಾತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮಚ್ಚೇಂದ್ರ ಎಂಬ ಆರೋಪಿಯನ್ನು ತೀವ್ರ ವಿಚಾರಣೆ ನಡೆಸಲಾಗಿದ್ದು, ಇನ್ನಷ್ಟು ವಿಚಾರಗಳು ಬಾಯಿಬಿಟ್ಟಿದ್ದಾನೆ ಎನ್ನಲಾಗಿದೆ.

ಅಗತ್ಯ ಪದಾರ್ಥಗಳ ಬೆಲೆ ಏರಿಕೆ

ಬೆಂಗಳೂರು: ಬೆಲೆ ಏರಿಕೆಯಿಂದ ಕಂಗೆಟ್ಟಿರೋ ಜನಸಾಮಾನ್ಯರಿಗೆ ಮತ್ತೊಂದು ದರ ಏರಿಕೆಯ ಬಿಸಿ ಮುಟ್ಟಿದ್ದು, ಬೇಸಿಗೆಗೂ ಮುನ್ನವೇ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿದೆ. ತರಕಾರಿ, ಹಣ್ಣು, ಚಿನ್ನ, ಬೆಳ್ಳಿ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನಸಾಮಾನ್ಯರಿಗೆ, ಇದೀಗ ಅಗತ್ಯ ಪದಾರ್ಥಗಳ ಬೆಲೆ ಏರಿಕೆಯಾಗಿರುವುದು ಮತ್ತೊಂದು ಬರೆ ಎಳೆದಂತಾಗಿದೆ. ಬೇಸಿಗೆ ಇನ್ನು ಆರಂಭವಾಗಿಲ್ಲ. ಆದರೂ ಜನರಿಗೆ ಅಗತ್ಯವಾದ ಅಕ್ಕಿ, ಬೇಳೆ ಕಾಳುಗಳ ಬೆಲೆಯಲ್ಲಿ ಹೆಚ್ಚಳವಾಗಿದೆ. ಪ್ರಮುಖವಾಗಿ ಬೇರೆ ಬೇರೆ ದೇಶಗಳಿಗೆ ಅಕ್ಕಿ ರಫ್ತು ಹೆಚ್ಚಳವಾಗಿರುವ ಹಿನ್ನಲೆ ಅಕ್ಕಿ ಬೆಲೆಯಲ್ಲಿ ಕೆ.ಜಿಗೆ 5-6 ರುಪಾಯಿ ಏರಿಕೆಯಾಗಿದೆ. ಹಾಗೆಯೇ ಕಡಲೆ ಬೀಜ ಹಾಗೂ ಮೆಣಸಿ ನಕಾಯಿ ಇಳುವಳಿಯಲ್ಲಿ ಇಳಿಕೆಯಾ ಗಿದ್ದರಿಂದ ಕೆ.ಜಿಗೆ 50 ರುಪಾಯಿ ಏರಿಕೆ ಯಾಗಿದೆ. ಹಾಗೆಯೇ ವಿವಿಧ ಬೇಲೆಕಾಳುಗಳ ಬೆಲೆಯೂ ಕೆ.ಜಿಗೆ 10-20 ರುಪಾಯಿ ಏರಿಕೆಯಾಗಿದೆ.



ಪದಾರ್ಥ	ಹಳೆ ಬೆಲೆ (ಕೆ.ಜಿಗೆ)	ಹೊಸಬೆಲೆ (ಕೆ.ಜಿಗೆ)
ತೊಗರಿಬೇಳೆ	110 ರು.	135 ರು.
ಉದ್ದಿನಬೇಳೆ	100 ರು.	120 ರು.
ಕಡಲೆಬೀಜ	120 ರು.	170 ರು.
ಸೋನಾಮಸೂರಿ ಅಕ್ಕಿ	38 ರು.	44 ರು.
ರಾ ರೈಸ್	49 ರು.	54 ರು.
ದೋಸೆ ಅಕ್ಕಿ	29 ರು.	39 ರು.
ಬ್ಯಾಡಗಿ ಮೆಣಸಿನಕಾಯಿ	260 ರು.	400 ರು.
ಗುಂಟೂರು ಮೆಣಸಿನಕಾಯಿ	180 ರು.	230 ರು.

ಸಮಾಚಾರ ಸಣ್ಣದಲ್ಲ

ಬ್ರಹ್ಮಶ್ರೀ ಸೊಸೈಟಿಗೆ 83 ಲಕ್ಷ ರು. ಆದಾಯ

ಶಿವಮೊಗ್ಗ: ಬ್ರಹ್ಮಶ್ರೀ ನಾರಾಯಣಗುರು ಪತ್ತಿನ ಸಹಕಾರ ಸಂಘದ ಅಭಿವೃದ್ಧಿಗೆ ಆದ್ಯತೆ ನೀಡಲಾವುದೆಂದು ಸೊಸೈಟಿಯ ನೂತನ ಅಧ್ಯಕ್ಷ ಡಾ. ಜಿ.ಡಿ. ನಾರಾಯಣಪ್ಪ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೊಸೈಟಿಯಲ್ಲಿ 6241 ಸದಸ್ಯರಿದ್ದು, 9 ಕೋಟಿ ರೂ. ದುಡಿಯುವ ಬಂಡವಾಳವಿದೆ. ಕಳೆದ ವರ್ಷ 83 ಲಕ್ಷ ರೂ. ಆದಾಯ ಬಂದಿದ್ದು, 45 ಕೋಟಿ ರೂ. ವಹಿವಾಟು ಮಾಡಲಾಗಿದೆ ಎಂದರು. ಜಿಲ್ಲೆಯ ದೊಡ್ಡ ಸಮುದಾಯದ ಸೊಸೈಟಿ ಇದಾಗಿದ್ದರೂ ಕೂಡ ಆರ್ಥಿಕವಾಗಿ ಹಿಂದುಳಿದವರೇ ಹೆಚ್ಚಾಗಿ ವ್ಯವಹಾರ ನಡೆಸುತ್ತಿದ್ದಾರೆ. ಸಾಲ ಪಡೆದ ಬಹುತೇಕರು ಪ್ರತೀ ವರ್ಷ ಬಡ್ಡಿ ಪಾವತಿಸುತ್ತಿದ್ದಾರೆ. ಅಸಲು ಕಟ್ಟಿ ರಿನಿವಲ್ ಮಾಡಿಕೊಳ್ಳುತ್ತಿಲ್ಲ. ಈ ವರ್ಷದಿಂದ ಚೆಕ್ ನೀಡಿ ರಿನಿವಲ್ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ ಎಂದರು. ಸ್ಥಿರಾಸ್ತಿ, ಪಿಗ್ಮಿ, ಜಾಮೀನು, ವೇತನ ಆಧಾರಿತ ಸಾಲವನ್ನು ನೀಡಲಾಗುತ್ತಿದೆ. ಎನ್ಪಿಎ ಪ್ರಮಾಣ ಶೇ.58ರಷ್ಟಿದ್ದು, ಇದನ್ನು ತಗ್ಗಿಸಲು ಕ್ರಮಕೈಗೊಳ್ಳಲಾಗುತ್ತದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಉಪಾಧ್ಯಕ್ಷ ರಾಮಕೃಷ್ಣ ಕಲಗೋಡು, ಸದಸ್ಯರಾದ ನಾಗರಾಜ್ ಹೆಬ್ಬೂರು, ಕೆರೆಹಳ್ಳಿ ರಾಮಪ್ಪ, ಮಮತಾ, ಶೋಭಾ, ಮೂಲ ಗಿರೀಶ್, ಇಂದೂಧರ್, ನಿರಂಜನ್, ಮಾಜಿ ಸದಸ್ಯ ರವೀಂದ್ರ ಇದ್ದರು.

ವಿಕಸಿತ ಭಾರತದ ಆರ್ಥಿಕ ದಿಕ್ಸೂಚಿ

ಮಂಗಳೂರು: ''ವಿಕಸಿತ ಭಾರತ''ದ ಮಹತ್ವಾಕಾಂಕ್ಷೆಗೆ ಈ ವರ್ಷದ ಬಜೆಟ್ ಭದ್ರವಾದ ಅಡಿಪಾಯ ಹಾಕಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ ಒಂಬತ್ತನೇ ಬಾರಿಗೆ ಬಜೆಟ್ ಮಂಡಿಸುವ ಮೂಲಕ ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಆಧುನಿಕ ತಂತ್ರಜ್ಞಾನ, ಸುಧಾರಿತ ಮೂಲಸೌಕರ್ಯದ ಹಿತಾಸಕ್ತಿಯ ದಸ್ತಾವೇಜಾಗಿದೆ. ದಾಖಲೆಯ 12.2 ಲಕ್ಷ ಕೋಟಿ ಬಂಡವಾಳ ವೆಚ್ಚದ ಘೋಷಣೆಯು ದೇಶದ ಸಂಪರ್ಕ ವ್ಯವಸ್ಥೆಯನ್ನು ವಿಶ್ವದರ್ಜೆಗೆ ಏರಿಸುವ ಮುನ್ಸೂಚನೆ ನೀಡಿದೆ. ಏಳು ಹೊಸ ಹೈಸ್ಪೀಡ್ ರೈಲು ಕಾರಿಡಾರ್ಗಳು ಮತ್ತು ಸೆಮಿಕಂಡಕ್ಟರ್ ಮಿಷನ್ 2.0 ಅಡಿಯಲ್ಲಿ ಘೋಷಿಸಲಾದ ಬೃಹತ್ ಹೂಡಿಕೆಗಳು ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ರೂಪಿಸುವಲ್ಲಿ ನಿರ್ಣಾಯಕವಾಗಲಿವೆ. ಈ ಕ್ರಮಗಳು ಉದ್ಯೋಗ ಸೃಷ್ಟಿಗೆ ವೇಗ ನೀಡುವುದಲ್ಲದೆ, ತಾಂತ್ರಿಕ ಸ್ವಾವಲಂಬನೆಯತ್ತ ನಮ್ಮನ್ನು ಕೊಂಡೊಯ್ಯುತ್ತವೆ. ಅರವತ್ತು ವರ್ಷಗಳ ಹಳೆಯ ಕಾಯ್ದೆ ಬದಲಿಸಿ ಸರಳೀಕೃತ ''ಹೊಸ ಆದಾಯ ತೆರಿಗೆ ಕಾಯ್ದೆ 2025'' ಪರಿಚಯಿಸಿರುವುದು ದಿಟ್ಟ ನಡೆಯಾಗಿದೆ. ಇದು ತೆರಿಗೆದಾರರಿಗೆ ಪಾರದರ್ಶಕ ವ್ಯವಸ್ಥೆ ಕಲ್ಪಿಸುತ್ತದೆ. ವೈದ್ಯಕೀಯ ಸೀಟುಗಳ ಹೆಚ್ಚಳ ಮತ್ತು ನಗರಾಭಿವೃದ್ಧಿಗೆ ನೀಡಿದ ಒತ್ತು ಸಚಿವರ ಕಾಳಜಿಯನ್ನು ಎತ್ತಿ ತೋರಿಸುತ್ತದೆ ಎಂದು ಬಿಜೆಪಿ ಮುಖಂಡರಾದ ವಿಕಾಸ್ ಪುತ್ತೂರು ಪ್ರತಿಕ್ರಿಯಿಸಿದ್ದಾರೆ.

ಸಮಗ್ರ ಬೆಳವಣಿಗೆಗೆ ಪೂರಕವಾದ ಬಜೆಟ್

ಮಂಗಳೂರು: ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ಕರ್ನಾಟಕವೂ ಸೇರಿದಂತೆ ದೇಶದ ಸಮಗ್ರ ಬೆಳವಣಿಗೆಗೆ ಪೂರಕವಾಗಿದೆ. ಐಟಿ ನವೀನತೆ, ಪ್ರವಾಸೋದ್ಯಮ ವಿಸ್ತರಣೆ, ಒಳನಾಡು ಜಲ ಸಂಪರ್ಕ,ಹೈಸ್ಪೀಡ್ ರೈಲು, ಎಂಎಸ್ಎಂಇಗಳು ಹಾಗೂ ಸೇವಾ ಕ್ಷೇತ್ರಗಳಿಗೆ ಒತ್ತು ನೀಡುವ ಮೂಲಕ, ಭವಿಷ್ಯಕ್ಕೆ ಸಿದ್ಧವಾದ ಕರ್ನಾಟಕದ ನಿರ್ಮಾಣಕ್ಕೆ ಈ ಬಜೆಟ್ ಭದ್ರ ನೆಲೆಯನ್ನು ಹಾಕಿದೆ. ಅರ್ಥ ವ್ಯವಸ್ಥೆಯ ಸೂಕ್ಷ್ಮ ಸಂಗತಿಗಳಿಗೂ ಆದ್ಯತೆ ನೀಡುವ ಮೂಲಕ ಪ್ರವಾಸೋದ್ಯಮ, ಕೃಷಿ, ತೋಟಗಾರಿಕೆ, ಎಂಎಸ್ಎಂಇ, ಮೂಲಸೌಕರ್ಯ,ಆರ್ಥಿಕ ಕಾರಿಡಾರ್‌ಗಳ ಅಭಿವೃದ್ಧಿಗೆ ಉತ್ತೇಜನ ನೀಡಲಾಗಿದೆ. ಪರಿಸರ ಸಮತೋಲನಕ್ಕಾಗಿ ವಿಶೇಷ ಆದ್ಯತೆ ನೀಡಿರುವುದು ಈ ಬಜೆಟ್ ಇನ್ನೊಂದು ವಿಶೇಷ. ಭಾರತವನ್ನು ಐದು ಟ್ರಿಲಿಯನ್ ಅರ್ಥವ್ಯವಸ್ಥೆಯನ್ನಾಗಿ ರೂಪಿಸುವಲ್ಲಿ ಈ ಬಜೆಟ್ ಅತ್ಯಂತ ಮಹತ್ವದ್ದಾಗಿದೆನ ಎಂದು ಕಾರ್ಕಳ ಕ್ಷೇತ್ರದ ಶಾಸಕ ವಿ ಸುನಿಲ್ ಕುಮಾರ್, ಪ್ರತಿಕ್ರಿಯಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಬಿ.ವೈ.ರಾಘವೇಂದ್ರ} ಸಂಸದರು

ಈ ಬಜೆಟ್ ಮಧ್ಯಮ ವರ್ಗದ ಹಿತರಕ್ಷಣೆ ಮತ್ತು ವಿಕಸಿತ ಭಾರತದ ಸಂಕಲ್ಪ ಸಾಕಾರಕ್ಕೆ ದಿಕ್ಸೂಚಿ. ತೆರಿಗೆ ಸುಧಾರಣೆಯ ವಿಚಾರದಲ್ಲಿ ಮೋದಿ ಸರಕಾರ ಕೈಗೊಂಡಿರುವ ನಿರ್ಧಾರಗಳು ಜನ ಸಾಮಾನ್ಯರ ಆರ್ಥಿಕ ಹೊರೆ ತಗ್ಗಿಸಲಿವೆ. ವಿಶೇಷವಾಗಿ ಭಾರತವನ್ನು ಜಾಗತಿಕ ಉತ್ಪಾದನಾ ಹಬ್ ಮಾಡಲು ಕೈಗೊಂಡಿರುವ ಕ್ರಮಗಳು ಸ್ವಾಗತಾರ್ಹ.

ಪ್ರಧಾನಿಯ ವಿಕಸಿತ ಭಾರತ ಸಾಕಾರಗೊಳಿಸುವ ಬಜೆಟ್: ಸಂಸದ ಕ್ಯಾ. ಬ್ರಿಜೇಶ್ ಚೌಟ

ಕರಾವಳಿ ಜೀವನೋಪಾಯದ ಅಂಶಗಳಿಗೂ ವಿಶೇಷ ಒತ್ತು

ನವದೆಹಲಿ: ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಕೇಂದ್ರ ಸರ್ಕಾರದ 2026-27ನೇ ಸಾಲಿನ ಬಜೆಟ್, ಭಾರತದ ಅಭಿವೃದ್ಧಿ ಪಥದಲ್ಲಿ ನಿರ್ಣಾಯಕ ಮೈಲಿಗಲ್ಲು ಆಗಿದ್ದು, ಇದು ಜನರ ನಿರೀಕ್ಷೆ ಹಾಗೂ ಸಾಮೂಹಿಕ ಸಹಭಾಗಿತ್ವದೊಂ ದಿಗೆ ಸಿದ್ಧಗೊಂಡ ''ಯುವ ಶಕ್ತಿ'' ಆಧಾರಿತ ದೂರದೃಷ್ಟಿಯ ಬಜೆಟ್ ಎಂಬುದಾಗಿ ದಕ್ಷಿಣ ಕನ್ನಡ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಬಣ್ಣಿಸಿದ್ದಾರೆ.

ಕೇಂದ್ರ ಬಜೆಟ್ ಕುರಿತು ಪ್ರತಿಕ್ರಿಯಿಸಿರುವ ಸಂಸದರು, ಇಂದು ಮಂಡಿಸಿದ ಬಜೆಟ್ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಎನ್ಡಿಎ ಸರ್ಕಾರವು ಬಡವರು, ಶೋಷಿತ ವರ್ಗ ಕಲ್ಯಾಣದತ್ತ ಹೊಂದಿರುವ ಸಂಕಲ್ಪಕ್ಕೆ ಸಾಕ್ಷಿಯಾಗಿದ್ದು, ಅದು ಮೂರು ಪ್ರಮುಖ ''ಕರ್ತವ್ಯ''ಗಳ ರೂಪದಲ್ಲಿ ಕಾರ್ಯಗತಗೊಂಡಿದೆ. ಕಳೆದ 11 ವರ್ಷಗಳ ಅಭಿವೃದ್ಧಿಯ ಅಡಿಪಾಯದ ಮೇಲೆ ಈಗ ಯುವಶಕ್ತಿ, ನಾರಿಶಕ್ತಿ, ಎಂ.ಎಸ್.ಎಂ.ಇ ಮತ್ತು ನವೋದ್ಯಮಿಗಳೆಂಬ ಸದೃಢ ಸ್ತಂಭಗಳನ್ನು ನಿರ್ಮಿಸಿ, ದೇಶದ ಪ್ರಗತಿಗೆ ಹೊಸ ವೇಗ ನೀಡುವ ಬಜೆಟ್ ಇದಾಗಿದೆ ಎಂದು ಶ್ಲಾಘಿಸಿದ್ದಾರೆ.

ಈ ಬಜೆಟ್ ಮೂರು ಪ್ರಮುಖ ಕರ್ತವ್ಯಗಳ ಆಧಾರದ ಮೇಲೆ ಅಭಿವೃದ್ಧಿ ಪೂರಕ ಆಡಳಿತದತ್ತ ಸ್ಪಷ್ಟ ದಿಕ್ಸೂಚಿಯನ್ನು ನೀಡಿದೆ. ಮೊದಲನೆಯದಾಗಿ, ಜಾಗತಿಕ ಆರ್ಥಿಕ ಏರಿಳಿತಗಳ ನಡುವೆಯೂ ಭಾರತದ ಆರ್ಥಿಕ ಪ್ರಗತಿಗೆ ವೇಗ ನೀಡುವುದು ಮತ್ತು ಆರ್ಥಿಕತೆ ಚೇತರಿಸಿಕೊಳ್ಳುವ ಶಕ್ತಿಯನ್ನು ವೃದ್ಧಿಸುವುದು; ಎರಡನೆಯದಾಗಿ, ಯುವಜನತೆಯ ಆಕಾಂಕ್ಷೆಗಳನ್ನು ಈಡೇರಿಸುತ್ತಾ ಅವರಲ್ಲಿ ಹೊಸ ಸಾಮರ್ಥ್ಯ ಬೆಳೆಸುವುದು ಹಾಗೂ ಮೂರನೆಯದಾಗಿ, ''ಸಬ್ ಕಾ ಸಾಥ್ ಸಬ್ ಕಾ ವಿಕಾಸ್'' ಮಂತ್ರದೊಂದಿಗೆ ಪ್ರತಿಯೊಂದು ಕುಟುಂಬ, ಸಮುದಾಯ ಮತ್ತು ಪ್ರದೇಶಗಳಿಗೆ ಅಗತ್ಯ ಸಂಪನ್ಮೂಲ ಹಾಗೂ ಸಮಾನ ಅವಕಾಶಗಳನ್ನು ಒದಗಿಸಿ, ಎಲ್ಲರೂ ದೇಶದ ಪ್ರಗತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು ಈ ಬಜೆಟ್ನ ಆಶಯವಾಗಿದೆ ಎಂದು ಕ್ಯಾ. ಚೌಟ ಅಭಿಪ್ರಾಯಪಟ್ಟಿದ್ದಾರೆ. ಈ ಬಜೆಟ್ ''ವಿಕ್ಷಿತ್ ಭಾರತ್ ಯಂಗ್ ಲೀಡರ್ಸ್ ಡೈಲಾಗ್''ನಂತಹ ವೇದಿಕೆಗಳ ಮೂಲಕ ಯುವಜನರ ಆಲೋಚನೆಗಳನ್ನು ನೀತಿ ನಿರೂಪಣೆಯಲ್ಲಿ ಅಳವಡಿಸಿಕೊಂಡಿರುವುದು ಶ್ಲಾಘನೀಯ. ಇದು ಯುವಜನರನ್ನು ಕೇವಲ ಫಲಾನುಭವಿಗಳನ್ನಾಗಿ ನೋಡದೆ, ರಾಷ್ಟ್ರದ ನಿರ್ಧಾರಗಳಲ್ಲಿ ಸಕ್ರಿಯ ಪಾಲುದಾರರನ್ನಾಗಿ ಮಾಡಿದೆ. ಆ ಮೂಲಕ ಭಾರತದ ಮುಂದಿನ ಪ್ರಗತಿಯನ್ನು ಯುವಜನರು ಮುನ್ನಡೆಸುತ್ತಾರೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪದೇ ಪದೇ ಒತ್ತಿ ಹೇಳಿದ್ದು, ಅದರತ್ತ ಈ ಬಜೆಟ್ ಕೂಡ ಗಮನಹರಿಸಿರುವುದು ಸಮಯೋಚಿತವೆನಿಸಿದೆ ಎಂದು ಹೇಳಿದ್ದಾರೆ.

ಕರಾವಳಿಯ ಇಕೋ-ವ್ಯವಸ್ಥೆಗೆ ಹೆಚ್ಚು ಪೂರಕ

ವೈದ್ಯಕೀಯ, ಪ್ರವಾಸೋದ್ಯಮ, ಆಯುಷ್ ಸಂಯೋಜನೆಯೊಂದಿಗೆ ಪ್ರಾದೇಶಿಕ ಮೆಡಿಕಲ್ ಹಬ್ಗಳ ಸ್ಥಾಪನೆಗಳ ಪ್ರಸ್ತಾಪ ದಕ್ಷಿಣ ಕನ್ನಡದ ಇಕೋ-ವ್ಯವಸ್ಥೆಗೆ ಹೆಚ್ಚು ಪೂರಕವಾಗಿದೆ. ಆಯುಷ್ ಸೌಕರ್ಯಗಳನ್ನು ಹೆಚ್ಚಿಸುವತ್ತ ಗಮನಹರಿಸಲಾಗುವುದು. ಅಲ್ಲದೆ, ಅನಿಮೇಷನ್, ವಿಷ್ಯುವಲ್ ಎಫೆಕ್ಟ್, ಗೇಮಿಂಗ್ಗೆ ಆದ್ಯತೆ ನೀಡಿರುವುದು ದಕ್ಷಿಣ ಕನ್ನಡದ ಉದಯೋನ್ಮುಖ ಸೃಜನಶೀಲ ಹಾಗೂ ಸ್ಟೆಮ್ ಆಧಾರಿತ ಯುವ ಪ್ರತಿಭೆಗಳ ಉತ್ತೇಜನಕ್ಕೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ. ಜತೆಗೆ, ಬಜೆಟ್ನಲ್ಲಿ ಮೀನುಗಾರಿಕೆ, ಮೆರೈನ್ ವ್ಯಾಲ್ಯು ಚೈನ್ ಮತ್ತು ಕರಾವಳಿ ಜೀವನೋಪಾಯದ ಅಂಶಗಳಿಗೂ ಒತ್ತು ನೀಡಿರುವುದು ಮೀನುಗಾರರು, ರಫ್ತುದಾರರು ಮತ್ತು ಮಹಿಳಾ ನೇತೃತ್ವದ ಉದ್ಯಮಗಳಿಗೆ ಹೆಚ್ಚಿನ ಪ್ರಯೋಜನ ಉಂಟು ಮಾಡಲಿದೆ ಎಂದು ಕ್ಯಾ.ಚೌಟ ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಗೆ ಹೊಸ ಹೊಸ ಅವಕಾಶಗಳು

ಈ ಬಜೆಟ್ ದಕ್ಷಿಣ ಕನ್ನಡದ ಪಾಲಿಗೆ ಹೊಸ ಆರ್ಥಿಕ ಶಕ್ತಿಯಾಗಿ ಮೂಡಿಬಂದಿದೆ. ವಿಶೇಷವಾಗಿ ಎರಡು ಮತ್ತು ಮೂರನೇ ಹಂತದ ನಗರಗಳ ಅಭಿವೃದ್ಧಿಗೆ ಈ ಬಜೆಟ್ ಹೆಚ್ಚಿನ ಒತ್ತು ನೀಡಿದ್ದು, ಮಂಗಳೂರಿನಂತಹ ಬೆಳೆಯುತ್ತಿರುವ ಮಹಾನಗರಕ್ಕೆ ವರದಾನವಾಗಲಿದೆ. ಕೇಂದ್ರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ನಮ್ಮ ಜಿಲ್ಲೆಯನ್ನು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಸಲು ನಮಗೆ ಇದೊಂದು ಸುವರ್ಣಾವಕಾಶವಾಗಿದೆ ಎಂದು ಕ್ಯಾ.ಚೌಟ ಅಭಿಪ್ರಾಯಪಟ್ಟಿದ್ದಾರೆ. ವೃತ್ತಿಪರ ಕೌಶಲ್ಯಾಭಿವೃದ್ಧಿ ಹಾಗೂ ಹಣಕಾಸು ಸಬಲೀಕರಣದ ಮೇಲೆ ಬಜೆಟ್ ಇಟ್ಟಿರುವ ಗಮನವು ಮಂಗಳೂರಿನ ಕರಾವಳಿಯ ಸಾಂಪ್ರದಾಯಿಕ ಉದ್ಯಮಗಳಿಗೆ ಹೊಸ ಚೈತನ್ಯ ನೀಡಲಿದೆ. ನಮ್ಮ ಭಾಗದ ಯುವ ಉದ್ಯಮಿಗಳು ಜಾಗತಿಕ ವೇದಿಕೆಯಲ್ಲಿ ಸದ್ದು ಮಾಡಲು ಬೇಕಾದ ಭದ್ರ ಬುನಾದಿಯನ್ನು ಈ ಬಜೆಟ್ ಒಳಗೊಂಡಿದೆ.

ಕರಾವಳಿ ಸರಕು ಸಾಗಣೆ, ಬಂದರು ಆಧಾರಿತ ಅಭಿವೃದ್ಧಿ ಮತ್ತು ನಗರ ಆರ್ಥಿಕ ವಲಯಗಳ ಉತ್ತೇಜನಕ್ಕೂ ಪೂರಕವಾಗಿದೆ ಎಂದಿದ್ದಾರೆ. ಬಜೆಟ್ನಲ್ಲಿ ಘೋಷಿಸಲಾದ ''ಕರಾವಳಿ ಸರಕು ಸಾಗಣೆ ಉತ್ತೇಜನ ಯೋಜನೆ'' ಮತ್ತು ಬಂದರು ಆಧಾರಿತ ಅಭಿವೃದ್ಧಿ ಕ್ರಮಗಳು ಮಂಗಳೂರನ್ನು ಅಂತರಾಷ್ಟ್ರೀಯ ಮಟ್ಟದ ಲಾಜಿಸ್ಟಿಕ್ಸ್ ಹಬ್ ಆಗಿ ರೂಪಿಸಲಿವೆ. ನಗರ ಆರ್ಥಿಕ ವಲಯದ ಪ್ರಸ್ತಾವನೆಯು ಮಂಗಳೂರು-ಉಡುಪಿ ಕಾರಿಡಾರ್‌ಅನ್ನು ಬಂದರು, ಶಿಕ್ಷಣ, ಆರೋಗ್ಯ ಮತ್ತು ಪ್ರವಾಸೋದ್ಯಮದ ಬಲಿಷ್ಠ ಕೇಂದ್ರವನ್ನಾಗಿಸಲಿದೆ. ಇದರೊಂದಿಗೆ, ಎಂ.ಎಸ್.ಎಂ.ಇ ವಲಯಕ್ಕೆ ನೀಡಲಾದ ಆರ್ಥಿಕ ನೆರವು ಮತ್ತು ದೇಶೀಯ ಸೀ-ಪ್ಲೇನ್ ಕಾರ್ಯಾಚರಣೆಗೆ ಬೆಂಬಲ ನೀಡಿರುವುದು ಕರಾವಳಿಯ ಸಂಪರ್ಕ ಹಾಗೂ ಉದ್ಯಮಗಳಿಗೆ ಹೊಸ ಆಯಾಮ ನೀಡಲಿದ್ದು, ಈ ಭಾಗದ ಸಮಗ್ರ ಪ್ರಗತಿಗೆ ಸಾಕ್ಷಿಯಾಗಲಿದೆ ಎಂದು ಸಂಸದ ಕ್ಯಾ. ಚೌಟ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪಿಲಿಕುಳದಲ್ಲಿ ಹೊನಲು ಬೆಳಕಿನ ಗಾಲ್ಫ್ ಹಬ್ಬ

ಸುದ್ದಿಗೋಷ್ಠಿಯಲ್ಲಿ ಗಾಲ್ಫ್ ಕ್ಲಬ್ ಕ್ಯಾಪ್ಟನ್ ಮನೋಜ್ ಶೆಟ್ಟಿ ಅವರು ಹೊನಲು ಬೆಳಕಿನ ಗಾಲ್ಫ್ ಹಬ್ಬ ಕುರಿತು ಮಾಹಿತಿ ನೀಡಿದರು.

ಮಂಗಳೂರು: ಕರಾವಳಿಯ ಕ್ರೀಡಾ ಭೂಪಟದಲ್ಲಿ ಮಂಗಳೂರು ಹೊಸ ಇತಿಹಾಸ ಬರೆಯಲು ಸಜ್ಜಾಗಿದೆ. ಪಿಲಿಕುಳ ಗಾಲ್ಫ್ ಕ್ಲಬ್ನಲ್ಲಿ ಶನಿವಾರದಿಂದ ವಿಶ್ವದರ್ಜೆಯ ''ಪ್ರೊ-ಆ್ಯಮ್'' (ವೃತ್ತಿಪರ ಹಾಗೂ ಅಮೆಚೂರ್) ಗಾಲ್ಫ್ ಟೂರ್ನಮೆಂಟ್ ಆರಂಭವಾಗಿದೆ. ಸುದ್ದಿಗೋಷ್ಠಿಯಲ್ಲಿ ಕ್ಲಬ್ ಕ್ಯಾಪ್ಟನ್ ಮನೋಜ್ ಶೆಟ್ಟಿ ಈ ಕುರಿತು ಮಾಹಿತಿ ನೀಡಿದರು. ದೇಶದ ವಿವಿಧ ಭಾಗಗಳಿಂದ ಅಂತಾರಾಷ್ಟ್ರೀಯ ಮಟ್ಟದ ವೃತ್ತಿಪರ ಆಟಗಾರರು ಆಗಮಿಸಿದ್ದು, ಇದು ಕರಾವಳಿಯ ಅಮೆಚೂರ್‌ಆಟಗಾರರಲ್ಲಿ ಹೊಸ ಉತ್ಸಾಹ ತುಂಬಿದೆ ಎಂದರು.

''ಫ್ಲಡ್ಲೈಟ್'' ವ್ಯವಸ್ಥೆ:

ದೇಶದ ಕೇವಲ ನಾಲ್ಕು ಕಡೆಗಳಲ್ಲಿ ಮಾತ್ರ ಲಭ್ಯವಿರುವ ಅತ್ಯಾಧುನಿಕ ಫ್ಲಡ್ ಲೈಟ್ (ಹೊನಲು ಬೆಳಕು) ಸೌಲಭ್ಯ ಇದೀಗ ಮಂಗಳೂರಿನಲ್ಲೂ ಲಭ್ಯವಿದೆ. ದಕ್ಷಿಣ ಭಾರತದಲ್ಲೇ ಇಂತಹ ಸೌಲಭ್ಯ ಹೊಂದಿರುವ ಹೆಗ್ಗಳಿಕೆಗೆ ಪಿಲಿಕುಳ ಪಾತ್ರವಾಗಿದೆ. ಇದು ರಾತ್ರಿ ವೇಳೆಯೂ ಕ್ರೀಡಾ ಚಟುವಟಿಕೆಗಳಿಗೆ ಪೂರಕವಾಗಿದ್ದು, ಯುವ ಪ್ರತಿಭೆಗಳನ್ನು ಆಕರ್ಷಿಸಲು ನೆರವಾಗಲಿದೆ ಎಂದು ಆಟಗಾರರು ಅಭಿಪ್ರಾಯಪಟ್ಟಿದ್ದಾರೆ.

ಆಟಗಾರರ ಉಪಸ್ಥಿತಿ:

ಟೂರ್ನಮೆಂಟ್ನಲ್ಲಿ ಭಾಗವಹಿಸಲು ಅಮನ್ರಾಜ್, ಆರ್ಯನ್ ರೂಪ ಆನಂದ್, ದಿವ್ಯಾಂಶು ಬಜಾಜ್, ಧರ್ಮ, ಅಲಾಪ್ ಐ.ಎಲ್., ಯಶಸ್ ಚಂದ್ರ ಎಂ.ಎಸ್., ಉದಯನ್ ಮಾನೆ, ಖಾಲಿನ್ ಜೋಶಿ, ಸ್ನೇಹಾ ಸಿಂಗ್, ಅವನಿ ಪ್ರಶಾಂತ್, ಚಿಕ್ಕರಂಗಪ್ಪ ಎಸ್. ಮತ್ತು ಸಮರ್ಥ್ ದ್ವಿವೇದಿ ಸೇರಿದಂತೆ ಹಲವು ದಿಗ್ಗಜರು ಆಗಮಿಸಿದ್ದಾರೆ.

> **ಮಂಗಳೂರಿನಲ್ಲಿರುವ ಈ ವಿಶ್ವ ದರ್ಜೆಯ ಸೌಲಭ್ಯ ಕೇವಲ ಆಟಕ್ಕಷ್ಟೇ ಸೀಮಿತವಲ್ಲ, ಇದು ಮುಂಬರುವ ದಿನಗಳಲ್ಲಿ ಗಾಲ್ಫ್ ಕ್ರೀಡಾ ಕ್ಷೇತ್ರದ ಯುವ ಪ್ರತಿಭೆಗಳಿಗೆ ಶಕ್ತಿ ನೀಡಲಿದೆ.**
> **-ಎಸ್.ಚಿಕ್ಕರಂಗಪ್ಪ, ಗಾಲ್ಫ್ ಆಟಗಾರ**

ಉತ್ಸವದ ಸಮಾರೋಪ:

''ಗಾಲ್ಫ್ ಎಕ್ಸಲೆನ್ಸ್ ಅಕಾಡೆಮಿ'' ಕರಾವಳಿ ಉತ್ಸವದ ಸಮಾರೋಪದ ಅಂಗವಾಗಿ ಈ ಪಂದ್ಯಾ ಆಯೋಜಿಸಲಾಗಿದೆ. ಜಿಲ್ಲಾಧಿಕಾರಿ ಹಾಗೂ ಕ್ಲಬ್ ಅಧ್ಯಕ್ಷ ದರ್ಶನ್ ಎಚ್.ವಿ. ಅವರ ಮಾರ್ಗದರ್ಶನದಂತೆ ಈ ಟೂರ್ನಮೆಂಟ್ ನಡೆಯುತ್ತಿದೆ.

ಗಾಲ್ಫ್ ಅಕಾಡೆಮಿ:

ಅನಿವಾಸಿ ಭಾರತೀಯ ಉದ್ಯಮಿ ಮೈಕಲ್ ಡಿಸೋಜಾ ಮತ್ತು ಕುಟುಂಬದ ಸಹಕಾರದೊಂದಿಗೆ ಗಾಲ್ಫ್ ಅಕಾಡೆಮಿ ನಿರ್ಮಾಣವಾಗುತ್ತಿದೆ. ಮೇ 31ರೊಳಗೆ ಅಕಾಡೆಮಿ ಕಾರ್ಯ ಪೂರ್ಣಗೊಳ್ಳಲಿದೆ. ಇದು ಕೇವಲ ತರಬೇತಿ ಕೇಂದ್ರವಾಗಿರದೆ, ''ಗಾಲ್ಫ್ ಎಕ್ಸಲೆನ್ಸ್ ಅಕಾಡೆಮಿ''ಯಾಗಿ ದೇಶದ ನುರಿತ ತರಬೇತುದಾರರ ಸಹಕಾರದೊಂದಿಗೆ ಕಾರ್ಯನಿರ್ವಹಿಸಲಿದೆ.

ಆಕರ್ಷಕ ಕ್ರೀಡೆ:

ಬೆಂಗಳೂರು ಮೂಲದ ಅಂತಾರಾಷ್ಟ್ರೀಯ ಆಟಗಾರ್ತಿ ಅವನಿ ಪ್ರಶಾಂತ್ ಮಾತನಾಡಿ, ಗಾಲ್ಫ್ ವೈಯಕ್ತಿಕ ಕ್ರೀಡೆಯಾಗಿದ್ದರೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳುತ್ತಿರುವುದು ಆಶಾದಾಯಕ. ಹೈದರಾಬಾದ್ನ ಸ್ನೇಹಾ ಸಿಂಗ್ ಅವರು, ಕ್ರಿಕೆಟ್ನಂತೆ ಗಾಲ್ಫ್ ಕೂಡ ಇಂದು ಜನಪ್ರಿಯವಾಗುತ್ತಿದ್ದು, ಶಾಲಾ ಮಕ್ಕಳನ್ನು ಈ ಕ್ರೀಡೆಯತ್ತ ಸೆಳೆಯುವ ಅಗತ್ಯವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕ್ಲಬ್ ಪ್ರಮುಖರಾದ ಗಿರೀಶ್ ರಾವ್, ನಿತಿನ್ ಶೆಟ್ಟಿ, ಗೌತಮ್ ಪಡಿವಾಳ ಮತ್ತಿತರರು ಉಪಸ್ಥಿತರಿದ್ದರು.

ಜಾಲತಾಣದಿಂದ ಸಾಹಿತ್ಯ ಕೃಷಿ ಕ್ಷೀಣ

ಶಿವಮೊಗ್ಗದ ಶುಭ ಮಂಗಳ ಸಮುದಾಯ ಭವನದಲ್ಲಿ ನಿವೃತ್ತ ಪ್ರಾಂಶುಪಾಲ ಪ್ರೊ. ಸತ್ಯನಾರಾಯಣ ಅವರ 'ವೃತ್ತಿ ಪ್ರವೃತ್ತಿ ದೋಣಿ' 25 ನೇ ಕೃತಿ ಲೋಕಾರ್ಪಣೆ ಸಮಾರಂಭ ನಡೆಯಿತು.

ಶಿವಮೊಗ್ಗ: ಪ್ರತೀ ಮನೆಗಳಲ್ಲಿಯೂ ಸಾಹಿತ್ಯದ ಓದು ಇದ್ದಾಗ ಕುಟುಂಬಗಳು ಚನ್ನಾಗಿರುತ್ತವೆ ಎಂದು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಿ.ಎಂ.ತ್ಯಾಗರಾಜ್ ಹೇಳಿದರು.

ನಿವೃತ್ತ ಪ್ರಾಂಶುಪಾಲ ಪ್ರೊ. ಸತ್ಯನಾರಾಯಣ ಅವರಿಗೆ 70 ವರ್ಷ ತುಂಬಿದ ಸಂದರ್ಭಕ್ಕಾಗಿ ಭಾನುವಾರ ಶುಭ ಮಂಗಳ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಅವರ 'ವೃತ್ತಿ ಪ್ರವೃತ್ತಿ ದೋಣಿ'ಯಲ್ಲಿ 25 ನೇ ಕೃತಿ ಲೋಕಾರ್ಪಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಇಂದಿನ ಸಾಮಾಜಿಕ ಜಾಲತಾಣಗಳಿಂದಾಗಿ ಅಕ್ಷರ ಕೃಷಿ ಕ್ಷೀಣಿಸುತ್ತಿದೆ ಎಂಬ ಮಾತಿದೆ. ಇಂತಹ ಸಂದರ್ಭದ ನಡುವೆಯೂ ಪುಸ್ತಕಗಳು ಪ್ರಕಟವಾಗುತ್ತಿರುವುದು ಆರೋಗ್ಯ ಸಮಾಜದ ಲಕ್ಷಣವಾಗಿದೆ. ಅದರಲ್ಲೂ ಅಜ್ಜ ಮತ್ತು ಮೊಮ್ಮಗನ ಕೃತಿಗಳು ಒಟ್ಟಿಗೆ ಬಿಡುಗಡೆಯಾಗುತ್ತಿರುವುದು ಇನ್ನೊಂದು ವಿಶೇಷವಾಗಿದೆ ಎಂದರು. ಸಾಹಿತ್ಯ, ಸಂಸ್ಕೃತಿ ಇರುವ ಮನೆ, ಮನಗಳು ಚನ್ನಾಗಿ ಇರುತ್ತವೆ. ಈ ಕಾರಣಕ್ಕಾಗಿಯೇ ಅರ್ಥಶಾಸ್ತ್ರಜ್ಞರಾಗಿರುವ ಸತ್ಯನಾರಾಯಣ ಅವರು ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಸೃಜನಾತ್ಮಕತೆಗೆ ಸಾಹಿತ್ಯ ರಚನೆ ಆರೋಗ್ಯಕರವಾಗಿದೆ.ಹೀಗಾಗಿ ಹೊಸ ಸಾಹಿತ್ಯದ ಓದು ಎಲ್ಲರಲ್ಲಿಯೂ ಇರಬೇಕಾಗುತ್ತದೆ ಎಂದರು.

ಇಂದಿನ ತಾಂತ್ರಿಕ ಯುಗದಲ್ಲಿ ಗಂಡ, ಹೆಂಡತಿ ಹತ್ತು ವರ್ಷ ಒಟ್ಟಿಗೆ ಇದ್ದರೆ ಅದೇ ಕೂಡು ಕುಟುಂಬ ಎಂದು ಭಾವಿಸುವ ಸ್ಥಿತಿ ಇದೆ. ಮನಸ್ಸುಗಳು ಒಡೆಯದಿರಲು, ಕೌಟುಂಬಿಕ ವ್ಯವಸ್ಥೆ ಹಾಳಾಗದಿರಲು ಸಾಹಿತ್ಯ ಓದು ಅಗತ್ಯ. 25 ಕೃತಿಗಳಿಗೆ ಕರ್ತೃವಾಗಿರುವ ಸತ್ಯನಾರಾಯಣ ಅವರ ಸಾಹಿತ್ಯ ಸೇವೆ ದೊಡ್ಡದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಪ್ರೊ. ಸತ್ಯನಾರಾಯಣ ಅವರ ಮೊಮ್ಮಗ ಗುಹಾನ್ ಎಚ್.ಎನ್. ಅವರ 3 ಮತ್ತು 4 ನೇ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಪದವೀಧರ ಸಹಕಾರ ಸಂಘದ ಅಧ್ಯಕ್ಷ ಎಸ್.ಪಿ. ದಿನೇಶ್ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಮಾಜಿ ಶಾಸಕ ಕೆ.ಬಿ. ಪ್ರಸನ್ನಕುಮಾರ್,ಜಿಪಂ ಮಾಂಜಿ ಸದಸ್ಯ ಕೆ.ಇ.ಕಾಂತೇಶ್, ಗ್ಯಾರಂಟಿ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಸಿ.ಎಸ್. ಚಂದ್ರಭೂಪಾಲ್, ರೋ. ವಸಂತ ಹೋಬಳಿದಾರ್,ಜಿಲ್ಲಾ ಕಸಾಪ ಅಧ್ಯಕ್ಷ ಡಿ.ಮಂಜುನಾಥ್, ಸೂಡಾ ಮಾಜಿ ಅಧ್ಯಕ್ಷ ಎನ್. ರಮೇಶ್, ಪತ್ರಕರ್ತ ರಾಕೇಶ್ ಡಿಸೋಜ, ಜಿಲ್ಲಾ ಗಂಗಾಮತಸ್ಥ ಸಂಘದ ಅಧ್ಯಕ್ಷ ಡಿ.ಬಿ. ಕೆಂಚಪ್ಪ, ಲೇಖಕ ಚಿ.ಗುಹಾನ್ ಎಚ್.ಎನ್. ಇದ್ದರು.

ಭರತ ಹುಣ್ಣಿಮೆ: ದೇವಿ ಪಲ್ಲಕ್ಕಿ ಉತ್ಸವ

ಚಂದ್ರಗುತ್ತಿಯಲ್ಲಿ ಭಾರತ ಹುಣ್ಣಿಮೆ ನಿಮಿತ್ತ ಶ್ರೀ ರೇಣುಕಾಂಬ ದೇವಿಯ ಪಲ್ಲಕ್ಕಿ ಉತ್ಸವಕ್ಕೆ ದೇವಸ್ಥಾನದ ಇ.ಒ ಪ್ರಮೀಳಾ ಕುಮಾರಿ ಚಾಲನೆ ನೀಡಿದರು.

ಚಂದ್ರಗುತ್ತಿ: ಮಲೆನಾಡಿನ ಶಕ್ತಿ ದೇವತೆ ಚಂದ್ರಗುತ್ತಿಯ ಶ್ರೀ ರೇಣುಕಾಂಬ ದೇವಿಯ ದರ್ಶನಕ್ಕೆ ಭರತ ಹುಣ್ಣಿಮೆ ನಿಮಿತ್ತ ಭಾನುವಾರ ಸಾವಿರಾರು ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ,ಹಾವೇರಿ, ಬ್ಯಾಡಗಿ, ಹಿರೇಕೆರೂರು, ಹರಿಹರ, ರಾಣೆಬೆನ್ನೂರು ಸೇರಿದಂತೆ ಉತ್ತರ ಕರ್ನಾಟಕದ ವಿವಿಧ ಭಾಗಗಳಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಭಕ್ತರು ವಿವಿಧ ಧಾರ್ಮಿಕ ಕಾರ್ಯಕ್ರಮ ನಡೆಸಿದರು. ಜೊತೆಗೆ ವಿವಿಧ ಹರಕೆಗಳನ್ನು ದೇವಿಗೆ ಸಮರ್ಪಿಸಿದರು.

ದೇವಸ್ಥಾನದ ಆವರಣದಲ್ಲಿರುವ ಪರಿವಾರ ದೇವರುಗಳಾದ ಕಾಲಭೈರವ, ನಾಗದೇವತೆ, ಮಾತಂಗಿ, ಪರಶುರಾಮ, ತ್ರಿಶೂಲದ ಭೈರಪ್ಪ ದೇವರುಗಳಿಗೆ ವಿಶೇಷ ಪೂಜಾ ವಿಧಿ ವಿಧಾನಗಳು ನೆರವೇರಿದವು. ಶ್ರೀ ರೇಣುಕಾಂಬ ದೇವಿಯ ಪಲ್ಲಕ್ಕಿ ಉತ್ಸವ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವೈಭವದಿಂದ ಜರುಗಿತು. ಧಾರ್ಮಿಕ ಉತ್ಸವದ ಸಮ್ಮುಖವನ್ನು ದೇವಸ್ಥಾನದ ಕಾರ್ಯ ನಿರ್ವಹಣಾಧಿಕಾರಿ ಪ್ರಮೀಳಾ ಕುಮಾರಿ ವಹಿಸಿದ್ದರು. ಪಿಎಸ್ಐ ನವೀನ್ ಅವರು ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಿದ್ದರು.

ಆರೋಗ್ಯ, ಶಿಕ್ಷಣ ಕ್ಷೇತ್ರ, ಆಯುರ್ವೇದಕ್ಕೆ ಒತ್ತು

ಉಜಿರೆ: ಗ್ರಾಮೀಣ ಮತ್ತು ಉದಯೋನ್ಮುಖ ಕೇಂದ್ರಗಳಲ್ಲಿ ಶಿಕ್ಷಣ ಮತ್ತು ಮೂಲ ಸೌಕರ್ಯಗಳನ್ನು ಬಲಪಡಿಸುವ ಮೂಲಕ ಬಜೆಟ್ ಅಸಮಾನತೆಗಳನ್ನು ಕಡಿಮೆ ಮಾಡಲು ಮತ್ತು ಜೀವನೋಪಾಯವನ್ನು ಸೃಷ್ಟಿಸಲು ಅವಕಾಶ ಮಾಡಿಕೊಡುತ್ತದೆ. ಆರೋಗ್ಯ, ಶಿಕ್ಷಣ ಮತ್ತು ಮೌಲ್ಯಗಳ ನೆಲೆಯಲ್ಲಿ ಕೌಶಲಗಳ ಮೂಲಕ ಮಾರ್ಗದರ್ಶನ ಮತ್ತು ಪ್ರೇರಣೆ ನೀಡಿದಾಗ ಸ್ವಾವಲಂಬನೆ, ಆಂತರಿಕ ಬೆಳವಣಿಗೆ ಮತ್ತು ದೇಶದ ಪ್ರಗತಿಗೆ ಪೂರಕವಾಗುವಂತೆ ಈ ಬಾರಿಯ ಬಜೆಟ್ ಮಂಡಿಸಲಾಗಿದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯರಾದ ಡಿ. ವೀರೇಂದ್ರ ಹೆಗ್ಗಡೆಯವರು ಬಜೆಟ್ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ.

ದೇಶದ ಪ್ರಗತಿಯ ತಳಹದಿಯಾಗಿ ಮಾನವ ಸಾಮರ್ಥ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಬಜೆಟ್ ಸೃಜನಾತ್ಮಕ ಬದಲಾವಣೆಯನ್ನು ಸೂಚಿಸುತ್ತದೆ. ಆರೋಗ್ಯ, ಶಿಕ್ಷಣ, ಆಯುರ್ವೇದ ಮತ್ತು ತರಬೇತಿ ಬಗ್ಗೆ ವಿಶೇಷ ಒತ್ತು ನೀಡಿರುವುದು ಸ್ವಾಗತಾರ್ಹವಾಗಿದೆ. ರೋಗನಿರೋಧಕ ಆರೈಕೆ ಮತ್ತು ಮಾನವಕೇಂದ್ರಿತ ಅಭಿವೃದ್ಧಿಯು ಸ್ಥಿತಿಸ್ಥಾಪಕ ಸಮಾಜಕ್ಕೆ ಅಗತ್ಯ ಎಂಬುದನ್ನು ವಿಶ್ಲೇಷಿಸಲಾಗಿದೆ.

ಸಮಗ್ರ ಆರೋಗ್ಯಭಾಗ್ಯ ರಕ್ಷಣೆ ಬಗ್ಗೆ ಗಮನವು ಆರೋಗ್ಯ ಪ್ರವಾಸೋದ್ಯಮಕ್ಕೆ ಹೊಸ ಆಯಾಮವನ್ನು ನೀಡಿದೆ. ಪರಿಣಾಮವಾಗಿ ಭಾರತವನ್ನು ಸಮಗ್ರ ಚಿಕಿತ್ಸೆಯ ಜಾಗತಿಕ ತಾಣವಾಗಿ ಮಾರ್ಪಾಡು ಮಾಡುತ್ತದೆ. ವಿಶೇಷವಾಗಿ ಗ್ರಾಮೀಣ ಪ್ರದೇಶ ಮತ್ತು ಉದಯೋನ್ಮುಖ ಕೇಂದ್ರಗಳಲ್ಲಿ ಶಿಕ್ಷಣ ಮತ್ತು ಮೂಲಸೌಕರ್ಯಗಳನ್ನು ಬಲಪಡಿಸುವ ಮೂಲಕ, ಬಜೆಟ್ ಅಸಮಾನತೆಗಳನ್ನು ಕಡಿಮೆ ಮಾಡಲು ಹಾಗೂ ಜೀವನೋಪಾಯಗಳನ್ನು ಸೃಷ್ಟಿಸಲು ಅವಕಾಶ ಮಾಡಿಕೊಡುತ್ತದೆ ಎಂದು ಹೆಗ್ಗಡೆಯವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಆರ್ಥಿಕ ಅಭಿವೃದ್ಧಿಗೆ ಶಕ್ತಿ ಕೊಡುವ ಬಜೆಟ್

ನವದೆಹಲಿ: ಕೇಂದ್ರದ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಅತ್ಯಂತ ಪರಿಷ್ಕೃತವಾದ ಮತ್ತು ಸಮಾಜದ ಸರ್ವರೂ ಒಪ್ಪಿಕೊಳ್ಳಬಹುದಾದ ಜನಸಾಮಾನ್ಯರಿಗೆ ಅನುಕೂಲ ವಾಗುವಂತಹ ದೇಶದ ಆರ್ಥಿಕ ಅಭಿವೃದ್ಧಿಗೆ ಶಕ್ತಿ ಕೊಡುವಂತಹ ಬಜೆಟ್ ಈ ಬಾರಿ ಮಂಡನೆ ಮಾಡಿದ್ದಾರೆ ಎಂದು ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಪ್ರತಿಕ್ರಿಯಿಸಿದ್ದಾರೆ. ಸುಮಾರು 53 ಲಕ್ಷ ಕೋಟಿ ರೂ. ಒಟ್ಟು ವಿಸ್ತಾರವಾದ ವ್ಯಾಪ್ತಿಯಲ್ಲಿ ಹಲವು ಯೋಜನೆಗಳನ್ನು ಯೋಚನೆಗಳನ್ನು ಪರಿಚಯಿಸಿದ್ದಾರೆ. ಹೆಣ್ಣು ಮಕ್ಕಳಿಗೆ ಅನುಕೂಲವಾಗುವಂತಹ ಹಾಸ್ಟೆಲ್ ಪ್ರತಿ ಜಿಲ್ಲೆಯಲ್ಲಿ ಸ್ಥಾಪನೆ, ಕ್ಯಾನ್ಸರ್ ಕಾಯಿಲೆಗಳಿಗೆ ವಿಶೇಷ ಒತ್ತುಕೊಟ್ಟು ಒಂದಷ್ಟು ರಿಯಾಯಿತಿ ಮಾಡಲು ಅನುಕೂಲ ಮಾಡಿಕೊಟ್ಟಿದ್ದಾರೆ. ರಾಜ್ಯ ದೇಶದ ಅನೇಕ ಕಡೆಗಳಲ್ಲಿ ಮೆಡಿಕಲ್ ಕಾಲೇಜ ನಿರ್ಮಾಣಕ್ಕೆ ಅನುದಾನ ಒದಗಿಸಿದ್ದಾರೆ . ಮಹಾ ನಗರಗಳ ನಡುವೆ ಹೈ ಸ್ಪೀಡ್ ರೈಲಿನ ಪರಿಚಯ ಮಾಡಿದ್ದಾರೆ. ಇದರಿಂದ ಬಹಳ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಕರಾವಳಿ ಟೂರಿಸಂಗೆ ಉತ್ತೇಜನಕಾರಿ ಬಜೆಟ್

ಮಂಗಳೂರು: ಕೇಂದ್ರ ಬಜೆಟ್ 2047ರ ವಿಕಸಿತ ಭಾರತ' ಸಂಕಲ್ಪವನ್ನು ನೆಲೆಗೆ ತರುವ ದೂರದೃಷ್ಟಿಯ, ಜನಪರ ಹಾಗೂ ಅಭಿವೃದ್ಧಿ ಪರ ಬಜೆಟ್ ಆಗಿದೆ ಎಂದು ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ ಸತೀಶ ಕುಂಪಲ ತಿಳಿಸಿದ್ದಾರೆ. ಮಹಿಳಾ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಿರುವ ಈ ಬಜೆಟ್ ನಲ್ಲಿ ಮಹಿಳೆಯರ ಶಿಕ್ಷಣ, ಉದ್ಯೋಗ, ಉದ್ಯಮಶೀಲತೆ ಹಾಗೂ ಡಿಜಿಟಲ್ ಕೌಶಲ ಅಭಿವೃದ್ಧಿಗೆ ಬಲ ನೀಡಲಾಗಿದೆ. ಇದು ಮಹಿಳೆಯರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವ ಮಹತ್ವದ ಹೆಜ್ಜೆಯಾಗಿದೆ. ಕರಾವಳಿ ಕರ್ನಾಟಕದಲ್ಲಿ ಟ್ರೆಕ್ಕಿಂಗ್ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಗೆ ಉತ್ತೇಜನ ನೀಡಿರುವುದು ನಮ್ಮ ಜಿಲ್ಲೆಯ ಆರ್ಥಿಕ ಬೆಳವಣಿಗೆಗೆ ಹೊಸ ಆಯಾಮ ನೀಡಲಿದೆ. ಇದರಿಂದ ಸ್ಥಳೀಯ ಉದ್ಯೋಗ ಸೃಷ್ಟಿಯ ಜೊತೆಗೆ ಪ್ರವಾಸೋದ್ಯಮಕ್ಕೆ ವೇಗ ಸಿಗಲಿದೆ. ಬೆಂಗಳೂರು ಹೈದ್ರಾಬಾದ್ ಮತ್ತು ಬೆಂಗಳೂರು ಚೆನ್ನೈ ಹೈಸ್ಪೀಡ್ ರೈಲು ಕಾರಿಡಾರ್‌ಹಾಗೂ ಬೆಂಗಳೂರು ನಗರಕ್ಕೆ ಸ್ಪೀಡ್ ರೈಲು ಯೋಜನೆ ಘೋಷಣೆಯಿಂದ ದಕ್ಷಿಣ ಭಾರತದ ಆರ್ಥಿಕ ಸಂಪರ್ಕ ಇನ್ನಷ್ಟು ಬಲಗೊಳ್ಳಲಿದೆ. ರಕ್ಷಣಾ ಕ್ಷೇತ್ರಕ್ಕೆ 6 ಲಕ್ಷ ಕೋಟಿವರೆಗೆ ಹಾಗೂ ಸಾರಿಗೆ ಕ್ಷೇತ್ರಕ್ಕೆ 6 ಲಕ್ಷ ಕೋಟಿವರೆಗೆ ಮೀಸಲಿಟ್ಟು, 4,000 ಇವಿ ಬಸ್ಗಳ ವ್ಯವಸ್ಥೆ ನಿರ್ಧಾರ ದೇಶದ ಭದ್ರತೆ ಮತ್ತು ಹಸಿರು ಸಾರಿಗೆಗೆ ಉತ್ತೇಜನ ನೀಡಲಿದೆ. ಗ್ರಾಮೀಣಾಭಿವೃದ್ಧಿಗೆ 3 ಲಕ್ಷ ಕೋಟಿವರೆಗೆ ಮೀಸಲಿಟ್ಟಿರುವುದರಿಂದ ಗ್ರಾಮೀಣ ಆರ್ಥಿಕತೆ ಬಲಿಷ್ಠವಾಗಲಿದೆ. ಅಗತ್ಯ ವಸ್ತುಗಳ ದರ ಇಳಿಕೆ ಜನಸಾಮಾನ್ಯರಿಗೆ ನೇರ ಲಾಭ ನೀಡಲಿದೆ. ವಿಶೇಷವಾಗಿ ಶುಗರ್‌ಹಾಗೂ ಕ್ಯಾನ್ಸರ್‌ಔಷಧಿಗಳ ದರ ಇಳಿಕೆ ಬಡ ಮತ್ತು ಮಧ್ಯಮ ವರ್ಗದವರಿಗೆ ಮಹತ್ತರ ನೆರವಾಗಲಿದೆ. ಇಂದಿನ ಬಜೆಟ್ ನಿಜಾರ್ಥದಲ್ಲಿ ಬಡತನ ಹೋಗಲಾಡಿಸುವ ಬಜೆಟ್ ಎಂದು ಸತೀಶ ಕುಂಪಲ ಅವರು ತಿಳಿಸಿದ್ದಾರೆ.

ವಿಕಸಿತ ಭಾರತಕ್ಕೆ ವೇಗ ನೀಡಿದ ಬಜೆಟ್: ಸಂಸದ

ನವದೆಹಲಿಯ ಸಂಸತ್ ಭವನದ ಬಜೆಟ್ ಅಧಿವೇಶನದಲ್ಲಿ ಭಾಗವಹಿಸಿರುವ ಸಂಸದರಾದ ಬಿ. ವೈ. ರಾಘವೇಂದ್ರ.

ಶಿವಮೊಗ್ಗ: ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಬಜೆಟ್ ಕೇವಲ ಆರ್ಥಿಕ ಪತ್ರವಲ್ಲ, ಅದು ''ವಿಕಸಿತ ಭಾರತ ತಲುಪುವ ಅಭಿವೃದ್ಧಿಯ ಪಯಣಕ್ಕೆ ವೇಗ ನೀಡಿದ ಬಜೆಟ್ ಎಂದು ಸಂಸದ ಬಿ.ವೈ.ರಾಘವೇಂದ್ರ ಹೇಳಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಅವರು, ಜಾಗತಿಕ ಆರ್ಥಿಕ ಏರಿಳಿತಗಳ ನಡುವೆಯೂ ಭಾರತದ ಆರ್ಥಿಕತೆಯನ್ನು ಸದೃಢವಾಗಿ ಮುನ್ನಡೆಸುತ್ತಿರುವ ಕೇಂದ್ರ ದ ಈ ಬಾರಿಯ ಬಜೆಟ್, ದೇಶದ ಪ್ರತಿಯೊಬ್ಬ ಪ್ರಜೆಯ ಆಶೋತ್ತರಗಳನ್ನು ಈಡೇರಿಸುವ ವಿಶ್ವಾಸ ಮೂಡಿಸಿದೆ. ಮೋದಿಯವರ ದೂರದರ್ಶಿತ್ವದ ದಿಕ್ಸೂಚಿಯಾಗಿದೆ ಎಂದಿದ್ದಾರೆ.

ಯುವಶಕ್ತಿ, ಮೂಲಸೌಕರ್ಯ ಮತ್ತು ಕೃಷಿಗೆ ಆದ್ಯತೆ ನೀಡಲಾಗಿದ್ದು, ಈ ಬಜೆಟ್ನಲ್ಲಿ ನಮ್ಮ ದೇಶದ ಬೆನ್ನೆಲುಬಾದ ಅನ್ನದಾತ ರೈತರಿಗೆ, ದೇಶದ ಶಕ್ತಿಯಾದ ಯುವಜನತೆಗೆ ಮತ್ತು ಮಹಿಳೆಯರ ಸಬಲೀಕರಣಕ್ಕೆ ವಿಶೇಷ ಒತ್ತು ನೀಡಿರುವುದು ಸ್ತುತ್ಯರ್ಹ. ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನದ ಅಳವಡಿಕೆ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ನೀಡಲಾಗಿರುವ ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಯೋಜನೆ, ರಾಜ್ಯದ ಅದರಲ್ಲೂ ತೆಂಗು, ಗೋಡಂಬಿ ಬೆಳೆಗಾರರಿಗೆ ವಿಶೇಷ ಬೆಂಬಲ ಯೋಜನೆಗಳನ್ನು ಘೋಷಿಸಲಾಗಿದೆ.

ಮುಖ್ಯವಾಗಿ ರೈಲ್ವೆ, ಹೆದ್ದಾರಿ ಮತ್ತು ಡಿಜಿಟಲ್ ಮೂಲಸೌಕರ್ಯದ ಮೇಲಿನ ಹೂಡಿಕೆ, ಉತ್ಪಾದನಾ ವಲಯಕ್ಕೆ ಹೊಸ ಚೈತನ್ಯ ನೀಡಲಿದ್ದು, ಆರ್ಥಿಕತೆಯನ್ನು 5 ಟ್ರಿಲಿಯನ್ ಡಾಲರ್‌ಗುರಿಯತ್ತ ವೇಗವಾಗಿ ಕೊಂಡೊಯ್ಯಲಿದೆ. ಮುಖ್ಯವಾಗಿ ವಿತ್ತ ಸಚಿವರು ಘೋಷಿಸಿರುವ 7 ಹೈಸ್ಪೀಡ್ ರೈಲ್ವೆ ಕಾರಿಡಾರ್ಗಳಲ್ಲಿ 2 - ಹೈದರಾಬಾದ್ -ಬೆಂಗಳೂರು ಮತ್ತು ಚೆನ್ನೈ - ಬೆಂಗಳೂರು ಕಾರಿಡಾರ್ ರಾಜ್ಯದ ಆರ್ಥಿಕ ಚಿತ್ರಣವನ್ನೇ ಬದಲಿಸಲಿವೆ ಎಂದು ಹೇಳಿದ್ದಾರೆ.

ಕ್ಯಾನ್ಸರ್ ಔಷಧಗಳಿಗೆ ಮೂಲ ಕಸ್ಟಮ್ಸ್ ವಿನಾಯಿತಿ ಘೋಷಿಸಲಾಗಿದೆ. ದೇಶದ ಪ್ರತಿ ಜಿಲ್ಲೆಯಲ್ಲೂ ಬಾಲಕಿಯರ ಹಾಸ್ಟೆಲ್ ಗಳ ನಿರ್ಮಾಣ, ನಮ್ಮ ಮೀನುಗಾರರಿಗೆ ದೇಶದ ಹಡಗುಗಳು ಹಿಡಿಯುವ ಮೀನುಗಳಿಗೂ ಕೂಡ ಸುಂಕ ಮುಕ್ತ ಮಾಡಲಾಗಿದೆ. ತೆರಿಗೆ ರಿಟರ್ನ್ ದೋಷಗಳನ್ನು ಸರಿಪಡಿಸುವ ಸಮಯದ ವಿಸ್ತರಣೆ ಮತ್ತು ವಿದೇಶಿ ಪ್ರವಾಸ ಪ್ಯಾಕೇಜ್ಗಳ ಮೇಲಿನ ತೆರಿಗೆ ದರಗಳನ್ನು ಇಳಿಕೆ ಮಾಡಲಾಗಿದೆ ಎಂದು ಅವರು ವಿಶ್ಲೇಷಣೆ ಮಾಡಿದ್ದಾರೆ. ಪ್ರಮುಖವಾಗಿ ಮಧ್ಯಮ ವರ್ಗದ ಹಿತರಕ್ಷಣೆ ಮತ್ತು ವಿಕಸಿತ ಭಾರತದ ಸಂಕಲ್ಪದ ಸಕಾರದ ನಿಟ್ಟಿನಲ್ಲಿ ಮಧ್ಯಮ ವರ್ಗದ ಹಿತರಕ್ಷಣೆ ಮತ್ತು ತೆರಿಗೆ ಸುಧಾರಣೆಯ ವಿಚಾರದಲ್ಲಿ ಮೋದಿ ಸರ್ಕಾರ ಕೈಗೊಂಡಿರುವ ನಿರ್ಧಾರಗಳು ಜನಸಾಮಾನ್ಯರ ಆರ್ಥಿಕ ಹೊರೆಯನ್ನು ತಗ್ಗಿಸಲಿವೆ. ಭಾರತವನ್ನು ಜಾಗತಿಕ ಉತ್ಪಾದನಾ ಹಬ್ ಆಗಿ ಮಾಡಲು ಕೈಗೊಂಡಿರುವ ಕ್ರಮಗಳು ಆತ್ಮನಿರ್ಭರ ಭಾರತದ ಕನಸನ್ನು ಸಾಕಾರಗೊಳಿಸಲಿವೆ ಎಂದಿದ್ದಾರೆ.

ಒಟ್ಟಾರೆಯಾಗಿ, ಬಜೆಟ್ ವಿಕಸಿತ ಭಾರತದ ನಿರ್ಮಾಣದ ಸಂಕಲ್ಪವನ್ನು ಪುನರುಚ್ಚರಿಸಿದೆ. ದೇಶದ ಆರ್ಥಿಕತೆಯನ್ನು ವಿಶ್ವದ ಅಗ್ರಮಾನ್ಯ ಸ್ಥಾನಕ್ಕೆ ಏರಿಸುವ ಬದ್ಧತೆ ಜೊತೆಗೆ ಭಾರತೀಯರ ಆಶೋತ್ತರಗಳನ್ನು ಈ ಬಜೆಟ್ ಪ್ರತಿಬಿಂಬಿಸುತ್ತಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ರ ವರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದ್ದಾರೆ.

ರಥೋತ್ಸವಕ್ಕೆ ಶಾಸಕ ಬಿ.ಪಿ.ಹರೀಶ್ ಅಧಿಕೃತ ಚಾಲನೆ | ಧಾರ್ಮಿಕ ವೈಭವದಲ್ಲಿ ಸಾವಿರಾರು ಭಕ್ತರು ಭಾಗಿ | ದೇವರ ನಾಮಸ್ಮರಣೆ

ಶ್ರೀ ಹರಿಹರೇಶ್ವರ ಅದ್ದೂರಿ ಬ್ರಹ್ಮ ರಥೋತ್ಸವ

ಹರಿಹರ: ಮಧ್ಯ ಕರ್ನಾಟಕದ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದ ಹರಿಹರದ ಶ್ರೀ ಹರಿಹರೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ನಗರದಲ್ಲಿ ಭಾನುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಕ್ತಿಭಾವ, ಸಂಭ್ರಮ ಹಾಗೂ ಧಾರ್ಮಿಕ ವೈಭವದೊಂದಿಗೆ ಅದ್ದೂರಿಯಾಗಿ ನೆರವೇರಿತು.

ಬೆಳಗ್ಗೆ 10.55 ರ ವೇಳೆಗೆ ಶಾಸಕ ಬಿ.ಪಿ.ಹರೀಶ್ ಸಮ್ಮುಖದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಅಧಿಕೃತ ಚಾಲನೆ ನೀಡಲಾಯಿತು.

ದೇವಸ್ಥಾನ ರಸ್ತೆಯ ತೇರುಗಡ್ಡೆ ವೃತ್ತದಿಂದ ಶಿವಮೊಗ್ಗ ವೃತ್ತದವರೆಗೆ ಭಕ್ತರು 'ಹರ ಹರ ಮಹಾದೇವ', 'ಗೋವಿಂದಾ.. ಗೋವಿಂದಾ..' ಎಂದು ಭಾವ ಪರವಶರಾಗಿ ಜಯಘೋಷ ಕೂಗುತ್ತಾ ತೇರನ್ನು ಎಳೆದರು. ಈ ವೇಳೆ ರಥ ಬೀದಿಯೆಲ್ಲೆಡೆ ಭಕ್ತಿಭಾವದ ವಾತಾವರಣ ನಿರ್ಮಾಣವಾಗಿತ್ತು.

ಭಕ್ತರು ತೇರಿನ ಮುಕುಟದ ಕಳಶಕ್ಕೆ ಬಾಳೆಹಣ್ಣು, ಹೂವು, ಉತ್ತತ್ತಿ ಎಸೆಯುವ ಮೂಲಕ ಹರಕೆ ಸಲ್ಲಿಸಿದರು. ರಥದ ಗಾಲಿಗಳಿಗೆ ತೆಂಗಿನಕಾಯಿ ಒಡೆದು ತಮ್ಮ ತಮ್ಮ ಸಂಕಲ್ಪ ಪೂರ್ಣಗೊಳಿಸಿ ಕೊಂಡು ಪುನೀತ ಭಾವರಾದರು. ದಾಸರ ಪರಿವಾರದ ಸದಸ್ಯರು ನಾಮಸ್ಮರಣೆ ಮಾಡುತ್ತಾ ಭಕ್ತಿಗೀತೆಗಳೊಂದಿಗೆ ರಥೋತ್ಸವದಲ್ಲಿ ಭಾಗವಹಿಸಿದ್ದು ವಿಶೇಷ ಆಕರ್ಷಣೆಯಾಗಿ ಕಂಡುಬಂತು.

ಶ್ರೀ ಹರಿಹರೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಭಕ್ತಿಭಾವ, ಸಂಭ್ರಮ ಹಾಗೂ ಧಾರ್ಮಿಕ ವೈಭವದೊಂದಿಗೆ ಅದ್ದೂರಿಯಾಗಿ ನೆರವೇರಿತು.

ರಥೋತ್ಸವಕ್ಕೂ ಮುನ್ನ ಪುರಾಣ ಪ್ರಸಿದ್ಧ ಶ್ರೀ ಹರಿಹರೇಶ್ವರ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ರಥ ಬೀದಿಯಲ್ಲಿ ಮೆರವಣಿಗೆ ನಡೆಸಿ, ಬಳಿಕ ತೇರಿನೊಳಗೆ ಶ್ರದ್ಧಾಭಕ್ತಿಯಿಂದ ಅಲಂಕರಿಸಲಾಯಿತು. ದೇವಸ್ಥಾನದಲ್ಲಿ ಬೆಳಗಿನ ಜಾವ 4.00 ಗಂಟೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ಆರಂಭ ಗೊಂಡಿದ್ದವು.

ಪೂರ್ಣಾಹುತಿ ನಂತರ ಬಲಿಹರಣ, ಗಣಪತಿ ಪೂಜೆ, ರುದ್ರಾಭಿಷೇಕ, ಅಲಂಕಾರ, ನವಗ್ರಹ ಪೂಜೆ, ಜಪ-ಹೋಮ ಸೇರಿದಂತೆ ವಿವಿಧ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಸನಾತನ ಧರ್ಮದ ಶ್ರದ್ಧಾ ಭಕ್ತಿ ವಿಶೇಷತೆಗಳು ನಡೆದವು. ಭಕ್ತರ ಅನುಕೂಲಕ್ಕಾಗಿ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಬಿರ್ಲಾ ಕಲ್ಯಾಣ ಮಂಟಪ, ಶಿಬಾರ ವೃತ್ತ, ನಡುವಲ ಪೇಟೆ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಶ್ರೀ ಹರಿಹರೇಶ್ವರ ಬ್ರಹ್ಮೋತ್ಸವ ಅನ್ನ ಸಂತರ್ಪಣೆ ಸಮಿತಿಯಿಂದ ಕಳೆದ ಹತ್ತು ವರ್ಷಗಳಿಂದಲೂ ಸತತವಾಗಿ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಸುತ್ತಿದ್ದು, ಈ ವರ್ಷವೂ ಸಹಸ್ರಾರು ಭಕ್ತರಿಗೆ ಅನ್ನ ಸಂತರ್ಪಣೆ ನೆರವೇರಿಸಿದರು.

ಇದೇ ವೇಳೆ ಜಾತ್ರೆಗೆ ಆಗಮಿಸಿದ ಪರ ಊರಿನ, ಸ್ಥಳೀಯ ಭಕ್ತಾದಿಗಳಿಗಾಗಿ ಬಿಸಿಲಿನ ತಾಪ ತಣಿಸಲು ಮಜ್ಜಿಗೆ ಮತ್ತು ಪಾನಕ ವಿತರಿಸಲಾಯಿತು. ಮೈಲಾರ ಲಿಂಗೇಶ್ವರ ಜಾತ್ರೆಗೆ ತೆರಳುವ ಹಾಗೂ ಅಲ್ಲಿಂದ ಮರಳುವ ಭಕ್ತರಿಗೆ ಈ ವ್ಯವಸ್ಥೆಗಳು ಹೆಚ್ಚಿನ ನೆರವು ನೀಡುವುದರ ಜೊತೆಗೆ ಶ್ರೀ ಸ್ವಾಮಿಯ ದರ್ಶನ ಪಡೆದ ಭಾಗ್ಯವನ್ನು ಪಡೆದುಕೊಂಡರು.

ಈ ಸಮಯದಲ್ಲಿ ತಹಸೀಲ್ದಾರ್ ಹಾಗೂ ಮುಜರಾಯಿ ಅಧಿಕಾರಿ ಜಿ.ಸಂತೋಷ್ ಕುಮಾರ್, ನಗರ ಠಾಣೆಯ ನಂದಿಗಾವಿ ಶ್ರೀನಿವಾಸ್, ಬಿಜೆಪಿ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಎಸ್.ಎಂ.ವೀರೇಶ್ ಹನಗವಾಡಿ, ಧರ್ಮದಾಯ ದತ್ತಿ ಇಲಾಖೆ ಅಧಿಕಾರಿ ಎಚ್.ಎಲ್. ಆನಂದ್, ದೇವಸ್ಥಾನದ ಕಾರ್ಯದರ್ಶಿ ವಾರಿಜಾ ಎಚ್. ವೆಂಕಟೇಶ್ ಇತರರು ಭಾಗಿಯಾಗಿದ್ದರು.

ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು

ಒಂದೇ ಶಿಲೆಯಲ್ಲಿ ಹರಿ ಮತ್ತು ಹರನ ರೂಪದಲ್ಲಿ ಮೈದಳೆದಿರುವ ಅಪರೂಪದ ಶ್ರೀ ಹರಿಹರೇಶ್ವರ ಸ್ವಾಮಿ ವಿಗ್ರಹ ರಥೋತ್ಸವದ ಪ್ರಮುಖ ಆಕರ್ಷಣೆಯಾಗಿತ್ತು. ಬೆಂಗಳೂರು, ಹಾಸನ, ಅರಸೀಕೆರೆ, ಕಡೂರು, ಬೀರೂರು, ಹಾವೇರಿ, ಶಿವಮೊಗ್ಗ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ದೇವರ ದರ್ಶನ ಪಡೆದು ಪುನೀತರಾದರು.

ಸಮಾಚಾರ ಸಣ್ಣದಲ್ಲ

ವಿವಿಧ ಜಯಂತಿಗಳ ಪೂರ್ವಭಾವಿ ಸಭೆ ನಾಳೆ

ಚಿತ್ರದುರ್ಗ: ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಫೆ.3 ರಂದು ವಿವಿಧ ಜಯಂತಿಗಳ ಆಚರಣೆ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆಗಳು ಜರುಗಲಿವೆ. ಬೆಳಗ್ಗೆ 11 ಗಂಟೆಗೆ ಕಾಯಕ ಶರಣರ ಜಯಂತಿ ಕುರಿತು, 11.15ಕ್ಕೆ ಸಂತ ಶ್ರೀ ಸೇವಾಲಾಲ್, 11.45ಕ್ಕೆ ಛತ್ರಪತಿ ಶಿವಾಜಿ ಮಹಾರಾಜರ ಹಾಗೂ ಮಧ್ಯಾಹ್ನ 12ಕ್ಕೆ ಸಂತ ಕವಿ ಸರ್ವಜ್ಞ ಜಯಂತಿ ಆಚರಿಸುವ ಕುರಿತು ಪೂರ್ವಭಾವಿ ಸಭೆಗಳು ನಡೆಯಲಿವೆ. ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಮುದಾಯದ ಮುಖಂಡರುಗಳು ತಪ್ಪದೇ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ, ಜಯಂತಿಗಳ ಆಚರಣೆ ಕುರಿತು ಸೂಕ್ತ ಸಲಹೆ ಸೂಚನೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ಎಂ. ಗುರುನಾಥ್ ತಿಳಿಸಿದ್ದಾರೆ.

ರೇಷ್ಮೆ ಕೃಷಿ ಪ್ರಶಸ್ತಿಗೆ ಅರ್ಜಿ ಅಹ್ವಾನ

ಚಿತ್ರದುರ್ಗ: ಜಿಲ್ಲೆಯ ಪ್ರಗತಿಪರ ರೇಷ್ಮೆ ಬೆಳೆಗಾರರಿಗೆ 2023-24 ಮತ್ತು 2024-25 ನೇ ಸಾಲಿನ ರಾಜ್ಯ ಮತ್ತು ಜಿಲ್ಲಾ ಮಟ್ಟದ ರೇಷ್ಮೆ ಕೃಷಿ ಪ್ರಶಸ್ತಿ ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಫೆ.7 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದ್ದು, ಜಿಲ್ಲೆಯ ರೈತರು ಕನಿಷ್ಠ 1 ಎಕರೆ ಹಿಪ್ಪುನೇರಳೆ ತೋಟ ಹಾಗೂ ಪ್ರತ್ಯೇಕ ಹುಳು ಸಾಕಾಣಿಕಾ ಮನೆ ಹೊಂದಿರಬೇಕು. 100 ಮೊಟ್ಟೆಗೆ ಸರಾಸರಿ ರೇಷ್ಮೆ ಗೂಡಿನ ಇಳುವರಿ 65 ಕೆ.ಜಿ. ಹಾಗೂ ಒಂದು ಎಕರೆಗೆ ರೇಷ್ಮ ಗೂಡಿನ ಉತ್ಪಾದನೆ 500 ಕೆ.ಜಿ.ಗಿಂತ ಕಡಿಮೆ ಇರಬಾರದು. ರೇಷ್ಮೆ ಬೆಳೆಗಾರರು ರೇಷ್ಮೆ ಪಾಸ್‌ಬುಕ್, ರೇಷ್ಮೆ ಮೊಟ್ಟೆ ಹಾಗೂ ಚಾಕಿ ಖರೀದಿಸಿರುವ ಕುರಿತು ರೇಷ್ಮೆ ಗೂಡು ಮಾಡಿರುವ ಬಗ್ಗೆ ದಾಖಲಾತಿಗಳನ್ನು ಹೊಂದಿರಬೇಕು. ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ರೇಷ್ಮೆ ವಿಸ್ತರಣಾಧಿಕಾರಿಗಳು, ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ ಅರ್ಜಿ ಪಡೆದು ಅಗತ್ಯ ಮಾಹಿತಿ ಹಾಗೂ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಕಚೇರಿಗೆ ಸಲ್ಲಿಸುವಂತೆ ಜಿಲ್ಲಾ ಪಂಚಾಯಿತಿ ರೇಷ್ಮೆ ಉಪನಿರ್ದೇಶಕ ಬೋಜಣ್ಣ ಎಸ್. ತಿಳಿಸಿದರು.

ಚುನಾವಣೆಯಲ್ಲಿ ಜಿ.ಪಿ.ಕುಮಾರ್ ಜಯ

ಚಿತ್ರದುರ್ಗ : ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಬೆಂಗಳೂರಿನಲ್ಲಿ ನಡೆದ ಚುನಾವಣೆಯಲ್ಲಿ ಪ್ರದರ್ಶಕ ವಲಯದಿಂದ ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಿದ್ದ ಚಲನಚಿತ್ರ ಪ್ರದರ್ಶಕರು ಮತ್ತು ವಿತರಕರು ಚಿತ್ರದುರ್ಗದ ಶಂಕರ್ ಟಾಕೀಸ್‌ನ ಜಿ.ಪಿ. ಕುಮಾರ್ ಜಯಶಾಲಿಯಾಗಿದ್ದಾರೆ.

ಕೇಂದ್ರ ಬಜೆಟ್ ರಾಜ್ಯದ ಪಾಲಿಗೆ ನಿರಾಶದಾಯಕ

ದಾವಣಗೆರೆ: ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಈ ವರ್ಷದ ಬಜೆಟ್ ಹೆಚ್ಚು ತೆರಿಗೆ ಪಾವತಿ ಮಾಡುವ ಕರ್ನಾಟಕದ ಪಾಲಿಗೆ ಅತ್ಯಂತ ನಿರಾಶದಾಯಕ ಎಂದು ಹಿರಿಯ ವಕೀಲ ಎಲ್. ಎಚ್.ಅರುಣಕುಮಾರ್ ಕೇಂದ್ರದ ವಿರುದ್ಧ ಕಿಡಿಕಾರಿದರು. ಬಜೆಟ್ ಮಂಡನೆ ಕುರಿತು ಪ್ರಕಟಣೆ ಹೊರಡಿಸಿರುವ ಅವರು, ನೀರಾವರಿ ಯೋಜನೆಗಳಾದ ಭದ್ರಾ, ಮೇಕೆದಾಟು, ಕಳಸಾ ಬಂಡೂರಿ ಕುರಿತಾಗಿ ಚಕಾರವೆತ್ತಿಲ್ಲ, ಕಳೆದ 2 ವರ್ಷದ ಕೆಳಗೆ ಭದ್ರಾ ಮೇಲ್ದಂಡೆ ಕಾಮಗಾರಿ ತ್ವರಿತ ಕಾಮಗಾರಿಗಳಿಗೆ ಅನುಕೂಲ ಆಗುವಂತೆ 5300 ಕೋಟಿ ಹಣ ಬಜೆಟ್‌ನಲ್ಲಿ ನಿಗದಿ ಮಾಡಿದ್ದರೂ ಈವರೆಗೂ ಬಿಡುಗಡೆ ಮಾಡಿಲ್ಲ, ಕರ್ನಾಟಕವನ್ನೂ ಪ್ರತಿನಿಧಿಸಿ ಕೇಂದ್ರ ಸಚಿವರಾಗಿದ್ದರೂ ಕರ್ನಾಟಕದ ಸ್ವಾಭಿಮಾನ ಎತ್ತಿ ಹಿಡಿಯುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಭಾರತದ ಆರ್ಥಿಕತೆಯಲ್ಲಿ ಗ್ರಾಮೀಣ ಭಾಗದ ಕೊಡುಗೆ ಹೆಚ್ಚಾಗಿದ್ದರೂ ಸಹ ಗ್ರಾಮೀಣ ಆರ್ಥಿಕತೆ ಸುಧಾರಿಸಲು, ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಯಾವುದೇ ಶಕ್ತಿಯುತ ಯೋಜನೆ ಕಂಡು ಬಂದಿಲ್ಲ ಎಂದರು. ಸದ್ಯದಲ್ಲೇ ವಿಧಾನ ಸಭೆ ಚುನಾವಣೆ ನಡೆಯಲಿರುವ ಐದು ರಾಜ್ಯ ಗುರಿಯಾಗಿ ಇಟ್ಟುಕೊಂಡು ಹೊಸ ಯೋಜನೆಗಳ ಬಂಪರ್ ಕೊಡುಗೆ ನೀಡಿದೆ. ಕೇಂದ್ರ ಹಣಕಾಸು ಸಚಿವರು ವಿತ್ತೀಯ ಶಿಸ್ತನ್ನು ಕಾಯುಕೊಳ್ಳುವ ಭರದಲ್ಲಿ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಮಧ್ಯಮ ವರ್ಗ, ನೌಕರ ವರ್ಗ ಮತ್ತು ಪಿಂಚಣಿದಾರರ ನಿರೀಕ್ಷೆ ಹುಸಿಗೊಳಿಸಿದ್ದಾರೆ ಎಂದು ತಿಳಿಸಿದರು.

ವಿರಾಮ
ಪ್ರತಿ ಭಾನುವಾರ

{ ಎಚ್.ಡಿ.ಕುಮಾರಸ್ವಾಮಿ } ಕೇಂದ್ರ ಸಚಿವ

ತೆರಿಗೆ ಪಾಲಿನಲ್ಲಿ ಕೇಂದ್ರ ಸರಕಾರವು ಕರ್ನಾಟಕಕ್ಕೆ ಅನ್ಯಾಯ ಮಾಡಿದೆ ಎಂದು ರಾಜ್ಯ ಸರಕಾರ ಸಾಮಾನ್ಯವಾಗಿ ದೂರುತ್ತಿತ್ತು. ಹೊಸದಾಗಿ ತೆರಿಗೆ ಹಂಚಿಕೆ ಆಗಿರುವ ಪ್ರಕಾರ ಬರುವ ಆರ್ಥಿಕ ವರ್ಷದಲ್ಲಿ ರಾಜ್ಯಕ್ಕೆ 63,049 ಕೋಟಿ ತೆರಿಗೆ ಪಾಲು ದೊರೆಯಲಿದೆ. ಇನ್ನು ಮುಂದೆ ರಾಜ್ಯ ಕಾಂಗ್ರೆಸ್ ಸರಕಾರ ರಾಜಕೀಯವಾಗಿ ಕೇಂದ್ರವನ್ನು ಟೀಕೆ ಮಾಡುವುದನ್ನು ಬಿಡಬೇಕು.

ನಮ್ಮದು ಶತ್ರುಗಳಿಗೆ ಅಂಜದ 'ಮೃತ್ಯುಂಜಯ ರಾಷ್ಟ್ರ'

ಸಾಸ್ವೆಹಳ್ಳಿ: ಅನಾದಿಕಾಲದಿಂದಲೂ ವಿವಿಧ ವಿದೇಶಿ ಶಕ್ತಿಗಳು ಹಾಗೂ ಪರಧರ್ಮದವರಿಂದ ನಿರಂತರ ದಾಳಿಗಳಾಗಿದ್ದರೂ, ಯಾವುದಕ್ಕೂ ಅಂಜದೆ ತನ್ನ ಅಸ್ತಿತ್ವವನ್ನು ಗಟ್ಟಿಯಾಗಿ ಉಳಿಸಿಕೊಂಡಿರುವ ಭಾರತವು ಜಗತ್ತಿನ ಏಕೈಕ 'ಮೃತ್ಯುಂಜಯ ರಾಷ್ಟ್ರ' ಎಂದು ದೇವಾಲಯ ಸಂವರ್ಧನಾ ಸಮಿತಿಯ ರಾಜ್ಯ ಸಂಯೋಜಕ ಮನೋಹರ್ ಮಠದ ಹೇಳಿದರು.

ಸಮೀಪದ ಬೆನಕನಹಳ್ಳಿ ಗ್ರಾಮದಲ್ಲಿ ಹಿಂದೂ ಸಂಗಮ ಆಯೋಜನಾ ಸಮಿತಿ ಹಮ್ಮಿಕೊಂಡಿದ್ದ 'ಹಿಂದೂ ಸಂಗಮ' ಕಾರ್ಯಕ್ರಮದಲ್ಲಿ ಮಾತನಾಡಿದರು. ಭಾರತವು ಹಲವು ಜನಾಂಗ ತನ್ನೊಳಗೆ ಮೈಗೂಡಿಸಿಕೊಂಡು ವಿಶಿಷ್ಟ ಸಂಸ್ಕೃತಿಯೊಂದಿಗೆ ಬೆಳೆಯುತ್ತಿರುವ ರಾಷ್ಟ್ರವಾಗಿದೆ. ಆದರೆ ಇಂದು ಅವಿಭಕ್ತ ಕುಟುಂಬಗಳು ವಿಭಕ್ತಗೊಳ್ಳುತ್ತಿರುವುದು ವಿಪರ್ಯಾಸವಾಗಿದ್ದು, ಸಮಾಜವನ್ನು ಒಗ್ಗೂಡಿಸುವ ಕಾರ್ಯ ತುರ್ತಾಗಿ ಆಗಬೇಕಿದೆ. ಯಾವುದೇ ತಾರತಮ್ಯವಿಲ್ಲದೆ ದೇಶದ ರಕ್ಷಣೆ ಮಾಡುವುದೇ ಸಂಘಟನೆಯ ಮೂಲ ಉದ್ದೇಶವಾಗಿದೆ. ಇದು ಕಷ್ಟದಲ್ಲಿರುವವರಿಗೆ ಹೆಗಲು ಕೊಡುವ ಸಂಘಟನೆಯೇ ಹೊರತು, ಇತರ ಧರ್ಮ ಅಥವಾ ದೇಶವನ್ನು ಅವಹೇಳನ ಮಾಡುವ ಉದ್ದೇಶ ಹೊಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಬೆನಕನಹಳ್ಳಿ ಗ್ರಾಮದಲ್ಲಿ ಹಿಂದೂ ಸಂಗಮ ಆಯೋಜನಾ ಸಮಿತಿ ಹಮ್ಮಿಕೊಂಡಿದ್ದ 'ಹಿಂದೂ ಸಂಗಮ' ಕಾರ್ಯಕ್ರಮವನ್ನು ದೇವಾಲಯ ಸಂವರ್ಧನಾ ಸಮಿತಿಯ ರಾಜ್ಯ ಸಂಯೋಜಕ ಮನೋಹರ್‌ಮಠದ ಉದ್ಘಾಟಿಸಿದರು.

ಸಮಿತಿಯ ಉಪಾಧ್ಯಕ್ಷ ಅರುಣ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೋಶಾಧ್ಯಕ್ಷ ಪ್ರವೀಣ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಮಾಜಿ ಸೈನಿಕ, ವಿ.ಎಸ್.ಎಸ್.ಎನ್ ಉಪಾಧ್ಯಕ್ಷ ಬಿ.ಜಿ.ಸಿದ್ದೇಶಪ್ಪ ಬೀರಗೊಂಡನಹಳ್ಳಿ ಇದ್ದರು.

ಹೊನ್ನಾಳಿ ತಾಲೂಕಿನ ಘಂಟ್ಯಾಪುರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಬಿ. ಸುರೇಶ್ ನಾಯ್ಕ ಉಪಾಧ್ಯಕ್ಷರಾಗಿ ಅನುಸೂಯ ಬಾಯಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.
ಸಂಘದ ನಿರ್ದೇಶಕ ಡಿ. ಷಣ್ಮುಖ ನಾಯ್ಕ, ಆರ್.ಸಿ. ಉಮೇಶ್ ನಾಯ್ಕ, ಅಮ್ಮಿಬಾಯಿ, ವಿ. ಅಶೋಕ್, ನಾಮ್ಯನಾಯ್ಕ, ಕೆ.ಎಲ್ ನಾಗ್ಯನಾಯ್ಕ, ಸಂತೋಷ್ ನಾಯ್ಕ್, ಕಾರ್ಯದರ್ಶಿ ಎನ್. ಪ್ರಿಯಾಂಕ ಇದ್ದರು. ಸಹಕಾರ ಅಭಿವೃದ್ಧಿ ಅಧಿಕಾರಿ ನವೀನ್ ಕುಮಾರ್‌ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಶುದ್ಧ ಮನಸೇ ಭಕ್ತಿಗೆ ಮೂಲ ಸಾಧನ

ಚಿತ್ರದುರ್ಗ: ಮನಸ್ಸು ಮರ್ಕಟವಾಗದೇ ಮಹಾದೇವನ ಅರುಹು ಆಗಬೇಕು ಎಂದು ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.

ಕುಷ್ಟಗಿ ತಾಲೂಕಿನ ಮಾದಾಪುರ ಗ್ರಾಮದಲ್ಲಿ ಜರುಗಿದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ರವರ ತುಲಾಭಾರ ಹಾಗೂ ಸಿದ್ದರಾಮೇಶ್ವರ ಜಯಂತ್ಯುತ್ಸವದ ಸಾನ್ನಿಧ್ಯ ವಹಿಸಿ ಮಾತನಾಡಿದ ಶ್ರೀಗಳು ಮನಸ್ಸೇ ದೇವರ ಮಾರ್ಗ ದರ್ಶನಕ್ಕೆ ಮೂಲ ಸಾಧನವಾಗಿದ್ದು, ಅದನ್ನು ಶುದ್ಧಗೊಳಿಸದಿದ್ದರೆ ಭಕ್ತಿ ಫಲವಂತ ವಾಗುವುದಿಲ್ಲ. ಉಭಯ ಭ್ರಷ್ಟರೆಂದರೆ ಬಾಹ್ಯ ಪೂಜೆ ಮಾಡಿ ಆಂತರಿಕ ಶುದ್ಧಿ ಮರೆಯುವವರು. ನಿಜಭಕ್ತರು ಮನದಲ್ಲಿ ದೇವರನ್ನು ನಿಲ್ಲಿಸಿ ಸರ್ವಾಂಗ ಐಕ್ಯ ಸಾಧಿಸುತ್ತಾರೆ.

ಇದು ಶಿವಯೋಗದ ಮೂಲ ಸಿದ್ಧಾಂತವನ್ನು ಒತ್ತಿ ಹೇಳುತ್ತದೆ. ಒಳ್ಳೆಯ- ಕೆಟ್ಟ ಚಿಂತನೆಗಳನ್ನು ತೊಡೆದು, ಕಾಯಕವು ಮತ್ತು ಭಕ್ತಿಯ ಮೂಲಕ ಮನಸ್ಸನ್ನು ಶುದ್ಧೀಕರಿಸುವುದು ಸಿದ್ದರಾಮರ ಶಿವಯೋಗದ ಮಾರ್ಗ. ಇಂತಹ ಅಂತರಂಗ ಬಹಿರಂಗ ಶುದ್ಧತೆಯಿಂದ ಸಿದ್ಧರಾಮರು ಶಿವಯೋಗಿಗಳಾದವರು ಎಂದು ಹೇಳಿದರು.



ಕುಷ್ಟಗಿ ತಾಲೂಕಿನ ಮಾದಾಪುರ ಗ್ರಾಮದಲ್ಲಿ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿರವರ ತುಲಾಭಾರ ನಡೆಯಿತು.

ಮೂಡನಂಬಿಕೆಗಳಿಂದ ದೂರ ಉಳಿದು ವೈಜ್ಞಾನಿಕ-ವೈಚಾರಿಕ ಧರ್ಮವನ್ನು ಅರಿಯುವುದು ಇಂದಿನ ಸಮಾಜಕ್ಕೆ ಅತ್ಯಗತ್ಯ. ಉಳಿಕೆ, ಬಳಕೆ ಮತ್ತು ಗಳಿಕೆಯ ಸಂಬಂಧವು ಹಣಕಾಸಿನ ಮೂಲಭೂತ ತತ್ವಗಳಾಗಿದ್ದು, ಇವುಗಳ ಸಮತೋಲನವೇ ಆರ್ಥಿಕ ಸ್ಥಿರತೆಗೆ ಕಾರಣವಾಗುತ್ತದೆ.ನೀಡುವವನು ಶ್ರೀಮಂತನಲ್ಲ ಬೇಡದೇ ಇರುವವನು ಶ್ರೀಮಂತ. ಸರಳ ಸಹಜ ಜೀವನ ಸುಂದರವಾಗಿರುತ್ತದೆ. ಶಿಕ್ಷಣ ಸಬಲೀಕರಣದ ಸಾಧನವಾಗಿದ್ದು, ದೈಹಿಕ-ಮಾನಸಿಕ-ಆಧ್ಯಾತ್ಮಿಕ ಬೆಳವಣಿಗೆಗೆ ಅಗತ್ಯ. ಶಿಕ್ಷಣವು ಅಜ್ಞಾನವನ್ನು ನಿರ್ಮೂಲನೆ ಮಾಡಿ ಸಮಾಜದ ಸಮಸ್ಯೆಗಳನ್ನು ಪರಿಹರಿಸುತ್ತದೆ. ಶಿಕ್ಷಣವು ಜಗತ್ತನ್ನು ಬದಲಾಯಿಸುವ ಶಕ್ತಿಶಾಲಿ ಅಸ್ತ್ರವೆಂದು ಹೇಳಿದರು.

ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳಿಗೆ ತುಲಭಾರ ಸೇವೆಗೈದರು. ಈ ಸಂದರ್ಭದಲ್ಲಿ ಕೊಳ್ಳಪ್ಪ ಹನುಮಪ್ಪ ಗೌಂಡಿ, ಚಿದಾನಂದಪ್ಪ ನಿಂಬಪ್ಪ, ರಾಜಪ್ಪ ಮಹಾದೇವಪ್ಪ, ಯಲ್ಲಪ್ಪ ತಿಮ್ಮಪ್ಪ, ಶರಣಗೌಡ ಪಾಟೀಲ, ನಾಗನಗೌ ಡ ಪಾಟೀಲ್, ನಾಗನಗೌಡ ಹುನಕುಂಟಿ, ರಾಮಣ್ಣ ಬೋದುರು ಮಹಾಂತೇಶ ನಾಡಗೌಡ, ಸಿದ್ದಲಿಂಗೇಶ್ವರ ವಕೀಲರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಬಡವರ ಉದ್ಯೋಗದ ಹಕ್ಕು ಕಸಿದ ಕೇಂದ್ರ ಸರಕಾರ

ಚಳ್ಳಕೆರೆ: ಕೇಂದ್ರ ಸರಕಾರವು ಬಡವರ ಮೇಲೆ ನಿರಂತರವಾಗಿ ದಾಳಿ ಮಾಡುತ್ತಿದೆ. ಬಡವರ ಶಾಸನಬದ್ಧ ಉದ್ಯೋಗದ ಹಕ್ಕನ್ನು ಕಸಿದುಕೊಳ್ಳುತ್ತಿದೆ ಎಂದು ಸ್ಥಳೀಯ ಶಾಸಕ ಟಿ.ರಘುಮೂರ್ತಿ ಹೇಳಿದರು.

ಕಾಂಗ್ರೆಸ್ ಪಕ್ಷದಿಂದ ಆಯೋಜಿಸಿದ್ದ ಜನಜಾಗೃತಿ ಪಾದಯಾತ್ರೆ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿಯನ್ನು ಯಥಾವತ್ತಾಗಿ ಮುಂದುವರೆಸಬೇಕು ಎಂದು ಒತ್ತಾಯಿಸಿ, ದೊಡ್ಡೆರಿ ಗ್ರಾಮದಿಂದ ವಯಾ ನಗರಂಗೆರೆ ಮುಖಾಂತರ ಚಳ್ಳಕೆರೆ ನಗರದ ಅಂಬೇಡ್ಕರ್ ವೃತ್ತದವರೆಗೆ ಆಯೋಜಿಸಿದ್ದ ಪಾದಯಾತ್ರೆಯಲ್ಲಿ ಮಾತನಾಡಿದರು.

ನರೇಗಾ ಯೋಜನೆಯು ಲಕ್ಷಾಂತರ ಕುಟುಂಬಗಳಿಗೆ ಉದ್ಯೋಗದ ಹಕ್ಕನ್ನು ನೀಡಿದೆ.

ವಿಬಿ-ಜಿ ರಾಮ್ ಜಿ ಯೋಜನೆಯು ನರೇಗಾದ ಮೂಲ ಚೈತನ್ಯವನ್ನು ದುರ್ಬಲಗೊಳಿಸುತ್ತದೆ. ಕೇಂದ್ರ ಸರಕಾರದ ಕ್ರಮಗಳು ಬಡವರ ಮೇಲೆ ದಾಳಿಯನ್ನು ಸೂಚಿಸುತ್ತದೆ. ಬಡವರನ್ನು ಬೆಂಬಲಿಸುವ ವ್ಯವಸ್ಥೆಗಳನ್ನು ಕ್ರಮೇಣವಾಗಿ ತೆಗೆದು ಹಾಕಲಾಗುತ್ತಿದೆ.

ದೊಡ್ಡೆರಿ ಗ್ರಾಮದಿಂದ ವಯಾ ನಗರಂಗೆರೆ ಮುಖಾಂತರ ಚಳ್ಳಕೆರೆ ನಗರದ ಅಂಬೇಡ್ಕರ್ ವೃತ್ತದವರೆಗೆ ಪಾದಯಾತ್ರೆ ನಡೆಸಲಾಯಿತು.

ವಿಬಿ-ಜಿ ರಾಮ್ ಜಿ ಯೋಜನೆಯನ್ನು ತೆಗೆದು ಹಾಕಿ, ನರೇಗಾವನ್ನು ಮರುಜಾರಿಗೊಳಿಸುವಂತೆ ಆಗ್ರಹಿಸಿ ಕಾಂಗ್ರೆಸ್ ದೇಶದಾದ್ಯಂತ 'ನರೇಗಾ ರಕ್ಷಿಸಿ ಸಂಗ್ರಾಮ ಯಾತ್ರೆ' ಪ್ರತಿಭಟನೆ ಹಮ್ಮಿಕೊಂಡಿದೆ ಎಂದರು.

ಇದೇ ಸಂಧರ್ಭದಲ್ಲಿ ಜಿಲ್ಲಾ ಅಧ್ಯಕ್ಷ ತಾಜ್ ಪೀರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೀರ ಭದ್ರಪ್ಪ, ಪರುಶುರಾಂಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಶಿಧರ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಶಿವಣ್ಣ, ತಾಲೂಕು ಅಧ್ಯಕ್ಷ ಗದ್ದಿಗೆ ತಿಪ್ಪೇಸ್ವಾಮಿ, ರಮೇಶ್ ಗೌಡ, ಆರ್. ಪ್ರಸನ್ನ ಕುಮಾರ್, ವಿರೂಪಾಕ್ಷ, ಮಲ್ಲಿಕಾರ್ಜುನ, ಬಂಗ್ಲೇ ಶ್ರೀನಿವಾಸ್, ಟಿ.ವಿಜಯ್ ಕುಮಾರ್, ನಾಗರಾಜ್, ತಿಪ್ಪೇಸ್ವಾಮಿ, ಮಹಿಳೆಯರು, ಪಕ್ಷದ ಕಾರ್ಯಕರ್ತರು, ಸಾರ್ವಜನಿಕರು ಇತರರು ಪಾಲ್ಗೊಂಡಿದ್ದರು.

ಮೂಲಸೌಲಭ್ಯ, ಅಭಿವೃದ್ಧಿಗೆ ಒತ್ತು ನೀಡಿ

ಚನ್ನಗಿರಿ: ಹೊಸ ಆಯವ್ಯ ಯದಲ್ಲಿ ಪುರಸಭೆ ವ್ಯಾಪ್ತಿಯ ಮೂಲ ಸೌಲ ಭ್ಯ ಹಾಗೂ ಅಭಿವೃದ್ಧಿ ಕೆಲಸಕ್ಕೆ ಹೆಚ್ಚಿನ ಹಣ ಮೀಸಲಿಡುವಂತೆ ಸಾರ್ವಜನಿಕರು ಆಗ್ರಹಿಸಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಪುರಸಭೆ ಮುಖ್ಯಧಿಕಾರಿ ಮಂಜುನಾಥ್ ಜೆ. ವಿ. ಯವರ ಅಧ್ಯಕ್ಷತೆಯಲ್ಲಿ ಆಯೋಜಿಸಿದ್ದ 2025-26 ನೇ ಸಾಲಿನ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರ ಸಲಹೆ ಸ್ವೀಕರಿಸಲಾಯಿತು. ಪಟ್ಟಣದ ವ್ಯಾಪ್ತಿಯಲ್ಲಿ ಯಾವುದೇ ಉದ್ಯಾನವನ ಇಲ್ಲದ ಕಾರಣ ಉದ್ಯಾನವನದ ನಿರ್ಮಾಣ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ, ರಸ್ತೆ ಮತ್ತು ಚರಂಡಿಗಳ ನಿರ್ಮಾಣಕ್ಕೆ ಪುರಸಭೆ ಆಯವ್ಯಯವನ್ನು ತಯಾರಿಸಿದ್ದು, ಸಾರ್ವಜನಿಕರು ಸಹ ಸಲಹೆಗಳನ್ನು ನೀಡಿದರು.

ಈ ವೇಳೆ ಪುರಸಭೆ ಮಾಜಿ ಸದಸ್ಯ ಪಟ್ಲಿ ನಾಗರಾಜ್ ಮಾತನಾಡಿ, ಆದಷ್ಟು ಬೇಗ ಖಾಸಗಿ ಬಸ್ ನಿಲ್ದಾಣದ ಕಾಮಗಾರಿ ಪ್ರಾರಂಭಿಸಬೇಕು ಎಂದು ಹೇಳಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಪುರಸಭೆ ಮುಖ್ಯಧಿಕಾರಿ ಮಂಜುನಾಥ್ ಜೆ. ವಿ. ಯವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಪ್ರತಿನಿತ್ಯ ರಸ್ತೆ ಬದಿಗಳಲ್ಲಿ ತಿಂಡಿ ಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ಮಾಡುವುದರಿಂದ ಸಾರ್ವಜನಿಕರು ಸಂಚರಿಸಲು ತೊಂದರೆಯಾಗುತ್ತಿದೆ. ಕೆಲವು ಬಾರಿ ಇದರಿಂದ ಅಪಘಾತಗಳು ಸಹ ಆಗಿವೆ. ಆದ್ದರಿಂದ ಪುರಸಭೆಯವರು ತಿಂಡಿ ಗಾಡಿಗಳನ್ನು ರಸ್ತೆ ಬದಿಯಿಂದ ತೆರವುಗೊಳಿಸಿ, ಅವರಿಗೆ ವ್ಯಾಪಾರ ಮಾಡಲು ಬೇರೆ ಕಡೆ ಒಂದು ಸ್ಥಳವನ್ನು ನಿಗದಿ ಮಾಡಬೇಕು ಮತ್ತು ಪಟ್ಟಣದಲ್ಲಿರುವ ಜೆ.ಸಿ. ರಸ್ತೆ ಮತ್ತು ಕನ್ನಿಕಾ ಪರಮೇಶ್ವರಿ ದೇವಸ್ಥಾನದ ರಸ್ತೆಯಲ್ಲಿ ಹೆಚ್ಚಾಗಿ ವ್ಯಾಪಾರ ಮಳಿಗೆಗಳಿದ್ದು, ವಾಹನಗಳ ಓಡಾಟಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಮುಕ್ತಿ ವಾಹಿನಿಗಳು ಸಾರ್ವಜನಿಕರಿಗೂ ಸಹ ಉಪಯೋಗಬೇಕು ಎಂದು ಸಾರ್ವಜನಿಕರು ಆಗ್ರಹಿಸಿದರು.

ಆಡಳಿತಧಿಕಾರಿ ಎಚ್.ಬಿ. ಚನ್ನಪ್ಪ ಮಾತನಾಡಿ, ಉಪಸ್ಥಿತರ ಸಲಹೆಗಳನ್ನು ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಸೇರಿಸುವ ಭರವಸೆ ನೀಡಿದರು.

ಈ ವೇಳೆ ಪುರಸಭೆ ಅಧಿಕಾರಿಗಳು ಹಾಗೂ ಸಾರ್ವಜನಿಕರು ಹಾಜರಿದ್ದರು.

ಬಿಜೆಪಿ ಮಂಡಲ ಅಧ್ಯಕ್ಷ ಮರುಳಾರಾಧ್ಯರಿಂದ ಅನ್ಯಾಯ

ಜಗಳೂರು: ಸರಕಾರದ ಸೌಲತ್ತುಗಳ ಆಮಿಷವೊಡ್ಡಿ ಯುವಕರಿಗೆ ಅನ್ಯಾಯ ಮಾಡುತ್ತಿರುವ ಬಿಜೆಪಿ ಮಂಡಲ ಅಧ್ಯಕ್ಷ ಮರುಳಾರಾಧ್ಯ, ಸಂಘ ಪರಿವಾರದಲ್ಲಿ ಪ್ರಮುಖ ಜವಾಬ್ದಾರಿ ನೀಡಿದರೆ ಮತ್ತಷ್ಟು ಯುವಕರನ್ನು ದಾರಿತಪ್ಪಿಸಬಹುದು ಎಲ್ಲರು ಎಚ್ಚರಿಕೆ ವಹಿಸಬೇಕು ಎಂದು ಬಿ.ವಿ. ನಾಗರಾಜ್ ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನನಗೂ ಸೇರಿದಂತೆ ತಾಲೂಕಿನ ಯುವಕ ಮತ್ತು ವಿದ್ಯಾರ್ಥಿಗಳಿಗೆ ಸರಕಾರಿ ಸೌಲಭ್ಯಗಳು ಕೊಡಿಸುವ ಭರವಸೆಗಳೊಂದಿಗೆ ಸುಳ್ಳು ಹೇಳಿ ಅನೇಕರಿಗೆ ಅನ್ಯಾಯ ಮಾಡಿದ್ದಾರೆ. ಈ ಬಗ್ಗೆ ಧ್ವನಿ ಎತ್ತಲೂ ಹಿಂಜರಿಯುತ್ತಿದ್ದಾರೆ. ಅಂತಹ ವ್ಯಕ್ತಿಗೆ ಸಂಘ ಪರಿವಾರದವರು ಫೆ.5 ರಂದು ಆಯೋಜಿಸಿರುವ ಹಿಂದೂ ಸಂಗಮ ಎಂಬ ಕಾರ್ಯಕ್ರಮಕ್ಕೆ ಮರು ಳಾರಾಧ್ಯನನ್ನು ಕಾರ್ಯಕ್ರಮಕ್ಕೆ ಮುಂದಾಳತ್ವ ನೀಡಿರುವುದು ತಾಲೂಕಿಗೆ ಕಪ್ಪು ಚುಕ್ಕೆ ತರಲಿದೆ ಎಂದು ದೂರಿದರು.

ಸಂಘ ಪರಿವಾರದ ಪ್ರಮುಖರು ಇಂತಹ ವ್ಯಕ್ತಿಗೆ ಹಿಂದೂ ಸಂಗಮ ಜವಾಬ್ದಾರಿ ನೀಡದೆ ತಾಲೂಕಿನಲ್ಲಿ ಸಾಕಷ್ಟು ಯುವಕರು ಮತ್ತು ಹಿರಿಯರು ಸಂಘ ಪರಿವಾರದಲ್ಲಿ ಕೆಲಸ ಮಾಡಿದವರು ಇದ್ದಾರೆ. ಅಂತಹವರಿಗೆ ಜವಾಬ್ದಾರಿ ನೀಡಿದರೆ ಬಹುಶಃ ತಾಲೂಕು ಮತ್ತಷ್ಟು ಸಂಘ ಪರಿವಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸುವುದರಲ್ಲಿ ಯಾವುದೇ ಅನುಮಾನವಿಲ್ಲ ಎನಿಸುತ್ತದೆ. ಆದರೆ ಮರುಳಾರಾಧ್ಯರಂತಹ ವ್ಯಕ್ತಿಗೆ ಜವಾಬ್ದಾರಿ ನೀಡಿದರೆ ಅವರ ಕೈ ಬಾಯಿ ಎರಡು ಸಹ ಶುದ್ದವಿಲ್ಲ ಎಂಬುದು ಇಡೀ ತಾಲೂಕಿನ ಜನತೆಗೆ ಗೊತ್ತಿರುವ ವಿಚಾರ. ಆದರೆ ಸಂಘ ಪರಿವಾರಕ್ಕೆ ತಿಳಿದಿದೆಯೊ ಇಲ್ಲವೊ ಗೊತ್ತಿಲ್ಲ. ಆದರೆ ಈಗಲಾದರೂ ಫೆ.5ರಂದು ನಡೆಯುವ ಕಾರ್ಯಕ್ರಮಕ್ಕೆ ಬೇರೆಯವರನ್ನು ಉಸ್ತುವಾರಿ ನೇಮಿಸುವುದು ಉತ್ತಮ ಎಂಬುದು ನನ್ನ ಅಭಿಪ್ರಾಯ ಆಗಿದೆ ಎಂದು ತಿಳಿಸಿದರು.

ಹುಣ್ಣಿಮೆ: ದೇಗುಲಗಳಲ್ಲಿ ವಿಶೇಷ ಪೂಜೆ

ನ್ಯಾಮತಿ: ಪಟ್ಟಣದ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ದೇಗುಲದಲ್ಲಿ ಭಾರತ ಹುಣ್ಣಿಮೆಯ ಅಂಗವಾಗಿ ವಿಶೇಷ ಧಾರ್ಮಿಕ ಪೂಜಾ ಕೈಂಕರ್ಯ ಆಚರಣೆ ನಡೆಸಲಾಯಿತು.

12 ಹುಣ್ಣಿಮೆಗಳಲ್ಲಿ ಶ್ರೇಷ್ಠ, ದೊಡ್ಡದೆಂದು ನಂಬಲಾಗಿರುವ ಭಾರತ ಹುಣ್ಣಿಮೆ ಕುಲದೇವತೆಗಳ ಪೂಜಾ ದಿನವಾಗಿ ದೇಗುಲಗಳಲ್ಲಿ , ಮನೆಗಳಲ್ಲಿ ವಿಶೇಷವಾಗಿ ಹುರುಳಿಕಾಳುಗಳನ್ನು ಬೇಯಿಸಿ ಬೆಲ್ಲದ ಹಾಲನ್ನು ಮಾಡಿ ಹುರುಳಿಯೊಂದಿಗೆ ದೇವರುಗಳಿಗೆ ಪೂಜಿಸಿ ನೈವೇದ್ಯದೊಂದಿಗೆ ಆಚರಣೆ ಮಾಡಲಾಗುತ್ತದೆ.

ಪಟ್ಟಣದ ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ ದೇಗುಲದಲ್ಲಿ ಭಾರತ ಹುಣ್ಣಿಮೆಯ ಅಂಗವಾಗಿ ಶ್ರೀ ವಿಘ್ನೇಶ್ವರ , ಶ್ರೀಮೈಲಾರ ಸ್ವಾಮಿ ಮತ್ತು ಶ್ರೀ ಮೈಲಾರ ಸ್ವಾಮಿಯ ಪರಿವಾರ ದೇವರುಗಳು ಶಿಲಾ ಮೂರ್ತಿಗೆ ಪಂಚಾಮೃತ ಅಭಿಷೇಕ, ಬಿಲ್ವಾರ್ಚನೆ ಸೇರಿದಂತೆ ವಿಶೇಷ ಧಾರ್ಮಿಕ ಪೂಜಾ ಕೈಂಕರ್ಯ ಆಚರಣೆ ನಡೆಸಲಾಯಿತು.

ಹೊಸದುರ್ಗದಲ್ಲಿ ಮಡಿವಾಳ ಮಾಚಿದೇವ ಜಯಂತ್ಯುತ್ಸವ

ಹೊಸದುರ್ಗ: ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪುರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಚಿತ್ರದುರ್ಗ ಹಾಗೂ ತಾಲೂಕು ಶ್ರೀ ವೀರ ಮಡಿವಾಳ ಮಾಚಿದೇವ ಸಂಘ(ರಿ) ಸಹಯೋಗದೊಂದಿಗೆ ಭಾನುವಾರ 12ನೇ ಶತಮಾನದ ಶರಣರ ವಚನ ಸಂರಕ್ಷಕ ಶ್ರೀ ಮಡಿವಾಳ ಮಾಚಿದೇವ ಜಯಂತ್ಯುತ್ಸವ ಮೆರವಣಿಗೆ ಪಟ್ಟಣದಲ್ಲಿ ಅದ್ದೂರಿಯಾಗಿ ನಡೆಯಿತು.

ಬೆಳಗ್ಗೆ10 ಗಂಟೆಗೆ ಪಟ್ಟಣದ ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದಿಂದ ಕಲಾ ತಂಡಗಳೊಂದಿಗೆ ಶರಣ ಶ್ರೀ ವೀರ ಮಡಿವಾಳ ಮಾಚಿದೇವರ ಭಾವಚಿತ್ರ ಹಾಗೂ ಜಗದ್ಗುರು ಶ್ರೀ ಬಸವಮಾಚಿದೇವ ಸ್ವಾಮೀಜಿ ಅವರ ಭವ್ಯ ಮೆರವಣಿಗೆಗೆ ಸಮಾಜ ಸೇವಕ ಗೋಪಿಕೃಷ್ಣ ಚಾಲನೆ ನೀಡಿದರು. ಪಟ್ಟಣದ ಪ್ರಮುಖ ರಸ್ತೆಯ ಮೂಲಕ ಮಧ್ಯಾಹ್ನ 1 ಗಂಟೆಯ ಸಮಯಕ್ಕೆ ಕಾರ್ಯಕ್ರಮದ ಮುಖ್ಯವೇದಿಕೆಯತ್ತ ಮೆರವಣಿಗೆ ಸಾಗಿ ಬಂದಿತು.

ಮೆರವಣಿಗೆಯಲ್ಲಿ ವೀರಗಾಸೆ, ಡೊಳ್ಳು ಕುಣಿತ ಮತ್ತು ವಿವಿಧ ಕಲಾ ತಂಡಗಳು ಮೇಳೈಸಿದವು. ಮಾಚಿದೇವರು, ಇನ್ನಿತರ ಮಹನೀಯರ ಬಾವುಟಗಳು ಮೆರವಣಿಯುದ್ದಕ್ಕೂ ರಾರಾಜಿಸಿದವು. ಪೂರ್ಣಕುಂಭಹೊತ್ತ ಮಹಿಳೆಯರು, ಯುವತಿಯರು ಮೆರವಣಿಗೆಯಲ್ಲಿ ಹೆಜ್ಜೆ ಹಾಕುವ ಮೂಲಕ ಮೆರಗು ನೀಡಿದರು. ಕಲಾತಂಡಗಳ ವಾದ್ಯದ ಸದ್ದಿಗೆ ಯುವಕರು ಹೆಜ್ಜೆ ಹಾಕುತ್ತಾ ಸಂಭ್ರಮಿಸಿದರು.



12ನೇ ಶತಮಾನದ ಶರಣರ ವಚನ ಸಂರಕ್ಷಕ ಶ್ರೀ ಮಡಿವಾಳ ಮಾಚಿದೇವ ಜಯಂತ್ಯುತ್ಸವ ಮೆರವಣಿಗೆ ಪಟ್ಟಣದಲ್ಲಿ ಅದ್ದೂರಿಯಾಗಿ ನಡೆಯಿತು

ತಾಲೂಕು ಗೌರವಾಧ್ಯಕ್ಷ ಬಿ.ಆರ್.ರಾಮಕೃಷ್ಣ, ತಾಲೂಕು ಮಡಿವಾಳ ಸಮಾಜದ ಅಧ್ಯಕ್ಷ ಲೋಕೇಶ್ವರಪ್ಪ, ಸಂಘದ ಬಿ.ಎಲ್. ಗಂಗಾಧರ್, ಕಾರ್ಯದರ್ಶಿ ಬಿ. ಎಂ.ರಮೇಶ್, ಮಾಜಿ ಕಾರ್ಯದರ್ಶಿ ಎಂ. ಕೆ.ತಿಪ್ಪೇಸ್ವಾಮಿ, ಸಮಾಜದ ಹಿರಿಯ ಮುಖಂಡರುಗಳಾದ ರಂಗನಾಥ್ ಮತ್ತು ಮಲ್ಲೇಶಪ್ಪ ಸೇರಿದಂತೆ ತಾಲೂಕಿನ ಸಮಸ್ತ ಮಡಿವಾಳ ಬಂಧುಗಳು ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

ವಿಕಸಿತ ಭಾರತದ ಆರ್ಥಿಕ ದಿಕ್ಸೂಚಿ

ದಾವಣಗೆರೆ: ಭಾರತವು ಸ್ವಾತಂತ್ರ್ಯದ ಶತಮಾನೋತ್ಸವದ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕೆಂಬ 'ವಿಕಸಿತ ಭಾರತ'ದ ಮಹತ್ವಾಕಾಂಕ್ಷೆಗೆ ಇಂದಿನ ಬಜೆಟ್ ಭದ್ರವಾದ ಅಡಿಪಾಯ ಹಾಕಿದೆ ಎಂದು ಮಹಾನಗರ ಪಾಲಿಕೆ ಮಾಜಿ ಸದಸ್ಯ ಶಿವನಗೌಡ ಟಿ. ಪಾಟೀಲ್ ಅಭಿಪ್ರಾಯ ಪಟ್ಟಿದ್ದಾರೆ.

ಬಜೆಟ್ ಕುರಿತು ಪ್ರಕಟಣೆ ಹೊರಡಿಸಲು ಅವರು, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸತತ ಒಂಬತ್ತನೇ ಬಾರಿಗೆ ಬಜೆಟ್ ಮಂಡಿಸುವ ಮೂಲಕ ಐತಿಹಾಸಿಕ ಮೈಲಿಗಲ್ಲು ಸ್ಥಾಪಿಸುವುದರ ಜೊತೆಗೆ, ದೇಶದ ಆರ್ಥಿಕತೆಯನ್ನು ಎತ್ತರಕ್ಕೆ ಕೊಂಡೊಯ್ಯುವ ಬದ್ಧತೆಯನ್ನು ಪ್ರದರ್ಶಿಸಿದ್ದಾರೆ ಎಂದರು.

ಈ ಬಜೆಟ್ ಕೇವಲ ಸರಕಾರದ ವಾರ್ಷಿಕ ಲೆಕ್ಕಾಚಾರವಾಗದೆ, ಆಧುನಿಕ ತಂತ್ರಜ್ಞಾನ, ಸುಧಾರಿತ ಮೂಲಸೌಕರ್ಯ ಮತ್ತು ಜನಸಾಮಾನ್ಯರ ಹಿತಾಸಕ್ತಿಯನ್ನು ವಹಿಸಿದೆ ಅಷ್ಟೇ ಅಲ್ಲದೆ, ಅರವತ್ತು ವರ್ಷಗಳ ಹಳೆಯ ಆದಾಯ ತೆರಿಗೆ ಕಾಯ್ದೆಯನ್ನು ಬದಲಿಸಿ ಸರಳೀಕೃತ 'ಹೊಸ ಆದಾಯ ತೆರಿಗೆ ಕಾಯ್ದೆ 2025' ಅನ್ನು ಪರಿಚಯಿಸಿರುವುದು ಆಡಳಿತಾತ್ಮಕ ಸುಧಾರಣೆಯ ದಿಟ್ಟ ನಡೆಯಾಗಿದೆ.

ಇದು ತೆರಿಗೆ ದಾರರಿಗೆ ಕಿರಿ ಕಿರಿ ತಪ್ಪಿಸುವುದಲ್ಲದೆ, ಪಾರದರ್ಶಕ ವ್ಯವಸ್ಥೆಯನ್ನು ಕಲ್ಪಿಸುತ್ತದೆ. ವೈದ್ಯಕೀಯ ಸೀಟುಗಳ ಹೆಚ್ಚಳ ಮತ್ತು ನಗರಾಭಿವೃದ್ಧಿ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಒತ್ತು ನೀಡಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ವಿಕಸಿತ ಭಾರತದ ಫಲ ದೊರೆಯುವಂತೆ ಮಾಡುವಲ್ಲಿ ಸಚಿವರ ಕಾಳಜಿಯನ್ನು ಎತ್ತಿ ತೋರಿಸುತ್ತದೆ.

ಒಟ್ಟಾರೆಯಾಗಿ, ನಿರ್ಮಲಾ ಸೀತಾರಾಮನ್ ಅವರ ಇಂದಿನ ಬಜೆಟ್ ದೇಶದ ಆರ್ಥಿಕತೆಗೆ ಮುನ್ನುಡಿ ಬರೆದಿದೆ ಎಂದು ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಖೇಲೋ ಇಂಡಿಯಾ ಮಿಷನ್ ಘೋಷಣೆ

ದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಮಂಡಿಸಿದ ಬಜೆಟ್‌ನಲ್ಲಿ ಕ್ರೀಡಾ ಸಾಮಗ್ರಿಗಳಲ್ಲಿ ಉತ್ಪಾದನೆ, ಸಂಶೋಧನೆ ಮತ್ತು ನಾವೀನ್ಯತೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿರುವ ಮೀಸಲಾದ ಉಪಕ್ರಮವನ್ನು ಘೋಷಿಸಿದ್ದಾರೆ. ಈ ಕ್ರಮವು ಸುಧಾರಿತ ಸಲಕರಣೆಗಳ ವಿನ್ಯಾಸ ಮತ್ತು ವಸ್ತು ವಿಜ್ಞಾನಗಳನ್ನು ಬೆಂಬಲಿಸುವ ಮೂಲಕ ಭಾರತದ ಕ್ರೀಡಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ನಿರೀಕ್ಷೆಯಿದೆ. ಮುಂದಿನ ದಶಕದಲ್ಲಿ ಖೇಲೋ ಇಂಡಿಯಾ ಮಿಷನ್ ಅನ್ನು ಪ್ರಾರಂಭಿಸುವ ಪ್ರಸ್ತಾಪವನ್ನೂ ಅವರು ಮಂಡಿಸಿದರು. ಅಸ್ತಿತ್ವದಲ್ಲಿರುವ ಕಾರ್ಯಕ್ರಮವನ್ನು ಖೇಲೋ ಇಂಡಿಯಾ ಮಿಷನ್‌ಗೆ ಅಪ್‌ಗ್ರೇಡ್ ಮಾಡುವ ಮೂಲಕ ಭಾರತದ ಕ್ರೀಡಾ ಕಾರ್ಯತಂತ್ರದ ಗಮನಾರ್ಹ ವಿಕಸನವನ್ನು ಅವರು ಘೋಷಿಸಿದ್ದಾರೆ.

ಕೊಹ್ಲಿಯ ದಾಖಲೆ ಮುರಿದ ಬಾಬರ್

ಲಾಹೋರ್: ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ನಡುವಿನ ಮೂರು ಪಂದ್ಯಗಳ ಟಿ20 ಸರಣಿಯ ಅಂತಿಮ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 207 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ಕೇವಲ 96 ರನ್‌ಗಳಿಗೆ ಆಲೌಟ್ ಆಯಿತು. ಪಾಕ್ ತಂಡದ ಈ ಗೆಲುವಿನಲ್ಲಿ ಸ್ಟಾರ್ ಬ್ಯಾಟ್ಸ್‌ಮನ್ ಬಾಬರ್ ಆಝಂ ಬಾರಿಸಿದ ಅರ್ಧಶತಕ ಪ್ರಮುಖ ಪಾತ್ರವಹಿಸಿತು. ಕಳಪೆ ಫಾರ್ಮ್‌ನಿಂದ ಬಳಲುತ್ತಿದ್ದ ಬಾಬರ್ ಈ ಪಂದ್ಯದಲ್ಲಿ ಅರ್ಧಶತಕ ಬಾರಿಸುವಲ್ಲಿ ಯಶಸ್ವಿಯಾದರು. ಈ ಇನ್ನಿಂಗ್ಸ್‌ನೊಂದಿಗೆ ಬಾಬರ್, ಇಷ್ಟು ದಿನ ವಿರಾಟ್ ಕೊಹ್ಲಿ ಹೆಸರಿನಲ್ಲಿದ್ದ ವಿಶ್ವ ದಾಖಲೆಯನ್ನು ಮುರಿದಿದ್ದಾರೆ. ಇದು ಬಾಬರ್ ಅವರ ಟಿ20 ವೃತ್ತಿಜೀವನದ 39ನೇ ಅರ್ಧಶತಕವಾಗಿದ್ದು, ಈ ಅರ್ಧಶತಕದ ಮೂಲಕ ವಿರಾಟ್ ಕೊಹ್ಲಿಯನ್ನು ಹಿಂದಿಕ್ಕಿದ್ದಾರೆ. ಬಾಬರ್ ಈಗ ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಅರ್ಧಶತಕಗಳನ್ನು ಬಾರಿಸಿದ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಈ ಪಂದ್ಯಕ್ಕೂ ಮುನ್ನ ಬಾಬರ್, ವಿರಾಟ್ ಕೊಹ್ಲಿ ಅವರೊಂದಿಗೆ ಜಂಟಿಯಾಗಿ ಮೊದಲ ಸ್ಥಾನದಲ್ಲಿದ್ದರು.

ರೋಚಕ ಪಂದ್ಯದಲ್ಲಿ ಪಂಜಾಬ್ ವಿರುದ್ಧ ಗೆಲುವು | ಟಿ20ಯಂತೆ ಬ್ಯಾಟಿಂಗ್ ಮಾಡಿ ಗೆಲ್ಲಿಸಿದ ಪಡಿಕ್ಕಲ್

ರಣಜಿ: ಕರ್ನಾಟಕ ಕ್ವಾ.ಫೈನಲ್‌ಗೆ

ಚಂಡೀಗಢ: ರಣಜಿ ಟ್ರೋಫಿಯ 7ನೇ ಸುತ್ತಿನ ಪಂದ್ಯದಲ್ಲಿ ಕರ್ನಾಟಕ ತಂಡ ಭಾನುವಾರ ಅಸಾಧಾರಣ ಪ್ರದರ್ಶನ ತೋರಿ ಪಂಜಾಬ್ ವಿರುದ್ಧ ರೋಚಕ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಕೊನೆಯ ದಿನವಾದ ಭಾನುವಾರ ಪಂಜಾಬ್ ತಂಡವನ್ನು 256 ರನ್‌ಗೆ ಕಟ್ಟಿ, 250 ರನ್‌ಗಳ ಗುರಿ ಪಡೆದಿತ್ತು. ಕೇವಲ 40 ಓವರ್‌ಗಳ ಆಟ ಮಾತ್ರ ಬಾಕಿ ಉಳಿದಿದ್ದರಿಂದ ಕರ್ನಾಟಕ ಗೆಲುವು ಅಸಾಧ್ಯವೆಂದೇ ಎಲ್ಲರೂ ತಿಳಿದಿದ್ದರು. ಆದರೆ ಕೆಚ್ಚೆದೆಯ ಬ್ಯಾಟಿಂಗ್ ಪ್ರದರ್ಶನ ತೋರಿದ ಕನ್ನಡಿಗ ಹುಲಿಗಳು, ಪಂಜಾಬ್ ಬೌಲಿಂಗ್ ಪಡೆಯನ್ನು ಧೂಳೀಪಟ ಮಾಡಿ ಕೇವಲ 28 ಓವರ್‌ಗಳಲ್ಲಿ ಪಂದ್ಯವನ್ನು ಮುಗಿಸಿತು. ದೇವದತ್ ಪಡಿಕ್ಕಲ್ ಟಿ20 ಮಾದರಿಯಲ್ಲಿ ಬ್ಯಾಟಿಂಗ್ ಮಾಡಿ ಪಂದ್ಯವನ್ನು ಗೆಲ್ಲಿಸಿದರು.

ಮೊಹಾಲಿಯ ಐಎಸ್ ಬಿಂದ್ರಾ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ 3ನೇ ದಿನ ಪಂಜಾಬ್ ತಂಡ ದ್ವಿತೀಯ ಇನ್ನಿಂಗ್ಸ್‌ನಲ್ಲಿ 3 ವಿಕೆಟ್‌ಗೆ 119ಗೆ ದಿನದಾಟ ಅಂತ್ಯಗೊಳಿಸಿತ್ತು. 4ನೇ ದಿನ ಬ್ಯಾಟಿಂಗ್ ಆರಂಭಿಸಿದ ಪಂಜಾಬ್ ತಂಡವನ್ನು 256ಕ್ಕೆ ಆಲೌಟ್ ಮಾಡುವಲ್ಲಿ ಕರ್ನಾಟಕ ಬೌಲರ್‌ಗಳು ಸಫಲರಾದರು. 250 ರನ್‌ಗಳ ಗುರಿಯನ್ನು ಕೇವಲ 2 ಗಂಟೆಯೊಳಗೆ ಚೇಸ್ ಮಾಡಿ ಗೆಲ್ಲಬೇಕಿತ್ತು.

ನಿಯಮಗಳ ಪ್ರಕಾರ 40 ಓವರ್ ಉಳಿದಿತ್ತಾದರೂ, ಸರಾಸರಿ 30ರಿಂದ 32 ಓವರ್‌ಗಳ ಸುಲಭವಾಗಿ ನಡೆಯಬಹುದಿತ್ತು. ಪಂಜಾಬ್ ಆಟಗಾರರು ಸಮಯ ವ್ಯರ್ಥಮಾಡಿದರೂ, ಕರ್ನಾಟಕ ತಂಡ ಕೇವಲ 28 ಓವರ್‌ಗಳಲ್ಲೇ ಪಂದ್ಯವನ್ನು ಮುಗಿಸಿತು.

ರಾಹುಲ್ ಮತ್ತೆ ವಿಫಲ: ಕ್ವಾರ್ಟರ್ ಫೈನಲ್ ಪ್ರವೇಶಿಸಲು ಗೆಲ್ಲಲೇಬೇಕಾದ ಪಂದ್ಯದಲ್ಲಿ ಅನುಭವಿ ಆಟಗಾರ ಕೆಎಲ್ ರಾಹುಲ್ ತಂಡಕ್ಕೆ ನೆರವಾಗಬಲ್ಲರು ಎಂದು ನಿರೀಕ್ಷಿಸಲಾಗಿತ್ತು. ಆದರೆ ಕೇವಲ 12 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. 2ನೇ ವಿಕೆಟ್‌ಗೆ ಜತೆಗೂಡಿದ ಮಾಯಾಂಕ್-ಪಡಿಕ್ಕಲ್ ಜೋಡಿ ಕೇವಲ 75 ಎಸೆತಗಳಲ್ಲಿ 113 ರನ್‌ಗಳ ಜತೆಯಾಟ ಪರದರ್ಶಿಸಿತು. ಟಿ20 ಶೈಲಿಯಲ್ಲಿ ಬ್ಯಾಟ್ ಮಾಡಿದ ಮಾಯಾಂಕ್ ಅಗರ್ವಾಲ್ ಕೇವಲ 35 ಎಸೆತಗಳಲ್ಲಿ 6 ಬೌಂಡರಿ, 1 ಸಿಕ್ಸರ್ ಸಹಿತ 53 ರನ್ ಗಳಿಸಿದರು. ಅವರಿಬ್ಬರ ಜತೆಯಾಟ ಪಂದ್ಯದ ದಿಕ್ಕನ್ನೇ

ಬದಲಿಸಿತು. ಅಗರ್ವಾಲ್ ವಿಕೆಟ್ ಬಿದ್ದ ಮೇಲೆ ಕರ್ನಾಟಕ ಸತತ 2 ವಿಕೆಟ್ ಕಳೆದುಕೊಂಡಿತು. ಅನೀಶ್ ಕೆವಿ 1 ಹಾಗೂ ಸ್ಮರಣ್ ರವಿಚಂದ್ರನ್ 1 ರನ್ ಗಳಿಸಿ ಔಟ್ ಆದರು. ಆದರೆ ಪಡಿಕ್ಕಲ್ ಅದ್ಭುತವಾಗಿ ಆಡಿ ಗೆಲುವು ತಂದುಕೊಟ್ಟರು.

ಶತಕ ಸಿಡಿಸಿದ ಪಡಿಕ್ಕಲ್: ನಾಯಕ ದೇವದತ್ ಪಡಿಕ್ಕಲ್ ಪಂಜಾಬ್ ಬೌಲರ್‌ಗಳ ಮೇಲೆ ಸವಾರಿ ಮಾಡಿದರು. ಕೇವಲ 74 ಎಸೆತಗಳಲ್ಲಿ ಶತಕ ಸಿಡಿಸಿದ ಪಡಿಕ್ಕಲ್, ಒಟ್ಟಾರೆ 85 ಎಸೆತಗಳಲ್ಲಿ ಅಜೇಯ 120 ರನ್ ಸಿಡಿಸಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 6 ಬೌಂಡರಿ ಹಾಗೂ 5 ಭರ್ಜರಿ ಸಿಕ್ಸರ್ ಗಳಿದ್ದವು. ಶ್ರೇಯಸ್ ಗೋಪಾಲ್ ಜೊತೆಗೆ ನಿರ್ಣಾಯಕ 5ನೇ ವಿಕೆಟ್‌ಗೆ ನಿರ್ಣಾಯಕ 67 ರನ್ ಸೇರಿಸಿದರು. 6ನೇ ವಿಕೆಟ್ ಜತೆಯಾಟದಲ್ಲೂ ವಿದ್ಯಾದರ್ ಪಾಟೀಲ್ ಜೊತೆಗೆ ಕೇವಲ 28 ಎಸೆತಗಳಲ್ಲಿ ಅಜೇಯ 51 ರನ್ ಸೇರಿಸಿ ಪಂದ್ಯವನ್ನು ಗೆಲುವಿನ ಗಡಿ ದಾಟಿಸಿದರು. ಪಾಟೀಲ್ 10 ಎಸೆತಗಳಲ್ಲಿ ಅಜೇಯ 14 ರನ್ ಗಳಿಸಿದರು.

ಶ್ರೇಯಸ್ ಭರ್ಜರಿ ಆಟ: ಕರ್ನಾಟಕದ ಈ ಗೆಲುವಿನಲ್ಲಿ ಶ್ರೇಯಸ್ ಗೋಪಾಲ್ ಅವರ ಪಾತ್ರ ಅತ್ಯಂತ ಮಹತ್ವದ್ದಾಗಿತ್ತು. ಮೊದಲ ಇನ್ನಿಂಗ್ಸ್‌ನಲ್ಲಿ ತಂಡ ಸಂಕಷ್ಟದಲ್ಲಿದ್ದಾಗ 77 ರನ್ ಬಾರಿಸಿ ಮುನ್ನಡೆ ತಂದುಕೊಡಲು ನೆರವಾಗಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಪಂಜಾಬ್ ತಂಡವನ್ನು 256 ರನ್‌ಗಳಿಗೆ ಕಟ್ಟಿಹಾಕಲು ಪ್ರಮುಖ 3 ವಿಕೆಟ್ ಪಡೆದು ಮಿಂಚಿದ್ದರು. ಚೇಸಿಂಗ್ ವೇಳೆ ನಾಯಕ ಪಡಿಕ್ಕಲ್ ಜತೆಗೂಡಿ 5ನೇ ವಿಕೆಟ್ ಜೊತೆಯಾಟದಲ್ಲಿ 43 ಎಸೆತಗಳಲ್ಲಿ 67 ರನ್ ಸೇರಿಸಿದರು. ಶ್ರೇಯಸ್ ಗೋಪಾಲ್ ಕೇವಲ 22 ಎಸೆತಗಳಲ್ಲಿ 3 ಬೌಂಡರಿ, 1 ಸಿಕ್ಸರ್ ಸಹಿತ 33 ರನ್ ಸಿಡಿಸಿ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಪಂದ್ಯದಲ್ಲಿ 110 ರನ್, 6 ವಿಕೆಟ್ ಪಡೆದು ಗೆಲುವಿನಲ್ಲಿ ನಿರ್ಣಾಯಕ ಪಾತ್ರವಹಿಸಿದರು.

ಕ್ವಾರ್ಟರ್ ಫೈನಲ್‌ಗೆ ಲಗ್ಗೆ: ಈ ಅಮೋಘ ಜಯದೊಂದಿಗೆ ಕರ್ನಾಟಕ ತಂಡವು ಒಟ್ಟು 27 ಅಂಕಗಳೊಂದಿಗೆ ಇಲೈಟ್ ಗ್ರೂಪ್ ಬಿ ಯಲ್ಲಿ 2ನೇ ಸ್ಥಾನ ಪಡೆದುಕೊಂಡು ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಮುಂದಿನ ವಾರ ನಡೆಯಲಿರುವ ಹೈ-ವೋಲ್ಟೇಜ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕವು ಬಲಿಷ್ಠ ಮುಂಬೈ ತಂಡವನ್ನು ಎದುರಿಸಲಿದೆ. ಬಿ ಗುಂಪಿನಲ್ಲಿದ್ದ ಮಧ್ಯ ಪ್ರದೇಶ ತಂಡ 28 ಅಂಕ ಪಡೆದು ಅಗ್ರಸ್ಥಾನದೊಂದಿಗೆ ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

ಭಾರತ ವಿರುದ್ಧ ಆಡಲು ಪಾಕ್ ನಕಾರ

ಇಸ್ಲಾಮಾಬಾದ್: ಟಿ20 ವಿಶ್ವಕಪ್ ಟೂರ್ನಿ ವಿಚಾರವಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ ಹೊಸ ತಲೆನೋವು ಆರಂಭವಾಗಿದ್ದು, ಭಾರತ ತಂಡದ ವಿರುದ್ಧ ಆಡುವುದಿಲ್ಲ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ ಭಾನುವಾರ ಹೇಳಿದೆ.

ಇಷ್ಟು ದಿನ ಬಾಂಗ್ಲಾದೇಶ ಹಾಗೂ ಭಾರತದ ನಡುವಿನ ವಿವಾದವನ್ನು ಬಗೆಹರಿಸಲು ಹರಸಾಹಸ ಪಟ್ಟಿದ್ದ ಐಸಿಸಿಗೆ ಮತ್ತೊಂದು ಸವಾಲು ಎದುರಾಗಿದೆ.

ಕೆಲವು ದಿನಗಳ ಹಿಂದೆ ಈ ಬಗ್ಗೆ ಹೇಳಿಕೆ ನೀಡಿದ್ದ ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಖ್ವಿ ನಮ್ಮ ತಂಡ ಟಿ20 ವಿಶ್ವಕಪ್‌ನಲ್ಲಿ ಭಾಗವಹಿಸುವುದು ಸರಕಾರದ ನಿರ್ಧಾರದ ಮೇಲೆ ನಿಂತಿದೆ ಎಂದಿದ್ದರು. ಆ ಬಳಿಕ ಸರಕಾರದೊಂದಿಗೆ ಚರ್ಚೆ ನಡೆಸಿ ತಂಡವನ್ನು ಪ್ರಕಟಿಸಿದ್ದರು. ಆದರೆ ಭಾರತದ ವಿರುದ್ಧದ ಪಂದ್ಯವನ್ನು ಆಡುವುದರ ಬಗ್ಗೆ ಮಾತ್ರ ಏನನ್ನು ಹೇಳಿರಲಿಲ್ಲ. ಆದರೀಗ ಪಾಕಿಸ್ತಾನ ಕ್ರಿಕೆಟ್ ತಂಡವು ಶ್ರೀಲಂಕಾಕ್ಕೆ ಪ್ರಯಾಣಿಸಲು ಪಾಕಿಸ್ತಾನ ಸರಕಾರದಿಂದ ಅನುಮತಿ ಪಡೆದಿದ್ದು, ಅಲ್ಲಿ ತನ್ನ ಎಲ್ಲಾ ಗ್ರೂಪ್-ಎ ಪಂದ್ಯಗಳನ್ನು ಆಡಲಿದೆ.

ರಾಜಕೀಯ ಕಾರಣಗಳಿಂದಾಗಿ ಪಾಕಿಸ್ತಾನ ಭಾರತದಲ್ಲಿ ಆಡಲು ನಿರಾಕರಿಸಿದ್ದರಿಂದ, ಐಸಿಸಿ ಪಾಕ್ ತಂಡದ ಪಂದ್ಯಗಳನ್ನು ತಟಸ್ಥ ಸ್ಥಳಗಳಿಗೆ ಸ್ಥಳಾಂತರಿಸಿತ್ತು. ಅದರಂತೆ ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯವನ್ನು ಕೊಲಂಬೊದಲ್ಲಿ ನಡೆಸಲು ನಿರ್ಧರಿಸಲಾಗಿತ್ತು. ಆದರೀಗ, ಪಾಕಿಸ್ತಾನ ಸರಕಾರ ಭಾರತದ ವಿರುದ್ಧದ ಪಂದ್ಯವನ್ನು ಬಹಿಷ್ಕರಿಸಲು ನಿರ್ಧರಿಸಿದೆ.

ವಿಶ್ವಕಪ್ ಗೆಲ್ಲುವಾಸೆ:ಕಿಶನ್

ತಿರುವನಂತಪುರಂ: ನ್ಯೂಜಿಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20ಐ ಸರಣಿಯ ಮೂಲಕ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಯಶಸ್ವಿಯಾಗಿ ಕಮ್‌ಬ್ಯಾಕ್ ಮಾಡಿದರ ಹೊರತಾಗಿಯೂ ಭಾರತ ತಂಡದ ವಿಕೆಟ್ ಕೀಪರ್ ಇಶಾನ್ ಕಿಶನ್, ಟಿ20 ವಿಶ್ವಕಪ್‌ನಲ್ಲಿ ಭಾರತ ತಂಡಕ್ಕೆ ಪ್ರಶಸ್ತಿಯನ್ನು ಗೆದ್ದುಕೊಡುವುದು ಮಾತ್ರ ನನಗೆ ತೃಪ್ತಿ ತಂದುಕೊಡಲಿದೆ ಎಂದಿದ್ದಾರೆ. ಇಲ್ಲಿನ ಗ್ರೀನ್‌ಫೀಲ್ಡ್ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶನಿವಾರ ನಡೆದಿದ್ದ ಐದನೇ ಟಿ20 ಪಂದ್ಯದಲ್ಲಿ ಇಶಾನ್ ಕಿಶನ್ 103 ರನ್‌ಗಳ ಮೂಲಕ ಶತಕವನ್ನು ಬಾರಿಸಿದ್ದರು. ಆ ಮೂಲಕ ಭಾರತ ತಂಡವನ್ನು ಗೆಲ್ಲಿಸಿ ಪಂದ್ಯ ಶ್ರೇಷ್ಠ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದರು.

ಭಾರತ ತಂಡದ ಗೆಲುವಿನಲ್ಲಿ ಮಹತ್ತರ ಪಾತ್ರವನ್ನು ವಹಿಸಿ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾಗಿದ್ದರು. ಪಂದ್ಯದ ಬಳಿಕ ಮಾತನಾಡಿದ ಇಶಾನ್ ಕಿಶನ್, ಹಲವು ಅಂಶಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

'ನಿಸ್ಸಂಶಯವಾಗಿ ಇದರಿಂದ ತೃಪ್ತಿ ಸಿಕ್ಕಿದೆ, ಆದರೆ ಇನ್ನೂ ಸಂಪೂರ್ಣವಾಗಿ ಸಿಕ್ಕಿಲ್ಲ. ನಾನು ಚೆನ್ನಾಗಿ ಆಡಿದ್ದೇನೆ ಹಾಗೂ ಪಂದ್ಯ ಶ್ರೇಷ್ಠ ಪ್ರಶಸ್ತಿ ಗೆದ್ದಿದ್ದೇನೆ, ಆದರೆ ನನ್ನ ಮುಖ್ಯ ಗುರಿ ವಿಶ್ವಕಪ್ ಟೂರ್ನಿ. ಇದಕ್ಕೆ ಹೆಚ್ಚುವರಿ ಪ್ರಯತ್ನದ ಅಗತ್ಯವಿದೆ. ಇದರಲ್ಲಿ ಮುಖ್ಯ ಸಂಗತಿ ಏನೆಂದರೆ, ಇದೇ ಲಯವನ್ನು ಮುಂದುವರಿಸುವುದಾಗಿದೆ' ಎಂದು ಹೇಳಿದ್ದಾರೆ.

ಶತಕದ ಸನಿಹ ನಿಧಾನಗತಿಯಲ್ಲಿ ಬ್ಯಾಟ್ ಮಾಡಲು ಪ್ರಯತ್ನಿಸದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ವೈಯಕ್ತಿಕ ದಾಖಲೆಗಿಂತ ತಂಡದ ಅಗತ್ಯತೆ ತುಂಬಾ ಮುಖ್ಯ. ಹಾಗಾಗಿ ಚೆಂಡು ಸ್ಲಾಟ್‌ನಲ್ಲಿದ್ದರೆ ಅದನ್ನು ಬೌಂಡರಿ ಅಥವಾ ಸಿಕ್ಸರ್‌ಗೆ ಹೊಡೆಯಲು ಪ್ರಯತ್ನಿಸುತ್ತೇನೆ' ಎಂದಿದ್ದಾರೆ.

ಆಸ್ಟ್ರೇಲಿಯನ್ ಓಪನ್: ನೊವಾಕ್ ಜೊಕೊವಿಕ್‌ಗೆ ಸೋಲು

ಕಾರ್ಲೋಸ್‌ಗೆ ಆಸ್ಟ್ರೇಲಿಯನ್ ಕಿರೀಟ

ಮೆಲ್ಬೋರ್ನ್: ಇಲ್ಲಿನ ಮೆಲ್ಬೋರ್ನ್ ಪಾರ್ಕ್‌ನಲ್ಲಿ ಭಾನುವಾರ ನಡೆದ ಆಸ್ಟ್ರೇಲಿಯನ್ ಓಪನ್ ಪುರುಷರ ಸಿಂಗಲ್ಸ್ ಟೆನ್ನಿಸ್ ಫೈನಲ್‌ನಲ್ಲಿ ಕಾರ್ಲೋಸ್ ಆಲ್ಕರಾಜ್ ಅವರು, ಟೆನಿಸ್ ದಂತಕಥೆ ನೊವಾಕ್ ಜೊಕೊವಿಕ್ ಅವರನ್ನು 2-6, 6-2, 6-3, 7-5 ಸೆಟ್‌ಗಳಿಂದ ಸೋಲಿಸಿದ್ದಾರೆ. ಆ ಮೂಲಕ ತಮ್ಮ ಮೊದಲ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಈ ಗೆಲುವಿನೊಂದಿಗೆ 22ನೇ ವಯಸ್ಸಿನ ಕಾರ್ಲೋಸ್ ಆಲ್ಕರಾಜ್ ಗ್ರ್ಯಾಂಡ್‌ಸ್ಲ್ಯಾಮ್ ಗೆದ್ದ ವಿಶ್ವದ ಅತ್ಯಂತ ಕಿರಿಯ ಆಟಗಾರ ಎಂಬ ದಾಖಲೆಯನ್ನು ಅವರು ಬರೆದಿದ್ದಾರೆ.

ಭಾನುವಾರ ಆಲ್ಕರಾಜ್ ಈಗ ಎಲ್ಲಾ ನಾಲ್ಕು ಗ್ರ್ಯಾಂಡ್ ಸ್ಲ್ಯಾಮ್ (ವಿಂಬಲ್ಡನ್, ಫ್ರೆಂಚ್ ಓಪನ್, ಯುಎಸ್ ಓಪನ್ ಮತ್ತು ಈಗ ಆಸ್ಟ್ರೇಲಿಯನ್ ಓಪನ್) ಗೆದ್ದ ವಿಶ್ವದ ಒಂಬತ್ತನೇ ಪುರುಷ ಆಟಗಾರ ಎನಿಸಿಕೊಂಡಿದ್ದಾರೆ. ಅವರು ಈಗ ವಿಂಬಲ್ಡನ್, ಫ್ರೆಂಚ್ ಓಪನ್ ಮತ್ತು ಯುಎಸ್ ಓಪನ್‌ನಲ್ಲಿ ತಲಾ ಎರಡು ಪ್ರಶಸ್ತಿಗಳು ಸೇರಿದಂತೆ ಒಟ್ಟು ಏಳು ಪ್ರಮುಖ ಪ್ರಶಸ್ತಿಗಳನ್ನು ಹೊಂದಿದ್ದಾರೆ. ಈ ಗೆಲುವು ಅಧಿಕೃತವಾಗಿ ಟೆನಿಸ್ ಜಗತ್ತಿನಲ್ಲಿ ಹೊಸ ಯುಗಕ್ಕೆ ನಾಂದಿ ಹಾಡಿದ್ದಾರೆ.

ಪಂದ್ಯದ ಆರಂಭದಲ್ಲಿ 38 ವರ್ಷದ ಜೊಕೊವಿಕ್ ತಮ್ಮ ಅನುಭವವನ್ನು ಪ್ರದರ್ಶಿಸಿದರು. ಮೊದಲ ಸೆಟ್ ಅನ್ನು ಸುಲಭವಾಗಿ 6-2 ಅಂತರದಿಂದ ಗೆದ್ದರು. ಅವರ ಸರ್ವ್ ಎಷ್ಟು ನಿಖರವಾಗಿತ್ತೆಂದರೆ, ಆಲ್ಕರಾಜ್ ರಿಟರ್ನ್‌ನಲ್ಲಿ ಕೇವಲ ಎರಡು ಅಂಕಗಳನ್ನು ಮಾತ್ರ ಪಡೆದರು. ಆದಾಗ್ಯೂ, ಎರಡನೇ ಸೆಟ್‌ನಿಂದ ತಮ್ಮ ವಿಧಾನವನ್ನು ಬದಲಾಯಿಸಿದರು. ಮಾಂತ್ರಿಕ ಡ್ರಾಪ್ ಶಾಟ್‌ಗಳು ಮತ್ತು ತೀಕ್ಷ್ಣವಾದ ಚಲನೆಯಿಂದ, ಅವರು ಜೊಕೊವಿಕ್‌ರನ್ನು ಬೇಸ್‌ಲೈನ್‌ನಲ್ಲಿ ದಣಿಸಿ ಮುಂದಿನ ಸೆಟ್ ಅನ್ನು 6-2 ಅಂತರದಿಂದ ಗೆಲ್ಲುವ ಮೂಲಕ ಪಂದ್ಯದಲ್ಲಿ ಮುನ್ನಡೆ ಸಾಧಿಸಿದರು.

ಕೊನೆಯಲ್ಲಿ 2-6, 6-2, 6-3, 6-4 ಅಂತರದಿಂದ ಪ್ರಶಸ್ತಿಯನ್ನು ತಮ್ಮದನ್ನಾಗಿಸಿದರು.

ಸೂಪರ್-6ರ ಪಂದ್ಯದಲ್ಲಿ ಪಾಕಿಸ್ತಾನಕ್ಕೆ ಸೋಲು

ಭಾರತದ ಕಿರಿಯರ ತಂಡ ಸೆ.ಫೈನಲ್‌ಗೆ

ಬುಲವಾಯೊ: ಪ್ರಸ್ತುತ ನಡೆಯುತ್ತಿರುವ ಅಂಡರ್-19 ವಿಶ್ವಕಪ್ ಟೂರ್ನಿಯಲ್ಲಿ ಆಯುಷ್ ಮ್ಹಾತ್ರೆ ನಾಯಕತ್ವದ ಭಾರತ ಕಿರಿಯರ ತಂಡ ಸೆಮಿಫೈನಲ್ಸ್‌ಗೆ ಅರ್ಹತೆ ಪಡೆದಿದೆ. ಭಾನುವಾರ ಇಲ್ಲಿನ ಕ್ವೀನ್ಸ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆದಿದ್ದ ಸೂಪರ್-6ರ ಎರಡನೇ ಗುಂಪಿನ ಪಂದ್ಯದಲ್ಲಿ ಕಾನಿಷ್ಕ್ ಚೌಹಾಣ್ ಅವರ ಆಲ್‌ರೌಂಡರ್ ಆಟದ ಬಲದಿಂದ ಭಾರತ ತಂಡ, ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ತಂಡವನ್ನು 58 ರನ್‌ಗಳಿಂದ ಮಣಿಸಿತು. ಆ ಮೂಲಕ ಅಂತಿಮ ನಾಲ್ಕರ ಘಟ್ಟಕ್ಕೆ ಅಧಿಕೃತವಾಗಿ ಪ್ರವೇಶ ಮಾಡಿತು. ಫೆಬ್ರವರಿ 4 ರಂದು ಹರಾರೆ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆಯುವ ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಅಫ್ಘಾನಿಸ್ತಾನ ವಿರುದ್ಧ ಭಾರತ ತಂಡ ಕಾದಾಟ ನಡೆಸಲಿದೆ.

ಭಾರತ ನೀಡಿದ್ದ 253 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಪಾಕಿಸ್ತಾನ ತಂಡ, ಖಿಲನ್ ಪಟೇಲ್ ಹಾಗೂ ಆಯುಷ್ ಮ್ಹಾತ್ರೆ ಸ್ಪಿನ್ ಮೋಡಿಗೆ ನಲುಗಿದ ಪಾಕಿಸ್ತಾನ ತಂಡ 46.2 ಓವರ್‌ಗಳಿಗೆ 194 ರನ್‌ಗಳಿಗೆ ಆಲ್ ಔಟ್ ಆಯಿತು. ಆ ಮೂಲಕ ದೊಡ್ಡ ಅಂತರದಲ್ಲಿ ಸೋಲುವ ಮೂಲಕ ಅಂಡರ್-19 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ರೇಸ್‌ನಿಂದ ಅಧಿಕೃತವಾಗಿ ಹೊರ ನಡೆಯಿತು. ಪಾಕಿಸ್ತಾನ ತಂಡದ ಪರ ಉಸ್ಮಾನ್ ಖಾನ್ 66 ರನ್ ಗಳಿಸಿ ವೈಯಕ್ತಿಕ ಗರಿಷ್ಠ ಸ್ಕೋರರ್ ಎನಿಸಿಕೊಂಡರು.ಗುರಿ ಹಿಂಬಾಲಿಸಿದ ಪಾಕಿಸ್ತಾನ ತಂಡ, ಉತ್ತಮ ಆರಂಭವನ್ನೇ ಪಡೆಯಿತು. ಆ ಮೂಲಕ ಸುಲಭ ಗೆಲುವು ಸಾಧಿಸುತ್ತದೆ ಎಂದು ಭಾವಿಸಲಾಗುತ್ತದೆ. ಪಾಕಿಸ್ತಾನದ ಕೊನೆಯ ಏಳು ವಿಕೆಟ್‌ಗಳು ಕೇವಲ 43 ರನ್‌ಗಳಿಗೆ ಪತನಗೊಂಡವು. ಭಾರತ ಪರ ಖಿಲನ್ ಪಟೇಲ್ ಮತ್ತು ಆಯುಷ್ ಮ್ಹಾತ್ರೆ ತಲಾ ಮೂರು ವಿಕೆಟ್ ಪಡೆದರು. ಆರ್‌ಎಸ್ ಅಂಬ್ರೀಶ್, ಹೆನಿಲ್ ಪಟೇಲ್, ಕನಿಷ್ಕ್ ಚೌಹಾಣ್ ಮತ್ತು ವಿಹಾನ್ ಮಲ್ಹೋತ್ರಾ ತಲಾ ಒಂದು ವಿಕೆಟ್ ಪಡೆದರು.

252 ರನ್ ಕಲೆ ಹಾಕಿದ್ದ ಭಾರತ: ಟಾಸ್ ಸೋತು ಮೊದಲು ಬ್ಯಾಟ್ ಮಾಡುವಂತಾದ ಭಾರತ ತಂಡ, 49.5 ಓವರ್‌ಗಳಲ್ಲಿ 252 ರನ್‌ಗಳಿಗೆ ಆಲೌಟ್ ಆಯಿತು. ವೇದಾಂತ್ ತ್ರಿವೇದಿ 68 ರನ್‌ಗಳಿಸಿ ಭಾರತದ ಪರ ವೈಯಕ್ತಿಕ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಕನಿಷ್ಕ್ ಚೌಹಾಣ್ 35 ರನ್ ಗಳಿಸಿದರೆ, ವೈಭವ್ ಸೂರ್ಯವಂಶಿ 30 ರನ್ ಗಳಿಸಿದರು. ಪಾಕಿಸ್ತಾನ ಪರ ಅಬ್ದುಲ್ ಸುಭಾನ್ ಮೂರು ವಿಕೆಟ್ ಪಡೆದರೆ, ಮೊಹಮ್ಮದ್ ಸಯ್ಯಮ್ ಎರಡು ವಿಕೆಟ್ ಪಡೆದರು. ಅಲಿ ರಜಾ, ಅಹ್ಮದ್ ಹುಸೇನ್, ಮೋಮಿನ್ ಕಮರ್ ಮತ್ತು ಅಲಿ ಹಸನ್ ಬಲೂಚ್ ಕೂಡ ತಲಾ ಒಂದು ವಿಕೆಟ್ ಪಡೆದರು.

ವಿಟಾಕೀಸ್

ರಕ್ಕಸಪುರ ಮೆಚ್ಚಿದ ಕಿಚ್ಚ

ಸಾಹಸ ನಿರ್ದೇಶಕ ಕೆ. ರವಿವರ್ಮ ಚೊಚ್ಚಲ ಬಾರಿಗೆ ನಿರ್ಮಾಣ ಮಾಡಿರುವ 'ರಕ್ಕಸ ಪುರ ದೊಳ್' ಚಿತ್ರ ಇದೇ ವಾರ ತೆರೆಗೆ ಬರಲಿದೆ. ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದ್ದು, ಕಿಚ್ಚ ಸುದೀಪ್ ಟ್ರೇಲರ್ ಬಿಡುಗಡೆ ಮಾಡಿ ಶುಭ ಕೋರಿದರು. ನಟ ರಾಜ್.ಬಿ.ಶೆಟ್ಟಿ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಈ ಚಿತ್ರವನ್ನು ರವಿ ಸಾರಂಗ ನಿರ್ದೇಶನ ಮಾಡಿದ್ದಾರೆ.

ರಕ್ಕಸಪುರದೊಳ್ ಚಿತ್ರದ ಟ್ರೇಲರ್ ಅದ್ಭುತವಾಗಿ ಮೂಡಿಬಂದಿದೆ. ರವಿವರ್ಮ ಅವರ ಕೆಲಸವನ್ನು ನೋಡಿ ಮೆಚ್ಚಿದ್ದೇನೆ. ಅವರ ನಿರ್ಮಾಣದ ಚೊಚ್ಚಲ ಚಿತ್ರಕ್ಕೆ ಒಳಿತಾಗಲಿ ಸುದೀಪ್ ಹಾರೈಸಿದರು.

ಈ ಸಿನಿಮಾವನ್ನು ಒಪ್ಪಿಕೊಳ್ಳಲು ನಿರ್ದೇಶಕರೇ ಕಾರಣ. ನಿರ್ದೇಶಕರು ಕಥೆ ಹೇಳಿದ ರೀತಿ ಇಷ್ಟವಾಯಿತು. ಎಲ್ಲರ ಶ್ರಮದಿಂದ ಸಿನಿಮಾ ಉತ್ತಮವಾಗಿ ಮೂಡಿಬಂದಿದೆ. ತಾಂತ್ರಿಕವಾಗಿಯೂ ಸಿನಿಮಾ ಶ್ರೀಮಂತವಾಗಿದೆ. ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ನನ್ನ ಪಾತ್ರ ವಿಭಿನ್ನವಾಗಿದೆ ಎಂದು ರಾಜ್ ಶೆಟ್ಟಿ ಹೇಳಿದರು.

ರಕ್ಕಸಪುರದೊಳ್ ಸಿನಿಮಾ ಕಥೆ ಹುಟ್ಟಿಕೊಂಡಿದ್ದೇ ರೋಚಕ. ರುಸ್ತುಂ ಸಿನಿಮಾ ಮಾಡುವಾಗ ನಿರ್ದೇಶಕ ರವಿ ಸಿನಿಮಾದ ಕಥೆ ಹೇಳಿದ್ದರು, ಅದನ್ನು ಕೇಳಿ ಥ್ರಿಲ್ ಆದೆ. ಅಂದುಕೊಂಡಂತೆ ಚಿತ್ರ ಮೂಡಿಬಂದಿದೆ. ಚಿತ್ರಕ್ಕಾಗಿ ಪ್ರತಿಯೊಬ್ಬರ ಸಹಕಾರ ದೊಡ್ಡದಿದೆ. ಎಲ್ಲರೂ ಪ್ರೀತಿಯಿಂದ ಸಿನಿಮಾ ಮಾಡಿದ್ದಾರೆ. ಕನ್ನಡ ಮತ್ತು ಮಲೆಯಾಳಂ ಸಿನಿಮಾದಲ್ಲಿ ಮಾಡಿದ್ದೇವೆ. ಚಿತ್ರದ ಪ್ರತಿಕ್ರಿಯೆ ನೋಡಿ ಬೇರೆ ಬೇರೆ ಭಾಷೆಯಲ್ಲಿ ಡಬ್ ಮಾಡುವ ಉದ್ದೇಶವಿದೆ ಎಂದು ನಿರ್ಮಾಪಕ ರವಿವರ್ಮ ಸಂತಸದಿಂದ ನುಡಿದರು.

ಇದು ಸೈಕಾಲಜಿಕಲ್, ಥ್ರಿಲರ್ ಸಿನಿಮಾ. ನಟ ರಾಜ್.ಬಿ.ಶೆಟ್ಟಿ ಪೊಲೀಸ್ ಇನ್ಸ್ ಪೆಕ್ಟರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ ಎಂದು ನಿರ್ದೇಶಕ ರವಿಸಾರಂಗ ಹೇಳಿದರು. ಸ್ವಾಧಿಷ್ಟಾ ಕೃಷ್ಣ ನಾಯಕಿಯಾಗಿ ಬಣ್ಣಹಚ್ಚಿದ್ದು, ಅರ್ಚನಾ ಕೊಟ್ಟಿಗೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಚಿತ್ರ : ಅಮೃತ ಅಂಜನ್
ನಿರ್ದೇಶನ : ಜ್ಯೋತಿರಾವ್ ಮೋಹಿತ್
ನಿರ್ಮಾಣ: ಲಾಸ್ಯಾ ವಿಜಯ್ ಎಂಟರ್ಟೇನರ್ಸ
ತಾರಾಗಣ: ಸುಧಾರ್ಕ ಗೌಡ, ಪಾಯಲ್ ಚೆಂಗಪ್ಪ, ಗೌರವ್ ಶೆಟ್ಟಿ, ಭವ್ಯಾ ಮುಂತಾದವರು
ರೇಟಿಂಗ್ : 3

ಪ್ರೇಮ ಕಥೆಗೆ ಕಾಮಿಡಿ ಸ್ಪರ್ಶ

ಹಿಂದೆ 'ಅಮೃತಾಂಜನ್' ಶೀರ್ಷಿಕೆಯಲ್ಲಿ ಕಿರುಚಿತ್ರ ಮೂಡಿಬಂದಿತ್ತು. ಈಗ 'ಅಮೃತ ಅಂಜನ್' ಪ್ರೇಮ್ ಕಹಾನಿ, ಕಾಮಿಡಿಯ ಜತೆಗೆ ತೆರೆಯಲ್ಲಿ ಸಾಗುತ್ತಿದೆ. ಜೀವನದಲ್ಲಿ ಪ್ರೀತಿ ಮಾಡಿದರೂ ತಪ್ಪು, ಮಾಡದಿದ್ದರೂ ತಪ್ಪು. ಹುಡುಗಾಟದಲ್ಲಿ ಹುಟ್ಟುವ ಪ್ರೀತಿ, ಆ ಮೇಲೆ ಎದಿರಾಗುವ ಸವಾಲುಗಳು, ಪೀಕಲಾಟ ಹೀಗೆ ಎಲ್ಲದರಿಂದ ನಾಯಕ ಹೇಗೆ ಜರ್ಜರಿತನಾಗುತ್ತಾನೆ ಎಂಬುದನ್ನು ನೈಜತೆಗೆ ಹತ್ತಿರವಾಗಿ ಕಟ್ಟಿಕೊಡಲಾಗಿದೆ. ಅದರ ಜತೆಗೆ ಯುವ ಸಮೂಹ ತಂದೆ, ತಾಯಿ ಮಾತು ಕೇಳದೆ ತಮ್ಮಿಷ್ಟಕ್ಕೆ ಬಂದಂತೆ ನಡೆದುಕೊಂಡರೆ ಜೀವನದಲ್ಲಿ ಎಂತಹ ವಿಪತ್ತು ಎದಿರಾಗುತ್ತವೆ ಎಂಬು ದನ್ನು ನೈಜತೆಗೆ ಹತ್ತಿರವಾಗುವಂತೆ ಹೇಳಲಾಗಿದೆ. 'ಅಮೃತ ಅಂಜನ್' ಕಾಮಿಡಿ ಕಥೆಯ ಸಿನಿಮಾವಾಗಿದ್ದರೂ ಅಲ್ಲೊಂದು ಸೂಕ್ಷ್ಮ ಸಂದೇಶವೂ ಅಡಕವಾಗಿದೆ. ಅದೇನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ಜ್ಯೋತಿರಾವ್ ಮೋಹಿತ್ ಇಂದಿನ ಯುವ ಸಮೂಹಕ್ಕೆ ಹಿಡಿಸುವ ಕಥೆಯನ್ನು ಹೆಣೆದು ಅದಕ್ಕೆ ಮನರಂಜನೆ ಬೆರೆಸಿ ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಸುಧಾಕರ್ ಗೌಡ, ಪಾಯಲ್ ಚೆಂಗಪ್ಪ, ಗೌರವ್ ಶೆಟ್ಟಿ, ಭವ್ಯಾ, ಪಲ್ಲವಿ ಪರ್ವ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಚಿತ್ರದುದ್ದಕ್ಕೂ ರಂಜಿಸುತ್ತಾರೆ. ಚಿತ್ರದ ಹಾಡುಗಳಿಗೆ ಇನ್ನೂ ಒಂದಷ್ಟು ಒತ್ತುಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎನಿಸುತ್ತದೆ. ಉಳಿದಂತೆ ಛಾಯಾಗ್ರಹಣ, ಹಿನ್ನೆಲೆ ಸಂಗೀತಕ್ಕೆ ಫುಲ್ ಮಾರ್ಕ್ಸ್ ನೀಡಬಹುದು. 'ಅಮೃತ ಅಂಜನ್' ಯುವ ಸಮೂಹಕ್ಕೆ ಹೇಳಿ ಮಾಡಿಸಿದ ಸಿನಿಮಾವಾಗಿದೆ.

ವಾರಿಯರ್ಸ್‌ಗೆ ರೋಚಕ 3 ವಿಕೆಟ್‌ಗಳ ಜಯ

ಗೋವಾ: ಶೆಲ್ಡನ್ ಜಾಕ್ಸನ್ ಅರ್ಧಶತಕ ಹಾಗೂ ಇರ್ಫಾನ್ ಪಠಾಣ್ ಅವರ ಬಲಿಷ್ಠ ಬ್ಯಾಟಿಂಗ್ ಬಲದಿಂದ ಡೆಲ್ಲಿ ವಾರಿಯರ್ಸ್ ತಂಡವು ಮಹಾ ರಾಷ್ಟ್ರ ಟೈಕೂನ್ಸ್ ಎದುರು 3 ವಿಕೆಟ್‌ಗಳ ರೋಚಕ ಗೆಲುವು ಪಡೆಯಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಮಹಾರಾಷ್ಟ್ರ ಟೈಕೂನ್ಸ್ ತನ್ನ ಪಾಲಿನ 20 ಓವರ್‌ಗಳಿಗೆ 5 ವಿಕೆಟ್ ನಷ್ಟಕ್ಕೆ 161 ರನ್‌ಗಳನ್ನು ಕಲೆಹಾಕಿತು. ಓಪನರ್‌ಗಳಾದ ಸರ್ ಆಲ್‌ಸ್ಟೇರ್ ಕುಕ್ ಮತ್ತು ಕ್ರಿಸ್ ಗೇಲ್ ಆತ್ಮವಿಶ್ವಾಸದಿಂದ ಇನ್ನಿಂಗ್ಸ್ ಆರಂಭಿಸಿದರು. ಕುಕ್ ಎರಡು ಆರಂಭಿಕ ಬೌಂಡರಿಗಳನ್ನು ಬಾರಿಸಿ 11 ಎಸೆತಗಳಲ್ಲಿ 10 ರನ್‌ಗಳಿಗೆ ಔಟ್ ಆದರು.

ಬಳಿಕ ಗೇಲ್ ಮತ್ತು ಸ್ಟುವರ್ಟ್ ಬಿನ್ನಿ ಮಧ್ಯ ಓವರ್‌ಗಳಲ್ಲಿ ಇನಿಂಗ್ಸ್ ಅನ್ನು ಸಮರ್ಥವಾಗಿ ಸ್ಥಿರಗೊಳಿಸಿದರು. ಗೇಲ್ 40 ಎಸೆತಗಳಲ್ಲಿ 40 ರನ್‌ಗಳ ಸಮತೋಲನದ ಆಟವಾಡಿ ಔಟ್ ಆದರು. ಮತ್ತೊಂದೆಡೆ ಬಿನ್ನಿ 31 ಎಸೆತಗಳಲ್ಲಿ ಆಕರ್ಷಕ 63 ರನ್‌ಗಳನ್ನು ಗಳಿಸಿ ತಂಡಕ್ಕೆ ಭದ್ರ ಮೊತ್ತವನ್ನು ಒದಗಿಸಿದರು.

161 ರನ್‌ಗಳನ್ನು ರಕ್ಷಿಸಲು ಇಳಿದ ಟೈಕೂನ್ಸ್, ಪರಿಸ್ಥಿತಿಗಳನ್ನು ಸದುಪಯೋಗಪಡಿಸಿಕೊಂಡು ಕಟ್ಟುನಿಟ್ಟಾದ ಬೌಲಿಂಗ್ ಪ್ರದರ್ಶನ ನೀಡಿದರು. ಅವಾನ್ ಖಾನ್, ಪೀಟರ್ ಸಿಡಲ್ ಮತ್ತು ಡೇಲ್ ಸ್ಟೇನ್ ತೀಕ್ಷ್ಣ ಸ್ಪೆಲ್‌ಗಳನ್ನು ಎಸೆದರು. ವಿಶೇಷವಾಗಿ ಸ್ಟೇನ್, ತನ್ನ ಮೊದಲ ಮೂರು ಓವರ್‌ಗಳಲ್ಲಿ ಕೇವಲ 7 ರನ್‌ಗಳನ್ನು ನೀಡುತ್ತಾ ಎರಡು ಪ್ರಮುಖ ವಿಕೆಟ್‌ಗಳನ್ನು ಪಡೆದರು. ಒಟ್ಟಾರೆ ಪ್ರಯತ್ನದಿಂದ ದೆಹಲಿ ವಾರಿಯರ್ಸ್ ಪವರ್‌ಪ್ಲೇ ಅಂತ್ಯಕ್ಕೆ 3 ವಿಕೆಟ್‌ಗೆ 41 ರನ್‌ಗಳಿಗೆ ಕುಸಿಯಿತು.

ಆದರೂ ಅಂತಿಮ ಹಂತದಲ್ಲಿ ದೆಹಲಿ ವಾರಿಯರ್ಸ್ 19.2 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 163 ರನ್‌ಗಳನ್ನು ಗಳಿಸಿ ಮೂರು ವಿಕೆಟ್‌ಗಳ ರೋಚಕ ಜಯ ಸಾಧಿಸಿ ಟೂರ್ನಿಯಲ್ಲಿ ಅಜೇಯರಾಗಿಯೇ ಉಳಿದರು.